ಸೋಮವಾರ, ಸೆಪ್ಟೆಂಬರ್ 2, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

‘ಎಮರ್ಜೆನ್ಸಿ’ ಮುಂದೂಡಿಕೆ

ಸೆಪ್ಟೆಂಬರ್ 6ಕ್ಕೆ ನಿಗದಿಯಾಗಿದ್ದ ‘ಎಮರ್ಜೆನ್ಸಿ’ ಸಿನಿಮಾ ಬಿಡುಗಡೆ ದಿನಾಂಕವನ್ನು ಮುಂದೂಡಲಾಗಿದೆ. ಕಂಗನಾ ರನೌತ್ ಚಿತ್ರದ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ.



One has to make the Right Choices for One’s Career & Life

If you are a student currently in **Class V to XII** or parents of such students, then you should take the following **Awareness Survey & Quiz :**

Question 1

There was a need for integrating all competitive exam preparation within the school curriculum & school hours to free up vital time in a student’s life for hobbies, sports & extracurricular activities.

Who recognised this need and innovated Integrated School Programs ?

☐ Aakash ☐ Allen, Kota ☐ Bansal, Kota ☐ FIITJEE ☐ Narayana
☐ Physics Wallah ☐ Resonance, Kota ☐ Sri Chaitanya ☐ Vidya Mandir Classes

Question 2

Who is the innovator of the concept of Goal Setting with scientific approach to unravel 100% of the Total Potential of Students ?

☐ Aakash ☐ Allen, Kota ☐ Bansal, Kota ☐ FIITJEE ☐ Narayana
☐ Physics Wallah ☐ Resonance, Kota ☐ Sri Chaitanya ☐ Vidya Mandir Classes

Question 3

Who is the innovator of the Integrated Preparation for all the relevant goals through a single program ?

☐ Aakash ☐ Allen, Kota ☐ Bansal, Kota ☐ FIITJEE ☐ Narayana
☐ Physics Wallah ☐ Resonance, Kota ☐ Sri Chaitanya ☐ Vidya Mandir Classes

Question 4

Who is the innovator of the All India Test Series as a product to help students develop the right exam temperament ?

☐ Aakash ☐ Allen, Kota ☐ Bansal, Kota ☐ FIITJEE ☐ Narayana
☐ Physics Wallah ☐ Resonance, Kota ☐ Sri Chaitanya ☐ Vidya Mandir Classes

Question 5

Who created the concept of Test Analysis Sessions ?

☐ Aakash ☐ Allen, Kota ☐ Bansal, Kota ☐ FIITJEE ☐ Narayana
☐ Physics Wallah ☐ Resonance, Kota ☐ Sri Chaitanya ☐ Vidya Mandir Classes

Question 6

Who is the innovator of the first “Crash Correspondence Course” to effectively prepare students in few weeks to give their best possible in the limited time for IIT-JEE / JEE Advanced ?

☐ Aakash ☐ Allen, Kota ☐ Bansal, Kota ☐ FIITJEE ☐ Narayana
☐ Physics Wallah ☐ Resonance, Kota ☐ Sri Chaitanya ☐ Vidya Mandir Classes

Question 7

There was a need to improve the Analytical Skills (IQ) of young children and also give them early-age exposure to various competitive & scholastic exams so that they are ready to easily adapt to the quantum jump in academics in Class XI.

Who recognised this need and innovated Foundation Programs for Students of Class VI, VII & VIII ?

☐ Aakash ☐ Allen, Kota ☐ Bansal, Kota ☐ FIITJEE ☐ Narayana
☐ Physics Wallah ☐ Resonance, Kota ☐ Sri Chaitanya ☐ Vidya Mandir Classes

Question 8

Who is the innovator of the first IQ Test to judge the potential of students for IIT-JEE / JEE Advanced ?

☐ Aakash ☐ Allen, Kota ☐ Bansal, Kota ☐ FIITJEE ☐ Narayana
☐ Physics Wallah ☐ Resonance, Kota ☐ Sri Chaitanya ☐ Vidya Mandir Classes

Question 9

Who is the innovator of the Pattern Proof Preparation ?

☐ Aakash ☐ Allen, Kota ☐ Bansal, Kota ☐ FIITJEE ☐ Narayana
☐ Physics Wallah ☐ Resonance, Kota ☐ Sri Chaitanya ☐ Vidya Mandir Classes

Question 10

Who innovated the concept of “Rank Potential Index” giving a student a clear idea how he / she will perform in a particular competitive or scholastic exam ?

☐ Aakash ☐ Allen, Kota ☐ Bansal, Kota ☐ FIITJEE ☐ Narayana
☐ Physics Wallah ☐ Resonance, Kota ☐ Sri Chaitanya ☐ Vidya Mandir Classes

Question 11

Who is the innovator of the All India Test Series for OLYMPIADS ?

☐ Aakash ☐ Allen, Kota ☐ Bansal, Kota ☐ FIITJEE ☐ Narayana
☐ Physics Wallah ☐ Resonance, Kota ☐ Sri Chaitanya ☐ Vidya Mandir Classes

Question 12

Which is the oldest Potential Discovery & Talent Reward Exam ?

☐ ANTHE by Aakash
☐ FIITJEE Talent Reward Exam (FTRE) by FIITJEE
☐ TALLENTEX by Allen, Kota
☐ VIQ by Vidya Mandir Classes

Some choices are obvious.

Awareness leads to making the Right Choices. Scan the QR Code to know the answers and / or take additional Survey Questions & Quiz to acquire more awareness.

Find the Right Choice at this juncture for your career & life...

please turn over

Yet another Innovation by FIITJEE

OLYMPIADs
ALL INDIA TEST SERIES

Nurturing Your Olympiad Dreams. Simulating Real Olympiad Experience.

NSEJS | INJSO | IOQM | RMO | INMO | NSEP | INPhO | NSEC | INChO | NSEA | INAO

Preparation for Olympiads is not just for a select few or super brilliant students. All sincere students preparing for Olympiads benefit from its preparation and find their lives transformed.

FIITJEE All India Test Series for Olympiads is conducted exactly on the pattern of respective Olympiad Exam, that too Online giving you flexibility to attempt it within a time window.

You can choose & create your own schedule of All India Test Series for the Olympiads relevant to you, depending upon your preparation strategy.

Class	Relevant Olympiads
Students Presently in Class V, VI, VII & VIII	Junior Science Olympiad & Mathematical Olympiad
Students Presently in Class IX & X*	Junior Science Olympiad (*if age permits), Mathematical Olympiad and Physics, Chemistry & Astronomy Olympiads
Students Presently in Class XI & XII	Mathematical Olympiad and Physics, Chemistry & Astronomy Olympiads

Forthcoming Test Dates (Online Mode) :
September 15th, 22nd, 23rd, 27th & 28th
October 4th, 5th & 6th, 2024

For full schedule of All India Test Series for Olympiads until 2028, to register for one or more tests, and to get more information about the test series & various stages of Olympiads applicable, visit **www.fiitjee.com/olympiadAITS** or scan the QR Code

Why you should appear in FIITJEE's All India Test Series for Olympiads ?

• To get 360° analysis of your preparation & potential for these tests and receive guidelines on how you can prepare. • You can use these tests to check your current preparation level. • You can take these tests to fix your goals and then regularly check your progress. • Preparing & competing in these tests will help you raise your Analytical Skills (IQ), which will be useful throughout your life. • Win scholarships to prepare for these tests. • You can also win a free intensive residential camp in FIITJEE Global Schools - Chennai & Vellore, during your summer vacations.

All Innovations brought out by FIITJEE for the benefit of students have become the Gold Standard for the Coaching Industry and have been adopted by all institutes without any changes.

FIITJEE innovates, Others follow.

Every child has potential for a Successful Career and a Blissful Life. Every child can blossom into a good son / daughter, a good life partner, a good parent, and a good citizen.

Appear in FTRE & set yourself to achieve your goals without compromising on sports, hobbies & extra curricular activities in a healthy, visionary committed environment, and acquire the right personality traits, culture & value system required for success in career & life.



Presenting 21st Edition

FTRE
FIITJEE TALENT REWARD EXAM

For Students Presently in Class V, VI, VII, VIII, IX, X & XI

Exam Dates : Offline / Computer Based (CBT) / Online Proctored : **15th September & 6th October 2024**
Online Proctored : **22nd, 23rd, 27th, 28th September, 4th & 5th October 2024**

(Subject to Terms & Conditions) Scholarships on FIITJEE Programs & Hostel Fee ★ ₹600+ Crores

Students will get a historic opportunity to earn unprecedented Scholarships worth **Rs. 600+ Crores** (100% increment from last year) on FIITJEE Program & Hostel Fees. In addition, Cash Scholarships worth **Rs. 15+ Crores** (50% increment from last year) will be given to students performing exceptionally well in the exam, at the territory as well as the national level. **FTRE is also an Admission cum Scholarship Test to join FIITJEE Classroom Programs.**

www.fiitjee.com/ftre

FIITJEE UNIVERSE

FIITJEE LIMITED — www.fiitjee.com | FIITJEE eSchool bringing offline expertise to online — www.fiitjee-eschool.com | MEGACOSM COGNITIONS PRIVATE LIMITED PUBLISHING COMPANY — www.megacosmcognitions.com | FIITJEE MEDICAL LIMITED — Being Launched | FIITJEE WORLD SCHOOL An Initiative of FIITJEE Foundation for Education, Research & Training — www.fiitjeeworldschool.com | FIITJEE GLOBAL SCHOOL — www.fiitjeeglobalschool.com | And many more initiatives...

Bangalore Centre - 19, S. S. Plaza, 13th Cross, 6th Sector, Outer Ring Road, HSR Layout, Bangalore - 560 102 Ph: 7825895355 | **Web: www.fiitjeebangalore.com** | **Hostel Facility Available**

National Admissions Office: FIITJEE House, 29-A, Kalu Sarai, Sarvapriya Vihar, New Delhi | **FIITJEE Helpline No: 7825895400** | **FIITJEE eSchool Helpline No: 8400-92-8400** | Web: www.fiitjee.com | Buy books at www.megacosmcognitions.com | www.facebook.com/fiitjeeindia123 | www.twitter.com/fiitjee | www.linkedin.com/company/fiitjee | www.youtube.com/fiitjeeltd

JEE
2025 & 2026 aspirants

Experience JEE several times before the real JEE

with

FIITJEE's Computer Based
ALL INDIA TEST SERIES THE ORIGINAL ONE

Program	Last Date to Enrol & Fee (including GST)
FIITJEE's Computer Based **All India Test Series** for JEE Main & Advanced 2025	15th November 2024 | Rs. 19,200/- First Test - 16th November 2024 (Part Test 1 - Main) 17th November 2024 (Part Test 1 - Advanced)
FIITJEE's Computer Based **All India Integrated Test Series** for JEE Main & Advanced 2026	30th September 2024 | Rs. 22,000/- First Test - 1st December 2024 (Part Test 1 - Main) 8th December 2024 (Part Test 1 - Advanced)

For the complete AITS schedule and to enrol online, scan the QR Code or visit ***www.fiitjeenonclassroomprograms.com***

myPAT FIITJEE
Online Test Series (Accessible 24/7)

myPAT is an Online Platform for Learning through Assessment, Analysis and Identification of Improvement Areas. myPAT enables you to track your progress, giving an in depth analysis and allows you to assess yourself both in Test Mode and Learning Mode.

Relevant for students preparing for JEE 2025 & 2026, also NTSE type of scholastic tests.

Sign up for a 14 day Free Trial now !

To enrol, scan the QR Code or visit ***www.mypat.in***

Rankers Study Material Programs for Class XI & XII / XII Pass : For JEE 2026 & 2025 | **Jr. Rankers Study Material Programs** for Class IX & X : Foundation for NEET, JEE 2028 & 2027 plus Excellence in School, Boards, Jr. Science Olympiad, NTSE

To enrol online, scan the QR Code or visit ***www.fiitjeenonclassroomprograms.com***

Admission Tests after FTRE 2024

BIG BANG EDGE TEST

Offline Test : **17th Nov 2024**
Online Proctored Test : **18th Nov 2024**

To register, scan the QR Code or visit ***www.fiitjee.com/BBE***

DRONACHARYA
360° DIAGNOSTIC & SCHOLARSHIP EXAM

Dronacharya 1 - Online Proctored Exam : **28th Dec 2024** Offline Exam : **29th Dec 2024**
Dronacharya 2 - Online Proctored Exam : **2nd & 7th Feb 2025** Offline Exam : **2nd Feb 2025**

To register, scan the QR Code or visit ***www.fiitjee.com/dronacharya***

For details of Admission cum Scholarship Tests after Dronacharya 2, please scan the QR Code

Excel in a Stress & Tension Free way, only with FIITJEE...

ಸೋಮವಾರ, ಸೆಪ್ಟೆಂಬರ್ 2, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 245 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

'ಕಲ್ಯಾಣ'ದ ವಿವಿಧೆಡೆ ವರ್ಷಧಾರೆ

ಪ್ರಜಾವಾಣಿ ವಾರ್ತೆ

ಕಲಬುರಗಿ/ಬೆಳಗಾವಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ರಾಯಚೂರು, ಯಾದಗಿರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಭಾನುವಾರ ದಿನವಿಡೀ ಜೋರು ಮಳೆ ಸುರಿಯಿತು. ನದಿ- ಹಳ್ಳಗಳು ಉಕ್ಕಿ ಹರಿದಿದ್ದು, ಹಲವು ಹಳ್ಳಿಗಳ ಸಂಪರ್ಕ ಕಡಿತಗೊಂಡಿದೆ. ತಗ್ಗು ಪ್ರದೇಶದ ಜಮೀನು ಹಾಗೂ ಮನೆಗಳಿಗೆ ನೀರು ನುಗ್ಗಿದೆ.

ಬೆಳಗಾವಿ ನಗರವೂ ಸೇರಿದಂತೆ ಜಿಲ್ಲೆಯ ವಿವಿಧೆಡೆಯೂ ಸಾಧಾರಣ ಮಳೆ ಮುಂದುವರಿದಿದೆ. ಜಲಾನಯನ ಪ್ರದೇಶಗಳಲ್ಲಿ ಉತ್ತಮ ಮಳೆ ಯಾಗುತ್ತಿದ್ದು ಮಲಪ್ರಭಾ ನದಿ ಮೈದುಂಬಿ ಹರಿಯುತ್ತಿದೆ.

ಕಾಗಿಣಾ ನದಿ ಪ್ರವಾಹದಿಂದಾಗಿ ಸೇಡಂ ತಾಲ್ಲೂಕಿನ ಮಳಖೇಡದ ಹಳೆಯ ಸೇತುವೆ ಮುಳುಗಡೆಯಾಗಿದೆ. ರಾಜ್ಯ ಹೆದ್ದಾರಿ 10ರ ಕಲಬುರಗಿ-ರಿಬ್ಬನಪಲ್ಲಿ, ಸೇಡಂ-ಬಟಗೇರಾ, ಮಳಖೇಡ-ಸಂಗಾವಿ (ಎಂ), ಚಿತ್ತಾಪುರ-ದಂಡೋತಿ, ಚಿಂಚೋಳಿಯ ಭೂತಪೂರ- ಚಿಂತಪಳ್ಳಿ, ತಾಜಲಾಪುರ ಸೇತುವೆಗಳು ಸಹ ಮುಳುಗಡೆಯಾಗಿದ್ದು, ಸಂಚಾರ ಸಂಪೂರ್ಣ ಬಂದ್ ಆಗಿದೆ.

ಕಾಳಗಿಯ ಐತಿಹಾಸಿಕ ನೀಲಕಂಠ ಕಾಳೇಶ್ವರ ದೇವಸ್ಥಾನ, ಮಳಖೇಡ ಉತ್ತರಾದಿ ಮಠದ ಜಯತೀರ್ಥರ ಮೂಲ ವೃಂದಾವನ, ಸಂಗಮೇಶ್ವರ ದೇವಾಲಯ ಜಲಾವೃತವಾಗಿವೆ. ಕಲಬುರಗಿ ತಾಲ್ಲೂಕಿನ ಬೆಣ್ಣೆತೊರಾ, ಚಿಂಚೋಳಿ ತಾಲ್ಲೂಕಿನ ಚಂದ್ರಂಪಳ್ಳಿ ಮತ್ತು ನಾಗರಾಳ ಜಲಾಶಯಗಳು ಭರ್ತಿಯಾಗುತ್ತಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಅಪಾರ ಪ್ರಮಾಣ ನೀರು ನದಿಗೆ ಹರಿಸಲಾಗುತ್ತಿದೆ.

7ನೇ ಪುಟ ನೋಡಿ



ಕಲಬುರಗಿಯಲ್ಲಿ ಭಾನುವಾರ ಸುರಿದ ಮಳೆಯಿಂದ ಕಿರು ಮೃಗಾಲಯದಲ್ಲಿ ನೀರು ನಿಂತು ಕೃಷ್ಣಮೃಗಗಳು ಪರದಾಡಿದವು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಆಂಧ್ರ, ತೆಲಂಗಾಣ: ಭಾರಿ ಮಳೆ

ಹೈದರಾಬಾದ್/ಅಮರಾವತಿ (ಪಿಟಿಐ): ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳ ಹಲವೆಡೆ ಭಾನುವಾರವೂ ಧಾರಾಕಾರ ಮಳೆ ಮುಂದುವರಿದಿದ್ದು, ಎರಡೂ ರಾಜ್ಯಗಳ ನೂರಾರು ಗ್ರಾಮಗಳು ಜಲಾವೃತವಾಗಿದ್ದು, ಅಪಾರ ಪ್ರಮಾಣದ ಆಸ್ತಿ ನಷ್ಟವಾಗಿದೆ.

ಆಂಧ್ರಪ್ರದೇಶದಲ್ಲಿ ಎರಡು ದಿನಗಳಿಂದ ಸುರಿಯುತ್ತಿರುವ ಮಳೆಗೆ ಸಾವಿಗೀಡಾದವರ ಸಂಖ್ಯೆ 9ಕ್ಕೆ ಏರಿದ್ದರೆ, ತೆಲಂಗಾಣದಲ್ಲಿ ಭಾನುವಾರ ಒಬ್ಬ ಮಹಿಳೆ ಮೃತಪಟ್ಟಿದ್ದಾರೆ. ಅಲ್ಲದೆ ಮೂವರು ಮಳೆ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದು, ಅವರ ಪತ್ತೆಗೆ ಶೋಧ ನಡೆದಿದೆ.

ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಮಳೆ ಪರಿಸ್ಥಿತಿ ಮತ್ತು ಹಾನಿಯ ಕುರಿತು ಅಧಿಕಾರಿಗಳ ಜತೆ ಸಭೆ ನಡೆಸಿ ಪರಿಶೀಲಿಸಿದ್ದಾರೆ. ಹೈದರಾಬಾದ್‌ನ ವಿಮಾನ ನಿಲ್ದಾಣಕ್ಕೆ ತಂದೆಯ ಜತೆ ಭಾನುವಾರ ಬೆಳಿಗ್ಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯು, ತೆಲಂಗಾಣದ ಮೆಹಬೂಬಾಬಾದ್ ಜಿಲ್ಲೆಯ ಮರಿಪೇಡಾ ಮಂಡಲದಲ್ಲಿ ಉಕ್ಕಿ ಹರಿಯುತ್ತಿದ್ದ ಹೊಳೆಯಲ್ಲಿ ಕೊಚ್ಚಿ ಹೋಗಿದ್ದಾರೆ.

7ನೇ ಪುಟ ನೋಡಿ

ಸರಕು ಮತ್ತು ಸೇವಾ ತೆರಿಗೆ ಸಂಗ್ರಹ ಶೇ 10ರಷ್ಟು ಏರಿಕೆ

ಆಗಸ್ಟ್‌ನಲ್ಲಿ ₹1.75 ಲಕ್ಷ ಕೋಟಿ ವರಮಾನ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಆಗಸ್ಟ್ ತಿಂಗಳಿನಲ್ಲಿ ₹1.75 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಸಂಗ್ರಹದಲ್ಲಿ ಶೇ 10ರಷ್ಟು ಏರಿಕೆಯಾಗಿದೆ.

ಕರ್ನಾಟಕ, ಮಹಾರಾಷ್ಟ್ರ, ದೆಹಲಿ, ಉತ್ತರ ಪ್ರದೇಶ ಹಾಗೂ ಹರಿಯಾಣದಲ್ಲಿ ತೆರಿಗೆ ಸಂಗ್ರಹದಲ್ಲಿ ಏರಿಕೆಯಾಗಿದ್ದು, ಒಟ್ಟಾರೆ ವರಮಾನ ಹೆಚ್ಚಳಕ್ಕೆ ಈ ರಾಜ್ಯಗಳು ಅತಿಹೆಚ್ಚು ಪಾಲು ನೀಡಿವೆ ಎಂದು ಕೇಂದ್ರ ಸರ್ಕಾರ ಭಾನುವಾರ ತಿಳಿಸಿದೆ.

ಜುಲೈನಲ್ಲಿ ₹1.82 ಲಕ್ಷ ಕೋಟಿ ಸಂಗ್ರಹವಾಗಿತ್ತು. ಕಳೆದ ವರ್ಷದ ಆಗಸ್ಟ್‌ನಲ್ಲಿ ₹1.59 ಲಕ್ಷ ಕೋಟಿ ವರಮಾನ ಸಂಗ್ರಹವಾಗಿತ್ತು.

ಏಪ್ರಿಲ್‌ನಿಂದ ಆಗಸ್ಟ್‌ವರೆಗೆ ₹9.13 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ₹8.29 ಲಕ್ಷ ಕೋಟಿ ಸಂಗ್ರಹವಾಗಿತ್ತು. ಅದಕ್ಕೆ ಹೋಲಿಸಿದರೆ ಶೇ 10.1ರಷ್ಟು ಹೆಚ್ಚಳವಾಗಿದೆ.

'ಜಿಎಸ್‌ಟಿ ಸಂಗ್ರಹ ಹೆಚ್ಚಳಕ್ಕೆ ಸಂಬಂಧಿಸಿದಂತೆ ಸರ್ಕಾರ ಕೈಗೊಂಡಿರುವ ಸುಧಾರಣಾ ಕ್ರಮಗಳಿಂದಾಗಿ ಈ ಪ್ರಗತಿ ಸಾಧ್ಯವಾಗಿದೆ' ಎಂದು ಡೆಲಾಯ್ಟ್ ಇಂಡಿಯಾದ ನೇರ ತೆರಿಗೆ ವಿಭಾಗದ ಪಾಲುದಾರ ಮತ್ತು ಮುಖ್ಯಸ್ಥ ಮಹೇಶ್ ಜೈಸಿಂಗ್ ತಿಳಿಸಿದ್ದಾರೆ.



'ಆಮದು ಸೇವೆ ಮೇಲಿನ ಜಿಎಸ್‌ಟಿ ಸಂಗ್ರಹದಲ್ಲಿ ಏರಿಕೆಯಾಗಿದೆ. ದೇಶೀಯ ಮಟ್ಟದಲ್ಲಿ ವರಮಾನ ಸಂಗ್ರಹದಲ್ಲಿನ ಹೆಚ್ಚಳವು ಆರ್ಥಿಕತೆಯ ವೇಗಕ್ಕೆ ಕನ್ನಡಿ ಹಿಡಿದಿದೆ' ಎಂದು ಹೇಳಿದ್ದಾರೆ.

ಕಳೆದ ವರ್ಷದ ಆಗಸ್ಟ್‌ಗೆ ಹೋಲಿಸಿದರೆ ದೇಶೀಯ ವರಮಾನ ಸಂಗ್ರಹದಲ್ಲಿ ಶೇ 9.2ರಷ್ಟು ಏರಿಕೆಯಾಗಿದೆ. ಒಟ್ಟಾರೆ ₹1.25 ಲಕ್ಷ ಕೋಟಿ ಸಂಗ್ರಹವಾಗಿದೆ. ಆಮದು ಸರಕುಗಳ ಮೇಲಿನ ಜಿಎಸ್‌ಟಿ ₹49,976 ಕೋಟಿ ಸಂಗ್ರಹವಾಗಿದೆ. ಒಟ್ಟಾರೆ ಶೇ 12.1ರಷ್ಟು ಏರಿಕೆಯಾಗಿದೆ.

ಕೇಂದ್ರ ಜಿಎಸ್‌ಟಿ ₹30,862 ಕೋಟಿ, ರಾಜ್ಯ ಜಿಎಸ್‌ಟಿ ₹38,411 ಕೋಟಿ ಹಾಗೂ ಸಮಗ್ರ ಜಿಎಸ್‌ಟಿ ₹93,621 ಕೋಟಿ ಸಂಗ್ರಹವಾಗಿದೆ. ಒಟ್ಟು ₹24,460 ಕೋಟಿ ಮರುಪಾವತಿ ಮಾಡಲಾಗಿದೆ.

'ಹಬ್ಬದ ಋತುವಿನಲ್ಲಿ ಜನರ ದಿನಬಳಕೆಯ ಸರಕು ಮತ್ತು ಸೇವೆಯಲ್ಲಿನ ವೆಚ್ಚದಲ್ಲಿ ಹೆಚ್ಚಳವಾಗಿದೆ. ಇದರಿಂದ ವರಮಾನ ಸಂಗ್ರಹದಲ್ಲಿ ಏರಿಕೆಯಾಗಿದೆ. ಮುಂಬರುವ ತಿಂಗಳುಗಳಲ್ಲೂ ಜಿಎಸ್‌ಟಿ ಸಂಗ್ರಹದಲ್ಲಿ ಹೆಚ್ಚಳವಾಗುವ ನಿರೀಕ್ಷೆಯಿದೆ' ಎಂದು ಡೆಲಾಯ್ಟ್ ಇಂಡಿಯಾದ ಪಾಲುದಾರ ಎಂ.ಎಸ್. ಮಣಿ ತಿಳಿಸಿದ್ದಾರೆ.

ಕರ್ನಾಟಕ: ₹12,344 ಕೋಟಿ ಸಂಗ್ರಹ

ಮಹಾರಾಷ್ಟ್ರದಲ್ಲಿ ಜಿಎಸ್‌ಟಿ ವರಮಾನ ಸಂಗ್ರಹದಲ್ಲಿ ಶೇ 13ರಷ್ಟು ಏರಿಕೆಯಾಗಿದ್ದು, ಒಟ್ಟು ₹26,367 ಕೋಟಿ ಸಂಗ್ರಹವಾಗಿದೆ.

ದೇಶದ ಪರೋಕ್ಷ ತೆರಿಗೆ ಸಂಗ್ರಹಕ್ಕೆ ಅತಿಹೆಚ್ಚು ಕೊಡುಗೆ ನೀಡುವ ರಾಜ್ಯಗಳ ಪೈಕಿ ಕರ್ನಾಟಕವು ಎರಡನೇ ಅತಿದೊಡ್ಡ ರಾಜ್ಯವಾಗಿದೆ. ಶೇ 11ರಷ್ಟು ಏರಿಕೆಯಾಗಿದ್ದು, ಒಟ್ಟು ₹12,344 ಕೋಟಿ ಸಂಗ್ರಹವಾಗಿದೆ.

ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಆಂಧ್ರಪ್ರದೇಶದಲ್ಲಿ ವರಮಾನ ಸಂಗ್ರಹದಲ್ಲಿ ಶೇ 5ರಷ್ಟು ಹಾಗೂ ಛತ್ತೀಸಗಢದಲ್ಲಿ ಶೇ 10ರಷ್ಟು ಇಳಿಕೆಯಾಗಿದೆ. ರಾಷ್ಟ್ರೀಯ ಸರಾಸರಿ ಸಂಗ್ರಹಕ್ಕೆ ಹೋಲಿಸಿದರೆ ಗುಜರಾತ್, ತಮಿಳುನಾಡು, ತೆಲಂಗಾಣ, ಬಿಹಾರ ಮತ್ತು ರಾಜಸ್ಥಾನದಲ್ಲಿ ಕಡಿಮೆಯಾಗಿದೆ.

ಅಕ್ರಮ ಜೀಪ್ ರ‍್ಯಾಲಿ: ಕ್ರಮಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯ ಬಾಳೂರು ಸಮೀಪ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಆಫ್‌ರೋಡಿಂಗ್ ರ‍್ಯಾಲಿ ನಡೆಸಿದವರ ವಿರುದ್ಧ ಪ್ರಕರಣ ದಾಖಲಿಸುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಅರಣ್ಯಾಧಿಕಾರಿಗಳಿಗೆ ಸೂಚಿಸಿದ್ದಾರೆ.

ಬಾಳೂರು ಸಮೀಪದ ಹೊಸಕೆರೆ, ಒಂಬತ್ತು ಗುಡ್ಡ ಮತ್ತು ಎತ್ತಿನ ಭುಜದ ವ್ಯಾಪ್ತಿಯ ತೋಟಗಳು ಮತ್ತು ಅರಣ್ಯ ಪ್ರದೇಶದಲ್ಲಿ ಶನಿವಾರ ರ‍್ಯಾಲಿ ಆಯೋಜಿಸಲಾಗಿತ್ತು. ಬೆಂಗಳೂರು, ಹಾಸನ ಮತ್ತು ಚಿಕ್ಕಮಗಳೂರುಗಳಿಂದ 50ಕ್ಕೂ ಹೆಚ್ಚು 4X4 ವಾಹನಗಳಲ್ಲಿ ಬಂದಿದ್ದವರು ರ‍್ಯಾಲಿಯಲ್ಲಿ ಭಾಗಿಯಾಗಿದ್ದರು. ಇದಕ್ಕೆ ಸ್ಥಳೀಯರಿಂದ ಭಾರಿ ಆಕ್ಷೇಪ ವ್ಯಕ್ತವಾಗಿತ್ತು.

ಅರಣ್ಯ ಇಲಾಖೆಯ ಅನುಮತಿ ಪಡೆಯದೇ ರ‍್ಯಾಲಿಯನ್ನು ಆಯೋಜಿಸಲಾಗಿತ್ತು ಎಂಬುದನ್ನು ಅರಣ್ಯಾಧಿಕಾರಿಗಳು ದೃಢಪಡಿಸಿದ್ದರು. 'ಪತ್ರಿಕೆಗಳಲ್ಲಿ ಈ ಬಗ್ಗೆ ಸುದ್ದಿ ಪ್ರಕಟವಾಗಿದ್ದನ್ನು ಗಮನಿಸಲಾಗಿದೆ. ಆನೆ ಕಾರಿಡಾರ್ ಪ್ರದೇಶದಲ್ಲೂ ರ‍್ಯಾಲಿ ನಡೆಸಿರುವುದು ಗೊತ್ತಾಗಿದೆ. 52 ವಾಹನಗಳು ಭಾಗಿಯಾಗಿದ್ದವು ಎಂಬ ಮಾಹಿತಿ ಇದೆ. ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ' ಎಂದು ಖಂಡ್ರೆ ತಿಳಿಸಿದ್ದಾರೆ.

'ಅರಣ್ಯ ಪ್ರದೇಶದಲ್ಲಿ ರ‍್ಯಾಲಿ ನಡೆದಿದ್ದರೆ ಅರಣ್ಯ ಸಂರಕ್ಷಣಾ ಕಾಯ್ದೆ ಅಡಿ ಮತ್ತು ಸಾರ್ವಜನಿಕರ ನೆಮ್ಮದಿಗೆ ಭಂಗ ತಂದ ಆರೋಪಗಳಲ್ಲಿ ಪ್ರಕರಣ ದಾಖಲಿಸಲು ಸೂಚಿಸಲಾಗಿದೆ. ಅರಣ್ಯ ಮತ್ತು ಪರಿಸರಕ್ಕೆ ಆಗಿರುವ ಹಾನಿಯ ಬಗ್ಗೆ ವರದಿ ನೀಡುವಂತೆಯೂ ಸೂಚಿಸಲಾಗಿದೆ' ಎಂದು ತಿಳಿಸಿದ್ದಾರೆ.



'ಸುಪ್ರೀಂ' ಲಾಂಛನ

ಸುಪ್ರೀಂ ಕೋರ್ಟ್‌ನ ನೂತನ ಲಾಂಛನವನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾನುವಾರ ನವದೆಹಲಿಯಲ್ಲಿ ಅನಾವರಣಗೊಳಿಸಿದರು –ಪಿಟಿಐ ಚಿತ್ರ

ವಿವರ 07

ಎತ್ತಿನಹೊಳೆ: ಇದೇ 6ಕ್ಕೆ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಏಳು ಜಿಲ್ಲೆಗಳಿಗೆ ಕುಡಿಯುವ ನೀರು ಹಾಗೂ ಕೆರೆ ತುಂಬಿಸುವ ಮಹತ್ವಾಕಾಂಕ್ಷಿ ಎತ್ತಿನಹೊಳೆ ಯೋಜನೆಯ ಏತ ಕಾಮಗಾರಿಗೆ ಗೌರಿ ಹಬ್ಬದಂದು (ಸೆ. 6) ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಹಾಸನ ಜಿಲ್ಲೆಯ ಜನರಿಗೆ ಈ ಯೋಜನೆಯಿಂದ ಅನುಕೂಲ ಆಗಲಿದೆ' ಎಂದರು.

'ಇತ್ತೀಚೆಗಷ್ಟೆ ಯೋಜನೆಯ ಕಾಮಗಾರಿಗಳ ಪರೀಕ್ಷಾರ್ಥ ಕಾರ್ಯಾಚರಣೆ ಮಾಡಿದ್ದೆ. ಈ ಯೋಜನೆಯಲ್ಲಿ ನೀರನ್ನು ಪಂಪ್ ಮಾಡುವ ಮೂಲಕ ಕಾಲುವೆಗಳಿಗೆ ಹರಿಸಲಾಗುವುದು. ಈ ಯೋಜನೆ ಮಾರ್ಗದ ಮಧ್ಯೆ ಅರಣ್ಯ ಇಲಾಖೆಗೆ ಸಂಬಂಧಿಸಿದ ಜಾಗಗಳಲ್ಲಿನ ಸಮಸ್ಯೆಗಳನ್ನು ಬಗೆಹರಿಸಲಾಗಿದೆ. ಈ ಜಾಗ ಹಸ್ತಾಂತರವಾದ ಬಳಿಕ ಪ್ರಮುಖ ಕಾಲುವೆಗಳಿಗೆ ನೀರು ಹರಿಯಲಿದೆ. ಈಗ ತಾತ್ಕಾಲಿಕವಾಗಿ ವಾಣಿ ವಿಲಾಸ ಅಣೆಕಟ್ಟೆಗೆ ನೀರು ಹರಿಸಲಾಗುತ್ತಿದೆ' ಎಂದು ತಿಳಿಸಿದರು.

'ನೀರನ್ನು ಎತ್ತುವ ದೃಶ್ಯವನ್ನು ಈ ಯೋಜನೆಯ ಫಲಾನುಭವಿ ಜಿಲ್ಲೆಗಳ ಜನರು ಕಣ್ತುಂಬಿಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಉದ್ಘಾಟನಾ ಕಾರ್ಯಕ್ರಮಕ್ಕೆ ಪಕ್ಷಬೇಧ ಮರೆತು ಎಲ್ಲ ನಾಯಕರು, ರೈತರಿಗೆ ಆಹ್ವಾನ ನೀಡಲಾಗುವುದು' ಎಂದರು.

ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಕುಸಿದ ವಿಚಾರವೇ 'ಅಸ್ತ್ರ'

ಎಂವಿಎ, ಬಿಜೆಪಿ ಶಕ್ತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ಸಿಂಧುದುರ್ಗ ಜಿಲ್ಲೆಯ ರಾಜ್‌ಕೋಟ್‌ನಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಕುಸಿದು ಬಿದ್ದ ವಿಚಾರ ಮುಂದಿಟ್ಟುಕೊಂಡು ವಿಪಕ್ಷ ಒಕ್ಕೂಟ ಮಹಾ ವಿಕಾಸ ಆಘಾಡಿ (ಎಂವಿಎ) ಮುಂಬೈನಲ್ಲಿ ಭಾನುವಾರ ಬೃಹತ್ ಪ್ರತಿಭಟನೆ ನಡೆಸಿತು.

'ಪ್ರತಿಮೆ ಕುಸಿದು ಬಿದ್ದ ವಿಚಾರವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಕ್ಷಮೆ ಯಾಚಿಸಿದ್ದನ್ನು ತಿರಸ್ಕರಿಸುತ್ತೇವೆ' ಎಂದ ಎಂವಿಎ ನಾಯಕರು, ಆಡಳಿತಾರೂಢ 'ಮಹಾ ಯುತಿ' ನಾಯಕರ ಭಾವಚಿತ್ರಗಳಿದ್ದ ಪೋಸ್ಟರ್‌ಗೆ 'ಚಪ್ಪಲಿಯಿಂದ ಹೊಡೆದು (ಜೋಡೆ ಮಾರಾ) ಪ್ರತಿಭಟನೆ' ನಡೆಸಿದರು.

ಇನ್ನೊಂದೆಡೆ, ಪ್ರತಿಮೆ ಕುಸಿದು ಬಿದ್ದ ವಿಚಾರವಾಗಿ ಮಹಾ ವಿಕಾಸ ಆಘಾಡಿ ರಾಜಕೀಯ ಮಾಡುತ್ತಿದೆ ಎಂದು ಆರೋಪಿಸಿ, ರಾಜ್ಯದಾದ್ಯಂತ ಬಿಜೆಪಿ ವತಿಯಿಂದಲೂ ಪ್ರತಿಭಟನೆ ನಡೆಯಿತು.

ಇದರೊಂದಿಗೆ, ಛತ್ರಪತಿ ಶಿವಾಜಿ ಮಹಾರಾಜ ಪ್ರತಿಮೆ ಕುಸಿದು ಬಿದ್ದಿರುವ ವಿಚಾರವು ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಪ್ರಮುಖ ವಿಷಯವಾಗಲಿದೆ ಎಂಬ ಮುನ್ಸೂಚನೆಯನ್ನು ಭಾನುವಾರ ನಡೆದ ಪ್ರತಿಭಟನೆಗಳು ನೀಡಿವೆ.

'ಸಂಯುಕ್ತ ಮಹಾರಾಷ್ಟ್ರ' ಹೋರಾಟದಲ್ಲಿ ಹುತಾತ್ಮರಾದವರ ನೆನಪಿಗಾಗಿ ಹುತಾತ್ಮ ಚೌಕದಲ್ಲಿ ನಿರ್ಮಿಸಿರುವ ಸ್ಮಾರಕಕ್ಕೆ ಎಂವಿಎ ನಾಯಕರು ಪುಷ್ಪನಮನ ಸಲ್ಲಿಸಿ, ಪ್ರತಿಭಟನಾ ಮೆರವಣಿಗೆ ಆರಂಭಿಸಿದರು. ಗೇಟ್‌ವೇ ಆಫ್ ಇಂಡಿಯಾ ಬಳಿಯ 'ಹಿಂದೂ ಹೃದಯ ಸಾಮ್ರಾಟ ಬಾಳಾ ಸಾಹೇಬ ಠಾಕ್ರೆ' ಚೌಕದಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜ ಪ್ರತಿಮೆ ಹತ್ತಿರ ಪ್ರತಿಭಟನಾ ಮೆರವಣಿಗೆ ಅಂತ್ಯಗೊಂಡಿತು.

ಈ ವೇಳೆ, ಪೋಸ್ಟರ್‌ನಲ್ಲಿದ್ದ ಮುಖ್ಯಮಂತ್ರಿ ಏಕನಾಥ ಶಿಂದೆ, ಉಪಮುಖ್ಯಮಂತ್ರಿಗಳಾದ ದೇವೇಂದ್ರ ಫಡಣವೀಸ್ ಮತ್ತು ಅಜಿತ್ ಪವಾರ್ ಅವರ ಭಾವಚಿತ್ರಗಳಿಗೆ ಎಂವಿಎ ಕಾರ್ಯಕರ್ತರು ಶೂಗಳಿಂದ ಹೊಡೆದು ಆಕ್ರೋಶ ವ್ಯಕ್ತಪಡಿಸಿದರು. ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಕೂಡ, ಶಿಂದೆ ಭಾವಚಿತ್ರಕ್ಕೆ ಶೂನಿಂದ ಹೊಡೆದರು.

ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದ ಉದ್ಧವ್ ಠಾಕ್ರೆ, 'ಶಿವಾಜಿ ಮಹಾರಾಜರ ವಿರೋಧಿಗಳು ಈ ದಿನ ಎಂವಿಎ ವಿರುದ್ಧ ಪ್ರತಿಭಟಿಸುತ್ತಿದ್ದಾರೆ. ಅವರು ತಮ್ಮ ಕೆಲಸ ಮಾಡಲಿ. ಆದರೆ, ನೀವು ಭಾರತ ಬಿಟ್ಟು ತೊಲಗಿ (ಗೆಟ್ ಔಟ್ ಆಫ್ ಇಂಡಿಯಾ) ಎಂಬುದಾಗಿ ಗೇಟ್ ವೇ ಆಫ್ ಇಂಡಿಯಾದಿಂದ ನಾವು ಹೇಳಲು ಬಯಸುತ್ತೇವೆ' ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

'ಶಿವಾಜಿ ಮಹಾರಾಜರಿಗೆ ಅವಮಾನ ಆಗಿರುವುದನ್ನು ಮಹಾರಾಷ್ಟ್ರ ಜನರು ಎಂದಿಗೂ ಕ್ಷಮಿಸುವುದಿಲ್ಲ' ಎಂದ ಠಾಕ್ರೆ, 'ಯಾವುದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಕ್ಷಮೆ ಯಾಚಿಸಿದ್ದಾರೆ' ಎಂದರು.

'ಎಂಟು ತಿಂಗಳ ಹಿಂದೆಯಷ್ಟೆ ಉದ್ಘಾಟಿಸಿದ್ದ ಪ್ರತಿಮೆ ಕುಸಿದಿದ್ದಕ್ಕಾಗಿಯೇ ಅಥವಾ ರಾಮ ಮಂದಿರ ಮತ್ತು ನೂತನ ಸಂಸತ್ ಭವನದಲ್ಲಿನ ಸೋರಿಕೆಗೆ ಕ್ಷಮೆ ಕೇಳುತ್ತಿದ್ದೀರಾ? ಎಂದ ಠಾಕ್ರೆ, 'ಶಿವಾಜಿ ಮಹಾರಾಜರನ್ನು ಅವಮಾನಿಸಿರುವ ಶಕ್ತಿಗಳನ್ನು ಸೋಲಿಸಲು ಎಂವಿಎ ಕಾರ್ಯಕರ್ತರು ಒಟ್ಟಾಗಿ ಕೆಲಸ ಮಾಡಬೇಕು' ಎಂದರು.

ಎನ್‌ಸಿಪಿ (ಶರದ್ ಪವಾರ್ ಬಣ) ವರಿಷ್ಠ ಶರದ್ ಪವಾರ್, 'ರಾಜ್‌ಕೋಟ್ ಕೋಟೆಯಲ್ಲಿ ಪ್ರತಿಮೆ ಕುಸಿದು ಬಿದ್ದಿರುವುದು ಈ ರಾಜ್ಯದಲ್ಲಿನ ಭ್ರಷ್ಟಾಚಾರಕ್ಕೆ ನಿದರ್ಶನ' ಎಂದು ಟೀಕಿಸಿದರು.

7ನೇ ಪುಟ ನೋಡಿ



ಎಂವಿಎ ವತಿಯಿಂದ ಮುಂಬೈನಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಮುಖ್ಯಮಂತ್ರಿ ಏಕನಾಥ ಶಿಂದೆ ಭಾವಚಿತ್ರಕ್ಕೆ ಚಪ್ಪಲಿಯಿಂದ ಹೊಡೆದರು ಪಿಟಿಐ ಚಿತ್ರ

ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯನ್ನು ದೃಷ್ಟಿಯಲ್ಲಿ ಇರಿಸಿಕೊಂಡು ಮಾತ್ರ ಪ್ರಧಾನಿಯವರು ಕ್ಷಮೆ ಕೇಳಿದ್ದಾರೆ

ನಾನಾ ಪಟೋಲೆ, ಕಾಂಗ್ರೆಸ್‌ನ ಮಹಾರಾಷ್ಟ್ರ ಘಟಕದ ಅಧ್ಯಕ್ಷ

ಮಹಾರಾಷ್ಟ್ರ ಜನರು ಬುದ್ಧಿವಂತರಿದ್ದು ಎಲ್ಲವನ್ನೂ ಗಮನಿಸುತ್ತಿದ್ದಾರೆ. ಬರುವ ಚುನಾವಣೆಗಳಲ್ಲಿ ವಿಪಕ್ಷದವರಿಗೆ ಜನರು ಶೂಗಳಿಂದ ಹೊಡೆಯುತ್ತಾರೆ

ಏಕನಾಥ ಶಿಂದೆ, ಮುಖ್ಯಮಂತ್ರಿ

ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ವಿರುದ್ಧ ಭಕ್ತರ ಆರೋಪ

'₹2,000 ಕೋಟಿ ಮೌಲ್ಯದ ಆಸ್ತಿ ವರ್ಗಾವಣೆ'


ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಏಕವ್ಯಕ್ತಿ ಟ್ರಸ್ಟ್ ಡೀಡ್ ರೂಪಿಸಿಕೊಂಡು ತರಳಬಾಳು ಮಠಕ್ಕೆ ಸೇರಿದ ಅಂದಾಜು ₹2,000 ಕೋಟಿ ಮೌಲ್ಯದ ಆಸ್ತಿಯನ್ನು ಪೀಠಾಧಿಪತಿ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ತಮ್ಮ ಹೆಸರಿಗೆ ವರ್ಗಾಯಿಸಿಕೊಂಡಿದ್ದಾರೆ. ಮಠವನ್ನು ಖಾಸಗಿ ಸ್ವತ್ತಾಗಿ ಪರಿವರ್ತಿಸಿಕೊಂಡಿದ್ದಾರೆ' ಎಂದು ಸಾದರ ಲಿಂಗಾಯತ ಸಮುದಾಯದ ಮುಖಂಡರು ಆರೋಪಿಸಿದರು.

ವೀರಶೈವ ಲಿಂಗಾಯತ ಭಕ್ತರ ಬಳಗದ ವತಿಯಿಂದ ನಗರದಲ್ಲಿ ಭಾನುವಾರ ಸಭೆ ನಡೆಯಿತು. ಸಿರಿಗೆರೆಯ ತರಳಬಾಳು ಮಠಕ್ಕೆ ಉತ್ತರಾಧಿಕಾರಿ ನೇಮಕ ಮಾಡಬೇಕು ಎಂಬ ಹೋರಾಟ ಮುಂದುವರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಭಕ್ತರಲ್ಲಿ ಜಾಗೃತಿ ಮೂಡಿಸಲು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸಭೆಗಳನ್ನು ಆಯೋಜಿಸುವ ನಿರ್ಣಯವನ್ನೂ ಕೈಗೊಳ್ಳಲಾಯಿತು.

'1977ರಲ್ಲಿ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ರೂಪಿಸಿದ್ದ ಬೈಲಾ ರದ್ದುಪಡಿಸಿ 1990ರಲ್ಲಿ ಏಕವ್ಯಕ್ತಿ ಟ್ರಸ್ಟ್ ಡೀಡ್ ಮಾಡಿಕೊಳ್ಳಲಾಗಿದೆ. ಹಳೆಯ ಮಠವನ್ನು ನುಂಗಿಹಾಕಿ ಹೊಸ ನಾಮಕರಣ ಮಾಡಲಾಗಿದೆ. ಜಮೀನು, ಶಿಕ್ಷಣ ಸಂಸ್ಥೆ ಸೇರಿ ಮಠದ ಸಂಪೂರ್ಣ ಆಸ್ತಿ ಏಕ ವ್ಯಕ್ತಿ ಟ್ರಸ್ಟ್‌ಗೆ ವರ್ಗಾವಣೆಗೊಂಡಿದೆ. ಟ್ರಸ್ಟ್‌ನಲ್ಲಿ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಪರಮಾಧಿಕಾರ ಹೊಂದಿದ್ದು, ಎಲ್ಲವೂ ಅವರ ಸ್ವತ್ತಾಗಿ ಬದಲಾಗಿದೆ. ₹2,000 ಕೋಟಿ ಆಸ್ತಿ ಹೊಂದಿದ ನೀವು (ಪೀಠಾಧಿಪತಿ) ಬಂಡವಾಳಶಾಹಿ ಅಲ್ಲವೇ' ಎಂದು ಮಾಜಿ ಸಚಿವ ಬಿ.ಸಿ.ಪಾಟೀಲ ಸಭೆಯ ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

'ಮಠ ಹಾಗೂ ಪೀಠಾಧಿಪತಿಯನ್ನು ಭಕ್ತರು ವಿರೋಧಿಸುತ್ತಿಲ್ಲ. ಮಠದಲ್ಲಿರುವ ಭಕ್ತರ ಆಸ್ತಿ ಉಳಿಯಬೇಕು ಎಂಬುದಷ್ಟೇ ನಮ್ಮ ಕಳಕಳಿ. ಭಕ್ತರ ಮನಸ್ಸಿನಲ್ಲಿ ವಿಷಬೀಜ ಬಿತ್ತಿ ಸಮಾಜವನ್ನು ಇಬ್ಭಾಗ ಮಾಡಬೇಡಿ. ಸುತ್ತೂರು ಮಠ, ಮಾದಾರ ಚನ್ನಯ್ಯ ಗುರುಪೀಠದಂತೆ ತರಳಬಾಳು ಮಠಕ್ಕೂ ಉತ್ತರಾಧಿಕಾರಿ ನೇಮಕವಾಗಬೇಕು' ಎಂದರು.



ದಾವಣಗೆರೆಯಲ್ಲಿ ಭಾನುವಾರ ನಡೆದ ಸಭೆಯಲ್ಲಿ ಭಾಗವಹಿಸಿದ್ದ ಸಾದರ ಲಿಂಗಾಯತ ಸಮಾಜದ ಮುಖಂಡರು

'ಜೊತೆಗೆ ಇದ್ದವರೇ ಕುತ್ತಿಗೆ ಕೊಯ್ಯುತ್ತಾರೆ'

ಹೊಳೆಹೊನ್ನೂರು (ಶಿವಮೊಗ್ಗ): 'ಜೊತೆಗೆ ಇದ್ದವರೇ ಕುತ್ತಿಗೆ ಕೊಯ್ಯುತ್ತಾರೆ. ಆದ್ದರಿಂದ ಮಠದ ನಿಜ ಭಕ್ತರು ತುಂಬಾ ಜಾಗರೂಕರಾಗಿರಬೇಕು' ಎಂದು ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದ್ದಾರೆ.



ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ

ಸಮೀಪದ ನಾಗತಿಬೆಳಗಲು ನಂಜುಂಡೇಶ್ವರ ದೇವಸ್ಥಾನದ ಆವರಣದಲ್ಲಿ ಶನಿವಾರ ರಾತ್ರಿ ನಡೆದ ಲಿಂಗೈಕ್ಯ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿಯ 32ನೇ ಶ್ರದ್ಧಾಂಜಲಿ ಸಮಾರಂಭದಲ್ಲಿ ಅವರು ಮಾತನಾಡಿದರು.

'ಮಠದ ವಿಚಾರವನ್ನು ಹಾದಿ ಬೀದಿಯಲ್ಲಿ ಮಾತನಾಡುವವರು ಮಠದ ಪಾಲಿಗೆ ದೃಷ್ಟಿ ಬೊಟ್ಟು ಇದ್ದಂತೆ. ಅವಹೇಳನದ ಮಾತುಗಳು ವಿಷದ ಮನಸ್ಸುಗಳ ಸ್ವಾರ್ಥ ಭಕ್ತಿಯನ್ನು ತೋರಿಸುತ್ತವೆ. ಸ್ವಾರ್ಥ ಈಡೇರದಿದ್ದರೆ ಮಠದ ವಿರುದ್ಧ ಬುಸುಗುಡುತ್ತಾರೆ' ಎಂದಿದ್ದಾರೆ. 'ಹಿಂದೆ ದೊಡ್ಡ ಗುರುಗಳನ್ನು ದೂಷಿಸಿದ ಶನಿ ಸಂತಾನವೇ ಈಗ ನನ್ನ ವಿರುದ್ಧ ಆರೋಪ ಮಾಡುತ್ತಿದೆ. ಕೆಲವರು ತಮ್ಮ ತೆವಲು ತೀರಿಸಿಕೊಳ್ಳಲು ತೆರೆ ಮರೆಯಲ್ಲಿ ಸಂಚು ರೂಪಿಸಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭಕ್ತರ ಸಭೆಯ ಒತ್ತಾಯಗಳು

- 1990ರಲ್ಲಿ ರಚನೆಯಾದ ಏಕವ್ಯಕ್ತಿ ಟ್ರಸ್ಟ್ ಡೀಡ್ ರದ್ದುಪಡಿಸಬೇಕು
- 1977ರ ಬೈಲಾ ಪ್ರಕಾರ ತರಳಬಾಳು ಮಠಕ್ಕೆ ಉತ್ತರಾಧಿಕಾರಿ ನೇಮಿಸಬೇಕು
- ಹಾಳಾಗಿರುವ ಶಾಲೆ-ಕಾಲೇಜುಗಳನ್ನು ಅಭಿವೃದ್ಧಿಪಡಿಸಿ ಅಕ್ಷರ ದಾಸೋಹ ಮುಂದುವರಿಸಬೇಕು
- ಮಠದ ಭಕ್ತರ ಮೇಲೆ ಹಾಕಿರುವ ಪ್ರಕರಣಗಳನ್ನು ಹಿಂಪಡೆಯಬೇಕು
- ಸಾದರ ಲಿಂಗಾಯತ ಸಮಾಜದಲ್ಲಿ ಮೂಡಿರುವ ಗೊಂದಲ ನಿವಾರಿಸಬೇಕು

ಸಿದ್ದರಾಮಯ್ಯ ಅರ್ಜಿ: ಇಂದು ಮತ್ತೆ ವಿಚಾರಣೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ತಮ್ಮ ವಿರುದ್ಧ ತನಿಖೆಗೆ ಅನುಮತಿ ನೀಡಿರುವ ರಾಜ್ಯಪಾಲರ ಕ್ರಮವನ್ನು ಪ್ರಶ್ನಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅರ್ಜಿಯ ವಿಚಾರಣೆ ಸೋಮವಾರವೂ ನಡೆಯಲಿದೆ.

ಸಿದ್ದರಾಮಯ್ಯ ಪರವಾಗಿ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರು ನ್ಯಾಯಮೂರ್ತಿ ನಾಗಪ್ರಸನ್ನ ಅವರ ಪೀಠದ ಎದುರು ಈಗಾಗಲೇ ವಾದ ಮಂಡಿಸಿದ್ದಾರೆ. ರಾಜ್ಯಪಾಲರ ಕಾರ್ಯದರ್ಶಿಯ ಪರವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ದೂರುದಾರ ಟಿ.ಜೆ.ಅಬ್ರಹಾಂ ಮತ್ತು ಪ್ರದೀಪ್‌ಕುಮಾರ್ ಪರವಾಗಿ ವಕೀಲರು ಪ್ರತಿವಾದ ಮುಂದಿಟ್ಟಿದ್ದಾರೆ.

ಮತ್ತೊಬ್ಬ ದೂರುದಾರ ಸ್ನೇಹಮಯಿ ಕೃಷ್ಣ ಪರ ವಕೀಲರು ತಮ್ಮ ವಾದ ಮಂಡಿಸಲು ಪೀಠವು ಸೋಮವಾರ ಮಧ್ಯಾಹ್ನ 2.30ಕ್ಕೆ ಸಮಯ ನಿಗದಿಪಡಿಸಿದೆ. ಇವರ ಪ್ರತಿವಾದಗಳಿಗೆ ಪ್ರತಿಕ್ರಿಯೆ ನೀಡುವ ಹಕ್ಕನ್ನು ಸಿಂಘ್ವಿ ಅವರು ಸೋಮವಾರಕ್ಕೆ ಕಾಯ್ದಿರಿಸಿದ್ದಾರೆ.

ಈ ಪ್ರಕರಣದಲ್ಲಿ ಸಿದ್ದರಾಮಯ್ಯ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳದಂತೆ ಪೀಠವು ಸೂಚಿಸಿತ್ತು.

ಪ್ರೀತಿ ಪಾಲ್‌ಗೆ ಮತ್ತೊಂದು ಕಂಚು



ಪ್ಯಾರಿಸ್ (ಪಿಟಿಐ): ಭಾರತದ ಪ್ರೀತಿ ಪಾಲ್ ಅವರು ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನ 200 ಮೀಟರ್ ಓಟದಲ್ಲಿ (ಟಿ35 ವಿಭಾಗ) ಕಂಚಿನ ಪದಕ ಜಯಿಸಿದ್ದಾರೆ. ಈ ಮೂಲಕ ಭಾರತದ ಪದಕಗಳ ಸಂಖ್ಯೆ ಆರಕ್ಕೆ ಏರಿಕೆಯಾಗಿದೆ.

ಭಾನುವಾರ ನಡೆದ ಸ್ಪರ್ಧೆಯಲ್ಲಿ ಅವರು 30.01 ಸೆಕೆಂಡ್‌ಗಳಲ್ಲಿ ವೈಯಕ್ತಿಕ ಶ್ರೇಷ್ಠ ಸಮಯದೊಂದಿಗೆ ಗುರಿ ತಲುಪಿದರು. ಈ ಮೂಲಕ ಪ್ರೀತಿ, ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಎರಡು ಪದಕಗಳನ್ನು ಗೆದ್ದ ಭಾರತದ ಮೊದಲ ಮಹಿಳಾ ಅಥ್ಲೀಟ್ ಎಂಬ ಹೆಗ್ಗಳಿಕೆಗೆ ಪಾತ್ರವಾದರು. 23 ವರ್ಷ ವಯಸ್ಸಿನ ಪ್ರೀತಿ ಶುಕ್ರವಾರ ಮಹಿಳೆಯರ 100 ಮೀಟರ್ ಓಟದಲ್ಲೂ ಕಂಚಿನ ಪದಕ ಗೆದ್ದಿದ್ದರು.

12ನೇ ಪುಟ ನೋಡಿ

ಒಳಪುಟಗಳಲ್ಲಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ರಾಹುಲ್, ಸೋನಿಯಾ ಗಾಂಧಿ ಬಗ್ಗೆ ಸುಳ್ಳು ಸುದ್ದಿ ಹಬ್ಬಿಸಿದ ಆರೋಪ • ಹೈಗ್ರೌಂಡ್ಸ್ ಠಾಣೆಯಲ್ಲಿ ದೂರು

ಬಾಂಗ್ಲಾ ಪತ್ರಕರ್ತನ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಅವರ ತಾಯಿ ಸೋನಿಯಾ ಗಾಂಧಿ ಅವರ ಬಗ್ಗೆ ಸುಳ್ಳು ಸುದ್ದಿಗಳನ್ನು ಹರಡಿದ ಆರೋಪದ ಮೇಲೆ ಬಾಂಗ್ಲಾದೇಶದ ಪತ್ರಕರ್ತನ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಬಾಂಗ್ಲಾದೇಶದ ಪತ್ರಕರ್ತ ಸಲಾಹುದ್ದೀನ್ ಶೋಯೆಬ್ ಚೌಧರಿ ಅವರು ರಾಹುಲ್ ಮತ್ತು ಸೋನಿಯಾ ಬಗ್ಗೆ ಸುಳ್ಳು ಹೇಳಿಕೆ ನೀಡಿದ್ದಾರೆ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾನೂನು ಘಟಕದ ಪದಾಧಿಕಾರಿಯಾಗಿರುವ ವಕೀಲ ಜಿ. ಶ್ರೀನಿವಾಸ್ ಅವರು ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ದೂರಿನಲ್ಲಿ ಆರೋಪಿಸಿದ್ದಾರೆ.

‘ಸೋನಿಯಾ ಗಾಂಧಿಯನ್ನು ಪಾಕಿಸ್ತಾನದ ಐಎಸ್‌ಐ ಏಜೆಂಟ್’ ಎಂದು ಚೌಧರಿ ತಮ್ಮ ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿದ್ದರು.

ಎರಡು ಧರ್ಮಗಳ ಜನರ ಮಧ್ಯೆ ದ್ವೇಷ ಸೃಷ್ಟಿಸುವ ಉದ್ದೇಶದಿಂದ ಚೌಧರಿ, ‘ಭಾರತೀಯ ಪೌರತ್ವ ಪಡೆದಿದ್ದರೂ ಸೋನಿಯಾ ಇನ್ನೂ ಕ್ರೈಸ್ತ ಧರ್ಮ ಅನುಸರಿಸುತ್ತಿದ್ದಾರೆ ಎಂದು ಹೇಳಿದ್ದಾರೆ’ ಎಂದು ಶ್ರೀನಿವಾಸ್ ಆರೋಪಿಸಿದ್ದಾರೆ.

‘ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದು, ದೂರುದಾರರ ಆರೋಪಗಳನ್ನು ಖಚಿತಪಡಿಸಿಕೊಳ್ಳಲು ಪೋಸ್ಟ್‌ಗಳನ್ನು ಪರಿಶೀಲಿಸಲಾಗುತ್ತಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಾಂಗ್ಲಾದೇಶದ ಮಾಧ್ಯಮ ಕಂಪನಿ ‘ಬ್ಲಿಟ್ಜ್’ ಸಂಪಾದಕ ಮತ್ತು ಪ್ರಶಸ್ತಿ ವಿಜೇತ ಪತ್ರಕರ್ತ ಎಂದು ಚೌಧರಿ ತಮ್ಮ ‘ಎಕ್ಸ್’ ಖಾತೆಯಲ್ಲಿ ಪರಿಚಯಿಸಿಕೊಂಡಿದ್ದಾರೆ.

ಕಾಲಿಗೆ ಗುಂಡು: ರೌಡಿಶೀಟರ್ ಬಂಧನ

ಬೆಂಗಳೂರು: ಹೆದ್ದಾರಿಯಲ್ಲಿ ದರೋಡೆಗೆ ಯತ್ನಿಸುತ್ತಿದ್ದ ವೇಳೆ ದಾಬಸ್‌ಪೇಟೆ ಠಾಣೆ ಪೊಲೀಸರು ಬಂಧಿಸಿರುವ ರೌಡಿಶೀಟರ್ ಜಯಂತ್ ವಿರುದ್ಧ ವಿವಿಧ ಠಾಣೆಗಳಲ್ಲಿ 56 ಪ್ರಕರಣಗಳು ದಾಖಲಾಗಿವೆ.


ಜಯಂತ್

ಬಂಧನದ ವೇಳೆ ಪೊಲೀಸರ ಮೇಲೆ ಹಲ್ಲೆಗೆ ಯತ್ನಿಸಿದ ಜಯಂತ್ ಕಾಲಿಗೆ ಗುಂಡು ಹಾರಿಸಲಾಗಿತ್ತು. ಆರೋಪಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಚೇತರಿಸಿಕೊಳ್ಳುತ್ತಿದ್ದಾನೆ. ಘಟನೆಯಲ್ಲಿ ಹೆಡ್ ಕಾನ್‌ಸ್ಟೆಬಲ್ ಇಮ್ರಾನ್ ಖಾನ್ ಅವರು ಗಾಯಗೊಂಡಿದ್ದು, ದಾಬಸ್‌ಪೇಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ದಾಬಸ್‌ಪೇಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಜಯಂತ್ ವಿರುದ್ಧ ಕೊಲೆ, ಕೊಲೆ ಯತ್ನ, ಕಳ್ಳತನ, ದರೋಡೆ ಸೇರಿದಂತೆ ಹಲವು ಪ್ರಕರಣಗಳಿವೆ. ಸದ್ಯ ಜಾಮೀನಿನ ಮೇಲೆ ಹೊರ ಬಂದಿದ್ದ. ಕಳ್ಳತನ ಪ್ರಕರಣದಲ್ಲಿ 2019ರಲ್ಲಿ ಆರೋಪಿಯನ್ನು ಬಂಧಿಸಲು ತೆರಳಿದ್ದ ವೇಳೆ, ವೀರನಂಜೀಪುರ ಅರಣ್ಯ ಪ್ರದೇಶದಲ್ಲಿ ಪೊಲೀಸರ ಮೇಲೆ ಹಲ್ಲೆಗೆ ಯತ್ನಿಸಿದ್ದ. ಆಗ ಕೂಡ ಪೊಲೀಸರು ಆತನ ಕಾಲಿಗೆ ಗುಂಡು ಹಾರಿಸಿ ಬಂಧಿಸಿದ್ದರು. ---‘ಮಾಗಡಿ ತಾಲ್ಲೂಕಿನ ಆಲೂರು ಗ್ರಾಮದ ಜಯಂತ್ ಅಲಿಯಾಸ್ ಬ್ಯಾಟರಿ ಜಯಂತ್ ಕೆಲ ವರ್ಷಗಳಿಂದ ಸಣ್ಣಪುಟ್ಟ ಕಳ್ಳತನ ಮಾಡಿಕೊಂಡಿದ್ದ. ಜೈಲು ಸೇರಿದ ಬಳಿಕ ರೌಡಿಗಳ ಪರಿಚಯವಾಯಿತು. ಬಳಿಕ ದರೋಡೆ, ಕೊಲೆ ಯತ್ನ ಪ್ರಕರಣಗಳಲ್ಲಿ ಭಾಗಿಯಾದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಗುದದಲ್ಲಿ ಕೋಟಿ ಮೌಲ್ಯದ ಚಿನ್ನ!

ದೇವನಹಳ್ಳಿ: ಗುದದಲ್ಲಿ ಒಂದೂವರೆ ಕೆ.ಜಿ ಚಿನ್ನ ಬಚ್ಚಿಟ್ಟುಕೊಂಡು ಕಳ್ಳಸಾಗಣೆ ಮಾಡುತ್ತಿದ್ದ ಶ್ರೀಲಂಕಾ ಪ್ರಜೆಗಳನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ ಅಧಿಕಾರಿಗಳು ಶನಿವಾರ ತಡರಾತ್ರಿ ಬಂಧಿಸಿದ್ದಾರೆ.

ಕೊಲಂಬೋದಿಂದ ಆ.31ರಂದು ತಡರಾತ್ರಿ ಬಂದಿಳಿದ ಶ್ರೀಲಂಕಾ ಪ್ರಜೆಗಳು ಪೇಸ್ಟ್ ರೂಪದ ಚಿನ್ನವನ್ನು ಪ್ಲಾಸ್ಟಿಕ್ ಕ್ಯಾಪ್ಸೂಲ್‌ಗಳಲ್ಲಿ ತುಂಬಿ, ಅವುಗಳನ್ನು ಗುದದ್ವಾರದಲ್ಲಿ ಅಡಗಿಸಿಕೊಂಡು ಕಳ್ಳಸಾಗಣೆ ಮಾಡಲು ಯತ್ನಿಸಿದ್ದರು. ತಪಾಸಣೆ ವೇಳೆ ಸಿಕ್ಕಿಬಿದ್ದ ಪ್ರಯಾಣಿಕರಿಂದ 1 ಕೆ.ಜಿ 670 ಗ್ರಾಂ ಚಿನ್ನ ವಶಕ್ಕೆ ಪಡೆಯಲಾಗಿದೆ. ಇದರ ಮೌಲ್ಯ ₹1.19 ಕೋಟಿ ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ. ಬಂಧಿತರ ವಿರುದ್ಧ ಪ್ರಕರಣ ದಾಖಲಿಸಿದ್ದು, ತನಿಖೆ ಪ್ರಗತಿಯಲ್ಲಿದೆ ಎಂದು ಕಸ್ಟಮ್ಸ್ ಮೂಲಗಳು ತಿಳಿಸಿವೆ.

₹3 ಕೋಟಿ ಮೌಲ್ಯದ ಸಿಗರೇಟು, ಗ್ಯಾಜೆಟ್ ವಶ

ಬೆಂಗಳೂರು: ಆಗಸ್ಟ್ 23ರಿಂದ 30ರವರೆಗೆ ಕಸ್ಟಮ್ಸ್ ಅಧಿಕಾರಿಗಳು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆಸಿದ ಕಾರ್ಯಾಚರಣೆಗಳಲ್ಲಿ ವಿದೇಶಿ ಸಿಗರೇಟು ಮತ್ತು ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳನ್ನು ಕಳ್ಳಸಾಗಣೆ ಮಾಡುತ್ತಿದ್ದ 31 ಮಂದಿಯನ್ನು ಪತ್ತೆಹಚ್ಚಿದ್ದು, ₹ 3.2 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಥಾಯ್ಲೆಂಡ್, ಮಲೇಷ್ಯಾ, ಸಿಂಗಪುರ ಮತ್ತು ಅರಬ್ ಸಂಯುಕ್ತ ಸಂಸ್ಥಾನಗಳಿಂದ ಬೆಂಗಳೂರಿಗೆ ವಿಮಾನಗಳಲ್ಲಿ ಬಂದ 31 ಪ್ರಯಾಣಿಕರನ್ನು ಅಧಿಕಾರಿಗಳು ತಪಾಸಣೆಗೆ ಒಳಪಡಿಸಿದರು. ₹3.2 ಕೋಟಿ ಮೌಲ್ಯದ 5,13,400 ಸಿಗರೇಟುಗಳು, ಇ-ಸಿಗರೇಟುಗಳು, 43 ಲ್ಯಾಪ್‌ಟಾಪ್‌ಗಳು ಮತ್ತು 16 ಐಫೋನ್‌ಗಳನ್ನು ವಶಪಡಿಸಿಕೊಂಡು, ಕ್ರಮ ಜರುಗಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಚಾಕು ಇರಿತ: ಆರೋಪಿ ಬಂಧನ

ಬೆಂಗಳೂರು: ಮನೆಗೆ ಪಾರ್ಸೆಲ್ ತಂದುಕೊಡದ ಕೊರಿಯರ್ ಬಾಯ್‌ಗೆ ಚಾಕುವಿನಿಂದ ಇರಿದ ಆರೋಪಿಯನ್ನು ಅಶೋಕ ನಗರ ಪೊಲೀಸರು ಬಂಧಿಸಿದ್ದಾರೆ.

ಗಾಯಗೊಂಡಿರುವ ಕೊರಿಯರ್ ಬಾಯ್ ಮಹಮ್ಮದ್ ಶಫಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಖಾಸಗಿ ವಿಮಾ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಅರ್ಬಾಜ್ ಬಂಧಿತ ಆರೋಪಿ.

‘ಆನೆಪಾಳ್ಯದ ಗಲ್ಲಿಯೊಂದರಲ್ಲಿ ವಾಸವಿರುವ ಅರ್ಬಾಜ್‌ಗೆ ಪಾರ್ಸೆಲ್ ತಲುಪಿಸುವ ಸಲುವಾಗಿ ಶಫಿ ಕರೆ ಮಾಡಿ ಮನೆಯ ವಿಳಾಸ ಕೇಳಿದ್ದಾರೆ. ಆರೋಪಿ ತಾವಿರುವ ಮನೆಯ ಸ್ಥಳದ ಮಾಹಿತಿ ಕಳುಹಿಸಿದ್ದಾರೆ. ವಿಳಾಸ ಗೊತ್ತಾಗದೆ ಶಫಿ ಮತ್ತೆ ಕರೆ ಮಾಡಿದ್ದಾರೆ. ಕೊನೆಗೆ ಅರ್ಬಾಜ್ ತಮ್ಮ ತಾಯಿಯನ್ನೇ ಪಾರ್ಸೆಲ್ ತೆಗೆದುಕೊಂಡು ಬರಲು ಕಳುಹಿಸಿದ್ದಾರೆ. ಆಗ ಶಫಿ ಕರೆ ಮಾಡಿ ಒಟಿಪಿ ಕೇಳಿದ್ದಾರೆ. ಇದರಿಂದ ಕುಪಿತಗೊಂಡ ಆರೋಪಿ, ಅವರನ್ನು ಅಟ್ಟಾಡಿಸಿಕೊಂಡು ಹೋಗಿ ಚಾಕುವಿನಿಂದ ಇರಿದಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಕೃತ್ಯದ ಬಳಿಕ ಆರೋಪಿ ಬಚ್ಚಿಟ್ಟುಕೊಂಡಿದ್ದ. ಘಟನೆ ದೃಶ್ಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಅದರ ಆಧಾರದ ಮೇಲೆ ಆರೋಪಿಯನ್ನು ಬಂಧಿಸಲಾಯಿತು ಎಂದು ಹೇಳಿದ್ದಾರೆ.

ಟೋಯಿಂಗ್: 70ಕ್ಕೂ ಅಧಿಕ ಪ್ರಕರಣ ದಾಖಲು



ಬೆಂಗಳೂರು: ನಿಷೇಧಿತ ಸ್ಥಳಗಳಲ್ಲಿ ನಿಲ್ಲಿಸುವ ವಾಹನಗಳ ‘ಟೋಯಿಂಗ್’ ಕಾರ್ಯಾಚರಣೆಯ ಎರಡನೇ ದಿನವಾದ ಭಾನುವಾರ ನಗರದಲ್ಲಿ 70ಕ್ಕೂ ಅಧಿಕ ಪ್ರಕರಣ ದಾಖಲಿಸಲಾಗಿದೆ.

ಎರಡೂವರೆ ವರ್ಷದ ಬಳಿಕ ಮತ್ತೆ ಉಪ್ಪಾರಪೇಟೆ ಸಂಚಾರಿ ಠಾಣಾ ವ್ಯಾಪ್ತಿಯಲ್ಲಿ ಟೋಯಿಂಗ್ ಆರಂಭಿಸಲಾಗಿದೆ. ಎರಡೇ ದಿನಕ್ಕೆ ಟೋಯಿಂಗ್ ಮಾಡಿದ ವಾಹನಗಳ ಸಂಖ್ಯೆ ಶತಕ ದಾಟಿದೆ. ಮೊದಲ ದಿನ 30 ಟೋಯಿಂಗ್ ಪ್ರಕರಣಗಳು ದಾಖಲಾಗಿದ್ದವು.

ಟೋಯಿಂಗ್‌ಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದಲೇ ಎರಡು ವಾಹನ ಪೂರೈಕೆ ಮಾಡಲಾಗಿದೆ. ಆರಂಭದಲ್ಲಿ ಧ್ವನಿವರ್ಧಕಗಳ ಮೂಲಕ ಸೂಚನೆ ನೀಡಲಾಗುತ್ತದೆ. ಆದರೂ ನಿರ್ಬಂಧಿತ ಸ್ಥಳದಲ್ಲಿ ವಾಹನ ನಿಲುಗಡೆ ಮಾಡಿದರೆ ಟೋಯಿಂಗ್ ಮಾಡಲಾಗುತ್ತದೆ. ಟೋಯಿಂಗ್‌ಗೆ ಶುಲ್ಕ ವಿಧಿಸುತ್ತಿಲ್ಲ.

ಗಾಂಧಿನಗರ ಮತ್ತು ಇತರ ಪ್ರದೇಶಗಳಲ್ಲಿ ನಿಯಮ ಉಲ್ಲಂಘಿಸಿ ನಿಲುಗಡೆ ಮಾಡಿದ ವಾಹನಗಳನ್ನು ತೆರವುಗೊಳಿಸುವತ್ತ ಗಮನ ಹರಿಸಲಾಗುತ್ತಿದೆ. ವಾಹನ ಸವಾರರು ಸ್ವಾತಂತ್ರ್ಯ ಉದ್ಯಾನದಲ್ಲಿರುವ ಹೊಸ ಪಾರ್ಕಿಂಗ್ ಸಂಕೀರ್ಣ ಬಳಸಿಕೊಳ್ಳಲು ಮತ್ತು ನಿಷೇಧಿತ ಪ್ರದೇಶಗಳಲ್ಲಿ ಅಥವಾ ರಸ್ತೆಗಳಲ್ಲಿ ವಾಹನ ನಿಲುಗಡೆ ಮಾಡದಂತೆ ಸೂಚನೆ ನೀಡಲಾಗಿದೆ. ನಿಯಮ ಉಲ್ಲಂಘಿಸಿದರೆ ದಂಡ ವಿಧಿಸುವುದಾಗಿ ಪೊಲೀಸರು ಎಚ್ಚರಿಕೆ ನೀಡಿದ್ದಾರೆ.



ಕಾರು ಜಖಂ

ನಗರದ ಅನಿಲ್ ಕುಂಬ್ಳೆ ವೃತ್ತದ ಬಳಿ ಭಾನುವಾರ ಸಂಜೆ ಮರ ಬಿದ್ದು ಕಾರು ಜಖಂಗೊಂಡಿದೆ. ಕಾರಿನಲ್ಲಿದ್ದ ಪ್ರಯಾಣಿಕರೊಬ್ಬರಿಗೆ ಸಣ್ಣಪುಟ್ಟ ಗಾಯವಾಗಿದೆ ಪ್ರಜಾವಾಣಿ ಚಿತ್ರ: ವಿ. ಪುಷ್ಕರ್

ರಾಮಜೀನಗರ ಗ್ಯಾಂಗ್ ಸೆರೆ

ಕಾರಿನ ಗಾಜು ಒಡೆದು ಕಳವು: ಏಳು ಲ್ಯಾಪ್‌ಟಾಪ್ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರುಗಳ ಗಾಜುಗಳನ್ನು ಒಡೆದು ಬೆಲೆ ಬಾಳುವ ವಸ್ತುಗಳನ್ನು ಕಳವು ಮಾಡುತ್ತಿದ್ದ ರಾಮಜೀನಗರ ಗ್ಯಾಂಗ್‌ನ ನಾಲ್ವರು ಆರೋಪಿಗಳನ್ನು ಇಂದಿರಾನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡಿನ ತಿರುಚನಾಪಳ್ಳಿಯ ರಾಮಜೀನಗರ ನಿವಾಸಿಗಳಾದ ಮುರಳಿ (38), ಸೆಂಥಿಲ್ (50) ಮೂರ್ತಿ (49) ಹಾಗೂ ಕದ್ದ ವಸ್ತುಗಳನ್ನು ಖರೀದಿಸುತ್ತಿದ್ದ ಜಾನ್ (35) ಎಂಬುವವರನ್ನು ಬಂಧಿಸಲಾಗಿದೆ. ಏಳು ಲ್ಯಾಪ್‌ಟಾಪ್ ಸಹಿತ ₹5.85 ಲಕ್ಷ ಮೌಲ್ಯದ ವಿವಿಧ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ.

‘ಕಾರುಗಳ ಗಾಜು ಒಡೆದು ಕಳ್ಳತನ ಮಾಡುವುದೇ ರಾಮಜೀನಗರ ಗ್ಯಾಂಗ್‌ನ ವಿಶೇಷತೆ. ಖರೀದಿ ಹಾಗೂ ಬ್ಯಾಂಕ್ ಕೆಲಸಕ್ಕೆಂದು ಕಾರು ನಿಲ್ಲಿಸಿ ಹೋಗುವವರನ್ನು ಆರೋಪಿಗಳು ಗುರಿಯಾಗಿಸಿಕೊಂಡು ಕೃತ್ಯ ಎಸಗುತ್ತಿದ್ದರು. ಶ್ರೀಮಂತರು ನೆಲಸಿರುವ ಬಡಾವಣೆಗಳಲ್ಲಿ ಈ ಕೃತ್ಯ ಎಸಗುತ್ತಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.


ಕಾರಿನ ಗಾಜು ಒಡೆದು ಕಳ್ಳತನ ಮಾಡಿರುವುದು

ಮನೆ, ಬ್ಯಾಂಕ್ ಮುಂದೆ, ರಸ್ತೆ ಬದಿ ನಿಲ್ಲಿಸಿದ್ದ ಕಾರುಗಳ ಗಾಜಿನ ಮೂಲಕ ಒಳಗೆ ಏನು ಇದೆ ಎಂಬುದನ್ನು ಒಬ್ಬ ಬಂದು ಗಮನಿಸಿ ಮತ್ತಿಬ್ಬರಿಗೆ ಮಾಹಿತಿ ನೀಡುತ್ತಿದ್ದ. ನಂತರ ಮೂವರೂ ಸೇರಿ ರಬ್ಬರ್ ಬ್ಯಾಂಡ್ ಹಾಗೂ ಸಣ್ಣ ಗುಂಡಿನ ಸಹಾಯದಿಂದ ಗಾಜು ಒಡೆಯುತ್ತಿದ್ದರು. ಒಳಗಿರುವ ಲ್ಯಾಪ್‌ಟಾಪ್, ನಗದು ಹಾಗೂ ಬೆಲೆ ಬಾಳುವ ವಸ್ತುಗಳನ್ನು ದೋಚಿ ಪರಾರಿಯಾಗುತ್ತಿದ್ದರು. ಕದ್ದ ವಸ್ತುಗಳನ್ನುಆರೋಪಿಜಾನ್‌ಗೆಮಾರಾಟ ಮಾಡುತ್ತಿದ್ದರು’ ಎಂದು ಹೇಳಿದ್ದಾರೆ. ಮತ್ತೊಂದು ಕಳ್ಳತನಕ್ಕೆ ಖಾರದ ಪುಡಿ, ಮಾರಾಕಸ್ತ್ರಗಳೊಂದಿಗೆ ಹೊಂಚು ಹಾಕುತ್ತಿದ್ದ ಸಂದರ್ಭದಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ. ಇದೇ ಗ್ಯಾಂಗ್ ನಗರದ ಎಂಟು ಕಡೆ ಕೃತ್ಯ ಎಸಗಿರುವುದು ವಿಚಾರಣೆ ವೇಳೆ ಪತ್ತೆಯಾಗಿದ್ದು, ತನಿಖೆ ಮುಂದುವರಿದಿದೆ ಎಂದು ತಿಳಿಸಿದ್ದಾರೆ.

ಅಪರಾಧ ಸುದ್ದಿ

ಟ್ಯಾಂಕರ್ ಚಕ್ರ ಹರಿದು ಬೈಕ್ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವೈಟ್ ಫೀಲ್ಡ್ ಪೊಲೀಸ್ ಠಾಣೆ ವ್ಯಾಪ್ತಿಯ ನಲ್ಲೂರಹಳ್ಳಿ ಮುಖ್ಯರಸ್ತೆಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ದ್ವಿಚಕ್ರ ವಾಹನ ಸವಾರ ಮೃತಪಟ್ಟಿದ್ದಾರೆ.

ಬೈಕ್‌ನಲ್ಲಿ ವೇಗವಾಗಿ ಬಂದ ನಲ್ಲೂರಹಳ್ಳಿಯ ನಿವಾಸಿ 19 ವರ್ಷದ ಯುವಕ, ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಪಾದಚಾರಿಯೊಬ್ಬರಿಗೆ ಡಿಕ್ಕಿ ಹೊಡೆದು ನಿಯಂತ್ರಣ ತಪ್ಪಿ ಕೆಳಗೆ ಬಿದ್ದಿದ್ದಾನೆ. ಆತನ ಮೇಲೆ ನೀರು ಪೂರೈಕೆ ಟ್ಯಾಂಕರ್ ವಾಹನದ ಚಕ್ರ ಹರಿದಿದೆ. ತೀವ್ರವಾಗಿ ಗಾಯಗೊಂಡಿದ್ದ ಯುವಕನನ್ನು ಕೂಡಲೇ ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದರು. ಆದರೂ ಬದುಕಿ ಉಳಿಯಲಿಲ್ಲ. ಅಪಘಾತದ ದೃಶ್ಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ. ವೈಟ್ ಫೀಲ್ಡ್ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಅಮಿತ್ ಶಾಗೆ ಪತ್ರ

ಬೆಂಗಳೂರು: ಆನ್‌ಲೈನ್ ಗೇಮ್‌ಗಳಿಗೆ ಕಡಿವಾಣ ಹಾಕಬೇಕು ಎಂದು ಕೇಂದ್ರ ಸಚಿವ ಅಮಿತ್ ಶಾಗೆ ಪತ್ರ ಬರೆದಿರುವ ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಭೇಟಿಗೆ ಅವಕಾಶ ನೀಡುವಂತೆಯೂ ಮನವಿ ಮಾಡಿದ್ದಾರೆ.

‘ಆನ್‌ಲೈನ್ ಗೇಮ್‌ಗಳ ಜಾಲಕ್ಕೆ ಸಿಲುಕಿ ಮಕ್ಕಳು ಮತ್ತು ಯುವಕರು ಹಣ ಕಳೆದುಕೊಳ್ಳುವುದನ್ನು ತಪ್ಪಿಸಲು ಕ್ರಮ ತೆಗೆದುಕೊಳ್ಳಿ’ ಎಂದಿದ್ದಾರೆ. ‘ಇಂತಹ ಆಟಗಳಲ್ಲಿ ಜೂಜಿಗೆ ಹಣ ಇಟ್ಟು ಹಲವು ಕುಟುಂಬಗಳು ಬೀದಿಗೆ ಬಂದಿವೆ. ಇದನ್ನು ತಪ್ಪಿಸುವ ಅವಶ್ಯಕತೆ ಇದೆ’ ಎಂದು ಪತ್ರದಲ್ಲಿ ವಿವರಿಸಿದ್ದಾರೆ..

ನಿಧನ ವಾರ್ತೆ

ಅಶ್ವತ್ಥಪ್ಪ




ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಹಾಗೂ ಲೇಖಕ ಅಶ್ವತ್ಥಪ್ಪ (77) ಅವರು ಭಾನುವಾರ ನಿಧನರಾದರು.

ಅವರು ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

ಅಶ್ವತ್ಥಪ್ಪ ಅವರು ಎಂಇಎಸ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ವೃತ್ತಿ ಆರಂಭಿಸಿದ್ದರು. ಬಳಿಕ ಬೆಂಗಳೂರು ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ್ದರು. ಸಾಹಿತ್ಯ ಕ್ಷೇತ್ರಕ್ಕೂ ಕೊಡುಗೆ ನೀಡಿರುವ ಅವರು, 35 ಪುಸ್ತಕಗಳನ್ನು ಬರೆದಿದ್ದಾರೆ.

ಲಂಚ: ಸಬ್–ರಿಜಿಸ್ಟ್ರಾರ್‌ಗೆ ಮೂರು ವರ್ಷ ಜೈಲು

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಿವೇಶನದ ಕ್ರಯಪತ್ರ ನೋಂದಣಿ ಮಾಡಿಕೊಡಲು ₹15,000 ಲಂಚ ಪಡೆಯುತ್ತಿದ್ದ ವೇಳೆ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ಸಿಕ್ಕಿಬಿದ್ದಿದ್ದ ಸಬ್–ರಿಜಿಸ್ಟ್ರಾರ್ ಭಾಸ್ಕರ್ ಸಿದ್ದರಾಮಪ್ಪ ಚೋಪುರ್ ಎಂಬುವವರಿಗೆ ಹೆಚ್ಚುವರಿ ನಗರ ಸಿವಿಲ್ ನ್ಯಾಯಾಲಯವು ಮೂರು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಜತೆಗೆ ₹5 ಲಕ್ಷ ದಂಡ ವಿಧಿಸಿದೆ.

ಭಾಸ್ಕರ್ ಅವರು 2019ರ ಏಪ್ರಿಲ್‌ನಲ್ಲಿ ಜಾಲ ಉಪ–ನೋಂದಣಿ ಕಚೇರಿಯಲ್ಲಿ, ಉಪ–ನೋಂದಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಜಗದೀಶ್ ಎಚ್.ಎಂ. ಎಂಬುವವರು ತಾವು ಖರೀದಿಸಿದ್ದ ನಿವೇಶನದ ಕ್ರಯಪತ್ರ ನೋಂದಣಿ ಮಾಡಿಸಲು ಭಾಸ್ಕರ್ ಅವರ ಕಚೇರಿಯನ್ನು ಎಡತಾಕಿದ್ದರು.

‘ಕೆಲಸ ಮಾಡಿಕೊಡಲು ಭಾಸ್ಕರ್ ಅವರು ₹25,000 ಲಂಚ ನೀಡುವಂತೆ ಕ್ಯಾಲ್ಕುಲೇಟರ್‌ನಲ್ಲಿ ಬರೆದು ತೋರಿಸಿದರು. ಅದು ಜಾಸ್ತಿ ಯಾಯಿತು ಎಂದಾಗ ₹20,000ಕ್ಕೆ ನಂತರ ₹15,000 ಲಂಚಕ್ಕೆ ಒಪ್ಪಿಗೆ ನೀಡಿದ್ದರು’ ಎಂದು ಜಗದೀಶ್ ಎಸಿಬಿಗೆ ದೂರು ನೀಡಿದ್ದರು.

ಎಸಿಬಿ ಪೊಲೀಸರ ಮಾರ್ಗದರ್ಶನದಂತೆ ಕಚೇರಿಗೆ ಹೋಗಿದ್ದ ಜಗದೀಶ್ ಅವರು, ಲಂಚಕ್ಕೆ ಸಂಬಂಧಿಸಿದ ಮಾತುಕತೆಯನ್ನು ರೆಕಾರ್ಡ್ ಮಾಡಿಕೊಂಡಿದ್ದರು. ಜತೆಗೆ ಲಂಚದ ಮೊತ್ತವನ್ನು ನೀಡಿದ್ದರು. ಅದೇ ವೇಳೆ ದಾಳಿ ನಡೆಸಿದ್ದ ಎಸಿಬಿ ಪೊಲೀಸರು ಆರೋಪಿಯನ್ನು ಬಂಧಿಸಿದ್ದರು. ಪೊಲೀಸರನ್ನು ಕಂಡ ಭಾಸ್ಕರ್ ಲಂಚದ ಹಣವನ್ನು ಕಿಟಕಿಯಿಂದಾಚೆಗೆ ಎಸೆದಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಲಾಗಿತ್ತು. ನಂತರ ಪ್ರಕರಣ ಲೋಕಾಯುಕ್ತಕ್ಕೆ ವರ್ಗಾವಣೆಯಾಗಿತ್ತು.

‘ತಾನು ಲಂಚದ ಹಣ ಮುಟ್ಟೇ ಇಲ್ಲ, ನನ್ನ ಟೇಬಲ್‌ನಲ್ಲಿ ಲಂಚದ ಹಣ ಸಿಕ್ಕಿಲ್ಲ’ ಎಂದು ಭಾಸ್ಕರ್ ನ್ಯಾಯಾಲಯದಲ್ಲಿ ವಾದಿಸಿದ್ದರು. ಆದರೆ ತನಿಖಾಧಿಕಾರಿಗಳು ತಾಂತ್ರಿಕ ಸಾಕ್ಷ್ಯಗಳನ್ನು ಮುಂದಿಟ್ಟಿದ್ದರು. ವಾದ ಪ್ರತಿವಾದವನ್ನು ಆಲಿಸಿದ್ದ ಸಿವಿಲ್ ನ್ಯಾಯಾಲಯವು ಭಾಸ್ಕರ್ ತಪ್ಪಿತಸ್ಥ ಎಂದು ತೀರ್ಪು ನೀಡಿತ್ತು.

ಇದೇ ಶುಕ್ರವಾರ ಶಿಕ್ಷೆ ಪ್ರಕಟಿಸಿರುವ ನ್ಯಾಯಾಲಯವು, ₹5 ಲಕ್ಷ ದಂಡ ತೆರದಿದ್ದರೆ ಐದು ತಿಂಗಳು ಹೆಚ್ಚುವರಿ ಜೈಲು ಶಿಕ್ಷೆ ಅನುಭವಿಸಬೇಕು ಎಂದು ಆದೇಶಿಸಿದೆ.

ನಗರದಲ್ಲಿ ಇಂದು

‘ಹೆಣ್ತನ’ ಆಲ್ಬಮ್ ಬಿಡುಗಡೆ: ಉದ್ಘಾಟನೆ: ಬಿ. ದಯಾನಂದ, ಆಲ್ಬಿನಾ, ಪ್ರಾಸ್ತಾವಿಕ ನುಡಿ: ಎಂ.ಡಿ. ಪಲ್ಲವಿ, ‘ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಸಮುದಾಯದ ಹೋರಾಟ’ ಕುರಿತು ಅಧಿವೇಶನದ ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, ‘ವಿಡಿಯೊ ಕುರಿತು ಸೆಲೆಬ್ರಿಟಿಗಳ ಮನದಾಳದ ಮಾತು’: ಕಿಶೋರ್ ಕುಮಾರ್, ಸಂಯುಕ್ತಾ ಹೊರನಾಡು, ಮೇರಿ ಉಷಾ ಕೋಕಿಲಾ, ಮುಕ್ತ ಚರ್ಚೆ: ಅಕ್ಕೈ ಪದ್ಮಶಾಲಿ, ಆಯೋಜನೆ: ಒಂದೆಡೆ, ಸ್ಥಳ: ಮೌಂಟ್ ಕಾರ್ಮೆಲ್ ಕಾಲೇಜು, ಅರಮನೆ ರಸ್ತೆ, ಬೆಳಿಗ್ಗೆ 10.30

ಬಂಜಾರ ಕಸೂತಿ ಕಲಿಕೆ ಕಾರ್ಯಾಗಾರ: ಉದ್ಘಾಟನೆ: ಎ.ಆರ್. ಗೋವಿಂದಸ್ವಾಮಿ, ಅಧ್ಯಕ್ಷತೆ: ಪಿ.ಟಿ. ಶ್ರೀನಿವಾಸ ನಾಯಕ, ಅತಿಥಿಗಳು: ಟಿ.ಎಂ. ಭಾಸ್ಕರ, ಎನ್. ಮಂಗಳಾ, ಸಂಪನ್ಮೂಲ ವ್ಯಕ್ತಿಗಳು: ಸಾವಿತ್ರಿ ಬಾಯಿ, ಚಾವಳಿ ಬಾಯಿ, ಪ್ರಶಾಂತ್ ಹೆಬ್ಬಸೂರು, ಆಯೋಜನೆ: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಸ್ಥಳ: ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಬೆಳಿಗ್ಗೆ 11

‘ರಂಗಸಂವಾದ-02’: ‘ಆಧುನಿಕ ರಂಗಭೂಮಿಯಲ್ಲಿ ವೃತ್ತಿಪರತೆ ಹಾಗೂ ರೆಪರ್ಟರಿಗಳು’ ಕುರಿತು ಸಂವಾದ: ಅತಿಥಿ: ಸಿ. ಬಸವಲಿಂಗಯ್ಯ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ರಂಗಚಾವಡಿ, ಕರ್ನಾಟಕ ನಾಟಕ ಅಕಾಡೆಮಿ ಆವರಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ಸಂವಾದ ಸಭೆ: ಎಸ್. ಸೆಲ್ವಕುಮಾರ್, ಅತಿಥಿಗಳು: ಮಹೇಶ್ ಎಂ., ಟಿ.ಎಚ್.ಎಂ. ಕುಮಾರ್, ಅಧ್ಯಕ್ಷತೆ: ಆಯೋಜನೆ ಮತ್ತು ಸ್ಥಳ: ಕಾಸಿಯಾ, ವಿಜಯನಗರ, ಸಂಜೆ 6

ಎಚ್.ಎಸ್. ಶಿವಪ್ರಕಾಶ್ ಅವರಿಗೆ ಅಭಿನಂದನಾ ಸಮಾರಂಭ, ‘ಮಂಟೇಸ್ವಾಮಿ ಕಥಾ ಪ್ರಸಂಗ’ |ಪ್ರದರ್ಶನ: ರಚನೆ: ಎಚ್.ಎಸ್. ಶಿವಪ್ರಕಾಶ್, ನಿರ್ದೇಶನ: ಮೈಮ್ ರಮೇಶ್ ರಂಗಾಯಣ, ಸಂಗೀತ: ದೇವಾನಂದ ವರಪ್ರಸಾದ್, ಅರುಣ್ ಎಂ.ಸಿ., ಅತಿಥಿಗಳು: ಎಸ್.ಜಿ. ಸಿದ್ಧರಾಮಯ್ಯ, ಹಂಸಲೇಖ, ಆಯೋಜನೆ: ಸಿರಿವರ ಕಲ್ಚರ್ ಅಕಾಡೆಮಿ ಹಾಗೂ ಅನನ್ಯ ಕ್ರಿಯೇಷನ್ಸ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್‌ಆ್ಯಪ್ ಮಾಡಿ: 9606038256


ರಾಜರಾಜೇಶ್ವರಿನಗರ ಮುಚ್ಚಿದ ಗುಂಡಿ

ಗುಂಡಿ ಮುಚ್ಚಿದ ಜಲಮಂಡಳಿ

ರಾಜರಾಜೇಶ್ವರಿನಗರ ಬಿಎಚ್‌ಇಎಲ್ ಲೇಔಟ್‌ನ ಎರಡನೇ ಹಂತದ ಏಳನೇ ಕ್ರಾಸ್‌ನಲ್ಲಿ ಬೆಂಗಳೂರು ಜಲಮಂಡಳಿಯ ಕೊಳವೆ ದುರಸ್ತಿಗೆ ಅಗೆದಿದ್ದ ಗುಂಡಿಯನ್ನು ಮುಚ್ಚಲಾಗಿದೆ.

‘ಪ್ರಜಾವಾಣಿ’ಯ ಕುಂದುಕೊರತೆ ವಿಭಾಗದಲ್ಲಿ ಆಗಸ್ಟ್ 26ರಂದು ‘ರಾಜರಾಜೇಶ್ವರಿನಗರ: ಅಗೆದ ಗುಂಡಿ ಮುಚ್ಚಿ’ ಎಂಬ ಶೀರ್ಷಿಕೆ ಅಡಿಯಲ್ಲಿ ವರದಿ ಪ್ರಕಟವಾಗಿತ್ತು. ಇದರಿಂದ ಎಚ್ಚೆತ್ತ ಜಲಮಂಡಳಿ ಸಿಬ್ಬಂದಿ ಗುಂಡಿ ಮುಚ್ಚಿದ್ದಾರೆ.

‘ವಾಲಿದ ವಿದ್ಯುತ್ ಕಂಬ’


ನಾಗರಬಾವಿ ವಾಲಿದ ವಿದ್ಯುತ್ ಕಂಬ

ನಾಗರಬಾವಿಯ ಪದ್ದರೆಡ್ಡಿಪಾಳ್ಯದ ಮುಖ್ಯ ರಸ್ತೆಯಲ್ಲಿನ ವಿದ್ಯುತ್ ಕಂಬ ವಾಲಿದೆ. ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ವಾಲಿದ ವಿದ್ಯುತ್ ಕಂಬ ಯಾವ ಕ್ಷಣ ಬೀಳುತ್ತದೆಯೋ ಎಂಬ ಭಯದಲ್ಲಿ ಸವಾರರು ಸಂಚರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಆದರೆ, ಇದುವರೆಗೂ ಸಮಸ್ಯೆ ಪರಿಹಾರವಾಗಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ವಾಲಿದ ಸ್ಥಿತಿಯಲ್ಲಿರುವ ಈ ವಿದ್ಯುತ್ ಕಂಬವನ್ನು ತೆರವುಗೊಳಿಸಿ, ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು.

ತೇಜಸ್ ಎಂ., ನಾಗರಬಾವಿ

‘ರಸ್ತೆಯಲ್ಲಿನ ಕಸ ತೆರವುಗೊಳಿಸಿ’


ನಾಗೊಂಡನಹಳ್ಳಿಯ ಶಿವನಕುಂಟಮ್ಮ ದೇವಸ್ಥಾನದ ರಸ್ತೆಯಲ್ಲಿ ಹಾಕಿರುವ ಕಸ

ಬಿಬಿಎಂಪಿ ವ್ಯಾಪ್ತಿಯ ನಾಗೊಂಡನಹಳ್ಳಿಯ ಶಿವನಕುಂಟಮ್ಮ ದೇವಸ್ಥಾನದ ಎದುರಿನ ರಸ್ತೆಯಲ್ಲಿ ರಾಶಿಗಟ್ಟಲೆ ಕಸ ಹಾಕಲಾಗುತ್ತಿದೆ. ಪ್ರತಿನಿತ್ಯ ಈ ರಸ್ತೆಯಲ್ಲಿ ಲಾರಿಗಳ ಮೂಲಕ ಕಸ ತುಂಬಿಕೊಂಡು ಬಂದು ಸುರಿಯಲಾಗುತ್ತಿದೆ. ಸದ್ಯ ಇದು ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಈ ಪ್ರದೇಶವೆಲ್ಲ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ಬಿಬಿಎಂಪಿ ಅಧಿಕಾರಿಗಳು ಇಲ್ಲಿ ರಾಶಿ ಹಾಕಿರುವ ಕಸವನ್ನು ವಿಲೇವಾರಿ ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದರ ಮೂಲಕ ನಗರದ ಸ್ವಚ್ಛತೆಗೆ ಆದ್ಯತೆ ನೀಡಬೇಕು.

ಪ್ರಭು, ನಾಗೊಂಡನಹಳ್ಳಿ

‘ಮರದ ಬೊಡ್ಡೆ ತೆರವುಗೊಳಿಸಿ’

ಗಾಂಧಿನಗರದ ಕಾಳಿದಾಸ ರಸ್ತೆಯಲ್ಲಿ ನಾಲ್ಕು ತಿಂಗಳ ಹಿಂದೆ ಗಾಳಿಗೆ ಉರುಳಿಬಿದ್ದಿದ್ದ ಮರವನ್ನು ಕತ್ತರಿಸಿದ್ದ ಬಿಬಿಎಂಪಿ ಸಿಬ್ಬಂದಿ, ಅದರ ಬೊಡ್ಡೆಯನ್ನು ಪಾದಚಾರಿ ಮಾರ್ಗದಲ್ಲಿ ಬಿಟ್ಟು ಹೋಗಿದ್ದಾರೆ. ಇದರಿಂದ, ಸಾರ್ವಜನಿಕರ ಓಡಾಟಕ್ಕೆ ಸಮಸ್ಯೆ ಆಗುತ್ತಿದೆ. ಪಾದಚಾರಿ ಮಾರ್ಗದಲ್ಲಿ ಬೊಡ್ಡೆ ಇರುವ ಕಾರಣ ಪಾದಚಾರಿಗಳು ಮುಖ್ಯ ರಸ್ತೆಯ ಮೂಲಕ ಹಾದು ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ, ಸಂಚಾರ ದಟ್ಟಣೆ ಆಗುತ್ತಿದ್ದು, ಅಪಘಾತಗಳು ಆಗುವ ಸಂಭವವಿದೆ. ಬಿಬಿಎಂಪಿ ಅರಣ್ಯ ವಿಭಾಗದ ಸಿಬ್ಬಂದಿ ಮರದ ಟೊಂಗೆಗಳನ್ನು ಮಾತ್ರ ತೆಗೆದುಕೊಂಡು ಹೋಗಿದ್ದಾರೆ. ಇದರಿಂದ ಪಾದಚಾರಿಗಳ ಓಡಾಟಕ್ಕೆ ಸಮಸ್ಯೆ ಆಗಿದೆ. ಇಲ್ಲಿರುವ ಮರದ ಬೊಡ್ಡೆಯನ್ನು ಕೂಡಲೇ ತೆರವುಗೊಳಿಸಬೇಕು.

ಶಿವಪ್ರಸಾದ್, ಗಾಂಧಿನಗರ


ಗಾಂಧಿನಗರದ ಕಾಳಿದಾಸ ರಸ್ತೆಯ ಪಾದಚಾರಿ ಮಾರ್ಗದಲ್ಲಿರುವ ಬೊಡ್ಡೆ

ಎನ್‌.ಆರ್‌. ಕಾಲೊನಿಯಲ್ಲಿ ಏಕಕಾಲದಲ್ಲಿ ರಸ್ತೆಯ ಎರಡೂ ಬದಿಗಳನ್ನೂ ಅಗೆದುಹಾಕಿದ ಬಿಬಿಎಂಪಿ

ವೈಟ್‌ ಟಾಪಿಂಗ್‌: ಜನಸಂಚಾರಕ್ಕೂ ಸಮಸ್ಯೆ

• ಬಾಲಕೃಷ್ಣ ಪಿ.ಎಚ್‌.



ನಗರದ ಎನ್‌.ಆರ್‌. ಕಾಲೊನಿ ಬಸ್‌ನಿಲ್ದಾಣದಿಂದ ನೆಟ್ಟಕಲ್ಲಪ್ಪ ವೃತ್ತದವರೆಗೆ ಏಕಕಾಲದಲ್ಲಿ ರಸ್ತೆಯ ಎರಡೂ ಕಡೆ ಕಾಮಗಾರಿ ನಡೆಸುತ್ತಿರುವುದರಿಂದ ವಾಹನ ದಟ್ಟಣೆ ಉಂಟಾಗಿದೆ ಪ್ರಜಾವಾಣಿ ಚಿತ್ರಗಳು/ರಂಜು ಪಿ.

ಬೆಂಗಳೂರು: ಎನ್‌.ಆರ್‌. ಕಾಲೊನಿ ಬಸ್‌ ನಿಲ್ದಾಣದಿಂದ ನೆಟ್ಟಕಲ್ಲಪ್ಪ ವೃತ್ತದವರೆಗೆ ಬಿಬಿಎಂಪಿಯಿಂದ ಚರಂಡಿ ನಿರ್ಮಿಸಲಾಗುತ್ತಿದ್ದು, ಏಕಕಾಲದಲ್ಲಿ ರಸ್ತೆಯ ಎರಡೂ ಕಡೆ ಅಗೆಯುತ್ತಿರುವುದರಿಂದ ಸಾರ್ವಜನಿಕರಿಗೆ ತೀವ್ರ ಸಮಸ್ಯೆ ಉಂಟಾಗಿದೆ. ವಾಹನ ಸಂಚಾರ, ಅಂಗಡಿಗಳ ವ್ಯಾಪಾರ, ವಾಹನಗಳ ನಿಲುಗಡೆ, ಮನೆ ಆವರಣ ಪ್ರವೇಶ ಎಲ್ಲಕ್ಕೂ ಪಡಿಪಾಟಲು ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಬಿಬಿಎಂಪಿ ರಸ್ತೆ ಮೂಲಸೌಕರ್ಯ ಯೋಜನೆಯಡಿ ನಗರದ ವಿವಿಧೆಡೆ ಕಾಂಕ್ರೀಟ್‌ ರಸ್ತೆಗಳ ನಿರ್ಮಾಣಕ್ಕೆ ವೈಟ್‌ ಟಾಪಿಂಗ್‌ ಕಾಮಗಾರಿ ಆರಂಭಿಸಲಾಗಿದೆ. ಅದರಲ್ಲಿ ಈ ರಸ್ತೆಯೂ ಸೇರಿದೆ. ಈ ಯೋಜನೆಯ ಭಾಗವಾಗಿ ಮಳೆ ನೀರು ಹರಿದುಹೋಗಲು ರಸ್ತೆಯ ಎರಡೂ ಬದಿಗಳಲ್ಲಿ ಚರಂಡಿ ನಿರ್ಮಿಸಲಾಗುತ್ತಿದೆ. ಒಂದು ಬದಿಯಲ್ಲಿ ಕಾಮಗಾರಿ ಮುಗಿಸಿ ಇನ್ನೊಂದು ಬದಿಯ ಕಾಮಗಾರಿ ಕೈಗೆತ್ತಿಕೊಳ್ಳುವ ಬದಲು, ಒಂದೇ ಬಾರಿಗೆ ಎರಡೂ ಕಡೆ ಕಾಮಗಾರಿ ನಡೆಸುತ್ತಿರುವುದೇ ಸಮಸ್ಯೆ ಬಿಗಡಾಯಿಸಲು ಕಾರಣವಾಗಿದೆ.

ಒಳರಸ್ತೆಗಳು ಈ ರಸ್ತೆಯನ್ನು ಸಂಪರ್ಕಿಸುವಲ್ಲಿಯೇ ಅಗೆದು ಹಾಕಿರುವುದರಿಂದ ಒಳರಸ್ತೆಗಳಿಗೆ ವಾಹನಗಳು ಹೋಗಲು, ಅತ್ತ ಕಡೆಯಿಂದ ಬರಲು ಸಾಧ್ಯವಾಗುತ್ತಿಲ್ಲ. ಇದರಿಂದ ವಾಹನಗಳು ನೆಟ್ಟಕಲ್ಲಪ್ಪ ವೃತ್ತಕ್ಕೆ ಬಂದು, ಪಕ್ಕದ ರಸ್ತೆ ಮೂಲಕ ಸಾಗಬೇಕಿದೆ. ಪರಿಣಾಮವಾಗಿ ನೆಟ್ಟಕಲ್ಲಪ್ಪ ವೃತ್ತ–ಎನ್‌.ಆರ್‌. ಕಾಲೊನಿ ರಸ್ತೆಯಲ್ಲಿ ವಿಪರೀತ ವಾಹನ ದಟ್ಟಣೆ ಉಂಟಾಗಿದೆ.

‘ಕಾಮಗಾರಿ ನಡೆಯುವಾಗ ಸಾರ್ವಜನಿಕರಿಗೆ ಸ್ವಲ್ಪ ತೊಂದರೆ ಉಂಟಾಗುತ್ತದೆ. ವಾಹನ ದಟ್ಟಣೆಯ ಸಮಸ್ಯೆಯಾಗದಂತೆ ನೋಡಿಕೊಳ್ಳುತ್ತಿದ್ದೇವೆ. ಸಮಸ್ಯೆ ಹೆಚ್ಚಾದರೆ ವಾಹನ ಸಂಚಾರವನ್ನು ಬಂದ್‌ ಮಾಡಿ ಬೇರೆ ಮಾರ್ಗದಲ್ಲಿ ಸಂಚಾರಕ್ಕೆ ಅವಕಾಶ ಕಲ್ಪಿಸಲು ಕ್ರಮ ಕೈಗೊಳ್ಳುತ್ತೇವೆ. ಸದ್ಯ ವಾಹನಗಳು ಸಾಲುಗಟ್ಟಿ ನಿಲ್ಲುತ್ತವೆಯಾದರೂ ಸ್ವಲ್ಪ ಹೊತ್ತಿನಲ್ಲಿಯೇ ಮುಂದಕ್ಕೆ ಸಾಗುತ್ತಿವೆ’ ಎಂದು ಬಸವನಗುಡಿ ಸಂಚಾರ ಪೊಲೀಸ್‌ ಠಾಣೆಯ ಇನ್‌ಸ್ಪೆಕ್ಟರ್‌ ತಿಳಿಸಿದರು.

‘ಬಿಬಿಎಂಪಿ ಕಾಮಗಾರಿ ನಡೆಸುತ್ತಿದೆ. ಒಂದು ಬದಿಯಲ್ಲಿ ಮಾತ್ರ ಕೆಲಸ ಮಾಡುವಂತೆ ನಾವು ನಿರ್ದೇಶನ ನೀಡಲು ಸಾಧ್ಯವಿಲ್ಲ. ಕಾಮಗಾರಿಯಿಂದ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ನಾವು ನೋಡಿಕೊಳ್ಳುತ್ತೇವೆ’ ಎಂದು ಸ್ಪಷ್ಟಪಡಿಸಿದರು.

ಆದರೆ, ಸಂಚಾರ ದಟ್ಟಣೆಯ ಸಮಯದಲ್ಲಿಯೂ ಕೆಲವು ಬಾರಿ ಪೊಲೀಸರೇ ಇರುವುದಿಲ್ಲ ಎಂದು ಸ್ಥಳೀಯರು ದೂರುತ್ತಾರೆ.

‘ರಸ್ತೆ ಚೆನ್ನಾಗಿತ್ತು. ಸರಿ ಇರುವ ರಸ್ತೆಯನ್ನೇ ಅಭಿವೃದ್ಧಿ ಹೆಸರಲ್ಲಿ ಅಗೆದು ಹಾಳು ಮಾಡಲಾಗುತ್ತಿದೆ. ಇಲ್ಲಿನ ಅಂಗಡಿ, ಹೋಟೆಲ್‌ಗಳಿಗೆ ಮಾತ್ರವಲ್ಲ, ಮನೆಗಳಿಗೂ ಹೋಗುವುದು ಕಷ್ಟವಾಗುವಂತೆ ಅಗೆದು ಗೇಟ್‌ ಮುಂದೆಯೇ ಹಾಕುತ್ತಿದ್ದಾರೆ. ಪೈಪ್‌ ಅಳವಡಿಸಿದ ನಂತರ ಮುಚ್ಚುತ್ತಿದ್ದಾರೆ. ಅಗೆದು ಹಾಕಿದಲ್ಲಿಂದ ಮುಚ್ಚುವವರೆಗೆ ವಾಹನಗಳನ್ನು ಮನೆಯ ಆವರಣದ ಒಳಗೆ ಒಯ್ಯುವುದು ಹೇಗೆ’ ಎಂದು ಸ್ಥಳೀಯ ನಿವಾಸಿ ರಂಗಪ್ಪ ಪ್ರಶ್ನಿಸಿದರು.

‘ತ್ವರಿತವಾಗಿ ಕೆಲಸ ಮುಗಿಸಲು ಕ್ರಮ’

‘ಎನ್‌.ಆರ್‌. ಕಾಲೊನಿ ರಸ್ತೆಯ ಎರಡೂ ಬದಿ ಒಂದೇ ಬಾರಿಗೆ ಕೆಲಸ ಆರಂಭಿಸಿರುವುದರಿಂದ ಸಮಸ್ಯೆ ಆಗಿದ್ದರೆ, ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುತ್ತೇವೆ. ವಾಹನಗಳ ಸಂಚಾರ ಮಾರ್ಗ ಬದಲಾವಣೆ, ಬಸ್‌ ಸಂಚಾರ ನಿರ್ಬಂಧ ಸೇರಿದಂತೆ ಅಗತ್ಯ ಕ್ರಮಗಳನ್ನು ಕೈಗೊಂಡು ಸ್ಥಳೀಯರ ಓಡಾಟಕ್ಕೆ ತೊಂದರೆಯಾ ಗದಂತೆ ಮಾಡಲಾ ಗುವುದು’ ಎಂದು ಬಿಬಿಎಂಪಿ ದಕ್ಷಿಣ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್‌ (ಪ್ರಮುಖ ರಸ್ತೆಗಳು) ಬಿ.ಎಂ. ಧರಣೇಂದ್ರಕುಮಾರ್‌ ಅವರು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.



ದೀರ್ಘಾವಧಿಯ ಕಾಮಗಾರಿ

‘ಈಗ ಚರಂಡಿ ಪೈಪ್‌ ಅಳವಡಿಸುವ ಕಾಮಗಾರಿ ನಡೆಯುತ್ತಿದೆ. ಕಾಮಗಾರಿ ನಡೆಸಲು ಹೆಚ್ಚು ಸಮಯ ತೆಗೆದುಕೊಂಡಷ್ಟೂ ಸಮಸ್ಯೆ ಹೆಚ್ಚಾಗುತ್ತದೆ ಎಂಬ ಕಾರಣಕ್ಕೆ ಎರಡೂ ಬದಿಯಲ್ಲಿ ಏಕಕಾಲದಲ್ಲಿ ಅಗೆದು ಪೈಪ್‌ ಅಳವಡಿಸಿ ಮುಚ್ಚಲಾಗುತ್ತಿದೆ. ಕಾಮಗಾರಿ ವೇಗವಾಗಿ ನಡೆಯುತ್ತಿದೆ’ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದರು.

‘ವೈಟ್‌ ಟಾಪಿಂಗ್‌ ಕಾಮಗಾರಿ ಆಗಿರುವುದರಿಂದ ಕೆಲಸ ಪೂರ್ಣಗೊಳ್ಳಲು ಸಮಯ ಹಿಡಿಯುತ್ತದೆ. ಯುಟಿಲಿಟಿ ಪೈಪ್‌ ಅಳವಡಿಕೆ, ಚರಂಡಿ ಕಾಮಗಾರಿ ಮುಗಿದ ಬಳಿಕ ರಸ್ತೆ ಕಾಂಕ್ರೀಟೀಕರಣ, ಪಾದಚಾರಿ ಮಾರ್ಗ ನಿರ್ಮಾಣ ಕಾಮಗಾರಿಗಳು ನಡೆಯಲಿವೆ’ ಎಂದು ವಿವರ ನೀಡಿದರು.

ಜನರು ಏನಂತಾರೆ?



ಒಂದು ಕಡೆ ರಸ್ತೆ ಅಗೆದಿದ್ದರೆ ಇನ್ನೊಂದು ಬದಿಯಲ್ಲಾದರೂ ವಾಹನಗಳನ್ನು ನಿಲ್ಲಿಸಲು ಅವಕಾಶ ಸಿಗುತ್ತಿತ್ತು. ಈಗ ಎರಡೂ ಕಡೆ ನಿಲ್ಲಿಸಲು ಅವಕಾಶ ಇಲ್ಲದ ಕಾರಣ ಒಂದು ವಾರದಿಂದ ಇಲ್ಲಿನ ಯಾವ ಅಂಗಡಿಗಳಿಗೂ ವ್ಯಾಪಾರವೇ ಇಲ್ಲದಂತಾಗಿದೆ. ಶುಕ್ರವಾರ ‘ಸ್ಟಾಕ್‌’ ಬಂದಿತ್ತು. ಅದನ್ನು ವಾಹನದಿಂದ ಇಳಿಸಿಕೊಳ್ಳುವುದಕ್ಕೂ ಪರದಾಡುವಂತಾಯಿತು.

ರಮೇಶ್‌, ವ್ಯಾಪಾರಿ




ಯಾವ ಕಾಮಗಾರಿ ಎಂದು ಸ್ಥಳೀಯರಿಗೆ ಮಾಹಿತಿಯೇ ಇಲ್ಲ. ಬರುತ್ತಾರೆ, ಅಗೆದು ಹಾಕುತ್ತಾರೆ. ನಾನು ಬೀದಿ ವ್ಯಾಪಾರಿ. ಇಲ್ಲಿ ಅಗೆದರೆ ಮುಂದೆ ಹೋಗಿ ವ್ಯಾಪಾರ ಮಾಡ್ತೇನೆ. ಅಂಗಡಿ, ಹೋಟೆಲ್‌ನವರಿಗೆ ಹಾಗೆ ಮಾಡಲು ಆಗುವುದಿಲ್ಲ. ಒಂದು ಬದಿಯಿಂದ ಕಾಮಗಾರಿ ನಡೆಸಿದ್ದಿದ್ದರೆ ಇಷ್ಟು ಸಮಸ್ಯೆ ಆಗುತ್ತಿರಲಿಲ್ಲ.

ದೇವದತ್ತ ಆರ್ಯ, ಉಂಗುರ ವ್ಯಾಪಾರಿ



ಎರಡು ವಾರದಿಂದ ಕಾಮಗಾರಿ ನಡೆಯುತ್ತಿದೆ. ಎಲ್ಲ ಕಡೆ ಅಗೆದು ಹಾಕಿರುವುದರಿಂದ ಸಮಸ್ಯೆ ಉಂಟಾಗಿದೆ. ನಿಜವಾದ ಸಮಸ್ಯೆ ಇನ್ನು ಮುಂದೆ ಶುರುವಾಗಲಿದೆ. ಯಾಕೆಂದರೆ, ಈಗ ಅಗೆದು ಪೈಪ್‌ ಹಾಕಿ ಮುಚ್ಚಿದ್ದಾರೆ. ಮಳೆ ಬಂದರೆ ಕೆಸರು, ಒಣಗಿದರೆ ದೂಳು ಉಂಟಾಗಿ ಜನರು ಕಷ್ಟಪಡುವ ದಿನಗಳು ಮುಂದಿರುವಂತೆ ಕಾಣುತ್ತಿದೆ.

ಕಾಂತರಾಜ್‌, ಎಳನೀರು ವ್ಯಾಪಾರಿ



ರಸ್ತೆ ಅಗೆದು ಹಾಕಿರುವುದರಿಂದ ಆಟೊಗಳಿಗೆ ಬಾಡಿಗೆ ಇಲ್ಲದಂತಾಗಿದೆ. ಆಟೊಗಳನ್ನು ಎಲ್ಲಿ ನಿಲ್ಲಿಸುವುದು ಎಂಬ ಸಮಸ್ಯೆಯೂ ಎದುರಾಗಿದೆ. ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಿದರೆ ಸಂಕಷ್ಟದಿಂದ ಪಾರಾಗಬಹುದು.

ಶಿವಕುಮಾರ್‌, ಆಟೊ ಚಾಲಕ



ರಸ್ತೆಯ ಎರಡೂ ಕಡೆ ಏಕಕಾಲದಲ್ಲಿ ಅಗೆಯಲಾಗಿದೆ

ರಸ್ತೆ ಗುಂಡಿ ಮುಚ್ಚಲು 15 ದಿನಗಳ ಗಡುವು

ಬಿಬಿಎಂಪಿ ಆಯುಕ್ತರಿಗೆ ಡಿಸಿಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್‌ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ರಸ್ತೆ ಗುಂಡಿಗಳನ್ನು 15 ದಿನಗಳೊಳಗೆ ಮುಚ್ಚಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ ಅವರು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್‌ ಗಿರಿನಾಥ್‌ ಅವರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

‘ರಸ್ತೆಗುಂಡಿಗಳ ಬಗ್ಗೆ ಸಾಕಷ್ಟು ದೂರುಗಳು ಬರುತ್ತಿವೆ. ಈ ಬಗ್ಗೆ ತುರ್ತು ಗಮನ ಹರಿಸಬೇಕು. ಈಗಾಗಲೇ ‘ರಸ್ತೆ ಗುಂಡಿ ಗಮನ’ ಎಂಬ ಆ್ಯಪ್‌ ಮೂಲಕ ಸಾರ್ವಜನಿಕರು ರಸ್ತೆ ಗುಂಡಿಗಳ ಫೋಟೊ ತೆಗೆದು ಅಪ್‌ಲೋಡ್‌ ಮಾಡುವ ವ್ಯವಸ್ಥೆ ಮಾಡಲಾಗಿದೆ. ಇದರ ಜೊತೆಗೆ ನಗರದ ಅನೇಕ ಕಡೆ ರಸ್ತೆಗಳು ಹಾಳಾಗಿರುವುದರ ಬಗ್ಗೆಯೂ ದೂರುಗಳು ಬರುತ್ತಿವೆ. ಮಳೆಗಾಲದ ಕಾರಣಕ್ಕೂ ರಸ್ತೆಗಳಲ್ಲಿ ಗುಂಡಿಗಳಾಗುತ್ತಿರಬಹುದು. ಇದರ ಬಗ್ಗೆಯೂ ಗಮನ ಹರಿಸಬೇಕು’ ಎಂದು ತಿಳಿಸಿದ್ದಾರೆ.



ಡಿ.ಕೆ. ಶಿವಕುಮಾರ್‌

‘15 ದಿನಗಳ ಗಡುವು ಮುಗಿದ ನಂತರ ನಾನು ಖುದ್ದಾಗಿ ಇಡೀ ಬೆಂಗಳೂರು ನಗರವನ್ನು ಪ್ರದಕ್ಷಿಣೆ ಹಾಕಲಿದ್ದೇನೆ. ಪ್ರತಿ ರಸ್ತೆಯನ್ನು ಪರಿಶೀಲನೆ ಮಾಡುತ್ತೇನೆ. ಅಷ್ಟರಲ್ಲಿ ಕೆಲಸ ಮುಗಿಸಿರಬೇಕು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸೂಚನೆ ನೀಡಲಾಗಿದೆ ಎಂದು ಡಿ.ಕೆ. ಶಿವಕುಮಾರ್‌ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಚರಕ ಆಸ್ಪತ್ರೆ ಲೋಕಾರ್ಪಣೆ



ಚರಕ ಸೂಪರ್‌ ಸ್ಪೆಷಾಲಿಟಿ ಆಸ್ಪತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಾಜಿನಗರದ ಬ್ರಾಡ್‌ವೇ ರಸ್ತೆಯಲ್ಲಿರುವ ಚರಕ ಸೂಪರ್‌ ಸ್ಪೆಷಾಲಿಟಿ ಆಸ್ಪತ್ರೆ ಸೋಮವಾರ ಲೋಕಾರ್ಪಣೆಗೊಳ್ಳಲಿದೆ.

ಈ ಆಸ್ಪತ್ರೆಯು ಅಟಲ್‌ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ (ಎಬಿವಿಎಂಸಿಆರ್‌ಐ) ಅಧೀನದಲ್ಲಿದ್ದು, ಸಂಜೆ 4 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟನೆ ಮಾಡಲಿದ್ದಾರೆ.

₹24.38 ಕೋಟಿ ವೆಚ್ಚದಲ್ಲಿ ಬಿಬಿಎಂಪಿವತಿಯಿಂದ 2020ರಲ್ಲಿಯೇ ನಿರ್ಮಿಸಲಾಗಿದ್ದ ಈ ಆಸ್ಪತ್ರೆಗೆ ವೈದ್ಯರು ಹಾಗೂ ಸಿಬ್ಬಂದಿಯ ನೇಮಕಾತಿ ಆಗಿರಲಿಲ್ಲ. ಹೀಗಾಗಿ ಕಾರ್ಯಾರಂಭಗೊಂಡಿರಲಿಲ್ಲ. ಆಸ್ಪತ್ರೆ ನಿರ್ಮಾಣಕ್ಕೆ ಸಹಯೋಗ ನೀಡಿದ್ದ ಇನ್ಫೊಸಿಸ್‌ ಫೌಂಡೇಷನ್‌, ಅಗತ್ಯ ಯಂತ್ರೋಪಕರಣ, ಹಾಸಿಗೆ ಮತ್ತಿತರ ಸೌಕರ್ಯಗಳನ್ನು ಕಲ್ಪಿಸಲು ₹11 ಕೋಟಿ ದೇಣಿಗೆ ನೀಡಿತ್ತು. ಈ ಆಸ್ಪತ್ರೆಯನ್ನು ಕೋವಿಡ್‌ ಮೊದಲ ಹಾಗೂ ಎರಡನೇ ಅಲೆಯಲ್ಲಿ ಕೊರೊನಾ ಸೋಂಕಿತರ ಚಿಕಿತ್ಸೆಗೆ ಬಳಸಿಕೊಳ್ಳಲಾಗಿತ್ತು.

ಈಗ ಆಸ್ಪತ್ರೆಗೆ ಅಗತ್ಯ ವೈದ್ಯರು ಹಾಗೂ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ತೀವ್ರ ನಿಗಾ ಘಟಕ (ಐಸಿಯು)ದಲ್ಲಿನ 20 ಹಾಸಿಗೆಗಳೂ ಸೇರಿ ಒಟ್ಟು 130 ಹಾಸಿಗೆಗಳನ್ನು ನಾಲ್ಕು ಮಹಡಿಗಳ ಈ ಆಸ್ಪತ್ರೆ ಒಳಗೊಂಡಿದೆ. ಪ್ರಯೋಗಾಲಯ, ಡಯಾಲಿಸಿಸ್‌, ಕ್ಯಾಥ್‌ ಲ್ಯಾಬ್‌ ಸೇರಿ ವಿವಿಧ ಸೌಲಭ್ಯ ಹೊಂದಿದೆ.

‘ಭಾರತ–ಚೀನಾ ಬಿಕ್ಕಟ್ಟು ಪರಿಹರಿಸಲು ಯತ್ನ’

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್‌ ಅವರ ಭೇಟಿ ಸಾಧ್ಯವಾಗಿಸಲು ಭೂಮಿಕೆ ಸಿದ್ಧಪಡಿಸುವ ಉದ್ದೇಶದಿಂದ ಭಾರತ ಮತ್ತು ಚೀನಾದ ಅಧಿಕಾರಿಗಳು, ಪೂರ್ವ ಲಡಾಖ್‌ನ ವಾಸ್ತವ ಗಡಿನಿಯಂತ್ರಣ ರೇಖೆಯಲ್ಲಿನ (ಎಲ್‌ಎಸಿ) ಮಿಲಿಟರಿ ಬಿಕ್ಕಟ್ಟನ್ನು ಸಂಪೂರ್ಣವಾಗಿ ಪರಿಹರಿಸಲು ಯತ್ನ ನಡೆಸಿದ್ದಾರೆ.

ಕಳೆದ ನಾಲ್ಕೂವರೆ ವರ್ಷಗಳಿಂದ ಈ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಎಲ್‌ಎಸಿಯಲ್ಲಿ ಈಗ ಎರಡು ಕಡೆಗಳಲ್ಲಿ ಭಾರತ ಮತ್ತು ಚೀನಾ ಯೋಧರ ನಡುವೆ ಬಿಗುವಿನ ಸ್ಥಿತಿ ಇದೆ. ಈ ಪೈಕಿ ಡೆಮ್‌ಚಾಕ್‌ನಿಂದ ಯೋಧರನ್ನು ಪೂರ್ಣವಾಗಿ ಹಿಂದಕ್ಕೆ ಕರೆಸಿಕೊಳ್ಳುವ ಒಪ್ಪಂದಕ್ಕೆ ಎರಡೂ ಕಡೆಯವರು ಒಪ್ಪಿಕೊಳ್ಳುವ ಸಾಧ್ಯತೆ ಇದೆ. ಡೆಮ್‌ಚಾಕ್‌ನಿಂದ ಯೋಧರನ್ನು ಹಿಂದಕ್ಕೆ ಕರೆಸಿಕೊಳ್ಳುವುದಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ಎರಡೂ ದೇಶಗಳ ಸೇನಾ ಅಧಿಕಾರಿಗಳು ಶೀಘ್ರದಲ್ಲಿಯೇ ಅಂತಿಮಗೊಳಿಸುವ ನಿರೀಕ್ಷೆ ಇದೆ.

ಆದರೆ, ಡೆಪ್‌ಸಂಗ್‌ನಲ್ಲಿನ ಪರಿಸ್ಥಿತಿಯನ್ನು ತಿಳಿಗೊಳಿಸಲು ಇನ್ನೂ ಹಲವು ಸುತ್ತುಗಳ ಮಾತುಕತೆ ಅಗತ್ಯವಾಗಬಹುದು ಎಂದು ಮೂಲಗಳು ಹೇಳಿವೆ. ಡೆಪ್‌ಸಂಗ್‌ನಲ್ಲಿ ಚೀನಾ ಸೈನಿಕರು ಭಾರತದ ಗಡಿಯೊಳಕ್ಕೆ ಬಂದು ಠಿಕಾಣಿ ಹೂಡಿದ್ದಾರೆ. ಅಲ್ಲದೆ, ಕೆಲವು ಗಸ್ತು ಸ್ಥಳಗಳಿಗೆ ತೆರಳಲು ಭಾರತದ ಯೋಧರಿಗೆ ಅವರು ಅವಕಾಶ ನೀಡುತ್ತಿಲ್ಲ ಎಂದು ಕೂಡ ಮೂಲಗಳು ತಿಳಿಸಿವೆ.

ರಷ್ಯಾದಲ್ಲಿ ಅಕ್ಟೋಬರ್‌ 22ರಿಂದ 24ರವರೆಗೆ ನಡೆಯಲಿರುವ ‘ಬ್ರಿಕ್ಸ್‌’ ಸಮಾವೇಶದಲ್ಲಿ ಮೋದಿ ಮತ್ತು ಷಿ ಅವರು ಪಾಲ್ಗೊಳ್ಳುವ ಸಾಧ್ಯತೆ ಇದೆ. ಅಲ್ಲದೆ, ಬ್ರೆಜಿಲ್‌ನಲ್ಲಿ ನವೆಂಬರ್‌ 18–19ರಂದು ನಡೆಯುವ ಜಿ–20 ದೇಶಗಳ ಸಮಾವೇಶದಲ್ಲಿಯೂ ಅವರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಈ ಎರಡು ಕಾರ್ಯಕ್ರಮಗಳ ಪೈಕಿ ಯಾವುದಾದರೂ ಒಂದು ಕಾರ್ಯಕ್ರಮದ ಸಂದರ್ಭದಲ್ಲಿ ಇಬ್ಬರೂ ನಾಯಕರ ಭೇಟಿಯನ್ನು ಸಾಧ್ಯವಾಗಿಸಲು ಭಾರತ ಮತ್ತು ಚೀನಾದ ರಾಜತಾಂತ್ರಿಕರು ಪ್ರಯತ್ನ ನಡೆಸಿದ್ದಾರೆ.

ಲಡಾಖ್‌ನ ಪೂರ್ವ ಭಾಗದಲ್ಲಿ ಪರಿಸ್ಥಿತಿಯನ್ನು ಏಕಪಕ್ಷೀಯವಾಗಿ ಬದಲಾಯಿಸಲು ಚೀನಾದ ಸೇನೆ 2020ರಲ್ಲಿ ಯತ್ನಿಸಿದ ನಂತರದಲ್ಲಿ ಮೋದಿ ಮತ್ತು ಷಿ ನಡುವೆ ಅಧಿಕೃತವಾಗಿ ದ್ವಿಪಕ್ಷೀಯ ಮಾತುಕತೆ ನಡೆದಿಲ್ಲ.

ಜಿಗಣಿ ಸಮೀಪ ಚಿರತೆ ಪ್ರತ್ಯಕ್ಷ

ಪ್ರಜಾವಾಣಿ ವಾರ್ತೆ

ಆನೇಕಲ್‌: ತಾಲ್ಲೂಕಿನ ಜಿಗಣಿ ಸಮೀಪದ ಕ್ಯಾಲಸನಹಳ್ಳಿ ಸಮೀಪದ ಉಪ್ಕಾರ್‌ ಅರ್ಬನ್ಸ್‌ ಬಡಾವಣೆಯಲ್ಲಿ ಭಾನುವಾರ ಬೆಳಗಿನ ಜಾವ 3 ಗಂಟೆಯ ಸುಮಾರಿನಲ್ಲಿ ಚಿರತೆ ಓಡಾಡಿರುವ ದೃಶ್ಯಗಳು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಬಡಾವಣೆಯ ನಿವಾಸಿಗಳು ಆತಂಕಗೊಂಡಿದ್ದಾರೆ.

ಚಿರತೆಯ ಓಡಾಟದ ಬಗ್ಗೆ ಸ್ಥಳೀಯರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ ನಂತರ ಅರಣ್ಯ ಇಲಾಖೆಯ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಚಿರತೆಯ ಮಾಹಿತಿ ಕಲೆಹಾಕಿದ್ದಾರೆ.

ಚಿರತೆ ಕಂಡಿರುವುದರಿಂದ ಬಡಾವಣೆ ಮತ್ತು ಸುತ್ತಮುತ್ತಲ ಗ್ರಾಮಗಳ ಜನರು ಭಯಗೊಂಡಿದ್ದಾರೆ.

ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿವೇತನ ವಿತರಿಸಿದ ಸ್ಪೀಕರ್‌ ಯು.ಟಿ.ಖಾದರ್‌

‘ನಾರಾಯಣ ಗುರುಗಳ ಆದರ್ಶ ಇರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಟಿ.ವಿ. ಮೊಬೈಲ್‌ ಹಾಗೂ ಇಂಟರ್‌ನೆಟ್‌ ಇಲ್ಲದ ಕಾಲದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳು ಮಾಡಿದ ಸಾಧನೆ ಅಪಾರವಾದುದು’ ಎಂದು ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್‌ ಹೇಳಿದರು.

ಬಿಲ್ಲವ ಅಸೋಸಿಯೇಷನ್‌ ಭಾನುವಾರ ಆಯೋಜಿಸಿದ್ದ ‘ಬ್ರಹ್ಮಶ್ರೀ ನಾರಾಯಣ ಗುರುಗಳ 170ನೇ ಜಯಂತಿ ಆಚರಣೆ, ಪ್ರತಿಭಾ ಪುರಸ್ಕಾರ ಹಾಗೂ ವಿದ್ಯಾರ್ಥಿವೇತನ ವಿತರಣಾ ಸಮಾರಂಭ’ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ಇಂದಿನ ಯುವ ಪೀಳಿಗೆಗೆ ನಾರಾಯಣ ಗುರುಗಳ ಮಾರ್ಗದರ್ಶನ ಅತ್ಯಗತ್ಯ. ಅವರ ತತ್ವಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡು ಯಶಸ್ವಿ ಆಗಬೇಕು’ ಎಂದು ಸಲಹೆ ನೀಡಿದರು.



ಬ್ರಹ್ಮಶ್ರೀ ನಾರಾಯಣ ಗುರುಗಳ ಜಯಂತಿ ಕಾರ್ಯಕ್ರಮದಲ್ಲಿ ಯು.ಟಿ.ಖಾದರ್‌ ಅವರು ಎಸ್ಸೆಸ್ಸೆಲ್ಸಿ ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಾದ ದಿಶಿತಾ ಆರ್‌., ರಚನಾ, ಪ್ರಮೀತ್‌ ಪಿ., ಅವರನ್ನು ಸನ್ಮಾನಿಸಿದರು. ವೇದಕುಮಾರ್‌, ಸಿಗಂದೂರು ಚೌಡೇಶ್ವರಿ ದೇವಸ್ಥಾನದ ಕಾರ್ಯದರ್ಶಿ ರವಿ ಕುಮಾರ್‌ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಸಂಘದ ಅಧ್ಯಕ್ಷ ಎಂ. ವೇದಕುಮಾರ್‌ ಮಾತನಾಡಿ, ‘ಸಮುದಾಯದ ಪ್ರತಿಭಾವಂತ ಹಾಗೂ ಬಡ ವಿದ್ಯಾರ್ಥಿಗಳನ್ನು ಗುರುತಿಸಿ ವಿದ್ಯಾರ್ಥಿವೇತನದ ಜೊತೆಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ’ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸದಾಶಿವ ಉಳ್ಳಾಲ, ಬಂಟ್ವಾಳ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬೇಬಿ ಕುಂದರ್‌ ಅವರನ್ನು ಸನ್ಮಾನಿಸಲಾಯಿತು. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ದಿಶಿತಾ ಆರ್‌. ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ಪ್ರಮೀತ್‌ ಪಿ. ಮತ್ತು ರಚನಾ ಅವರನ್ನು ಸನ್ಮಾನಿಸಲಾಯಿತು.

ಸಂಘದ ಗೌರವ ಅಧ್ಯಕ್ಷ ಗೋಪಾಲಕೃಷ್ಣ ಎನ್‌., ಉಪಾಧ್ಯಕ್ಷರಾದ ಕೇಶವ ಪೂಜಾರಿ, ಜಯಂತಿ ವಿಜಯಕೃಷ್ಣ, ಕೋಶಾಧಿಕಾರಿ ಜಯಾನಂದ ಪೂಜಾರಿ, ಕಾರ್ಯದರ್ಶಿ ಎಂ.ಕೆ. ದಾಮೋದರ್‌ ಸುವರ್ಣ, ಕರ್ನಾಟಕ ಪ್ರದೇಶ ಆರ್ಯ ಈಡಿಗ ಸಂಘದ ಮಹಿಳಾ ಘಟಕದ ಗೌರವ ಅಧ್ಯಕ್ಷೆ ನಳಿನಾಕ್ಷಿ ಸಣ್ಣಪ್ಪ ಭಾಗವಹಿಸಿದ್ದರು.

‘ಹನ್ನೊಂದು ತಿಂಗಳಲ್ಲಿ ಕುಟುಂಬ ಆರೋಗ್ಯ ಸಮೀಕ್ಷೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹನ್ನೊಂದು ತಿಂಗಳ ಅವಧಿಯಲ್ಲಿ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್‌–6) ನಡೆಸಲಾಗಿದ್ದು, ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ನೀತಿಗಳನ್ನು ರೂಪಿಸಲು ಇದರಿಂದ ಸಹಕಾರಿಯಾಗಲಿದೆ’ ಎಂದು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆಯ (ಐಸೆಕ್‌) ಜನಸಂಖ್ಯಾ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕ ಸಿ.ಎಂ. ಲಕ್ಷ್ಮಣ ತಿಳಿಸಿದರು.

ಕೇಂದ್ರವು ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸಮೀಕ್ಷೆಯ ವಿವರ ನೀಡಿದ ಅವರು, ‘ದಕ್ಷಿಣ ಕರ್ನಾಟಕದ 15 ಜಿಲ್ಲೆಗಳಲ್ಲಿ ಈ ಸಮೀಕ್ಷೆ ನಡೆಸಲಾಗಿದೆ. 660 ಗ್ರಾಮಗಳು ಹಾಗೂ ನಗರ ಪ್ರದೇಶಗಳಿಗೆ ಭೇಟಿ ನೀಡಿ, ಮಾಹಿತಿ ಕಲೆಹಾಕಲಾಗಿದೆ. ಈ ಬಾರಿ ಹೊಸ ಪ್ರಶ್ನೆಗಳನ್ನು ಸೇರ್ಪಡೆ ಮಾಡಿದ್ದು ವಿಶೇಷ. ಕೋವಿಡ್‌ ಸಂದರ್ಭದಲ್ಲಿ ಎದುರಿಸಿದ ಸಮಸ್ಯೆ, ಕೊರೊನಾ ಸೋಂಕಿನ ಪರಿಣಾಮ ಸೇರಿ ಹಲವು ಹೊಸ ಪ್ರಶ್ನೆಗಳನ್ನು ಜನರಿಗೆ ಕೇಳಲಾಗಿತ್ತು. ಮಹಿಳೆಯರಿಗೆ ಸಂಬಂಧಿಸಿದಂತೆಯೂ ಸಾರ್ವಜನಿಕ ಸ್ಥಳಗಳಲ್ಲಿ ಸುರಕ್ಷೆ ಒಳಗೊಂಡಂತೆ ವಿವಿಧ ಪ್ರಶ್ನೆಗಳನ್ನು ಹೊಸದಾಗಿ ಸೇರ್ಪಡೆ ಮಾಡಲಾಗಿತ್ತು’ ಎಂದು ವಿವರಿಸಿದರು.

‘ಇದು ಮಹತ್ವದ ಸಮೀಕ್ಷೆಯಾಗಿದ್ದು, ಜನರ ಆರೋಗ್ಯದ ಸ್ಥಿತಿಗತಿಯೂ ತಿಳಿಯಲಿದೆ. ಈವರೆಗೆ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಐದು ಸುತ್ತುಗಳಲ್ಲಿ ನಡೆದಿದೆ. ಆರನೇ ಸುತ್ತಿನ ಸಮೀಕ್ಷೆಯನ್ನು ಪೂರ್ಣಗೊಳಿಸಿ, ಭರ್ತಿ ಮಾಡಿದ ಪ್ರಶ್ನಾವಳಿಯ ಪ್ರತಿಗಳನ್ನು ಆರೋಗ್ಯ ಸಚಿವಾಲಯಕ್ಕೆ ಸಲ್ಲಿಸಲಾಗಿದೆ’ ಎಂದು ಹೇಳಿದರು.

ಆರೋಗ್ಯ ಇಲಾಖೆ ಜಂಟಿ ನಿರ್ದೇಶಕಿ ಪರಿಮಳಾ ಹಾಗೂ ಕೇಂದ್ರದ ಅಧಿಕಾರಿಗಳು ಉಪಸ್ಥಿತರಿದ್ದರು.

ಯುವ ಕಾಂಗ್ರೆಸ್‌ ಅಧ್ಯಕ್ಷ ಸ್ಥಾನಕ್ಕೆ ಪೈಪೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಯುವ ಕಾಂಗ್ರೆಸ್‌ ಅಧ್ಯಕ್ಷ ಸ್ಥಾನಕ್ಕೆ ಯುವ ಕಾಂಗ್ರೆಸ್‌ನ ಕಾರ್ಯಾಧ್ಯಕ್ಷ ಎಚ್‌.ಎಸ್‌. ಮಂಜುನಾಥ್‌ ಗೌಡ ಮತ್ತು ಯುವ ಕಾಂಗ್ರೆಸ್‌ ಉಪಾಧ್ಯಕ್ಷೆ ದೀಪಿಕಾ ರೆಡ್ಡಿ ನಡುವೆ ಪೈಪೋಟಿ ಏರ್ಪಟ್ಟಿದೆ.

ರಾಜ್ಯದಾದ್ಯಂತ ಯುವ ಕಾಂಗ್ರೆಸ್‌ ಸದಸ್ಯತ್ವ ಆಗಸ್ಟ್‌ 20ರಂದು ಆರಂಭವಾಗಿದ್ದು, ಸೆ. 20ಕ್ಕೆ ಕೊನೆಯಾಗಲಿದೆ. ಸದಸ್ಯತ್ವ ನೋಂದಣಿಯ ಜೊತೆಗೆ ನೂತನ ಅಧ್ಯಕ್ಷ ಆಯ್ಕೆ ಪ್ರಕ್ರಿಯೆಯೂ ನಡೆಯುತ್ತಿದೆ ಎಂದು ಕಾಂಗ್ರೆಸ್‌ ಮೂಲಗಳು ತಿಳಿಸಿವೆ.

ಕಾಂಗ್ರೆಸ್‌ ಪಕ್ಷದ ವಿದ್ಯಾರ್ಥಿ ಸಂಘಟನೆ ಎನ್‌ಎಸ್‌ಯುಐ ಮೂಲಕ ರಾಜಕೀಯಕ್ಕೆ ಬಂದಿರುವ ಮಂಜುನಾಥ್‌ ಗೌಡ, ಪಕ್ಷದಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡಿದ್ದಾರೆ. ಎರಡು ಬಾರಿ ಎನ್‌ಎಸ್‌ಯುಐ ರಾಜ್ಯ ಘಟಕದ ಅಧ್ಯಕ್ಷ, ಯುವ ಕಾಂಗ್ರೆಸ್‌ ಉಪಾಧ್ಯಕ್ಷರಾಗಿ ಕೆಲಸ ಮಾಡಿರುವ ಅವರು, 2018ರ ಚುನಾವಣೆಯಲ್ಲಿ ಮಹಾಲಕ್ಷ್ಮಿ ಲೇಔಟ್‌ ವಿಧಾನಸಭಾ ಕ್ಷೇತ್ರದಿಂದ ಚುನಾವಣೆಗೂ ಸ್ಪರ್ಧಿಸಿದ್ದರು. ಸದ್ಯ ಯುವ ಕಾಂಗ್ರೆಸ್‌ ಕಾರ್ಯಾಧ್ಯಕ್ಷರಾಗಿರುವ ಅವರು, ವಿದ್ಯಾರ್ಥಿ, ಯುವ ಸಮುದಾಯದ ಬೆಂಬಲದ ನಿರೀಕ್ಷೆಯಲ್ಲಿದ್ದಾರೆ.



ಮಂಜುನಾಥ್‌ ಗೌಡ

ಕಾಂಗ್ರೆಸ್‌ ಮುಖಂಡರಾದ ರಾಜಗೋಪಾಲ್‌ ರೆಡ್ಡಿ– ಸುಶ್ಮಿತಾ ಅವರ ಪುತ್ರಿಯಾದ ದೀಪಿಕಾ ಕೂಡಾ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ಪಕ್ಷ ಟಿಕೆಟ್‌ ನೀಡಲಿಲ್ಲವೆಂದು ಜೆಡಿಎಸ್‌ಗೆ ಜಿಗಿದಿದ್ದ ರಾಜಗೋಪಾಲ್‌ ರೆಡ್ಡಿ ಮತ್ತೆ ಮಾತೃ ಪಕ್ಷಕ್ಕಕ್ಕೆ ಮರಳಿದ್ದಾರೆ.

ತಂದೆಗೆ ಟಿಕೆಟ್‌ ಸಿಗದ ಕಾರಣಕ್ಕೆ ಬೇಸರಗೊಂಡಿದ್ದ ದೀಪಿಕಾ ಕೂಡಾ ಜೆಡಿಎಸ್‌ ಸೇರಿದ್ದರು. ಮತ್ತೆ ಪಕ್ಷಕ್ಕೆ ಮರಳಿರುವ ಅವರು ಯುವ ಕಾಂಗ್ರೆಸ್‌ ಅಧ್ಯಕ್ಷ ಸ್ಥಾನ ಗಿಟ್ಟಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎಂದೂ ಮೂಲಗಳು ತಿಳಿಸಿವೆ.

ನಕಲು: ಸಿಕ್ಕಿಬಿದ್ದ ಅಭ್ಯರ್ಥಿ

ಪ್ರಜಾವಾಣಿ ವಾರ್ತೆ

ಧಾರವಾಡ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ನಿರ್ವಾಹಕ (ಬಿಎಂಟಿಸಿ) ಹುದ್ದೆಗಳ ನೇಮಕಾತಿಗೆ ಭಾನುವಾರ ನಡೆದ ಪರೀಕ್ಷೆಯಲ್ಲಿ ನಗರದ ಬಾಶಲ್‌ ಮಿಷನ್‌ ವಿದ್ಯಾಲಯ ಕೇಂದ್ರದಲ್ಲಿ ಅಭ್ಯರ್ಥಿ ಸದಾಶಿವ ಸುಣದೊಳ್ಳಿ ನಕಲು ಮಾಡಿ ಸಿಕ್ಕಿಬಿದ್ದಿದ್ದಾರೆ.

ಬೆಳಿಗ್ಗೆ 10.30ರಿಂದ 12.30ರವರೆಗೆ ನಡೆದ ಮೊದಲ ಅವಧಿ ಪರೀಕ್ಷೆಯಲ್ಲಿ ಅಕ್ರಮ ಮಾಡಿ ಸಿಕ್ಕಿಬಿದ್ದಿದ್ದಾರೆ. ಸದಾಶಿವ ಅವರು ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಖಾನಟ್ಟಿ ಗ್ರಾಮದವರು.

ಪಶ್ಚಿಮ ಘಟ್ಟ ರಕ್ಷಣೆಗೆ ಜನರನ್ನು ಪ್ರೇರೇಪಿಸಬೇಕು: ನಾಗೇಶ ಹೆಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಶ್ಚಿಮ ಘಟ್ಟಗಳ ಮೇಲೆ ನಿರಂತರ ಆಕ್ರಮಣ ನಡೆಯುತ್ತಿದೆ. ಅಸಂಖ್ಯಾತ ಜೀವಸಂಕುಲಕ್ಕೆ ಆಪತ್ತು ಬಂದೊದಗಿದೆ. ಪಶ್ಚಿಮ ಘಟ್ಟಗಳ ರಕ್ಷಣೆಗೆ ಹೋರಾಡಲು ನಾಡಿನ ಜನತೆಯನ್ನು ಪ್ರೇರೇಪಿಸಬೇಕು’ ಎಂದು ವಿಜ್ಞಾನ ಲೇಖಕ ನಾಗೇಶ ಹೆಗಡೆ ಸಲಹೆ ನೀಡಿದರು.

ಆಲ್‌ ಇಂಡಿಯಾ ಸ್ಟೂಡೆಂಟ್‌ ಆರ್ಗನೈಸೇಷನ್‌(ಎಐಡಿವೈಒ) ರಾಜ್ಯ ಸಮಿತಿ ‘ಬಿಕ್ಕಟ್ಟಿನ ಘಟ್ಟದಲ್ಲಿ ಪಶ್ಚಿಮ ಘಟ್ಟ’ ವಿಷಯ ಕುರಿತು ಆಯೋಜಿಸಿದ್ದ ಆನ್‌ಲೈನ್‌ ವಿಚಾರಸಂಕಿರಣದಲ್ಲಿ ಅವರು ಮಾತನಾಡಿದರು.

‘ನಾವು ಬಹಳ ಹಿಂದಿನಿಂದಲೂ ಪಶ್ಚಿಮ ಘಟ್ಟದ ಸಂರಕ್ಷಣೆಯ ಬಗ್ಗೆ ಮಾತನಾಡುತ್ತಿದ್ದವು. ಆದರೆ, ಈಗ ಭೂಮಿಯೇ ಮಾತನಾಡಲು ಪ್ರಾರಂಭಿಸಿದೆ. ಇತ್ತೀಚೆಗೆ ಶಿರೂರು, ವಯನಾಡ್‌, ಶಿರಾಡಿಗಳಲ್ಲಿ ಧಾರಾಕಾರ ಮಳೆಯಿಂದ ಸಂಭವಿಸಿದ ಅನಾಹುತಗಳು ಭೂಮಿಯೇ ತನ್ನ ಒಡಲ ಆಕ್ರೋಶವನ್ನು ಹೊರಹಾಕುತ್ತಿದೆಯೇನೊ ಎಂಬಂತೆ ಘಟಿಸಿವೆ’ ಎಂದು ಅವರು ಹೇಳಿದರು.

‘ಅಭಿವೃದ್ಧಿಯ ಹೆಸರಲ್ಲಿ, ರಾಜಕಾರಣಿಗಳು, ಅಧಿಕಾರಿಗಳು ಮತ್ತು ಗುತ್ತಿಗೆದಾರರ ತ್ರಿಕೂಟದಲ್ಲಿ ಸಿಲುಕಿರುವ ಪಶ್ಚಿಮ ಘಟ್ಟಗಳನ್ನು ರಕ್ಷಿಸಲು ಪ್ರೊ.ಮಾಧವ ಗಾಡ್ಗೀಳ್‌ ವರದಿಯನ್ನು ಜಾರಿಗೆ ತರಬೇಕು’ ಎಂದು ಒತ್ತಾಯಿಸಿದರು.

‘ಪ್ರಜ್ಞಾವಂತ, ಪರಿಸರ ಕಾಳಜಿಯುಳ್ಳ ಪ್ರತಿಯೊಬ್ಬರೂ ಒಬ್ಬ ಉತ್ತಮ, ಪರಿಣಾಮಕಾರಿ ಸಂವಹನಕಾರರಾಗಿ ನಾಡಿನ ಜನತೆಗೆ ಪಶ್ಚಿಮ ಘಟ್ಟಗಳ ರಕ್ಷಣೆಯ ಮಹತ್ವವನ್ನು ತಿಳಿಸಬೇಕು’ ಎಂದು ಸಲಹೆ ನೀಡಿದರು.

ಎಐಡಿವೈಒ ರಾಜ್ಯ ಕಾರ್ಯದರ್ಶಿ ಸಿದ್ದಲಿಂಗ ಬಾಗೇವಾಡಿ ಭಾಗವಹಿಸಿದ್ದರು.

ಚಿತ್ರಾವಳಿ



ರಾಜಾಜಿನಗರದ ಶಿವಶಕ್ತಿ ನಾಟ್ಯಾಲಯವು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 24ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ನಾಟ್ಯಾಲಯದ ವಿದ್ಯಾರ್ಥಿನಿಯರು ದಶಾವತಾರ ನೃತ್ಯ ರೂಪಕ ಪ್ರಸ್ತುತಪಡಿಸಿದರು



ನೇತ್ರದಾನದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ಸಹಯೋಗದಲ್ಲಿ ಶಂಕರ ಕಣ್ಣಿನ ಆಸ್ಪತ್ರೆಯು ನಗರದಲ್ಲಿ ಹಮ್ಮಿಕೊಂಡಿದ್ದ ‘ಶಂಕರ ಐ ಒಲಿಂಪಿಕ್ಸ್‌’ನಲ್ಲಿ ಬೆಂಗಳೂರು ಸಂಚಾರ ವಿಭಾಗದ ಜಂಟಿ ಕಮಿಷನರ್‌ ಎಂ.ಎನ್‌.ಅನುಚೇತ್‌ ಅವರು ಕಣ್ಣಿಗೆ ಪಟ್ಟಿ ಕಟ್ಟಿಕೊಂಡು ಮಕ್ಕಳೊಂದಿಗೆ ಫುಟ್‌ಬಾಲ್‌ ಆಡಿದರು



ಮದುರೆ–ಬೆಂಗಳೂರು ವಂದೇ ಭಾರತ್‌ ಎಕ್ಸ್‌ಪ್ರೆಸ್‌ ರೈಲು ಮೊದಲ ಪ್ರಯಾಣದಲ್ಲಿ ಬೆಂಗಳೂರು ತಲುಪಿದಾಗ ರಾಜ್ಯಪಾಲ ಥಾವರಚಂದ್‌ ಗೆಹಲೋತ್‌ ಅವರು ಕಂಟೋನ್ಮೆಂಟ್‌ ರೈಲು ನಿಲ್ದಾಣದಲ್ಲಿ ಶನಿವಾರ ರಾತ್ರಿ ಸ್ವಾಗತಿಸಿದರು. ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಅರವಿಂದ್‌ ಶ್ರೀವಾಸ್ತವ್‌, ಪ್ರಧಾನ ವಾಣಿಜ್ಯ ವ್ಯವಸ್ಥಾಪಕ ಎಸ್‌. ಪಿ. ಶಾಸ್ತ್ರಿ, ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಯೋಗೇಶ್‌ ಮೋಹನ್‌, ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾದ ಅಶುತೋಷ್‌ ಮಾಥುರ್‌, ಪರೀಕ್ಷಿತ್‌ ಮೋಹನ್‌ ಪುರಿಯಾ ಉಪಸ್ಥಿತರಿದ್ದರು



ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಟಿ ಟ್ವಿಂಕಲ್‌ ಖನ್ನಾ ಅವರು ಉದ್ಯಮಿ ಮತ್ತು ಲೇಖಕಿ ಸುಧಾಮೂರ್ತಿ ಅವರ 300ನೇ ಕೃತಿ ‘ಗ್ರ್ಯಾಂಡ್‌ಪಾ’ಸ್‌ ಬ್ಯಾಗ್‌ ಆಫ್‌ ಸ್ಟೋರಿಸ್‌’ ಅನ್ನು ಬಿಡುಗಡೆ ಮಾಡಿದರು. ಉದ್ಯಮಿ ಎನ್‌.ಆರ್‌. ನಾರಾಯಣಮೂರ್ತಿ ಇದ್ದರು –ಪ್ರಜಾವಾಣಿ ಚಿತ್ರಗಳು

'ಲೋಕಾಯುಕ್ತ ಸ್ಪಷ್ಟನೆ ನೀಡಲಿದೆ'

ರಾಜ್ಯಪಾಲರ ಕಚೇರಿಯಿಂದ 3 ದೂರುಗಳ ಕಡತ ವಾಪಸ್ • ಸಚಿವ ಜಿ. ಪರಮೇಶ್ವರ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ತಮಗೆ ಬಂದ ಅರ್ಜಿಗಳನ್ನು ರಾಜ್ಯಪಾಲರು ಸ್ಪಷ್ಟೀಕರಣ ನೀಡುವಂತೆ ಸೂಚಿಸಿ ಲೋಕಾಯುಕ್ತಕ್ಕೆ ವಾಪಸ್ ಕಳುಹಿಸಿದ್ದಾರೆ. ಲೋಕಾಯುಕ್ತ ಸ್ಪಷ್ಟೀಕರಣ ನೀಡಲಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.



ಜಿ. ಪರಮೇಶ್ವರ

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, 'ಲೋಕಾಯುಕ್ತದಿಂದ ಸ್ಪಷ್ಟೀಕರಣ ಬರುವವರೆಗೂ ಕಡತ ತಿರಸ್ಕೃತ ಆಗುವುದಿಲ್ಲ. ಬದಲಾಗಿ, ಅದು ರಾಜ್ಯಪಾಲರ ಬಳಿ ಇದ್ದಂತೆ ಅಲ್ಲವೇ? ರಾಜ್ಯಪಾಲರು ತಮ್ಮ ಬಳಿ ದೂರುಗಳು ಬಾಕಿ ಇಲ್ಲ ಎಂದು ಹೇಳುತ್ತಿದ್ದಾರೆ' ಎಂದರು.

'ರಾಜ್ಯಪಾಲರ ಕಚೇರಿಯಿಂದ ಮೂರು ದೂರುಗಳ ಕುರಿತು ಸ್ಪಷ್ಟೀಕರಣ ಕೇಳಿದ್ದಾರೆ ಎಂದಿದ್ದರೆ ಲೋಕಾಯುಕ್ತದವರು ಸುಮ್ಮನೆ ಇರಲು ಬರುವುದಿಲ್ಲ. ಸ್ಪಷ್ಟೀಕರಣ ನೀಡಬೇಕಾಗುತ್ತದೆ. ನಂತರದ ವಿಚಾರ ರಾಜ್ಯಪಾಲರಿಗೆ ಬಿಟ್ಟದ್ದು' ಎಂದು ಹೇಳಿದರು.

'ರಾಜ್ಯಪಾಲರು ಒಂದು ಕಡತ ಮಾತ್ರ ಇದೆ ಎಂದಿದ್ದಾರೆ. ಅದು ಎಚ್.ಡಿ. ಕುಮಾರಸ್ವಾಮಿಯವರದ್ದು ಎನ್ನುವುದು ಗೊತ್ತಾಗಿದೆ. ಅದಕ್ಕಾದರೂ ಕ್ರಮ ತೆಗೆದುಕೊಳ್ಳಬೇಕಲ್ಲವೇ' ಎಂದೂ ಹೇಳಿದರು.

'ರಾಹುಲ್ ಖರ್ಗೆ ಅವರ ಸಿದ್ಧಾರ್ಥ ಟ್ರಸ್ಟ್‌ಗೆ ನೀಡಿರುವ ಕೆಐಎಡಿಬಿ ನಿವೇಶನದ ಬಗ್ಗೆ ರಾಜ್ಯಪಾಲರ ಬಳಿ ಚರ್ಚೆ ಆಗಿಲ್ಲ. ವಿಶೇಷ ಅಧಿವೇಶನ ಕರೆಯುವ ಬಗ್ಗೆ ಮುಖ್ಯಮಂತ್ರಿ ಬಳಿ ಪ್ರಸ್ತಾಪ ಆಗಿಲ್ಲ' ಎಂದ ಅವರು, 'ಮುಡಾ ಪ್ರಕರಣದಲ್ಲಿ ಕೋರ್ಟ್ ತೀರ್ಪು ಮತ್ತು ಮುಂದಿನ ಬೆಳವಣಿಗೆಗಳನ್ನು ನೋಡಿಕೊಂಡು ರಾಷ್ಟ್ರಪತಿ ಭೇಟಿಯ ಬಗ್ಗೆ ತೀರ್ಮಾನಿಸಲಾಗುವುದು' ಎಂದರು.

'ಮುಡಾ ವಿಚಾರದಿಂದ ಮುಖ್ಯಮಂತ್ರಿ ಆತಂಕಗೊಂಡಿದ್ದಾರೆಯೇ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಪರಮೇಶ್ವರ, 'ಮುಖ್ಯಮಂತ್ರಿ ಆತಂಕದಲ್ಲಿಲ್ಲ. ಎಲ್ಲ ವಿಚಾರದಲ್ಲೂ ಸ್ಪಷ್ಟವಾಗಿದ್ದಾರೆ. ವಿರೋಧ ಪಕ್ಷದ ನಾಯಕನಾಗಿ, ಮುಖ್ಯಮಂತ್ರಿಯಾಗಿ ಯಾರಿಗೂ ಅವರು ಭಯಪಡಿಸಿಕೊಂಡಿಲ್ಲ. ಯಾವುದೇ ರೀತಿಯ ಕಾನೂನು ಬಾಹಿರ ಕೆಲಸಗಳನ್ನು ಮಾಡಿಲ್ಲ ಎಂಬುದನ್ನು ಅವರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ' ಎಂದರು.

'ವರದಿ ಪರಿಶೀಲಿಸಿ ಮುಂದಿನ ತೀರ್ಮಾನ'

'ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಡಿಕುನ್ಹಾ ಅವರು ಕೋವಿಡ್ ತನಿಖಾ ವರದಿಯನ್ನು ಮುಖ್ಯಮಂತ್ರಿಗೆ ಸಲ್ಲಿಸುವಾಗ ನಾನು ಇರಲಿಲ್ಲ. ಅದನ್ನು ಪರಿಶೀಲಿಸಿ, ಏನು ಶಿಫಾರಸು ಮಾಡಿದ್ದಾರೆ ಎಂಬುದನ್ನು ಆಧರಿಸಿ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

'ಯಾವುದಾದರು ವಿಷಯದ ಕುರಿತು ಸತ್ಯಾಸತ್ಯತೆ ಸರ್ಕಾರಕ್ಕೆ ತಿಳಿಸಬೇಕು ಎಂಬ ಉದ್ದೇಶ ಇಟ್ಟುಕೊಂಡು ಆಯೋಗಗಳನ್ನು ರಚಿಸಲಾಗಿರುತ್ತದೆ. ಆಯೋಗದ ವರದಿ ಬಂದಾದ ಮೇಲೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಇಲ್ಲವಾದರೆ ಆಯೋಗ ಏಕೆ ರಚಿಸಬೇಕು? ಡಿಕುನ್ಹಾ ವರದಿ ಸಚಿವ ಸಂಪುಟದ ಮುಂದೆ ಬಂದರೆ ಚರ್ಚಿಸಲಾಗುವುದು' ಎಂದೂ ಹೇಳಿದರು.

2ಎ ಮೀಸಲಾತಿ ಹೋರಾಟ: 22 ರಂದು ಸಭೆ

ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): 'ಪಂಚಮಸಾಲಿ 2ಎ ಮೀಸಲಾತಿ ಹೋರಾಟದ ರೂಪುರೇಷೆ ಹಾಗೂ ಡಿಸೆಂಬರ್ 12 ರಂದು ಪಂಚಮಸಾಲಿ ರೈತರಿಂದ ಟ್ರ್ಯಾಕ್ಟರ್ ಹಾಗೂ ಸಾಮಾನ್ಯ ಜನರಿಂದ ಹಾಸಿಗೆ-ಹೊದಿಕೆ ಹೋರಾಟ ಮಾಡುವ ಕುರಿತು ಬೆಳಗಾವಿಯ ಗಾಂಧಿ ಭವನದಲ್ಲಿ ಸೆ.22 ರಂದು ಸಭೆ ಕರೆಯಲಾಗಿದೆ' ಎಂದು ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಭಾನುವಾರ ಇಲ್ಲಿ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಸಮಾರಂಭದ ಸಾನ್ನಿಧ್ಯವಹಿಸಿ ಅವರು ಮಾತನಾಡಿದರು. 'ಸಭೆಯಲ್ಲಿ ಮೀಸಲಾತಿ ಹೋರಾಟದ ರೂಪುರೇಷೆ ತಿಳಿಸಲಾಗುವುದು. ಸಭೆ ಕೈಗೊಳ್ಳುವ ನಿರ್ಣಯಕ್ಕೆ ಸರ್ಕಾರ ಮಣಿಯದೇ ಇದ್ದರೆ ಬೆಳಗಾವಿ ಅಧಿವೇಶನದಲ್ಲಿ ತೀವ್ರ ಹೋರಾಟ ಮಾಡಬೇಕಾಗುತ್ತದೆ' ಎಂದು ಹೇಳಿದರು.

ಪಾಲಕರ ಮಡಿಲು ಸೇರಿದ ಮಗು

ಪ್ರಜಾವಾಣಿ ವಾರ್ತೆ

ರಾಯಚೂರು: ಉದ್ಯಾನ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಮೂರು ವರ್ಷದ ಮಗುವನ್ನು ಅಪಹರಿಸಿದ್ದ ಆರೋಪಿಗಳನ್ನು ಬಂಧಿಸುವಲ್ಲಿ ಇಲ್ಲಿಯ ರೈಲ್ವೆ ಪೊಲೀಸರು ಯಶಸ್ವಿಯಾಗಿದ್ದಾರೆ.

ದೇವದುರ್ಗ ತಾಲ್ಲೂಕಿನ ಬಂಡೆ ಗುಡ್ಡ ತಾಂಡಾದ ಪ್ರಕಾಶ ಹಾಗೂ ಹಂಪಮ್ಮ ದಂಪತಿ ಮಗು ಸೇರಿದಂತೆ ಇಬ್ಬರು ಮಕ್ಕಳೊಂದಿಗೆ ಉದ್ಯಾನ್ ಎಕ್ಸ್‌ಪ್ರೆಸ್‌ನಲ್ಲಿ ರಾಯಚೂರಿನಿಂದ ಬೆಂಗಳೂರಿಗೆ ಗುಳೆ ಹೊರಟಿದ್ದರು. ಇದೇ ರೈಲಿನಲ್ಲಿ ಕಲಬುರಗಿ ಸಮೀಪದ ನಾಗನಹಳ್ಳಿಯ ಆಟೊ ಡ್ರೈವರ್ ರೂಪೇಶ ಹಾಗೂ ಕುಸುಮ ದಂಪತಿ ಧರ್ಮಾವರಂಗೆ ಪ್ರಯಾಣಿಸುತ್ತಿದ್ದರು. ಪ್ರಯಾಣದ ಸಂದರ್ಭದಲ್ಲಿ ರೂಪೇಶ ದಂಪತಿ ಪ್ರಕಾಶ ದಂಪತಿಯನ್ನು ಪರಿಚಯಿಸಿಕೊಂಡಿದ್ದಾರೆ. ತಮಗೆ ಮಕ್ಕಳಿಲ್ಲ ಯಾರಾದರೂ ದತ್ತು ಕೊಡುವುದಾದರೆ ತಿಳಿಸಿ ಎಂದು ಹೇಳಿ ಅವರಿಗೆ ತಮ್ಮ ಮೊಬೈಲ್ ನಂಬರ್ ಕೊಟ್ಟಿದ್ದಾರೆ.

ಮಗುವಿನ ತಂದೆ-ತಾಯಿ ನಿದ್ರೆಗೆ ಜಾರುತ್ತಿದ್ದಂತೆ ಮಗುವನ್ನು ಎತ್ತಿಕೊಂಡು ಅನಂತಪುರ ರೈಲು ನಿಲ್ದಾಣದಲ್ಲಿ ಇಳಿದು ಪರಾರಿಯಾಗಿದ್ದಾರೆ. ಎಚ್ಚರಗೊಂಡ ಪ್ರಕಾಶ ದಂಪತಿ ಅನಂತಪುರ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಆರ್‌ಪಿಎಫ್ ಪೊಲೀಸರು ತಕ್ಷಣ ಶೋಧ ಕಾರ್ಯ ಕೈಗೊಂಡರು.

ಆರೋಪಿಗಳು ಅನಂತಪುರ ರೈಲು ನಿಲ್ದಾಣದಿಂದ ಮಗುವನ್ನು ಬಸ್‌ನಲ್ಲಿ ಮಂತ್ರಾಲಯಕ್ಕೆ ಕರೆ ತಂದು ಕೂದಲು ತೆಗೆಸಿದ್ದಾರೆ. ನಂತರ ರಾಯಚೂರಿಗೆ ಬಂದಿದ್ದಾರೆ. ಈ ವೇಳೆ ಪೊಲೀಸರು ಆರೋಪಿಗಳ ಮೊಬೈಲ್ ಟ್ರೇಸ್ ಮಾಡಿದಾಗ ರಾಯಚೂರು ಬಸ್ ನಿಲ್ದಾಣದಲ್ಲಿರುವುದು ಗೊತ್ತಾಗಿದೆ. ಅಲ್ಲಿ ಪೊಲೀಸರು ವಿಚಾರಿಸಿದಾಗ ಆರೋಪಿಗಳು ಕೈಗೆ ಸಿಕ್ಕಿಬಿದ್ದಿದ್ದಾರೆ. ಮದುವೆಯಾಗಿ 22 ವರ್ಷಗಳಾದರೂ ಮಕ್ಕಳಾಗಿರಲಿಲ್ಲ. ಹೀಗಾಗಿ ಮಗು ಕದ್ದಿರುವುದಾಗಿ ಹೇಳಿದ್ದಾರೆ.

ಸವಾಲು ಎದುರಿಸಲು ಸಿದ್ಧ: ಸಂಸದ ಡಾ.ಕೆ.ಸುಧಾಕರ್

'ಒತ್ತಡ ಹೇರಿ ಕೋವಿಡ್ ಮಧ್ಯಂತರ ವರದಿ'

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಕಾಂಗ್ರೆಸ್ ಸರ್ಕಾರದ ವಿರುದ್ಧ ಭ್ರಷ್ಟಾಚಾರ ಆರೋಪಗಳು ಕೇಳಿ ಬಂದ ನಂತರ ನಿವೃತ್ತ ನ್ಯಾಯಾಧೀಶರ ಮೇಲೆ ಒತ್ತಡ ಹೇರಿ ಕೋವಿಡ್ ಹಗರಣದ ಮಧ್ಯಂತರ ವರದಿ ಸಿದ್ಧಪಡಿಸಲಾಗಿದೆ ಎಂದು ಸಂಸದ ಡಾ.ಕೆ.ಸುಧಾಕರ್ ಆರೋಪ ಮಾಡಿದ್ದಾರೆ.

ಬಿಜೆಪಿ ಉತ್ತಮ ಪ್ರತಿಪಕ್ಷವಾಗಿ ಹೋರಾಟ ಆರಂಭಿಸಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ನಂಬಿಕಸ್ಥ ಸಚಿವರು, ಆಪ್ತರು ಸೇರಿ ಗುಣಾಕಾರ, ಭಾಗಾಕಾರ ಮಾಡಿ ಈ ಮಧ್ಯಂತರ ವರದಿ ಸಿದ್ಧಪಡಿಸಿದ್ದಾರೆ. ಆ ಮೂಲಕ ಕಾಂಗ್ರೆಸ್ ತನ್ನ ರಾಜಕೀಯ ದಿವಾಳಿತನ ತೋರಿದೆ ಎಂದರು.

> **ನಾನು ಆರೋಗ್ಯ ಸಚಿವನಾಗಿ ನನ್ನ ಪ್ರಾಣವನ್ನೂ ಲೆಕ್ಕಿಸದೆ ಕೆಲಸ ಮಾಡಿದ್ದೇನೆ. ಈ ಕಾಂಗ್ರೆಸ್ ಸರ್ಕಾರಕ್ಕೆ ನಾನು ಏನನ್ನೂ ಸಾಬೀತುಪಡಿಸಬೇಕಿಲ್ಲ**
> **ಡಾ.ಕೆ.ಸುಧಾಕರ್,** ಸಂಸದ

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೋವಿಡ್ ಸಮಯದಲ್ಲಿ ಆರೋಗ್ಯ ಸಚಿವನಾಗಿ ಅಂತಃಕರಣದಿಂದ ಕೆಲಸ ಮಾಡಿದ್ದೇನೆಯೇ ಹೊರತು ಕಾನೂನುಬಾಹಿರ ಕೆಲಸ ಮಾಡಿಲ್ಲ. ಈ ಸವಾಲನ್ನು ನಾನು ಎದುರಿಸುತ್ತೇನೆ' ಎಂದರು.

'ಅಂತಿಮ ವರದಿ ನೀಡಲು ಇನ್ನೂ ಆರು ತಿಂಗಳ ಕಾಲಾವಕಾಶ ಕೇಳಲಾಗಿದೆ. ಈ ವರದಿಗೆ ನಾನು ಕೂಡ ಕಾಯುತ್ತಿದ್ದೇನೆ. ಹಾಗೆಯೇ ತನಿಖೆಯನ್ನು ಕೂಡ ಸ್ವಾಗತಿಸುತ್ತೇನೆ. ಈ ವರದಿ ವಿಚಾರದಲ್ಲಿ ಸರ್ಕಾರದ ಹೇಳಿಕೆ ನಿರೀಕ್ಷಿಸುತ್ತಿದ್ದೇನೆ' ಎಂದರು.

ಆಗಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಸರ್ಕಾರದಲ್ಲಿ ಟಾಸ್ಕ್ ಫೋರ್ಸ್ ರಚಿಸಲಾಗಿತ್ತು. ಯಾವುದೇ ತೀರ್ಮಾನವನ್ನು ಮುಖ್ಯ ಕಾರ್ಯದರ್ಶಿಯವರ ತಂಡ, ಮುಖ್ಯಮಂತ್ರಿಯವರ ತಂಡ ಕೂಡ ಪರಿಶೀಲಿಸುತ್ತಿತ್ತು. ಆರೋಗ್ಯ ತುರ್ತು ಪರಿಸ್ಥಿತಿಯ ಆ ಸಮಯದಲ್ಲಿ ನಾಳೆ ಏನು ಎನ್ನುವುದೇ ಯಾರಿಗೂ ಗೊತ್ತಿರಲಿಲ್ಲ. ಅಂತಹ ಸಮಯದ ಬಗ್ಗೆ ವರದಿ ನೀಡಲಾಗಿದೆ. ತನಿಖಾ ಸಮಿತಿಯವರು ಈ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಈ ವರದಿಯಲ್ಲಿ ಸತ್ಯಾಂಶ ಇದೆ ಎಂದು ಭಾವಿಸಿದ್ದೇನೆ. ಇದನ್ನು ಸೋರಿಕೆ ಮಾಡಿದವರು ಯಾರು? ಎಂದು ಪ್ರಶ್ನಿಸಿದರು.

ರಾಜಕಾರಣದಲ್ಲಿ ಎಲ್ಲರನ್ನೂ ಟಾರ್ಗೆಟ್ ಮಾಡಲಾಗುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಈಗ ಭ್ರಷ್ಟಾಚಾರದ ಆರೋಪ ಎದುರಿಸುತ್ತಿದ್ದಾರೆ. ಈ ವರದಿ ವಿಚಾರದಲ್ಲಿ ಸರ್ಕಾರದ ಹೇಳಿಕೆಯನ್ನು ನಿರೀಕ್ಷಿಸುತ್ತಿದ್ದೇನೆ ಎಂದರು.

'ನ್ಯಾ.ಕೆಂಪಣ್ಣ ಅವರ ಆಯೋಗದ ವರದಿ ಬಂದು ಎಷ್ಟೋ ವರ್ಷವಾಗಿದೆ. ಈ ವರದಿಯಲ್ಲೇನಿದೆ ಎಂಬುದು ಬಿಜೆಪಿಗೂ ಗೊತ್ತಿದೆ. ಕಾಂಗ್ರೆಸ್‌ಗೆ ಮಾತ್ರ ದ್ವೇಷ ರಾಜಕಾರಣ ಬರುತ್ತದೆ ಎಂದುಕೊಳ್ಳಬೇಕಿಲ್ಲ. ನಾವು ದ್ವೇಷ ರಾಜಕಾರಣ ಮಾಡಿದ್ದರೆ ಕಾಂಗ್ರೆಸ್‌ನ ಅರ್ಧ ನಾಯಕರು ಜೈಲಿನಲ್ಲಿ ಇರುತ್ತಿದ್ದರು' ಎಂದರು.

'ವರದಿ ಹೊರಗೆ ಬರಲಿ ಉತ್ತರಿಸುತ್ತೇವೆ'

ಮಂಡ್ಯ: 'ಕೋವಿಡ್ ಹಗರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ರಚಿಸಿದ್ದ ಆಯೋಗ ಮುಖ್ಯಮಂತ್ರಿಗೆ ವರದಿ ಕೊಟ್ಟಿದ್ದು, ಅದರಲ್ಲೇನಿದೆ ಎಂಬುದು ಬಹಿರಂಗಗೊಂಡ ನಂತರ ಉತ್ತರ ಕೊಡುತ್ತೇವೆ' ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಇಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ನಮ್ಮ ಸರ್ಕಾರದ ಅವಧಿಯಲ್ಲಿ ಹಗರಣ ನಡೆದಿದ್ದರೆ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿ ಎಂದು ಈಗಾಗಲೇ ಹೇಳಿದ್ದೇನೆ. ಸುಳ್ಳು ಆರೋಪ ಮಾಡಿದವರಿಗೂ ಶಿಕ್ಷೆಯಾಗಲಿ' ಎಂದರು. ರಾಜ್ಯ ಸರ್ಕಾರ ಉರುಳಿಸಲು ಬಿಜೆಪಿ ಹಾಗೂ ರಾಜ್ಯಪಾಲರು ಷಡ್ಯಂತ್ರ ರೂಪಿಸಿದ್ದಾರೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿ, 'ಕಾಂಗ್ರೆಸ್ ಆರೋಪ ಸತ್ಯಕ್ಕೆ ದೂರವಾದುದು. ಆಧಾರರಹಿತ ಆರೋಪವನ್ನು ಅವರು ಮಾಡುತ್ತಿದ್ದಾರೆ. ತಪ್ಪನ್ನು ಮುಚ್ಚಿಕೊಳ್ಳಲು ಬಳಸುತ್ತಿರುವ ತಂತ್ರವದು' ಎಂದು ಟೀಕಿಸಿದರು.

ಸುದ್ದಿ 2 ನಿಮಿಷ

ಬಾಲಕಿ ಆತ್ಮಹತ್ಯೆ: ಬಾಲಕರ ಕಿರುಕುಳ ಆರೋಪ

ಮಂಡ್ಯ: ತಾಲ್ಲೂಕಿನ ಹನಕೆರೆ ಗ್ರಾಮದ 14 ವರ್ಷದ ಬಾಲಕಿ ಶನಿವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. 'ಪ್ರೀತಿಸುವಂತೆ ನಾಲ್ವರು ಬಾಲಕರು ಕಿರುಕುಳ ನೀಡುತ್ತಿದ್ದುದೇ ಇದಕ್ಕೆ ಕಾರಣ' ಎಂದು ಆರೋಪಿಸಲಾಗಿದೆ.

9ನೇ ತರಗತಿಯ ಬಾಲಕಿಯನ್ನು ಹನಕೆರೆಯ ಇಬ್ಬರು, ಕಬ್ಬನಗೆರೆ ಹಾಗೂ ಮಲ್ಲಯ್ಯನದೊಡ್ಡಿಯ ಬಾಲಕರು ರೇಗಿಸುತ್ತಿದ್ದರು ಎಂದು ದೂರಲಾಗಿದೆ.

ನಗರದಲ್ಲಿ ಈಚೆಗೆ ಆಯೋಜಿಸಿದ್ದ ಕ್ರೀಡಾಕೂಟಕ್ಕೆ ಶಾಲೆಯಿಂದ ಬಂದಿದ್ದ ಬಾಲಕಿಯನ್ನು ಬಾಲಕರು ಚುಡಾಯಿಸಿದ್ದಾರೆ. 'ಬೇರೆ ಯಾರನ್ನಾದರೂ ಪ್ರೀತಿಸುತ್ತಿದ್ದೀಯಾ' ಎಂದು ಕೇಳಿ ಕಿರುಕುಳ ನೀಡಿದ್ದಾರೆ. ಇದನ್ನು ವಿರೋಧಿಸಿ ಬಾಲಕಿ ಮಾತನಾಡಿದ್ದನ್ನು ವಿಡಿಯೊ ಮಾಡಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದರು. ಇದರಿಂದ ಬಾಲಕಿ ತೀವ್ರ ಮನನೊಂದಿದ್ದಳು ಎಂದು ಪೋಷಕರು ದೂರಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಗ್ರಾಮದಲ್ಲಿ ಅಂತ್ಯಸಂಸ್ಕಾರ ನೆರವೇರಿತು. ಪೋಷಕರ ರೋದನ ಮುಗಿಲುಮುಟ್ಟುವಂತಿತ್ತು.

ಬಾಲಕರು ಮತ್ತು ಅವರ ಪೋಷಕರು ಪರಾರಿಯಾಗಿದ್ದಾರೆ ಎನ್ನಲಾಗಿದೆ. ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒತ್ತುವರಿ ತೆರವು ವಿರೋಧಿ ಹೋರಾಟಕ್ಕೆ ಮಠಾಧೀಶರ ಬೆಂಬಲ



ಬಾಳೆಹೊನ್ನೂರು: ಮಲೆನಾಡು ಭಾಗದಲ್ಲಿ ಅರಣ್ಯ ಒತ್ತುವರಿ ತೆರವು ವಿರೋಧಿಸಿ ರೈತರು ನಡೆಸುತ್ತಿರುವ ಹೋರಾಟಕ್ಕೆ ರಂಭಾಪುರಿ ಸ್ವಾಮೀಜಿ ಹಾಗೂ ಆದಿಚುಂಚನಗಿರಿ ಶೃಂಗೇರಿ ಶಾಖಾ ಮಠದ ಗುಣನಾಥ ಸ್ವಾಮೀಜಿ ಬೆಂಬಲ ಘೋಷಿಸಿದರು.

ರಂಭಾಪುರಿ ಪೀಠದಲ್ಲಿ ಮಲೆನಾಡು- ಕರಾವಳಿ ಜನಪರ ಒಕ್ಕೂಟ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ರಂಭಾಪುರಿ ಸ್ವಾಮೀಜಿ, 'ಬಹಳಷ್ಟು ಸಣ್ಣ ಕುಟುಂಬಗಳು ಜೀವನೋಪಾಯಕ್ಕಾಗಿ ಅರಣ್ಯ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಜೀವನ ಕಟ್ಟಿಕೊಂಡಿವೆ. ಸರ್ಕಾರ ಅದನ್ನು ಕಾನೂನಿನ ಅಡಿಯಲ್ಲಿ ಸಕ್ರಮಗೊಳಿಸುವ ಮೂಲಕ ಅನುಕೂಲ ಮಾಡಿಕೊಡಬೇಕು' ಎಂದರು.

'ಕಸ್ತೂರಿ ರಂಗನ್ ವರದಿ ಜಾರಿಯಿಂದ ಆಗುವ ಸಮಸ್ಯೆಗಳ ಬಗ್ಗೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಮನವರಿಕೆ ಮಾಡಿಕೊಡಬೇಕು. ಅರಣ್ಯ ಸಚಿವರಿಗೆ ಮಲೆನಾಡಿನ ಸಮಸ್ಯೆಗಳ ಬಗ್ಗೆ ಸೂಕ್ಷ್ಮವಾಗಿ ತಿಳಿಸಿದ್ದೇನೆ. ಜನರ ಹಿತಕ್ಕಾಗಿ ರಂಭಾಪುರಿ ಪೀಠವೂ ಜನಪರ ಹೋರಾಟದಲ್ಲಿ ಭಾಗವಹಿಸಲು ಸಿದ್ಧವಿದೆ ಹಾಗೂ ಹೋರಾಟಕ್ಕೆ ನಮ್ಮ ಬೆಂಬಲವಿದೆ' ಎಂದರು. ಸಂಘಟನೆ ಅಧ್ಯಕ್ಷ ಅನಿಲ್ ಹೊಸಕೊಪ್ಪ, ಪರಿಸರವಾದಿ ಕಲ್ಕುಳಿ ವಿಠಲ ಹೆಗ್ಡೆ, ಎ.ರವೀಂದ್ರ ನಾರಾಯಣ ನಾಯ್ಕ್, ನ್ಯಾಯವಾದಿ ಸುದೀರ್ ಕುಮಾರ್ ಮುರೊಳ್ಳಿ, ಶಾಸಕ ಟಿ.ಡಿ.ರಾಜೇಗೌಡ ಇದ್ದರು.

ನಿಧನ ವಾರ್ತೆ

ರಫಾಯಲ್ ರಾಜ್



ರಫಾಯಲ್ ರಾಜ್

ಬೆಂಗಳೂರು: ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘದ ಅಧ್ಯಕ್ಷ ಹಾಗೂ ಕನ್ನಡ ಪರ ಹೋರಾಟಗಾರ ರಫಾಯಲ್ ರಾಜ್ (65) ಅವರು ಹೃದಯಾಘಾತದಿಂದ ಭಾನುವಾರ ನಿಧನರಾಗಿದ್ದಾರೆ.

ಅವರಿಗೆ ಪತ್ನಿ ಕಾಣಿಕ್ಯಮೇರಿ, ಪುತ್ರರಾದ ಸುಮೀತ್ ಕುಮಾರ್, ಸುಹಾಸ್ ಪ್ರೀತಮ್ ಇದ್ದಾರೆ. ಚಾಮರಾಜಪೇಟೆಯ ಬ್ರಿಯಾಂಡ್ ವೃತ್ತದ (ರಾಯನ್ ಸರ್ಕಲ್) ಬಳಿಯಿರುವ ಸಂತ ಜೋಸೆಫ್‌ರ ಚರ್ಚ್‌ನಲ್ಲಿ ಸೋಮವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಸಾರ್ವಜನಿಕರಿಗೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ.

ಬಿಎಂಟಿಸಿ ಬಸ್ ನಿರ್ವಾಹಕರಾಗಿ 34 ವರ್ಷ ಕಾರ್ಯನಿರ್ವಹಿಸಿದ್ದ ರಫಾಯಲ್ ರಾಜ್, ಸಂಚಾರ ನಿಯಂತ್ರಕರಾಗಿ 2019ರಲ್ಲಿ ನಿವೃತ್ತಿ ಹೊಂದಿದ್ದರು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೇಂದ್ರ ಕನ್ನಡ ಕ್ರಿಯಾ ಸಮಿತಿಯಲ್ಲಿ 18 ವರ್ಷಗಳ ಕಾಲ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದರು.

ರಾಜ್ಯದ ಚರ್ಚ್‌ಗಳಲ್ಲಿ ಕನ್ನಡದಲ್ಲಿ ಪ್ರಾರ್ಥನೆ ಸಲ್ಲಿಸಲು ಅವಕಾಶ ಕಲ್ಪಿಸಬೇಕೆಂದು ಆಗ್ರಹಿಸಿ ಹೋರಾಟ ನಡೆಸಿದ್ದರು. ಕನ್ನಡಿಗರು ಮತ್ತು ಕರ್ನಾಟಕದ ಹಿತರಕ್ಷಣೆಗಾಗಿ ನಡೆದ ಚಳವಳಿಗಳಲ್ಲಿ ಸಕ್ರಿಯರಾಗಿ ಪಾಲ್ಗೊಂಡಿದ್ದರು.

ವನ್ಯಜೀವಿ ಸಾವು ವರದಿಗೆ ಸೂಚನೆ

ಬೆಂಗಳೂರು: ಕಾಡಂಚಿನ ತೋಟಗಳಿಗೆ ಅಕ್ರಮವಾಗಿ ವಿದ್ಯುತ್ ಬೇಲಿ ಹಾಕಿ ವನ್ಯಜೀವಿಗಳ ಸಾವಿಗೆ ಕಾರಣರಾದವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಅರಣ್ಯ ಇಲಾಖೆ ಮುಂದಾಗಿದೆ.

'ವನ್ಯಜೀವಿಗಳು ಸಹಜವಾಗಿ ಮತ್ತು ಅಸಹಜವಾಗಿ ಮೃತಪಟ್ಟ ಪ್ರಕರಣಗಳಲ್ಲಿ ಮತ್ತು ಅವುಗಳ ಮರಣೋತ್ತರ ಪರೀಕ್ಷೆ ವರದಿಗಳನ್ನು ಅರಣ್ಯ ಸಚಿವರ ಕಚೇರಿಗೆ ಕೂಡಲೇ ಕಳುಹಿಸಬೇಕು' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಅರಣ್ಯಾಧಿಕಾರಿಗಳಿಗೆ ಸೂಚಿಸಿದ್ದಾರೆ.

'ಕಾಡಂಚಿನ ಹೊಲ- ತೋಟಗಳಿಗೆ ಅಕ್ರಮವಾಗಿ ವಿದ್ಯುತ್ ಬೇಲಿ ಹಾಕಿದ್ದರಿಂದ ಆನೆಗಳು ಮೃತಪಡುತ್ತಿರುವ ಬಗ್ಗೆ ಸಾಕಷ್ಟು ವರದಿಗಳು ಬರುತ್ತಿವೆ. ಇದಕ್ಕೆ ಕಡಿವಾಣ ಹಾಕಲು ಕ್ರಮ ತೆಗೆದುಕೊಳ್ಳಬೇಕಿದೆ. ಇಂತಹ ಪ್ರಕರಣಗಳ ಬಗ್ಗೆ ಕೂಡಲೇ ಮಾಹಿತಿ ನೀಡುವುದಲ್ಲದೆ, ಈವರೆಗಿನ ಪ್ರಕರಣಗಳ ಸ್ಥಿತಿಗತಿ ಬಗ್ಗೆಯೂ ವರದಿ ನೀಡಿ' ಎಂದು ಖಂಡ್ರೆ ಹೇಳಿದ್ದಾರೆ.

ಸಿ.ಎಂ ಕಾರು ಅಡ್ಡಗಟ್ಟಿದ್ದ ಗ್ರಾಮಸ್ಥರ ವಿರುದ್ಧ ಎಫ್‌ಐಆರ್

ಹಾವೇರಿ: ಜಿಲ್ಲೆಯ ಸುಕ್ಷೇತ್ರ ದೇವರ ಗುಡ್ಡಕ್ಕೆ ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಂದಿದ್ದ ಸಂದರ್ಭದಲ್ಲಿ ಅವರ ಕಾರು ಅಡ್ಡಗಟ್ಟಿದ್ದ ಆರೋಪದಡಿ ಕೆಲವು ಗ್ರಾಮಸ್ಥರ ವಿರುದ್ಧ ರಾಣೆಬೆನ್ನೂರು ಗ್ರಾಮೀಣ ಠಾಣೆಯಲ್ಲಿ ಭಾನುವಾರ ಎಫ್‌ಐಆರ್ ದಾಖಲಾಗಿದೆ.

'ಮುಖ್ಯಮಂತ್ರಿ ಅವರ ವಾಹನ ಸಂಚಾರಕ್ಕೆ ಅನುಕೂಲ ಕಲ್ಪಿಸುವ ಕರ್ತವ್ಯದಲ್ಲಿದ್ದ ಕಾನ್‌ಸ್ಟೆಬಲ್ ಚನ್ನಬಸಪ್ಪ ಹಡಪದ ಅವರು ದೂರು ನೀಡಿದ್ದು, ಅದರನ್ವಯ ಗ್ರಾಮಸ್ಥ ಕರಿಯಪ್ಪ ಕುದರಿಹಾಳ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದರು.



ಎಚ್‌ಡಿಎಫ್‌ಸಿ ಬ್ಯಾಂಕ್ ಸ್ಕಾಲರ್‌ಷಿಪ್
1ನೇ ತರಗತಿಯಿಂದ ಸ್ನಾತಕೋತ್ತರ ಹಂತದವರೆಗೆ ಓದುತ್ತಿರುವ ಹಿಂದುಳಿದ ವರ್ಗಕ್ಕೆ ಸೇರಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಎಚ್‌ಡಿಎಫ್ ಬ್ಯಾಂಕ್ ವಿದ್ಯಾರ್ಥಿವೇತನ ನೀಡುತ್ತಿದೆ.
ಮಾಹಿತಿಗೆ Short Url: www.b4s.in/praja/HDFC54

ಎಂಜಿನಿಯರಿಂಗ್, ಎಂಬಿಬಿಎಸ್ ಆಯ್ಕೆ ಹೇಗೆ?

● ನಾನು ಪಿಯು ಮುಗಿಸಿದ್ದು, ಈಗ ಎಂಜಿನಿಯರಿಂಗ್ (ಕಂಪ್ಯೂಟರ್ ವಿಜ್ಞಾನ) ಮತ್ತು ಎಂಬಿಬಿಎಸ್ ಎರಡರಲ್ಲೂ ಸರ್ಕಾರಿ ಸೀಟ್ ಸಿಗುವ ಸಾಧ್ಯತೆಯಿದೆ. ಆದರೆ, ಇವೆರಡರ ಆಯ್ಕೆಯಲ್ಲಿ ಗೊಂದಲವಿದ್ದು, ಮಾರ್ಗದರ್ಶನ ನೀಡಿ.
ಹೆಸರು, ಊರು ತಿಳಿಸಿಲ್ಲ.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

ಎರಡೂ ಆಯ್ಕೆಗಳು ಉತ್ತಮವಾದದ್ದಾದರೂ, ಯಾವುದು ಹೆಚ್ಚು ಸೂಕ್ತವೆಂದು ಮೌಲ್ಯಮಾಪನ ಮಾಡಬೇಕು. ವೈದ್ಯರಾಗಲು ಸೇವಾ ಮನೋಭಾವ, ಜ್ಞಾಪಕ ಶಕ್ತಿ, ನಿಷ್ಠೆ, ಪ್ರಾಮಾಣಿಕತೆ, ಸಮಯದ ನಿರ್ವಹಣೆ, ವೃತ್ತಿ ಮತ್ತು ವೈಯಕ್ತಿಕ ಬದುಕಿನ ಸಮತೋಲನ ಅಗತ್ಯವಾದರೆ, ಎಂಜಿನಿಯರಿಂಗ್ ವೃತ್ತಿಗೆ ಗಣಿತದಲ್ಲಿ ತಜ್ಞತೆ, ವಿಶ್ಲೇಷಾತ್ಮಕ ಕೌಶಲ, ಯೋಜನೆಯ ನಿರ್ವಹಣೆ, ತಾಂತ್ರಿಕ ಕೌಶಲದ ಅಗತ್ಯವಿರುತ್ತದೆ. ಹಾಗಾಗಿ, ನಿಮ್ಮ ಸ್ವಾಭಾವಿಕ ಪ್ರತಿಭೆ, ಆಸಕ್ತಿ, ಒಲವು ಮತ್ತು ಕೌಶಲಗಳ ಮೌಲ್ಯಮಾಪನ ಮಾಡಿ, ವೈಯಕ್ತಿಕ/ಕುಟುಂಬದ ಮೌಲ್ಯಗಳು, ಸವಾಲುಗಳು, ಅಗತ್ಯಗಳು, ಧ್ಯೇಯಗಳನ್ನು ಗುರುತಿಸಿ, ವೃತ್ತಿಯ ಆಯ್ಕೆಯನ್ನು ಮಾಡುವುದು ಸೂಕ್ತ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v = AwlDno1YduQ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಸಮಾಜವಿಜ್ಞಾನ

ಅಧ್ಯಾಯ–12 ಭಾರತದ ಮಣ್ಣುಗಳು

18) ಭಾರತದಲ್ಲಿ ಎಲ್ಲೆಲ್ಲಿ ಜಂಬಿಟ್ಟಿಗೆ ಮಣ್ಣು ಕಾಣ ಬರುತ್ತದೆ?
ಉತ್ತರ:– ಪಶ್ಚಿಮ ಘಟ್ಟಗಳು, ವಿಂಧ್ಯ, ಸಾತ್ಪುರ ಮತ್ತು ರಾಜಮಹಲ್ ಬೆಟ್ಟಗಳು ಹಾಗೂ ಪೂರ್ವಾಚಲ ಪ್ರದೇಶಗಳಲ್ಲಿ ಈ ಮಣ್ಣು ವ್ಯಾಪಕವಾಗಿ ಹರಡಿದೆ.
19) ಜಂಬಿಟ್ಟಿಗೆ ಮಣ್ಣು ಯಾವ ಬೆಳೆ ಬೆಳೆಯಲು ಸೂಕ್ತವಾಗಿದೆ?
ಉತ್ತರ:– ಜಂಬಿಟ್ಟಿಗೆ ಮಣ್ಣು ಕಾಫಿ, ಚಹಾ(ಟೀ) ಮುಂತಾದ ತೋಟಗಾರಿಕೆ ಬೆಳೆಗಳಿಗೆ ಬಹುಉಪಯುಕ್ತವಾಗಿದೆ
20) ಜಂಬಿಟ್ಟಿಗೆ ಮಣ್ಣಿನ ಬಗ್ಗೆ ವಿವರವಾಗಿ ಬರೆಯಿರಿ
ಉತ್ತರ:– ಜಂಬಿಟ್ಟಿಗೆ ಮಣ್ಣು ಸಾಮಾನ್ಯವಾಗಿ 200 ಸೆಂ.ಮೀ. ಗಳಿಗಿಂತ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ನಿರ್ಮಿತಗೊಂಡಿದೆ. ಅಧಿಕ ಮಳೆಯಿಂದ ಮಣ್ಣಿನಲ್ಲಿರುವ ಲವಣಾಂಶಗಳು ತೊಳೆಸಲ್ಪಟ್ಟು ಕೇವಲ ಕಬ್ಬಿಣದ ಆಕ್ಸೈಡ್ ಮತ್ತು ಅಲ್ಯುಮಿನಿಯಂಗಳು ಮಾತ್ರ ಮೇಲ್ಪದರಿನಲ್ಲಿ ಉಳಿದಿರುವುದು. ಇದರಿಂದಾಗಿ ಈ ಮಣ್ಣು ಕೆಂಪು ಬಣ್ಣವನ್ನು ಹೊಂದಿರುವುದು. ಮಳೆಯ ನೀರು ಲವಣಗಳನ್ನು ಕರಗಿಸಿ ದ್ರಾವಣದ ರೂಪದಲ್ಲಿ ಭೂಮಿಯ ಹೆಚ್ಚು ಆಳದವರೆಗೆ ಸಾಗಿಸಿರುವುದು. ಆದುದರಿಂದ ಮೇಲ್ಪದರದ ಮಣ್ಣಿನಲ್ಲಿ ನೀರಿನಲ್ಲಿ ಕರಗದ ಕಬ್ಬಿಣ ಆಕ್ಸೈಡ್ ಮತ್ತು ಅಲ್ಯೂಮಿನಿಯಂಗಳು ಮಾತ್ರ ಕಂಡು ಬರುತ್ತವೆ. ಜಂಬಿಟ್ಟಿಗೆ ಮಣ್ಣಿನಲ್ಲಿ ಫಲವತ್ತತೆ ಅತಿಕಡಿಮೆ ಸಾರಜನಕ ಮತ್ತು ಲವಣಗಳ ಕೊರತೆಯನ್ನು ಈ ಮಣ್ಣಿನಲ್ಲಿ ಕಾಣಬಹುದು. ಇದು ಭಾರತದಲ್ಲಿ ಸುಮಾರು 2.48 ಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಕಂಡುಬರುವುದು. ಪಶ್ಚಿಮ ಘಟ್ಟಗಳು, ವಿಂಧ್ಯ, ಸಾತ್ಪುರ ಮತ್ತು ರಾಜಮಹಲ್ ಬೆಟ್ಟಗಳು ಹಾಗೂ ಪೂರ್ವಾಚಲ ಪ್ರದೇಶಗಳಲ್ಲಿ ಈ ಮಣ್ಣು ವ್ಯಾಪಕವಾಗಿ ಹರಡಿದೆ. ಇದು ಕಾಫಿ, ಟೀ ಮುಂತಾದ ತೋಟಗಾರಿಕೆ ಬೆಳೆಗಳಿಗೆ ಬಹುಉಪಯುಕ್ತವಾಗಿದೆ
21) ಮರುಭೂಮಿ ಮಣ್ಣು ಎಲ್ಲಿ ನಿರ್ಮಾಣವಾಗುತ್ತದೆ? ಅದರ ಬಣ್ಣ ಯಾವುದು?
ಉತ್ತರ:– ಅತಿಕಡಿಮೆ ಮಳೆ ಮತ್ತು ಅಧಿಕ ಉಷ್ಣಾಂಶದ ಪ್ರದೇಶದಲ್ಲಿ ಮರಳು ಮಣ್ಣು ನಿರ್ಮಾಣಗೊಳ್ಳುತ್ತದೆ. ಈ ಮಣ್ಣು ಕೆಂಪು ಮತ್ತು ಕಂದು ಬಣ್ಣವನ್ನು ಹೊಂದಿದೆ.
25) ಮರುಭೂಮಿ ಮಣ್ಣು ಭಾರತದಲ್ಲಿ ಎಷ್ಟು ಪ್ರದೇಶದಲ್ಲಿ ಹರಡಿದೆ?
ಉತ್ತರ:– ಭಾರತದಲ್ಲಿ ಈ ಮಣ್ಣು ಸುಮಾರು 1.4 ಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಹರಡಲ್ಪಟ್ಟಿದೆ.
26) ಮರುಭೂಮಿ ಮಣ್ಣು ಯಾವೆಲ್ಲಾ ಪ್ರದೇಶದಲ್ಲಿ ಹರಡಿದೆ?
ಉತ್ತರ:– ಭಾರತದ ವಾಯವ್ಯ ಭಾಗದ ರಾಜಸ್ತಾನ, ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಲ್ಲಿ ಹಾಗೂ ಪಶ್ಚಿಮದ ಗುಜರಾತಿನ ಕಛ್ ಪ್ರದೇಶ ಹಾಗೂ ಅರಾವಳಿ ಶ್ರೇಣಿಯ ಪಶ್ಚಿಮ ಭಾಗದಲ್ಲಿ ಹಂಚಿಕೆಯಾಗಿದೆ.
27) ಮರುಭೂಮಿ ಮಣ್ಣು ಬಗ್ಗೆ ಬರೆಯಿರಿ
ಉತ್ತರ: ಅತಿಕಡಿಮೆ ಮಳೆ ಮತ್ತು ಅಧಿಕ ಉಷ್ಣಾಂಶದ ಪ್ರದೇಶದಲ್ಲಿ ಮರಳು ಮಣ್ಣು ನಿರ್ಮಾಣಗೊಳ್ಳುತ್ತದೆ. ಈ ಮಣ್ಣು ಕೆಂಪು ಮತ್ತು ಕಂದು ಬಣ್ಣವನ್ನು ಹೊಂದಿದೆ. ಕಣಗಳ ನಡುವೆ ಅಧಿಕ ರಂಧ್ರತೆ ಇರುವುದರಿಂದ ನೀರು ನಿಲ್ಲದೆ ತೀವ್ರವಾಗಿ ಬಸಿದು ಹೋಗುತ್ತದೆ ಮತ್ತು ಬೇಗ ಆರ್ದ್ರತೆ ಕಡಿಮೆ ಆಗುತ್ತದೆ. ಭಾರತದಲ್ಲಿ ಈ ಮಣ್ಣು ಸುಮಾರು 1.4 ಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಹರಡಲ್ಪಟ್ಟಿದೆ. ಸಜ್ಜೆ, ಖರ್ಜೂರ ಇತ್ಯಾದಿಗಳನ್ನು ಬೆಳೆಯಬಹುದು. ಭಾರತದ ವಾಯವ್ಯ ಭಾಗದ ರಾಜಸ್ತಾನ, ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಲ್ಲಿ ಹಾಗೂ ಪಶ್ಚಿಮದ ಗುಜರಾತಿನ ಕಛ್ ಪ್ರದೇಶ ಹಾಗೂ ಅರಾವಳಿ ಶ್ರೇಣಿಯ ಪಶ್ಚಿಮ ಭಾಗದಲ್ಲಿ ಹಂಚಿಕೆಯಾಗಿದೆ.
28) ಪರ್ವತ ಮಣ್ಣು ಕುರಿತು ಬರೆಯಿರಿ
ಉತ್ತರ: ಕೊಳೆತ ಜೈವಿಕಾಂಶಗಳನ್ನು ಅಧಿಕ ಪ್ರಮಾಣದಲ್ಲಿ ಈ ಮಣ್ಣು ಹೊಂದಿದೆ. ಪರ್ವತಗಳಲ್ಲಿ ನಿರ್ಮಾಣಗೊಂಡಿರುತ್ತದೆ. ಈ ಮಣ್ಣು ಇಳಿಜಾರಿನ ಮೈದಾನಕ್ಕೆ ಇಳಿದು ಬರುತ್ತದೆ. ಇದು ಸಾರಜನಕ ಮತ್ತು ಸಾವಯವ ಅವಶೇಷಗಳನ್ನು ಹೆಚ್ಚಾಗಿ ಒಳಗೊಂಡಿರುತ್ತದೆ. ಕಾಫಿ, ಚಹಾ ಮತ್ತು ಸಾಂಬಾರು ಪದಾರ್ಥ, ಹಣ್ಣು ಬೆಳೆಯಲು ಸೂಕ್ತವಾಗಿರುತ್ತದೆ.

ಹಿಮಾಲಯದ ಪಾದ ಬೆಟ್ಟಗಳು, ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರಾಖಂಡ, ಬಿಹಾರ, ಪಶ್ಚಿಮ ಬಂಗಾಳ ಮತ್ತು ಪರ್ವತ ಪ್ರದೇಶಗಳಲ್ಲಿ ಈ ಮಣ್ಣು ಹಂಚಲ್ಪಟ್ಟಿದೆ.
29) ಮಣ್ಣು ಸವೆತ ಎಂದು ಯಾವುದನ್ನು ಕರೆಯುತ್ತಾರೆ?
ಉತ್ತರ:–ಭೂ ಮೇಲ್ಮೈಯಲ್ಲಿ ಕಂಡು ಬರುವ ಸಡಿಲವಾದ ಪದರವು ವಿವಿಧ ಪ್ರಾಕೃತಿಕ ಶಕ್ತಿಗಳಿಂದ ಸ್ಥಳಾಂತರಗೊಳ್ಳುವ ಕ್ರಿಯೆಯನ್ನು ಮಣ್ಣಿನ ಸವೆತ ಎನ್ನುವರು
30) ಭೂ ಸವೆತದ ಮುಖ್ಯ ಕರ್ತೃಗಳು ಯಾವುವು?
ಉತ್ತರ:– ಹರಿಯುವ ನೀರು, ಗಾಳಿ, ಸಮುದ್ರದ ಅಲೆ ಮೊದಲಾದವು
31) ಮಣ್ಣಿನ ಸವೆತಕ್ಕೆ ಮುಖ್ಯ ಕಾರಣಗಳು ಯಾವುವು?
ಉತ್ತರ:– ಮಣ್ಣಿನ ಸವೆತವು ದೇಶದ ಮುಖ್ಯ ಸಮಸ್ಯೆಗಳಲ್ಲಿ ಒಂದಾಗಿದೆ. ಇದು ಇತ್ತೀಚಿನ ವರ್ಷಗಳಲ್ಲಿ ಅಧಿಕವಾಗಿದೆ. ಇದಕ್ಕೆ ಮುಖ್ಯ ಕಾರಣಗಳೆಂದರೆ 1) ಅರಣ್ಯಗಳ ನಾಶ, 2) ಹೆಚ್ಚು ಮೇಯಿಸುವುದು, 3) ಅವೈಜ್ಞಾನಿಕ ಬೇಸಾಯ, 4) ಅಧಿಕ ನೀರಾವರಿ ಬಳಕೆ ಮೊದಲಾದವು. ಉದಾ: ಇಟ್ಟಿಗೆ, ಹೆಂಚು, ಮಡಿಕೆ ತಯಾರಿಕೆ ಮುಂತಾದವುಗಳಿಂದ ಮೇಲ್ಮಣ್ಣು ನಾಶವಾಗಿ ಅನುಪಯುಕ್ತವಾದ ಮಣ್ಣು ಉಳಿದುಕೊಳ್ಳುವುದು.
32) ಮಣ್ಣಿನ ಸವೆತದ ಪರಿಣಾಮಗಳು ಯಾವುವು?
ಉತ್ತರ:– ಮಣ್ಣಿನ ಸವೆತವು ಅನೇಕ ಸಮಸ್ಯೆಗಳಿಗೆ ಕಾರಣವಾಗುವುದು. ಅವುಗಳಲ್ಲಿ ಮುಖ್ಯವಾದವುಗಳೆಂದರೆ
1) ನದಿಗಳಲ್ಲಿ ಹೂಳು ತುಂಬಿ ಪ್ರವಾಹ ಉಂಟಾಗುತ್ತದೆ.
2) ನದಿಗಳಲ್ಲಿ ಹೂಳು ತುಂಬುವುದರಿಂದ ನದಿಗಳು ತಮ್ಮ ಪಾತ್ರವನ್ನು ಬದಲಾಯಿಸುತ್ತವೆ.
3) ಜಲಾಶಯ ಮತ್ತು ಕೆರೆಗಳಲ್ಲಿ ಹೂಳು ತುಂಬುವುದರಿಂದ ಅವುಗಳಲ್ಲಿ ನೀರು ಸಂಗ್ರಹಿಸುವ ಸಾಮರ್ಥ್ಯ ಕಡಿಮೆಯಾಗುತ್ತದೆ.
4) ಭೂಸವೆತದಿಂದ ಭೂಮಿಯಲ್ಲಿ ಇಂಗುವ ನೀರಿನ ಪ್ರಮಾಣ ಕಡಿಮೆಯಾಗುವುದು. ಇದರಿಂದ ಸ್ವಾಭಾವಿಕ ಚಿಲುಮೆಗಳು ಬತ್ತಿ ಹೋಗುತ್ತವೆ.

ಭಾರತವು ವ್ಯವಸಾಯ ಪ್ರಧಾನವಾದ ರಾಷ್ಟ್ರ. ಇದರಿಂದ ಭೂ ಸವೆತ ವ್ಯವಸಾಯದ ಮೇಲೆ ಕೆಟ್ಟ ಪರಿಣಾಮವನ್ನು ಬೀರುವುದು. ಆದುದರಿಂದ ಫಲವತ್ತತೆ ಹಾಗೂ ಉತ್ಪಾದನೆಯನ್ನು ಕಾಪಾಡಲು ಮಣ್ಣಿನ ಸವೆತವನ್ನು ತಡೆಗಟ್ಟುವುದು ಅಗತ್ಯವಾಗಿದೆ.

ಅಧ್ಯಾಯ – 3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

ಪಿಠಿಕೆ:– ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಆರಂಭದಲ್ಲಿ ಕೇವಲ ವ್ಯಾಪಾರಿ ಕಂಪನಿಯಾಗಿ ತನ್ನ ವಾಣಿಜ್ಯ ಹಿತಾಸಕ್ತಿಗಳನ್ನು ಮಾತ್ರ ಪೂರೈಸಿಕೊಳ್ಳುವ ಕೆಲಸ ಮಾಡಿತು. ನೂರಾರು ರಾಜಮನೆತನಗಳಲ್ಲಿ ಹಂಚಿಹೋಗಿದ್ದ ಭಾರತದ ಪರಿಸ್ಥಿತಿಯನ್ನು ಅವಲೋಕಿಸಿದ ಬ್ರಿಟಿಷರು ಆ ಪರಿಸ್ಥಿತಿಯನ್ನು ತಮ್ಮ ರಾಜಕೀಯ ಏಳಿಗೆಗೆ ಬಳಸಿಕೊಂಡರು. ಪರಸ್ಪರ ಕಚ್ಚಾಡುತ್ತಿದ್ದ ರಾಜರ ನಡುವೆ ಒಡೆದು ಆಳುವ ನೀತಿಯನ್ನು ಬಳಸಿಕೊಂಡು ಅವರೆಲ್ಲರನ್ನೂ ಕ್ರಮೇಣ ತಮ್ಮ ಅಧೀನಕ್ಕೆ ತೆಗೆದುಕೊಂಡರು. ಅಧೀನಕ್ಕೆ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ 'ಸಂಧಾನ' ಮತ್ತು 'ಯುದ್ಧ'ಗಳ ಮಾರ್ಗಗಳನ್ನು ಸಮರ್ಥವಾಗಿ ಬಳಸಿಕೊಂಡರು. ವಿವಿಧ ಉಪಾಯಗಳನ್ನು ಬಳಸಿ ಭಾರತವನ್ನು ರಾಜಕೀಯವಾಗಿ ತಮ್ಮ ಅಧೀನಕ್ಕೆ ತೆಗೆದುಕೊಂಡ ನಂತರ ಅದನ್ನು ಶಾಶ್ವತವಾಗಿ ತಮ್ಮಲ್ಲಿ ಹೇಗೆ ಉಳಿಸಿಕೊಳ್ಳಬೇಕೆನ್ನುವುದನ್ನು ಆಲೋಚಿಸತೊಡಗಿದರು. ಭಾರತ ಒಂದು ದೇಶವೆಂಬ ಸಾಮೂಹಿಕ ಕಲ್ಪನೆಯು ಇಲ್ಲದಿದ್ದ ಆ ಸಂದರ್ಭದಲ್ಲಿ ಅದು ವಿವಿಧ ರಾಜ್ಯಾಡಳಿತಗಳಲ್ಲಿ ಹರಿದು ಹಂಚಿಹೋಗಿತ್ತು. ಅನೇಕ ರಾಜ್ಯಗಳನ್ನು ವಿವಿಧ ಕಾರಣಗಳಿಂದ ಒಂದುಗೂಡಿಸಿ ಬ್ರಿಟಿಷರು ಏಕರೂಪ ರಾಜಕೀಯ ವ್ಯವಸ್ಥೆಗೆ ಮತ್ತು ಏಕರೂಪ ಆಡಳಿತ ವ್ಯವಸ್ಥೆಗೆ ಒಳಪಡಿಸಿದರು(ಮುಂದುವರಿಯುವುದು)

ಉನ್ನತಿಗೆ ಬುನಾದಿ 'ಪದವಿ'

ಚನ್ನಬಸಪ್ಪ ರೊಟ್ಟಿ

ಮೊದಲೊಂದು ಕಾಲವಿತ್ತು. ಆಗ 'ಮುಲ್ಕೀ' (7ನೇ ತರಗತಿ) ಪಾಸಾದರೂ ಸಾಕು, ಸರ್ಕಾರಿ ನೌಕರಿ ಸಿಗುತ್ತಿತ್ತು. ಅಂಥವರನ್ನು ಊರಲ್ಲಿ ಮೆರವಣಿಗೆ ಮಾಡಲಾಗುತ್ತಿತ್ತು! ಅದರಲ್ಲೂ 'ಮುಲ್ಕೀ ಮಾಸ್ತರ್' ಎಂಬುದು ಪ್ರತಿಷ್ಠಿತ ಹುದ್ದೆಯಾಗಿತ್ತು. ಈಗ ಕಾಲ ಬದಲಾಗಿದೆ. ನೀವು ಒಂದು ಉತ್ತಮ ವೃತ್ತಿ ಜೀವನ ರೂಪಿಸಿಕೊಳ್ಳಲು 7ನೇ ತರಗತಿಯಲ್ಲ, ಎಸ್ಸೆಸ್ಸೆಲ್ಸಿ, ಪಿಯುಸಿ ಓದಿದರೂ ಸಾಕಾಗುವುದಿಲ್ಲ. ಎಸ್ಸೆಸ್ಸೆಲ್ಸಿ ಓದಿದರೆ ಆಯ್ದ ಕೆಲವು 'ಗ್ರೂಪ್ ಡಿ' ಹುದ್ದೆಗಳು, ಪಿಯು ಓದಿದವರಿಗೆ ಡ್ರೈವರ್, ಕಂಡಕ್ಟರ್, ಪೊಲೀಸ್, ಪೋಸ್ಟ್, ಮಿಲಿಟರಿಯಂಥ ಕೆಲ ಬೆರಳೆಣಿಕೆಯ ಕ್ಷೇತ್ರಗಳಲ್ಲಿ ಮಾತ್ರ ಕೆಲಸ ಸಿಗಬಹುದು. ಅದೂ ಕೂಡ ನೀವು ಅತ್ಯುತ್ತಮ ಶ್ರೇಣಿಯ ಅಂಕಗಳನ್ನು ಪಡೆದಿದ್ದು, ನಿಗದಿಪಡಿಸಿದ ತಾಂತ್ರಿಕ ಅರ್ಹತೆ, ದೈಹಿಕ ಸದೃಢತೆ ಮತ್ತು ಸಹಿಷ್ಣುತೆ ಹೊಂದಿದ 'ಮೆರಿಟೆಡ್' ವಿದ್ಯಾರ್ಥಿಯಾಗಿದ್ದರೆ ಮಾತ್ರ!

ಸ್ಪರ್ಧಾತ್ಮಕ ಯುಗದಲ್ಲಿ ಖಾಸಗಿ ಅಥವಾ ಸರ್ಕಾರಿ ಉದ್ಯೋಗ ಗಿಟ್ಟಿಸಿಕೊಂಡು ಉತ್ತಮ ವೃತ್ತಿ ಜೀವನ ರೂಪಿಸಿಕೊಳ್ಳಬೇಕು ಎಂದರೆ ಶೈಕ್ಷಣಿಕ ಅರ್ಹತೆ ಕನಿಷ್ಠ 'ಪದವಿ' ಆಗಿರಬೇಕು. ಅನಿವಾರ್ಯವಾಗಿಯೋ ಅಥವಾ ಆಯ್ಕೆಯ ಮೂಲಕವೋ ಯಾವುದಾದರೂ ಪದವಿಯನ್ನು ಓದಿದವರು ಖಾಸಗಿ ಅಥವಾ ಸರ್ಕಾರಿ ಹುದ್ದೆಗಳನ್ನು ಗಿಟ್ಟಿಸಿಕೊಳ್ಳಲು ಪ್ರಯತ್ನಿಸಬಹುದು. ಆದರೆ, 'ಪದವಿ' ಅರ್ಹತೆಯ ಮೇಲೆ ನೇರವಾಗಿ ಯಾವುದೇ ಸರ್ಕಾರಿ ಹುದ್ದೆ ಸಿಗುವುದಿಲ್ಲ. ಇದಕ್ಕಾಗಿ ಬಯಸಿದ ಕ್ಷೇತ್ರ / ವೃತ್ತಿಗೆ ಸಂಬಂಧಿಸಿದ ಸ್ಪರ್ಧಾತ್ಮಕ ಪರೀಕ್ಷೆಯನ್ನು ಕಡ್ಡಾಯವಾಗಿ ಎದುರಿಸಲೇಬೇಕು. ಅದರಲ್ಲೂ ಅತ್ಯುತ್ತಮ ಅಂಕಗಳನ್ನು ಪಡೆದು ಅಂತಿಮ ಆಯ್ಕೆಪಟ್ಟಿಯಲ್ಲಿ ಸ್ಥಾನ ಪಡೆಯಬೇಕು!





ಐಎಎಸ್, ಐಪಿಎಸ್, ಕೆಎಎಸ್ ಸೇರಿದಂತೆ ಮಹತ್ವದ ಹಾಗೂ ನಿರ್ಣಾಯಕ ಆಡಳಿತಾತ್ಮಕ ಹುದ್ದೆಗಳ ನೇಮಕಾತಿಗೂ ಪದವಿಯನ್ನು ಮೂಲ ಅರ್ಹತೆ ಎಂದು ಪರಿಗಣಿಸಲಾಗಿದೆ. ಈ ನಿಟ್ಟಿನಲ್ಲಿ ಪದವಿ ಹಂತದಿಂದಲೇ ಸರಿಯಾದ ಸಿದ್ಧತೆ ನಡೆಸಿದರೆ ಯಶ ಪಡೆಯಲು ಸಾಧ್ಯ. ಇದೆಲ್ಲದಕ್ಕೂ ಮುನ್ನ 'ಪದವಿ'ಯ ಬುನಾದಿ ಸುಭದ್ರವಾಗಿರಬೇಕು. ಅದಕ್ಕೆ ಕೋರ್ಸ್‌ಗೆ ಸೇರಿದ ಮೊದಲ ದಿನದಿಂದಲೇ ಅಧ್ಯಯನದತ್ತ ಗಮನ ಕೊಡಬೇಕು. ವ್ಯಕ್ತಿತ್ವವನ್ನು ಸಾಧನೆಯತ್ತ, ಅಧ್ಯಯನದತ್ತ, ಜವಾಬ್ದಾರಿ ಹೊರುವತ್ತ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು.

ಸೆಮಿಸ್ಟರ್ ಕೋರ್ಸ್‌ನಲ್ಲಿ ಪರೀಕ್ಷಾ ಒತ್ತಡ ಜಾಸ್ತಿ ಇರುತ್ತದೆ. ಜಾಸ್ತಿ ಓದಬೇಕು ಎಂಬ ಒತ್ತಡದಲ್ಲಿ ಸಿಲುಕದಿರಿ. ವಾಸ್ತವವಾಗಿ ಒಂದು ವರ್ಷ ಪಠ್ಯವನ್ನು ಎರಡು ಭಾಗಗಳಾಗಿಸಿ ಅಧ್ಯಯನಕ್ಕೆ ಒದಗಿಸಲಾಗಿರುತ್ತದೆ. ಹೀಗಾಗಿ, ಸೆಮಿಸ್ಟರ್ ಕೋರ್ಸ್‌ನಲ್ಲಿ ಓದಬೇಕಾದ ವಿಷಯ ಕಡಿಮೆ ಇರುತ್ತದೆ. ಅಲ್ಲದೇ, ಸೆಮಿಸ್ಟರ್ ಸ್ಕ್ರೀಮ್ ಹೆಚ್ಚಿನ ಅಂಕಗಳನ್ನು ಪಡೆಯಲು ಪೂರಕವಾಗಿರುತ್ತದೆ.

ಪ್ರತಿ ಸೆಮಿಸ್ಟರ್‌ನಲ್ಲಿ ರಜೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಯುವಜನೋತ್ಸವಗಳು, ಕ್ರೀಡಾಕೂಟಗಳು, NCC, NSS ಕ್ಯಾಂಪ್‌ಗಳು, ಪಠ್ಯೇತರ ಚಟುವಟಿಕೆಗಳು, ಮತ್ತಿತರ ಆಚರಣೆಗಳು ಇವೆಲ್ಲವನ್ನೂ ಹೊರತುಪಡಿಸಿ, ಅಧ್ಯಯನಕ್ಕೆ ವಾಸ್ತವವಾಗಿ ಸಿಗುವುದು ನಾಲ್ಕು ತಿಂಗಳು ಮಾತ್ರ. ಈ ನಾಲ್ಕು ತಿಂಗಳಿನಲ್ಲೇ ನಿತ್ಯದ ಅಧ್ಯಯನ, ಅಧ್ಯಾಪನ, ಅಸೈನ್‌ಮೆಂಟ್ಸ್, ಪ್ರಾಯೋಗಿಕ ತರಗತಿಗಳು, ಪರೀಕ್ಷಾ ತಯಾರಿ, ಪರೀಕ್ಷೆಗಳನ್ನು ಮುಗಿಸಿಕೊಳ್ಳಬೇಕು.

ಅಧ್ಯಯನದತ್ತ ಬದ್ಧತೆ ಪೂರ್ಣ ಪ್ರಮಾಣದಲ್ಲಿ ಇರಬೇಕು. ಸೆಮಿಸ್ಟರ್‌ನ ಆರಂಭದಲ್ಲಿ ನಿತ್ಯವೂ ಅಧ್ಯಯನಕ್ಕೆ ಕನಿಷ್ಠ ಮೂರು ಗಂಟೆಗಳನ್ನು ಮೀಸಲಾಗಿಡಬೇಕು. ಆಯಾ ದಿನ ತರಗತಿಗಳಲ್ಲಿ ಪ್ರಾಧ್ಯಾಪಕರು ಬೋಧಿಸಿದ ವಿಷಯಗಳನ್ನು ಮನೆಯಲ್ಲಿ ಓದಿಕೊಂಡು ಮನನ ಮಾಡಿಕೊಳ್ಳಬೇಕು. ಇದಕ್ಕೆ ವಿವಿಧ ಲೇಖಕರ ಅನುಸರಣಾ ಗ್ರಂಥಗಳನ್ನು ಓದಿಕೊಳ್ಳಬಹುದು. ಈ ರೀತಿ ಓದಿಕೊಳ್ಳುವಾಗ ಆಯಾ ಅಧ್ಯಾಯಕ್ಕೆ ಸಂಬಂಧಿಸಿದ ಕಿರು ಟಿಪ್ಪಣೆ ಸಿದ್ಧಪಡಿಸಿಕೊಳ್ಳಬೇಕು. ವಾರಾಂತ್ಯದ ರಜೆಯ ಅವಧಿಯಲ್ಲಿ ಆ ಕಿರು ಟಿಪ್ಪಣೆಯನ್ನು ಹಾಗೂ ಈ ಹಳೆಯ ಪ್ರಶ್ನೆಪತ್ರಿಕೆಗಳನ್ನು ಆಧಾರವಾಗಿ ಇಟ್ಟುಕೊಂಡು ವಿವರವಾದ ನೋಟ್ಸ್ ಅನ್ನು ನೀವು ಸಿದ್ಧಪಡಿಸಿಕೊಳ್ಳಬೇಕು.

'ದೃಶ್ಯೀಕರಣ' ಮರೆಯದಿರಿ: ನಿತ್ಯವೂ ಅಧ್ಯಯನದಲ್ಲಿ ತೊಡಗಿರುವಾಗ ಸಂಬಂಧಪಟ್ಟ ವಿಷಯದ ಒಂದು ಭಾಗವೇ ಆಗಿದ್ದೀರಿ ಎಂಬಂತೆ ಕಲ್ಪಿಸಿಕೊಂಡು ಓದಿ.

ಓದು ಹೇಗಿರಬೇಕು?

- ಸಿಕ್ಕಿದ್ದೆಲ್ಲವನ್ನೂ ಸಿಕ್ಕಾಪಟ್ಟೆ ಓದದಿರಿ. ನಿಮ್ಮ ಅಧ್ಯಯನಕ್ಕೆ ಸಂಬಂಧಿಸಿದಂತೆ ಅಗತ್ಯವಿರುವಷ್ಟನ್ನು ಮಾತ್ರ ಓದಿ. ಈ ಹಂತದಲ್ಲಿ ನೀವೇ ಸಿದ್ಧಪಡಿಸಿಟ್ಟುಕೊಂಡಿರುವ 'ನೋಟ್ಸ್' ಅನ್ನು ತಪ್ಪದೇ ಓದಿ ಪುನಃಸ್ಮರಿಸಿಕೊಳ್ಳಿ.
- ಗಂಟೆಗಟ್ಟಲೇ ಓದಿದ ನಂತರ ಒಂದೈದು ನಿಮಿಷ ಸುಮ್ಮನೇ ಕುಳಿತುಕೊಳ್ಳಿ. 'ಸಬ್ ಕಾನ್ಸಿಯಸ್' ಮನಸ್ಸಿನಲ್ಲಿ ನೀವು ಓದಿದ ವಿಷಯಗಳ ಪುನರಾವರ್ತನೆ ಮಾಡಿಕೊಳ್ಳಿ.
- 'ಬೇಗ ಮಲಗಿ; ಬೇಗ ಏಳಿ' ಎಂಬ ತತ್ವವನ್ನು ರೂಢಿಸಿಕೊಳ್ಳಿ. ತಿನ್ನುವಿಕೆ ಹಿತಮಿತವಾಗಿರಲಿ, ಓದು ನಿಯಮಿತವಾಗಿರಲಿ. ದೇಹ ಮತ್ತು ಮನಸ್ಸನ್ನು ಸದೃಢವಾಗಿ ಇಟ್ಟುಕೊಳ್ಳಿ.

ಯಶಸ್ಸಿಗೆ 'ಗರುಡ ತಂತ್ರ' ಪಾಲಿಸಿ!

ಕಾಲೇಜು ಶಿಕ್ಷಣ ಇಲಾಖೆಯ ನೋಡಲ್ ಅಧಿಕಾರಿ ಹಾಗೂ ಶಿಕಾರಿಪುರದ ಸಾಧನಾ ಅಕಾಡೆಮಿ ಸಂಸ್ಥಾಪಕ ಮಂಜುನಾಥ ಹೇಳುವಂತೆ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಲು 'ಗರುಡ ತಂತ್ರ' ಅನುಸರಿಸಬೇಕು.
ಏಕಾಂತ ಅಧ್ಯಯನಕ್ಕೆ ಒತ್ತು ನೀಡಿ: ಗರುಡ ಒಂದು ವಿಶಿಷ್ಟ ಜೀವಿ. ಅದು ಎಂದಿಗೂ ಗುಂಪಿನಲ್ಲಿ ಹಾರುವುದಿಲ್ಲ. ಒಂದೇ ಹಾರುತ್ತದೆ. ಅದರಂತೆ, ದಿನಕ್ಕೆ ಕನಿಷ್ಠ 6 ಗಂಟೆ ನೀವೊಬ್ಬರೇ ಅಧ್ಯಯನ ಮಾಡಿ.
ಉನ್ನತ ಗುರಿ ಹೊಂದಿ: ಗರುಡ ಸಾಧ್ಯವಾದಷ್ಟು ಹೆಚ್ಚು ಎತ್ತರಕ್ಕೆ ಹಾರುತ್ತದೆ. ನಿತ್ಯವೂ ತನ್ನ ಹಾರುವಿಕೆ ಸಾಮರ್ಥ್ಯ ಹೆಚ್ಚಿಸಿಕೊಳ್ಳುತ್ತದೆ. ಅದರಂತೆಯೇ ನಿಮ್ಮ ಅಧ್ಯಯನ ಸಾಮರ್ಥ್ಯವನ್ನು ದಿನೇದಿನೇ ಹೆಚ್ಚಿಸಿಕೊಳ್ಳಿ.
ಸ್ಪಷ್ಟ ಮತ್ತು ನಿಖರ ಗುರಿ ಇರಲಿ: ಗರುಡ ಸಾವಿರಾರು ಅಡಿಗಳ ಎತ್ತರದಲ್ಲಿ ಹಾರುತ್ತಿದ್ದರೂ ಭೂಮಿಯ ಮೇಲಿನ ಬೇಟೆಯತ್ತ ಸ್ಪಷ್ಟ ಚಿತ್ತ ನೆಟ್ಟಿರುತ್ತದೆ. ಅದೇ ರೀತಿ ನಿಮ್ಮ ಗುರಿ ಉನ್ನತ ಸಾಧನೆಯತ್ತ ನೆಟ್ಟಿರಲಿ.
ಹಳೆಯದನ್ನು ಮರೆಯಿರಿ: ಗರುಡ ಸತ್ತ ಜೀವಿಯನ್ನು ತಿನ್ನುವುದಿಲ್ಲ. ಅದರಂತೆಯೇ ನೀವು ಗತಿಸಿದ ಅಪಯಶಸ್ಸು ಮರೆತು, ಮುಂದೇನು ಎಂದು ಯೋಚಿಸಿ, ಹೊಸತನ್ನು ಪಡೆಯಲು ಯತ್ನಿಸಿ.
ಸವಾಲುಗಳನ್ನು ಎದುರಿಸಿ: ಗರುಡ ಬಿರುಗಾಳಿ, ಮಳೆ ಇದ್ದರೂ ತನ್ನ ಪೂರ್ಣ ಸಾಮರ್ಥ್ಯ ಬಳಸಿ ಮೋಡಗಳನ್ನೂ ಮೀರಿ ಹಾರುತ್ತದೆ. ಅದರಂತೆಯೇ ಸವಾಲುಗಳನ್ನು ಎದುರಿಸಿ.
ಕಂಫರ್ಟ್ ಝೋನ್ ಬಿಡಿ: ಗರುಡದ ಮರಿಗಳು ಮೊಟ್ಟೆಯಿಂದ ಹೊರಬಂದಾಗ ತಾಯಿ ಗರುಡ ಗೂಡಿನಲ್ಲಿದ್ದ ಮೆತ್ತನೇ ಹುಲ್ಲು ಹಾಸನ್ನು ಕಿತ್ತೆಸೆಯುತ್ತದೆ. ನಿಮ್ಮ 'ಅರಾಮ ವಲಯ'ದಿಂದ ಹೊರಬಂದು ಉನ್ನತ ಸಾಧನೆಗೆ ಪ್ರಯತ್ನಿಸಿ.
'ರಿಚಾರ್ಜ್' ಮತ್ತು 'ರೀ ಸ್ಟಾರ್ಟ್': ಗರುಡ 40 ವರ್ಷಕ್ಕೆ ತನಗೆ ಭಾರವಾದ ರೆಕ್ಕೆ, ಕೊಕ್ಕು, ಉಗುರುಗಳನ್ನು ಕಿತ್ತುಕೊಂಡು ಸುಮ್ಮನೇ ಒಂದೆಡೆ ಬಿದ್ದುಕೊಳ್ಳುತ್ತದೆ. 3 ತಿಂಗಳೊಳಗೆ ಹೊಸ ರೆಕ್ಕೆ, ಕೊಕ್ಕು, ಉಗುರುಗಳೊಂದಿಗೆ ಹೊರಬಂದು ಮತ್ತೆ 30 ವರ್ಷ ಬದುಕುತ್ತದೆ. ನೀವೂ ಅಷ್ಟೇ ನಿಮ್ಮ ದೌರ್ಬಲ್ಯ, ಜಾಡ್ಯಗಳಿಂದ ಹೊರಬಂದು ಯಶಸ್ಸಿನತ್ತ 'ರಿಚಾರ್ಜ್' ಆಗಿ, 'ರೀ ಸ್ಟಾರ್ಟ್' ಆಗಿ.

II PUC MATHS

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

INTEGRALS

Basics

45. Evaluate $\int \frac{10x^9 + 10^x \log_e 10}{10^x + x^{10}}.dx$

Soln: - **Given** $\int \frac{10x^9 + 10^x \log_e 10}{10^x + x^{10}}.dx$

$$\int \frac{1}{t}.dx = t = 10^x + x^{10}$$
$$dt = \left(10^x \log 10 + 10x^9\right)dx$$
$$\Rightarrow \log_e t = \log_e\left(10^x + x^{10}\right) + c$$

46. Evaluate $\int \frac{e^x}{e^x + 1}.dx$

Soln: - **Given** $\int \frac{e^x}{e^x + 1}.dx$

$$\int \frac{1}{t}.dx = \log_e t$$
$$= \log_e\left(e^x + 1\right) + c$$

47. Evaluate $\int \frac{\text{Sinx}}{a + b\text{Cosx}}.dx$

Soln: - **Given** $\int \frac{\text{Sinx}}{a + b\text{Cosx}}.dx$

$$a + b\text{Cosx} = t$$
$$0 - b\text{Sinxdx} = dt$$
$$\Rightarrow -\frac{1}{b}\int \frac{dt}{t} = -\frac{1}{b}\log t + c$$
$$\text{Sinx}\,dx = -\frac{1}{b}dt$$
$$= -\frac{1}{b}\log_e\left(a + b\text{Cosx}\right) + c$$

49. Evaluate $\int \frac{\text{Sinx}}{(3 + 4\text{Cosx})^3}.dx$

Soln: - **Given** $\int \frac{\text{Sinx}}{(3 + 4\text{Cosx})^3}.dx$

let $t = \text{Cosx}$; then $\frac{dt}{dx} = -\text{Sinx}$

50. Evaluate

$$x\sqrt{1+y^2} + y\sqrt{1+x^2}\frac{dy}{dx} = 0$$

Soln: - **Given** $x\sqrt{1+y^2} + y\sqrt{1+x^2}\frac{dy}{dx} = 0$

Divide the equation by $\sqrt{1+y^2}\,.\sqrt{1+x^2}$

$$\frac{x}{\sqrt{1+x^2}}dx + \frac{y}{\sqrt{1+y^2}}dy = 0$$

Integrating both sides

$$\int \frac{x}{\sqrt{1+x^2}}dx + \int \frac{y}{\sqrt{1+y^2}}dy = C$$

put $1 + x^2 = t$,

$$2xdx = dt; \quad \therefore xdx = \frac{1}{2}dt$$

$$\int \frac{\frac{1}{2}x}{\sqrt{t}}dt + \int \frac{\frac{1}{2}du}{\sqrt{u}} = C$$

When $u = \sqrt{1+y^2}$

$$\sqrt{t} + \sqrt{u} = C$$
$$\sqrt{1+y^2} + \sqrt{1+x^2} = C$$

51. Evaluate $\frac{dy}{dx} = (x+y)^2$

Soln:- $\frac{dy}{dx} = (x+y)^2$

Put $x + y = z$

then $1 + \frac{dy}{dx} = \frac{dz}{dx}$

$$\therefore \frac{dy}{dx} = \frac{dz}{dx} - 1$$

Equation (1) becomes $\frac{dz}{dx} = z^2 + 1$

$$dz = \left(z^2 + 1\right)dx$$

Integrating both the sides we get,

$$\int \frac{dz}{z^2 + 1} = \int dx + C$$
$$\text{i.e., } \tan^{-1}(z) = x + c$$
$$\tan^{-1}(x + y) = x + c$$

52. Evaluate $\int \frac{1}{4 + 9x^2}.dx$

Soln: - Given $\int \frac{1}{4 + 9x^2}.dx$

$$\Rightarrow \frac{1}{9}\int \frac{1}{\frac{4}{9} + x^2}.dx \Rightarrow \frac{1}{9}\int \frac{1}{\left(\frac{2}{3}\right)^2 + x^2}.dx$$
$$\Rightarrow \frac{1}{9} \times \frac{3}{2}\tan^{-1}\left(\frac{3x}{2}\right) + c \Rightarrow \frac{1}{6}\tan^{-1}\left(\frac{3x}{2}\right) + c$$

53. $\int \frac{\text{Cosx}}{4\text{Sin}^2x - 9}dx = ?$

Soln: - Given $\int \frac{\text{Cosx}}{4\text{Sin}^2x - 9}dx$

$$= \int \frac{\text{Cosx}}{(2\text{Sinx})^2 - (3)^2}dx$$
$$t = 2\text{Sinx}; \frac{dt}{dx} = 2\text{Cosx} \Rightarrow \frac{dt}{2} = \text{Cosx}.dx$$
$$= \frac{1}{2}\int \frac{dt}{t^2 - 3^2}$$
$$= \frac{1}{2}.\frac{1}{6}\log\left(\frac{t-3}{t+3}\right) + c$$
$$= \frac{1}{12}\log\left(\frac{2\text{Sinx} - 3}{2\text{Sinx} + 3}\right) + c$$

54. $\int \frac{1}{x^2(x-1)}dx = ?$

(Contd.........)

ಇಸ್ಲಾಂ, ಕ್ರೈಸ್ತ ಧರ್ಮಕ್ಕೆ ಮತಾಂತರ– ನ್ಯಾ. ಬಾಲಕೃಷ್ಣನ್ ಆಯೋಗದಿಂದ ಎರಡು ದಿನ ಅಭಿಪ್ರಾಯ ಸಂಗ್ರಹ

ಮತಾಂತರ: 'ಎಸ್‌ಸಿ' ಸ್ಥಾನಕ್ಕೆ ವಿರೋಧ?

• ರಾಜೇಶ್ ರೈ ಚಟ್ಲ

ಬೆಂಗಳೂರು: ಇಸ್ಲಾಂ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಪರಿಶಿಷ್ಟರಿಗೆ, 'ಪರಿಶಿಷ್ಟ ಜಾತಿ' ಸ್ಥಾನ ನೀಡಿ ಮೀಸಲಾತಿ ಸೌಲಭ್ಯ ಕಲ್ಪಿಸ ಬಾರದೆಂಬ ಸ್ಪಷ್ಟ ನಿಲುವನ್ನು ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್ ನೇತೃತ್ವದ ವಿಚಾರಣಾ ಆಯೋಗದ ಮುಂದೆ ಮಂಡಿಸಲು ರಾಜ್ಯದ ದಲಿತ ಸಂಘಟನೆಗಳು ಮುಂದಾಗಿವೆ.

ಪರಿಶಿಷ್ಟ ಜಾತಿಯ ವ್ಯಕ್ತಿಗಳು ಮತಾಂತರಗೊಂಡರೆ ಅವರಿಗೆ ಪರಿಶಿಷ್ಟ ಜಾತಿ ಮಾನ್ಯತೆ ನೀಡಬೇಕೇ ಎಂಬುದನ್ನು ಪರಿಶೀಲಿಸಲು ಕೇಂದ್ರ ಸರ್ಕಾರ ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್ ನೇತೃತ್ವದ ವಿಚಾರಣಾ ಆಯೋಗವನ್ನು ನೇಮಿಸಿದೆ. ನಿವೃತ್ತ ಐಎಎಸ್ ಅಧಿಕಾರಿ ಡಾ. ರವೀಂದರ್ ಕುಮಾರ್ ಜೈನ್ ಮತ್ತು ಪ್ರಾಧ್ಯಾಪಕಿ ಸುಷ್ಮಾ ಯಾದವ್ ಅವರು ಆಯೋಗದ ಸದಸ್ಯರಾಗಿದ್ದಾರೆ. ಸೋಮವಾರದಿಂದ (ಸೆ. 2) ಎರಡು ದಿನ ಆಯೋಗವು ರಾಜ್ಯಕ್ಕೆ ಭೇಟಿ ನೀಡಿ ಅಭಿಪ್ರಾಯ ಸಂಗ್ರಹಿಸಲಿದೆ.

ರಾಷ್ಟ್ರಪತಿಯವರ ಆದೇಶದ ಪ್ರಕಾರ, ಮತಾಂತರದ ನಂತರ ಹಿಂದೂ ಧರ್ಮ, ಬೌದ್ಧ ಧರ್ಮ ಮತ್ತು ಸಿಖ್ ಧರ್ಮವನ್ನು ಅನುಸರಿಸುವವರಿಗೆ ಮಾತ್ರ ಪರಿಶಿಷ್ಟ ಜಾತಿ ಸ್ಥಾನ ದೊರೆಯುತ್ತದೆ. ರಾಷ್ಟ್ರಪತಿ ಕಾಲ ಕಾಲಕ್ಕೆ ಹೊರಡಿಸಿರುವ ಆದೇಶದಲ್ಲಿ ಉಲ್ಲೇಖವಾಗದ ಧರ್ಮಕ್ಕೆ (ಇಸ್ಲಾಂ, ಕ್ರೈಸ್ತ) ಮತಾಂತರಗೊಂಡ, ಚಾರಿತ್ರಿಕವಾಗಿ ಪರಿಶಿಷ್ಟ ಜಾತಿಯವರಾಗಿ ಇರುವವರಿಗೆ ಪರಿಶಿಷ್ಟ ಜಾತಿ ಸ್ಥಾನ ಕೊಡಬೇಕೇ ಎಂಬುದನ್ನು ಈ ಆಯೋಗವು ಪರಿಶೀಲನೆ ನಡೆಸಲಿದೆ.

ಬೇರೆ ಧರ್ಮಗಳಿಗೆ ಮತಾಂತರಗೊಂಡ ಪರಿಶಿಷ್ಟ ಜಾತಿಯ ವ್ಯಕ್ತಿಗಳ ಪದ್ಧತಿ, ಸಂಪ್ರದಾಯ, ಸಾಮಾಜಿಕ ಸ್ಥಾನಮಾನ, ಅವರು ಅನುಭವಿಸುತ್ತಿದ್ದ ಶೋಷಣೆ ಮತ್ತು ತಾರತಮ್ಯದಲ್ಲಿ ಆಗಿರುವ ಬದಲಾವಣೆ ಕುರಿತು ಕೂಡ ಆಯೋಗವು ಪರಿಶೀಲನೆ ನಡೆಸಲಿದೆ. ಈ ಜನರಿಗೆ ಪರಿಶಿಷ್ಟ ಜಾತಿ ಮಾನ್ಯತೆ ನೀಡುವುದರಿಂದ ಆಗುವ ಪರಿಣಾಮಗಳನ್ನೂ ಅಧ್ಯಯನ ಮಾಡಲಿದೆ.

'ಇಸ್ಲಾಂ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಪರಿಶಿಷ್ಟರಿಗೆ ಮೀಸಲಾತಿ ಕಲ್ಪಿಸುವುದಕ್ಕೆ ಆಕ್ಷೇಪ ಇಲ್ಲ. ಆದರೆ, ಪರಿಶಿಷ್ಟ ಜಾತಿಗೆ ನಿಗದಿಪಡಿಸಿರುವ ಮೀಸಲಾತಿ ಕೋಟಾದಿಂದ ಕಡಿತಗೊಳಿಸಿ ದಲಿತ ಮುಸ್ಲಿಂ, ದಲಿತ ಕ್ರೈಸ್ತರಿಗೆ ನೀಡಬಾರದು. ಯಾವ ಧರ್ಮಕ್ಕೆ ಮತಾಂತರಗೊಂಡಿದ್ದಾರೆಯೋ ಆ ಧರ್ಮಕ್ಕೆ ನಿಗದಿಪಡಿಸಿದ ಮೀಸಲಾತಿ ಕೋಟಾದಿಂದ ಕಡಿತಗೊಳಿಸಿ ಕೊಡುವುದಾದರೆ ನಮ್ಮ ಅಭ್ಯಂತರ ಇಲ್ಲ' ಎಂದು ಆಯೋಗದ ಮುಂದೆ ಪ್ರತಿಪಾದಿಸಲು ದಲಿತ ಸಂಘಟನೆಗಳ ಪ್ರಮುಖರು ಚರ್ಚೆ ನಡೆಸಿದ್ದಾರೆ.

'ಕೆ.ಜಿ. ಬಾಲಕೃಷ್ಣನ್ ನೇತೃತ್ವದ ವಿಚಾರಣಾ ಆಯೋಗವು ರಾಜ್ಯಮಟ್ಟದ ಅಧಿಕಾರಿಗಳ ಜೊತೆ ಸೋಮವಾರ ಚರ್ಚೆ ನಡೆಸಲಿದೆ. ಈ ಸಭೆಗೆ ಅಗತ್ಯ ಮಾಹಿತಿ ಮತ್ತು ದಾಖಲೆಗಳ ಸಹಿತ ಹಾಜರಾಗುವಂತೆ ಸಮಾಜ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ರಾಜ್ಯ ವಕ್ಫ್ ಮಂಡಳಿ ಸೇರಿದಂತೆ ಸಂಬಂಧಿಸಿದ ಇಲಾಖೆಗಳ ಮುಖ್ಯಸ್ಥರಿಗೆ ಸೂಚನೆ ನೀಡಲಾಗಿದೆ. ಆಯೋಗವು ಅಂಬೇಡ್ಕರ್ ಭವನದಲ್ಲಿ ಸಾರ್ವಜನಿಕರಿಂದ ಮಂಗಳವಾರ ಅಭಿಪ್ರಾಯ ಸಂಗ್ರಹಿಸಲಿದೆ' ಎಂದು ಸಮಾಜ ಕಲ್ಯಾಣ ಇಲಾಖೆಯ ಮೂಲಗಳು ತಿಳಿಸಿವೆ.

ರಾಜ್ಯ ಸರ್ಕಾರ ಒದಗಿಸಬೇಕಾದ ಮಾಹಿತಿಗಳಿಗೆ ಸಂಬಂಧಿಸಿದಂತೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಆಗಸ್ಟ್ 23ರಂದೇ ಆಯೋಗವು ಪತ್ರ ಬರೆದಿದೆ. ಒಟ್ಟು 15 ಪ್ರಶ್ನೆಗಳಿಗೆ ಮಾಹಿತಿ ಒದಗಿಸುವಂತೆ ಸೂಚಿಸಿದೆ. ಇಸ್ಲಾಂ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಪರಿಶಿಷ್ಟರಿಗೆ ಸಂಬಂಧಿಸಿದಂತೆ ಯಾವುದಾದರೂ ಅಧ್ಯಯನ ನಡೆದಿದೆಯೇ? ಹೀಗೆ ಮತಾಂತರಗೊಂಡವರನ್ನು ಹಾಲಿ ಇರುವ ಪರಿಶಿಷ್ಟ ಜಾತಿಗೆ ಸೇರಿಸಿದರೆ ಆಗಬಹುದಾದ ಪರಿಣಾಮಗಳೇನು? ಕಳೆದ ಮೂರು ವರ್ಷಗಳ ಅವಧಿಯಲ್ಲಿ ಪರಿಶಿಷ್ಟ ಜಾತಿಯವರಿಗೆ ಮತ್ತು ಅಲ್ಪಸಂಖ್ಯಾತರಿಗೆ ರಾಜ್ಯದ ಬಜೆಟ್‌ನಲ್ಲಿ ಮೀಸಲಿಟ್ಟ ಅನುದಾನ ಎಷ್ಟು? 1956 ನ. 1 ರಿಂದ ಇಲ್ಲಿಯವರೆಗೆ ಪರಿಶಿಷ್ಟ ಜಾತಿ ಮತ್ತು ಅಲ್ಪಸಂಖ್ಯಾತರಿಗೆ ಬಜೆಟ್‌ನಲ್ಲಿ ಪ್ರತಿವರ್ಷ ಮೀಸಲಿಟ್ಟ ಹಣ ಮತ್ತು ಆಗಿರುವ ವೆಚ್ಚದ ಮಾಹಿತಿ ಒದಗಿಸಬೇಕು ಎಂದೂ ಆಯೋಗ ಪತ್ರದಲ್ಲಿ ತಿಳಿಸಿದೆ.

ಆಯೋಗ ಕೇಳಿದ ಮಾಹಿತಿಗಳೇನು?

- ರಾಜ್ಯದಲ್ಲಿ 1956ರ ನ. 1ರಿಂದ ಇಲ್ಲಿಯವರೆಗೆ ಪರಿಶಿಷ್ಟ ಜಾತಿ, ತುಳಿತಕ್ಕೆ ಒಳಗಾದ ವರ್ಗಗಳ ಅಂಕಿಅಂಶ
- ಪರಿಶಿಷ್ಟ ಜಾತಿ ಮತ್ತು ಉಪ ಜಾತಿಗಳನ್ನು 'ಪರಿಶಿಷ್ಟ ಜಾತಿ' ಪಟ್ಟಿಯಲ್ಲಿ ಸೇರಿಸಿರುವ ವರ್ಷಾವಾರು ವಿವರ ಮತ್ತು ಸೇರಿಸಲು ಕಾರಣವಾದ ಅಂಶ
- ಪರಿಶಿಷ್ಟ ಜಾತಿಯ ಜನರ ಅಭಿವೃದ್ಧಿ ಮತ್ತು ಪ್ರಗತಿಯನ್ನು ಅಳೆಯಲು ಬಳಸಿದ ಆರ್ಥಿಕ ಮತ್ತು ಸಾಮಾಜಿಕ ಮಾನದಂಡ– ಸೂಚ್ಯಂಕಗಳು
- ಪರಿಶಿಷ್ಟ ಜಾತಿಯವರಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ತೆಗೆದುಕೊಂಡು ವಿಶೇಷ ಕ್ರಮಗಳ ನೀತಿ, ದತ್ತಾಂಶ ಮಾಹಿತಿ
- 1956ರ ನ. 1 ರಿಂದ ಇಲ್ಲಿಯವರೆಗೆ ಮತಾಂತರಗೊಂಡಿರುವ ಪರಿಶಿಷ್ಟ ಜಾತಿಯವರ ದಾಖಲೆ
- 1956ರ ನ. 1 ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ನಡೆದ ಸಾಮಾನ್ಯ ಮತ್ತು ಧಾರ್ಮಿಕ ಆಧಾರಿತ ಜನಗಣತಿ ವಿವರ
- ಚಾರಿತ್ರಿಕವಾಗಿ ಪರಿಶಿಷ್ಟ ಜಾತಿಯವರಾಗಿದ್ದು, ಇಸ್ಲಾಂ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡವರಿಗೆ ರೂಪಿಸಿದ ಯೋಜನೆಗಳ ಮಾಹಿತಿ
- ಚಾರಿತ್ರಿಕವಾಗಿ ಪರಿಶಿಷ್ಟ ಜಾತಿಯವರಾಗಿದ್ದು, ಇಸ್ಲಾಂ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡವರ ಪ್ರಗತಿ ಅಳೆಯಲು ಬಳಸಿದ ಮಾನದಂಡಗಳು
- ರಾಜ್ಯದಲ್ಲಿ ಇಸ್ಲಾಂ ಮತ್ತು ಕ್ರೈಸ್ತ ಧರ್ಮೀಯರ ಪದ್ಧತಿಗಳು, ಸಂಪ್ರದಾಯಗಳು, ಆಚರಣೆಗಳು
- ಮುಸ್ಲಿಂ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಪರಿಶಿಷ್ಟರ ಬದಲಾದ ಪದ್ಧತಿಗಳು, ಸಂಪ್ರದಾಯಗಳು, ಆಚರಣೆ (ಅಸ್ಪೃಶ್ಯತೆ)

'ಮತಾಂತರಗೊಂಡ ಪರಿಶಿಷ್ಟರ ಅಂಕಿಅಂಶ ಇಲ್ಲ'

'ಪರಿಶಿಷ್ಟ ಜಾತಿಯವರಿಗೆ ಸಂಬಂಧಿಸಿದಂತೆ 1960ರ ನಂತರದ ಮಾಹಿತಿಗಳು ಸರ್ಕಾರದ ಬಳಿ ಲಭ್ಯವಿದೆ. ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನಸಂಖ್ಯೆಯ ಮಾಹಿತಿಗಳಿವೆ. ಆದರೆ, ಮುಸ್ಲಿಂ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಪರಿಶಿಷ್ಟರ ಅಂಕಿಅಂಶ ಇಲ್ಲ' ಎಂದು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಬಲವಂತದ ಮತಾಂತರ ನಿಷೇಧಿಸುವ 'ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಮಸೂದೆ' (ಮತಾಂತರ ನಿಷೇಧ) ಕಾಯ್ದೆ 2022ರಿಂದ ರಾಜ್ಯದಲ್ಲಿ ಜಾರಿಯಲ್ಲಿದೆ. ಕಾಯ್ದೆ ಜಾರಿಗೆ ಬಂದ ನಂತರ ಮತಾಂತರಗೊಂಡರೆ, ಅಂಥವರ ಮಾಹಿತಿ ಸಂಗ್ರಹಿಸಲು ಅವಕಾಶವಿದೆ. ಆದರೆ, ಸದ್ಯಕ್ಕೆ ಅಂತಹ ಯಾವುದೇ ಮಾಹಿತಿ ಇಲ್ಲ' ಎಂದೂ ಅವರು ತಿಳಿಸಿದರು.

ಪ್ರಜಾವಾಣಿ ವಿಶೇಷ

ಸುದ್ದಿ 2 ನಿಮಿಷ

ಸಿದ್ದರಾಮಯ್ಯ ಅನುಮತಿ ನೀಡಿದರೆ ನಾನೂ ಸಿ.ಎಂ ಆಗುವೆ: ದೇಶಪಾಂಡೆ


ಮೈಸೂರು: 'ಹೈಕಮಾಂಡ್ ಒಪ್ಪಿದರೆ ಹಾಗೂ ಸಿದ್ದರಾಮಯ್ಯ ಅನುಮತಿ ಕೊಟ್ಟರೆ ನಾನು ಮುಖ್ಯಮಂತ್ರಿ ಆಗುತ್ತೇನೆ. ಆದರೆ, ಈಗ ಆ ಸ್ಥಾನದ ಬದಲಾವಣೆ ಪ್ರಶ್ನೆಯೇ ಇಲ್ಲ' ಎಂದು ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ. ದೇಶಪಾಂಡೆ ಹೇಳಿದರು.

ಇಲ್ಲಿ ಪತ್ರಕರ್ತರೊಂದಿಗೆ ಭಾನುವಾರ ಮಾತನಾಡಿದ ಅವರು, 'ನಾನು ಸಿದ್ದರಾಮಯ್ಯಗಿಂತ ಎರಡು ವರ್ಷ ದೊಡ್ಡವನು. ಸಚಿವ ಆಗಿ ಆಗಿ ದಣಿದಿದ್ದೇನೆ. ಇನ್ನೇನಿದ್ದರೂ ಮುಖ್ಯಮಂತ್ರಿ ಆಗಬೇಕಷ್ಟೆ. ಎಲ್ಲರಂತೆಯೇ ನನಗೂ ಆಸೆ ಇದೆ; ಜೀವನದಲ್ಲಿ ಮಹತ್ವಾಕಾಂಕ್ಷೆ ಇರಬೇಕು' ಎಂದರು.

'ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಚರ್ಚೆಯಾಗಿಲ್ಲ. ನನಗೆ ಗೊತ್ತಿಲ್ಲದೆ ಅಂಥ ಯಾವ ಚರ್ಚೆಯೂ ನಡೆಯಲು ಸಾಧ್ಯವಿಲ್ಲ. ಗೃಹ ಸಚಿವ ಜಿ.ಪರಮೇಶ್ವರ್ ಹಾಗೂ ಸತೀಶ ಜಾರಕಿಹೊಳಿ ನಡೆಸಿರುವ ಸಭೆ ಇಲಾಖೆಗಳಿಗೆ ಸಂಬಂಧ ಪಟ್ಟದ್ದಷ್ಟೆ. ಸಿದ್ದರಾಮಯ್ಯ ಅವಧಿ ಪೂರ್ಣಗೊಳಿಸುತ್ತಾರೆ' ಎಂದು ಪ್ರತಿಕ್ರಿಯಿಸಿದರು.

'ಮುಡಾ ವಿಚಾರದಲ್ಲಿ ಸಿದ್ದರಾಮಯ್ಯ ತಪ್ಪೇ ಮಾಡಿಲ್ಲ' ಎಂದು ಸಮರ್ಥಿಸಿಕೊಂಡ ಅವರು, 'ಸಾವಿರಾರು ಕೋಟಿ ರೂಪಾಯಿ ಹಗರಣ ನಡೆದಿದೆ ಎನ್ನುತ್ತಿರುವವರು, ಆರೋಪದ ಬಗ್ಗೆ ದಾಖಲೆ ಕೊಟ್ಟರೆ ನಾನೇ ಸರ್ಕಾರಕ್ಕೆ ಪತ್ರ ಬರೆಯುತ್ತೇನೆ' ಎಂದರು.

'ಟೆಲಿಫೋನ್ ಕದ್ದಾಲಿಕೆ ಆರೋಪ ಬಂದ ತಕ್ಷಣ ರಾಮಕೃಷ್ಣ ಹೆಗಡೆ ರಾಜೀನಾಮೆ ಕೊಟ್ಟಿದ್ದರು. ಈಗ ದಿನವೂ ಫೋನ್ ಕದ್ದಾಲಿಕೆ ನಡೆಯುತ್ತಿದೆ. ಈಗ ಮೌಲ್ಯ ಆಧರಿತ ರಾಜಕಾರಣ ನಡೆಯುತ್ತಿಲ್ಲ' ಎಂದು ವಿಷಾದ ವ್ಯಕ್ತಪಡಿಸಿದರು.



'ರೀಲ್ಸ್ ಮಾಡಿ, ಬಹುಮಾನ ಗೆಲ್ಲಿ'

ಬೆಳಗಾವಿ: 'ಗೃಹಲಕ್ಷ್ಮಿ ಯೋಜನೆ ಜಾರಿಯಾಗಿ ಒಂದು ವರ್ಷವಾಗಿದೆ. ಇದು ತಮ್ಮ ಜೀವನದಲ್ಲಿ ಏನೆಲ್ಲ ಬದಲಾವಣೆ ತಂದಿದೆ ಎಂಬುದನ್ನು ಯಜಮಾನಿಯರು ಸಾಮಾಜಿಕ ಜಾಲತಾಣಗಳಲ್ಲಿ ರೀಲ್ಸ್‌ಗಳ ಮೂಲಕ ಹಂಚಿಕೊಳ್ಳಬೇಕು' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಭಾನುವಾರ ಕೋರಿದ್ದಾರೆ.

'ಸೆ.1ರಿಂದ 30 ರವರೆಗೆ ಯುಟ್ಯೂಬ್, ಫೇಸ್‌ಬುಕ್, ಇನ್‌ಸ್ಟಾಗ್ರಾಂಗಳಲ್ಲಿ ಯಜಮಾನಿಯರು ರೀಲ್ಸ್ ಹಂಚಿಕೊಳ್ಳಬೇಕು. ಇದರಲ್ಲಿ ಹೆಚ್ಚು ವೀಕ್ಷಣೆಯಾದ ರೀಲ್ಸ್‌ಗೆ ನಾನು ವೈಯಕ್ತಿಕವಾಗಿ ಬಹುಮಾನ ನೀಡುತ್ತೇನೆ' ಎಂದು ಘೋಷಿಸಿದ್ದಾರೆ.

'ಮೊದಲ 50 ಯಜಮಾನಿಯರ ರೀಲ್ಸ್ ಹಾದಿಯನ್ನು ಎದುರು ನೋಡುತ್ತಿದ್ದೇನೆ. ಹಾಗಾಗಿ ಪ್ರತಿ ಯಜಮಾನಿಯರು ಗೃಹಲಕ್ಷ್ಮಿ ಯೋಜನೆಯಿಂದ ತಮ್ಮ ಬದುಕಿನಲ್ಲಿ ಆಗಿರುವ ಬದಲಾವಣೆಯನ್ನು ರಾಜ್ಯದ ಜನರ ಮುಂದೆ ಹಂಚಿಕೊಳ್ಳಿ' ಎಂದು ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

ರಾಜ್ಯಪಾಲರ ಕೋಲಾರ ಭೇಟಿ ದಿಢೀರ್ ರದ್ದು

ಕೋಲಾರ: ಕೋಲಾರ ನಗರದಲ್ಲಿ ಸೋಮವಾರ (ಸೆ.2) ನಡೆಯಲಿರುವ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ನಾಲ್ಕನೇ ವಾರ್ಷಿಕ ಘಟಿಕೋತ್ಸವದಲ್ಲಿ ಪಾಲ್ಗೊಳ್ಳಬೇಕಿದ್ದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಕೊನೆ ಗಳಿಗೆಯಲ್ಲಿ ತಮ್ಮ ಪ್ರವಾಸ ರದ್ದುಪಡಿಸಿದ್ದಾರೆ.

ಅನಿವಾರ್ಯ ಕಾರಣಗಳಿಂದ ಪ್ರವಾಸ ರದ್ದಾಗಿರುವ ವಿಚಾರವನ್ನು ರಾಜಭವನ ಕಚೇರಿ ಭಾನುವಾರ ಮಧ್ಯಾಹ್ನ ಖಚಿತಪಡಿಸಿದೆ.

ಮುಡಾ ಪ್ರಕರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿರುವ ಅರ್ಜಿಯ ವಿಚಾರಣೆ ಹೈಕೋರ್ಟ್‌ನಲ್ಲಿ ಸೋಮವಾರ ಮುಂದುವರಿಯಲಿದೆ. ರಾಜ್ಯಪಾಲರ ಪ್ರವಾಸ ರದ್ದು ಮಾಡಲು ಈ ವಿಚಾರವೂ ಕಾರಣ ಎನ್ನಲಾಗಿದೆ.

ಅಲ್ಲದೆ, ಭಾನುವಾರ ಬೆಳಗ್ಗೆ ನಗರದಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಕಾಂಗ್ರೆಸ್ ಪಕ್ಷದ ಅಹಿಂದ ಒಕ್ಕೂಟದ ಮುಖಂಡರು ಕೋಲಾರಕ್ಕೆ ಸೋಮವಾರ ಭೇಟಿ ನೀಡುತ್ತಿರುವ ರಾಜ್ಯಪಾಲರಿಗೆ ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟಿಸುವ ಎಚ್ಚರಿಕೆಯನ್ನೂ ನೀಡಿದ್ದರು.

'ರಾಜ್ಯಪಾಲರು ಬಿಜೆಪಿ ಏಜೆಂಟ್‌ರಂತೆ ವರ್ತಿಸುತ್ತಿದ್ದಾರೆ. ಸಾಧ್ಯವಾದರೆ ಅವರಿಗೆ ದಿಗ್ಬಂಧನ ವಿಧಿಸುತ್ತೇವೆ' ಎಂದು ಅಹಿಂದ ಮುಖಂಡರು ಹೇಳಿದ್ದರು.

ಈ ಎಲ್ಲ ಕಾರಣಗಳಿಂದ ಮುನ್ನೆಚ್ಚರಿಕೆ ಕ್ರಮವಾಗಿ ರಾಜ್ಯಪಾಲರ ಭೇಟಿ ರದ್ದಾಗಿರುವುದು ಗೊತ್ತಾಗಿದೆ.

'ವಿಶ್ವವಿದ್ಯಾಲಯದ ಕುಲಾಧಿಪತಿಯೂ ಆಗಿರುವ ರಾಜ್ಯಪಾಲರ ಗೈರು ಹಾಜರಿಯಲ್ಲಿ ಸಮ ಕುಲಾಧಿಪತಿ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅಧ್ಯಕ್ಷತೆ ವಹಿಸಿ ಘಟಿಕೋತ್ಸವ ನಡೆಸಿಕೊಡಲಿದ್ದಾರೆ' ಎಂದು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ನಿರಂಜನ ವಾನಳ್ಳಿ 'ಪ್ರಜಾವಾಣಿ'ಗೆ ತಿಳಿಸಿದರು.

'ಸಿ.ಎಂ ಖುಷಿಪಡಿಸಲು ನಿವೇಶನ'

ಮುಡಾ ಪ್ರಕರಣ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ದರಾಮಯ್ಯ ಅವರನ್ನು ಖುಷಿಪಡಿಸಲು ಮುಡಾ ಅಧಿಕಾರಿಗಳೇ 50:50ರ ಅನುಪಾತದಲ್ಲಿ ಪಾರ್ವತಿ ಅವರಿಗೆ ನಿವೇಶನ ಹಂಚಿಕೆ ಮಾಡಿದ್ದಾರೆ. ಸಿದ್ದರಾಮಯ್ಯ ನಾಮಬಲದ ಮೇಲೆಯೇ ಇದೆಲ್ಲಾ ನಡೆದಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದರು.

ಬಿಜೆಪಿ ರಾಜ್ಯ ಕಚೇರಿಯಲ್ಲಿ ಕಾನೂನು ಪ್ರಕೋಷ್ಠದ ಸದಸ್ಯತ್ವ ಅಭಿಯಾನದ ಕಾರ್ಯಾಗಾರಕ್ಕೆ ಭಾನುವಾರ ಚಾಲನೆ ನೀಡಿ ಅವರು ಮಾತನಾಡಿದರು.

'ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಿದ್ದರಾಮಯ್ಯ ಅವರ ಪತ್ನಿಗೆ ನಿವೇಶನ ಮಂಜೂರು ಮಾಡಲಾಗಿದೆ ಎಂದು ಅವರು ಆರೋಪಿಸುತ್ತಿದ್ದಾರೆ. ಆದರೆ 50:50ರ ಅನುಪಾತದಲ್ಲಿ ನಿವೇಶನ ಹಂಚಿಕೆ ಮಾಡಲು ಬಿಜೆಪಿ ಸರ್ಕಾರ ಒಪ್ಪಿಗೆ ನೀಡಿರಲಿಲ್ಲ. ಅಧಿಕಾರಿಗಳೇ ಅಧಿಕಾರ ದುರುಪಯೋಗ ಮಾಡಿಕೊಂಡು, ನಿವೇಶನ ನೀಡಿದ್ದಾರೆ' ಎಂದು ಆರೋಪಿಸಿದರು.

'ರಾಜ್ಯದಲ್ಲಿ ದಿನ ಬೆಳಗಾದರೆ ಹಲವು ಹೋರಾಟಗಳು ನಡೆಯುತ್ತವೆ. ನಮ್ಮ ಕಾರ್ಯಕರ್ತರ ಮೇಲೆ ಪ್ರಕರಣ ದಾಖಲಾಗುತ್ತಲೇ ಇರುತ್ತವೆ. ಹೀಗಾಗಿ ಕಾನೂನು ಪ್ರಕೋಷ್ಠ ಪ್ರಬಲವಾಗಿರುವ ಅವಶ್ಯಕತೆ ಇದೆ' ಎಂದರು.

ಕಾನೂನು ಪ್ರಕೋಷ್ಠದ ರಾಜ್ಯ ಸಂಚಾಲಕ ವಸಂತಕುಮಾರ್, 'ಶೇ 95 ಜಿಲ್ಲಾ ಸಂಚಾಲಕರ ನೇಮಕಾತಿ ನಡೆದಿದೆ. ವಾಲ್ಮೀಕಿ ನಿಗಮದ ಹಗರಣದಲ್ಲಿ ಕಾನೂನು ಹೋರಾಟಕ್ಕೆ ಸಹಕರಿಸುತ್ತಿದ್ದೇವೆ' ಎಂದರು.



ಕಾಂಗ್ರೆಸ್ ಸರ್ಕಾರವು ಅತ್ಯಂತ ಕಡಿಮೆ ಅವಧಿಯಲ್ಲಿ ಜನರ ವಿಶ್ವಾಸ ಕಳೆದುಕೊಂಡಿದೆ. ರಾಜ್ಯದಲ್ಲಿ ಸರ್ಕಾರ ಇದೆ ಎಂಬುದನ್ನು ಜನರು ಮರೆತುಹೋಗಿದ್ದಾರೆ

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

'ಅಶೋಕ್, ವಿಜಯೇಂದ್ರ ದುರ್ಬಲ ರಾಜಭವನದ ದುರುಪಯೋಗ'



ಬಿ.ಕೆ. ಹರಿಪ್ರಸಾದ್

ಮಡಿಕೇರಿ: 'ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ದುರ್ಬಲರಾಗಿರುವುದರಿಂದ ಬಿಜೆಪಿ ಹೈಕಮಾಂಡ್ ರಾಜಭವನವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ' ಎಂದು ವಿಧಾನಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಆರೋಪಿಸಿದರು.

ಹೊರವಲಯದಲ್ಲಿ ಭಾನುವಾರ ಕೊಡವ ನ್ಯಾಷನಲ್ ಕೌನ್ಸಿಲ್ ಏರ್ಪಡಿಸಿದ್ದ 'ಕೈಲ್ ಪೊಳ್ದ್' ಆಚರಣೆಯಲ್ಲಿ ಪಾಲ್ಗೊಂಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, 'ಆಪರೇಷನ್ ಕಮಲ'ವೂ ಇವರಿಂದ ಸಾಧ್ಯವಾಗಲಿಲ್ಲ. ಇವರಿಬ್ಬರ ಅಸಮರ್ಥ ಕಾರ್ಯನಿರ್ವಹಣೆಯಿಂದ ರಾಜಭವನದ ದುರುಪಯೋಗ ನಡೆಯಿತು. ಇದರ ವಿರುದ್ಧ ನಾವು ಪ್ರತಿಭಟನೆ ನಡೆಸಿದೆವು' ಎಂದರು.

ಬಿಎಂಟಿಸಿ ಪರೀಕ್ಷೆ: ಶೇ 82ರಷ್ಟು ಹಾಜರು

ಬೆಂಗಳೂರು: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿನ (ಬಿಎಂಟಿಸಿ) 2,500 ನಿರ್ವಾಹಕ ಹುದ್ದೆಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಭಾನುವಾರ ನಡೆಸಿದ ಪರೀಕ್ಷೆಗೆ ಶೇ 82 ರಷ್ಟು ಅಭ್ಯರ್ಥಿಗಳು ಹಾಜರಾಗಿದ್ದರು.

ಬೆಂಗಳೂರು, ಬಳ್ಳಾರಿ, ಧಾರವಾಡ, ಕಲ್ಬುರ್ಗಿ, ದಾವಣಗೆರೆ, ಮಂಡ್ಯ ಜಿಲ್ಲೆಗಳ ಒಟ್ಟು 50 ಕೇಂದ್ರಗಳಲ್ಲಿ ಪರೀಕ್ಷೆ ಸುಗಮವಾಗಿ ನಡೆಯಿತು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ. ಒಟ್ಟು 23,023 ಮಂದಿ ಅರ್ಜಿ ಸಲ್ಲಿಸಿದ್ದರು. ಬೆಳಿಗ್ಗೆ ಮತ್ತು ಮಧ್ಯಾಹ್ನ ಎರಡು ಅವಧಿಯಲ್ಲಿ ಪರೀಕ್ಷೆ ನಡೆಯಿತು ಎಂದು ಅವರು ವಿವರಿಸಿದ್ದಾರೆ.



ದೇಗುಲ ಭೇಟಿ ಉಡುಪಿಯ ಶ್ರೀಕೃಷ್ಣ ಮಠಕ್ಕೆ ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಭಾನುವಾರ ಭೇಟಿ ನೀಡಿ ದೇವರ ದರ್ಶನ ಪಡೆದರು. ಪರ್ಯಾಯ ಪುತ್ತಿಗೆ ಮಠದ ಸುಗುಣೇಂದ್ರತೀರ್ಥ ಸ್ವಾಮೀಜಿ ಹಾಗೂ ಕಿರಿಯ ಯತಿ ಸುಶೀಂದ್ರತೀರ್ಥ ಸ್ವಾಮೀಜಿ ಜೊತೆಗಿದ್ದರು

ಲೋಕಾಯುಕ್ತಕ್ಕೆ ಶ್ರೀವತ್ಸ ದೂರು

ಮೈಸೂರು: 'ಇಲ್ಲಿನ ಮುಡಾ ಹಗರಣದಲ್ಲಿ ಭಾಗಿಯಾದ ಅಧಿಕಾರಿಗಳನ್ನು ತನಿಖೆಗೆ ಒಳಪಡಿಸಿ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿ ಇಲ್ಲಿನ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಲೋಕಾಯುಕ್ತಕ್ಕೆ ಶನಿವಾರ ದೂರು ಸಲ್ಲಿಸಿದ್ದಾರೆ.

'ಶೇ 50:50 ಅನುಪಾತದಲ್ಲಿ ಐದು ಲಕ್ಷ ಚದರ ಅಡಿಗೂ ಅಧಿಕ ನಿವೇಶನಗಳನ್ನು ಕಾನೂನು ಬಾಹಿರವಾಗಿ ಹಂಚಿಕೆ ಮಾಡಿರುವ ಆರೋಪ ಎದುರಿಸುತ್ತಿರುವ ಪ್ರಾಧಿಕಾರದ ಈ ಹಿಂದಿನ ಆಯುಕ್ತರಾಗಿದ್ದ ಜಿ.ಟಿ.ದಿನೇಶ್ ಕುಮಾರ್ ವಿರುದ್ಧ ಸೂಕ್ತ ಕ್ರಮಕ್ಕಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದರೂ ಕ್ರಮ ತೆಗೆದುಕೊಂಡಿಲ್ಲ' ಎಂದು ಆರೋಪಿಸಿದ್ದಾರೆ.

'ಅಧಿಕಾರ ದುರುಪಯೋಗ ಮಾಡಿಕೊಂಡಿರುವ ಹಿಂದಿನ ಆಯುಕ್ತರಾಗಿದ್ದ ಡಿ.ಬಿ.ನಟೇಶ್ ಹಾಗೂ ಜಿ.ಟಿ.ದಿನೇಶ್ ಕುಮಾರ್ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು. ಅಕ್ರಮದಲ್ಲಿ ಭಾಗಿಯಾದ ಅಧಿಕಾರಿಗಳನ್ನು ಬಂಧಿಸಿ, ಸರ್ಕಾರಕ್ಕೆ ಆದ ನಷ್ಟಭರಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಮುಡಾ ನಿವೇಶನ ಪ್ರಕರಣದಲ್ಲಿ ಯಾರಿಗೂ ಹೆದರಲ್ಲ: ಸಚಿವ ಜಮೀರ್

'ಸಿದ್ದರಾಮಯ್ಯ ಟಗರು, ಹುಲಿ ಇದ್ದಂಗೆ'

ಪ್ರಜಾವಾಣಿ ವಾರ್ತೆ



ಹುಬ್ಬಳ್ಳಿ: 'ಮುಡಾ' ನಿವೇಶನ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಾತ್ರ ಏನೂ ಇಲ್ಲ. ಬಿಜೆಪಿಯವರು ರಾಜಕೀಯ ದುರುದ್ದೇಶದಿಂದ ರಾಜ್ಯಪಾಲರ ಮೂಲಕ ತನಿಖೆಗೆ ಅನುಮತಿ ಕೊಡಿಸಿದ್ದಾರೆ. ಇದಕ್ಕೆ ಮುಖ್ಯಮಂತ್ರಿ ಅವರು ಹೆದರುವುದಿಲ್ಲ. ನಮ್ಮ ಸಿಎಂ ಟಗರು, ಹುಲಿ ಇದ್ದಂಗೆ' ಎಂದು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಿದ್ದರಾಮಯ್ಯ ಹಿಂದುಳಿದ ವರ್ಗದ ಪ್ರಬಲ ನಾಯಕ. ಅವರ ಮೇಲೆ ಆರೋಪ ಹೊರಿಸಿ, ಮುಖ್ಯಮಂತ್ರಿ ಸ್ಥಾನದಿಂದ ಇಳಿಸಿದರೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಿದ್ದುಹೋಗುತ್ತೆ ಎಂಬ ಲೆಕ್ಕಾಚಾರ ಬಿಜೆಪಿಯವರದು. ಆದರೆ, ಮುಖ್ಯಮಂತ್ರಿ ಇಂತಹ ನಿರಾಧಾರ ಆರೋಪಕ್ಕೆ ಹೆದರಿ ರಾಜೀನಾಮೆ ಕೊಡುವುದಿಲ್ಲ. ಅವರ ಜೊತೆ ಪಕ್ಷದ ಹೈಕಮಾಂಡ್ ಇದೆ. ಸಚಿವರು, ಶಾಸಕರು ಹಾಗೂ ರಾಜ್ಯದ ಜನರು ಇದ್ದಾರೆ' ಎಂದರು.

ದರ್ಶನ್ ಸ್ಥಳಾಂತರದಲ್ಲಿ ನನ್ನ ಪಾತ್ರವಿಲ್ಲ: 'ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾದ ಕಾರಣ ಆರೋಪಿ, ನಟ ದರ್ಶನ್ ಅವರನ್ನು ಅಲ್ಲಿಗೆ ಸ್ಥಳಾಂತರಿಸಲಾಗಿದೆಯೇ' ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಜಮೀರ್, ' ನಟ ದರ್ಶನ್ ಅವರನ್ನು ಬಳ್ಳಾರಿ ಜೈಲಿಗೆ ಸ್ಥಳಾಂತರ ಮಾಡಿರುವುದು ಕಾರಾಗೃಹ ಇಲಾಖೆ. ನಾನಲ್ಲ. ನಾನು ಬಳ್ಳಾರಿ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಸಚಿವ. ಕಾರಾಗೃಹ ಇಲಾಖೆಯ ಡಿಜಿ ಅಲ್ಲ' ಎಂದರು.

'ದರ್ಶನ್ ಮೇಲೆ ಕೊಲೆ ಆರೋಪ ವಿದೆ. ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ಅವರಿಗೆ ಸಂಬಂಧಿಸಿದ ವಿಡಿಯೊ, ಫೋಟೊಗಳು ಹೊರಬಂದ ಕಾರಣ ಅವರನ್ನು ಪೊಲೀಸ್ ಅಧಿಕಾರಿಗಳು ಬಳ್ಳಾರಿ ಜೈಲಿಗೆ ಶಿಫ್ಟ್ ಮಾಡಿದ್ದಾರೆ. ಇದಕ್ಕೆ ನಾನು ಹೇಗೆ ಕಾರಣ ಆಗುತ್ತೇನೆ? ನಾನೇಕೆ ಹೋಗಿ ಅವರನ್ನು ಭೇಟಿ ಮಾಡಬೇಕು' ಎಂದು ಸುದ್ದಿಗಾರರನ್ನೇ ಮರು ಪ್ರಶ್ನಿಸಿದರು.

ಬಾಲಸುಟ್ಟ ಬೆಕ್ಕು ಸಿದ್ದರಾಮಯ್ಯ: ಜೋಶಿ



'ಮುಡಾ' ನಿವೇಶನ ಹಗರಣಕ್ಕೆ ಸಂಬಂಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗಾಬರಿಯಾಗಿ ಬಾಲಸುಟ್ಟ ಬೆಕ್ಕಿನಂತೆ ಓಡಾಡುತ್ತಿದ್ದಾರೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವ್ಯಂಗ್ಯವಾಡಿದರು.

ಭಾನುವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಿದ್ದರಾಮಯ್ಯ ಟಗರೋ, ಹುಲಿನೋ, ಸಿಂಹನೋ, ಕುರಿನೋ ಎಂದು ನಾವು ಹೇಳಿಲ್ಲ. ನೈತಿಕ ಹೊಣೆಹೊತ್ತು ಅವರು ರಾಜೀನಾಮೆ ನೀಡಬೇಕು ಎಂದಿದ್ದೇವೆ' ಎಂದು 'ಸಿದ್ದರಾಮಯ್ಯ ಟಗರು' ಎಂದು ಸಚಿವ ಜಮೀರ್ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದರು.

'ಸಿದ್ದರಾಮಯ್ಯ ಅವರಿಗೆ ಏನು ಮಾಡಬೇಕೆಂದು ತೋಚುತ್ತಿಲ್ಲ. ದಿನ ಬೆಳಗಾದರೆ ರಾಜ್ಯಪಾಲರ ಭೇಟಿ, ಮಾಧ್ಯಮಗಳಿಗೆ ಒಂದೊಂದು ಹೇಳಿಕೆ ನೀಡುವುದು ಮಾಡುತ್ತಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿ ಕೋರ್ಟ್ ಮೊರೆ ಹೋಗಿದ್ದಾರೆ ಎಂದಾದರೆ, ಆದೇಶ ಬರುವವರೆಗೆ ಕಾಯಲಿ. ನ್ಯಾಯ ಸಿಗುತ್ತದೆ ಎಂದು ಹೇಳಲಿ ನೋಡೋಣ. ಅದನ್ನು ಬಿಟ್ಟು ಕೋವಿಡ್ ಸಂದರ್ಭದಲ್ಲಿ ನಡೆದ ಭ್ರಷ್ಟಾಚಾರ ತನಿಖೆ ನಡೆಸುತ್ತೇವೆ, ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು ದಿಕ್ಕು ತಪ್ಪಿಸುವ ಹೇಳಿಕೆ ನೀಡುವುದು ಯಾಕೆ' ಎಂದು ಪ್ರಶ್ನಿಸಿದರು. 'ಭಾವನಾತ್ಮಕವಾಗಿ ಮಾತನಾಡಿ ಬ್ಲ್ಯಾಕ್‌ಮೇಲ್ ಮಾಡುವ ತಂತ್ರ ಹಾಗೂ ನಾಟಕಗಳನ್ನು ಅವರು ಬಂದ್ ಮಾಡಲಿ' ಎಂದರು.

ಎನ್‌ಎಟಿಗೆ ರಾಜ್ಯದ ಇಬ್ಬರು ಪ್ರಾಧ್ಯಾಪಕರು ಆಯ್ಕೆ

ಬೆಂಗಳೂರು: ಕೇಂದ್ರ ಶಿಕ್ಷಣ ಸಚಿವಾಲಯದ ಉನ್ನತ ಶಿಕ್ಷಣ ಇಲಾಖೆಯು ಎಚ್‌ಇಐಎಸ್ ಮತ್ತು ಪಾಲಿಟೆಕ್ನಿಕ್ ಶಿಕ್ಷಕರಿಗೆ ನೀಡುವ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿಗೆ (ಎನ್‌ಎಟಿ) ರಾಜ್ಯದಿಂದ ಇಬ್ಬರು ಆಯ್ಕೆಯಾಗಿದ್ದಾರೆ.

ಕೆಂಗೇರಿ ಜ್ಞಾನಭಾರತಿ ಕ್ಯಾಂಪಸ್‌ನಲ್ಲಿರುವ ಬೆಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಎಸ್. ಆರ್. ಕೇಶವ, ಕುಂಬಳಗೋಡು ಕ್ರೈಸ್ಟ್ ಡೀಮ್ಡ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಪ್ರಾಧ್ಯಾಪಕಿ ಅನಿತಾ ಸುಸೀಲನ್ ಪ್ರಶಸ್ತಿಗೆ ಆಯ್ಕೆಯಾದವರು. ರಾಷ್ಟ್ರ ಮಟ್ಟದಲ್ಲಿ ಒಟ್ಟು 16 ಪ್ರಾಧ್ಯಾಪಕರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ.

ಮಿಸ್ಟರ್ ಪಾಟೀಲ ಗಾಜಿನ ಮನೆಯಲ್ಲಿ ಕುಳಿತಿದ್ದೀಯಾ ಹುಷಾರ್: ನಿರಾಣಿ ವಾಗ್ದಾಳಿ

'ಭ್ರಷ್ಟಾಚಾರ ಮಾಡಿಲ್ಲ ಎಂದು ಆಣೆ ಮಾಡಲಿ'

ಪ್ರಜಾವಾಣಿ ವಾರ್ತೆ



ಮುರುಗೇಶ ನಿರಾಣಿ

ಬಾಗಲಕೋಟೆ: 'ರಾಜಕೀಯ ಜೀವನದಲ್ಲಿ ₹10 ಭ್ರಷ್ಟಾಚಾರ ಮಾಡಿಲ್ಲ. ಬೇರೆಯವರ ಹೆಸರಿನಲ್ಲಿ ಭೂಮಿ ತೆಗೆದುಕೊಂಡಿಲ್ಲ ಎಂದು ನಿಮ್ಮ ತಂದೆ–ತಾಯಿ ಮೇಲೆ ಪ್ರಮಾಣ ಮಾಡಿ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರಿಗೆ, ಮಾಜಿ ಸಚಿವ ಮುರುಗೇಶ ನಿರಾಣಿ ಸವಾಲು ಹಾಕಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮಿಸ್ಟರ್ ಪಾಟೀಲ, ಗಾಜಿನ ಮನೆಯಲ್ಲಿ ಕುಳಿತಿದ್ದೀಯಾ ಹುಷಾರ್. ಕೆಐಎಡಿಬಿಗೆ ಡಮ್ಮಿ ಹೆಸರಿನಲ್ಲಿ ಭೂಮಿ ಖರೀದಿಸಿದ್ದಿಯಾ. ನಿನ್ನ ತಾಟಿನಲ್ಲಿ ಹೆಗ್ಗಣ ಬಿದ್ದಿದೆ. ನಿನ್ನ ಯೋಗ್ಯತೆ ಏನಿದೆ ನೋಡಿಕೊ. ಬಾಗಲಕೋಟೆ, ವಿಜಯಪುರ ಜಿಲ್ಲೆಗೆ ನನ್ನ ಕೊಡುಗೆ ಏನು ಎಂಬುದು ಜನರ ಮುಂದಿದೆ. ಜಿಲ್ಲೆ, ಕರ್ನಾಟಕಕ್ಕೆ ನಿನ್ನ ಕೊಡುಗೆ ಏನಿದೆ ಹೇಳು' ಎಂದು ಏಕವಚನದಲ್ಲಿ ಪ್ರಶ್ನಿಸಿದರು.


'ಹಿರಿಯರು ಕಟ್ಟಿ ಬೆಳೆಸಿದ ಬಿಎಲ್‌ಡಿಇ ಸಂಸ್ಥೆಯೆಂಬ ಹುತ್ತದಲ್ಲಿ ಹಾವಾಗಿ ಸೇರಿದ್ದೀಯ. ತಾಕತ್ತಿದ್ದರೆ ಆ ಸಂಸ್ಥೆಯಿಂದ ಹೊರಗಡೆ ಬಂದು ಒಂದು ಸಂಸ್ಥೆ, ಕೈಗಾರಿಕೆ ಕಟ್ಟಿ ತೋರಿಸು. ಗೌಡಕಿಯ ದರ್ಪ, ಅಧಿಕಾರದ ದರ್ಪ ನಮ್ಮ ಮುಂದೆ ತೋರಿಸಬೇಡ. ನೀನೇ ಅಧಿಕಾರದಲ್ಲಿರುವೆ. ಹಗರಣ ಮಾಡಿದ್ದರೆ, ದಾಖಲೆಗಳ ಸಮೇತ ತೋರಿಸು' ಎಂದು ವಾಗ್ದಾಳಿ ನಡೆಸಿದರು.

'ನೀರಾವರಿ, ಕೈಗಾರಿಕೆ ಸಚಿವರಾಗಿ ಭೂಮಿಯನ್ನು ಯಾರಿಗೆ ನೀವು ಕೊಟ್ಟಿದ್ದೀರಿ. ಬೇರೆಯವರ ಹೆಸರಿನಲ್ಲಿ ನಿಮ್ಮ ಭೂಮಿಯನ್ನೇ ನೀಡಿರುವುದನ್ನು ದಾಖಲೆಗಳ ಸಮೇತ ಜನರ ಮುಂದೆ ಎಲ್ಲವನ್ನೂ ಬಿಚ್ಚಿಡುತ್ತೇನೆ' ಎಂದರು.

'ವಿಜಯಪುರ ಜಿಲ್ಲೆಯ ಕಾರಜೋಳ ಬಳಿ 'ಬಸವೇಶ್ವರ ಸಕ್ಕರೆ ಕಾರ್ಖಾನೆ ಮಾಡುತ್ತೇನೆ' ಎಂದು ಕಡಿಮೆ ಬೆಲೆಗೆ ಭೂಮಿ ಪಡೆದು ತಮಿಳುನಾಡು ಕಂಪನಿಗೆ ಮಾರಾಟ ಮಾಡಿದಿರಿ. ಫ್ಯಾಕ್ಟರಿ ಕಟ್ಟಲು ಆಗಲಿಲ್ಲ. ನಿನಗಿಂತ 15 ವರ್ಷ ಮೊದಲೇ ಕೈಗಾರಿಕೆ ಸಚಿವನಾಗಿದ್ದೇನೆ. 'ದನ ಕಾಯೋನು' ಎಂದು ಟೀಕೆ ಮಾಡಿದ್ದೀರಿ. ನನಗೂ ಅಂತಹ ಪದಗಳು ಗೊತ್ತಿವೆ. ಆದರೆ ಬಳಸುವುದಿಲ್ಲ' ಎಂದರು.

'ರಾಜ್ಯಪಾಲರೇ ಪ್ರಾಸಿಕ್ಯೂಷನ್‌ಗೆ ಯಾವುದೇ ಅರ್ಜಿ ಬಾಕಿ ಇಲ್ಲ ಎಂದಿದ್ದಾರೆ. ಆದರೂ, ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ಸಂದರ್ಭದಲ್ಲಿ ಸಿದ್ಧಪಡಿಸಿದ ವಿಡಿಯೊಕ್ಕೆ ಸಂಬಂಧಿಸಿದಂತೆ ಸುಳ್ಳು ಆರೋಪ ಮಾಡುತ್ತಿದ್ದಾರೆ. ಐದು ನಿಮಿಷದ ಕಿರುಚಿತ್ರಕ್ಕೆ ₹4 ಕೋಟಿ ನೀಡಲು ಅಧಿಕಾರಿಗಳು ಮುಂದಾಗಿದ್ದರು. ನನ್ನ ಗಮನಕ್ಕೆ ಬರುತ್ತಿದ್ದಂತೆಯೇ ತಡೆದು, ಸರ್ಕಾರಕ್ಕಾಗುತ್ತಿದ್ದ ನಷ್ಟ ತಡೆದಿದ್ದೇನೆ' ಎಂದು ನಿರಾಣಿ ಹೇಳಿದರು.

ನಿರಾಣಿ ನಿನ್ನ ಸತ್ಯಾಂಶ ಬಿಚ್ಚಿಡುತ್ತೇನೆ: ಸಚಿವ ಎಂ.ಬಿ.ಪಾಟೀಲ



ವಿಜಯಪುರ: 'ಮಿಸ್ಟರ್ ನಿರಾಣಿ ನನ್ನ ಸಂಸ್ಥೆ ಮತ್ತು ನನ್ನ ಕುರಿತು ಏಕವಚನದಲ್ಲಿ ಕೆಟ್ಟ ಭಾಷೆ ಬಳಸಿದ್ದು, ನಾನು ವಿಜಯಪುರ ಜಿಲ್ಲೆಯವ. ಇಂತಹ ಎಲ್ಲ ಭಾಷೆಗಳು ನನಗೂ ಬರುತ್ತವೆ. ನಾನೇ ಸ್ವತಃ ಬಾಗಲಕೋಟೆಗೆ ಬಂದು ನಿನ್ನ ಭಾಷೆಯಲ್ಲಿಯೇ ನಿನ್ನ ಸತ್ಯಾಂಶವನ್ನು ಬಿಚ್ಚಿಡುತ್ತೇನೆ' ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ತಿರುಗೇಟು ನೀಡಿದ್ದಾರೆ.

ಬಾಗಲಕೋಟೆಯಲ್ಲಿ ಭಾನುವಾರ ಮಾಜಿ ಸಚಿವ ಮುರುಗೇಶ ನಿರಾಣಿ ಪತ್ರಿಕಾಗೋಷ್ಠಿ ನಡೆಸಿ ತಮ್ಮ ವಿರುದ್ಧ ಮಾಡಿರುವ ಆರೋಪಗಳಿಗೆ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಸಚಿವರು, 'ಅನವಶ್ಯಕವಾಗಿ ನನ್ನ ತಂಟೆಗೆ ಬಂದವರಿಗೆ ಹಿಂದೆಯೂ ಬಿಟ್ಟಿಲ್ಲ, ಮುಂದೆಯೂ ಬಿಡುವುದಿಲ್ಲ. ಅದರ ಕಹಿ ಅನುಭವ ಈ ಹಿಂದೆ ನಿನಗೆ ಆಗಿದೆ ಎನ್ನುವುದನ್ನು ನೆನಪಿಸುತ್ತೇನೆ' ಎಂದಿದ್ದಾರೆ.

'ಮಾಜಿ ಸಚಿವ ಮುರುಗೇಶ ನಿರಾಣಿಗೆ 'ದನ ಕಾಯುವವನು' ಎಂಬ ಶಬ್ದವನ್ನು ನಾನು ಎಲ್ಲಿಯೂ ಬಳಸಿಲ್ಲ ಮತ್ತು ಏಕವಚನದಲ್ಲೂ ಮಾತನಾಡಿಲ್ಲ. ಅಷ್ಟಕ್ಕೂ, ದನ ಕಾಯುವುದು ಗೌರವದ ಕಾಯಕ. ದನಕಾಯುವವರನ್ನು ನಾನು ಗೌರವಿಸುತ್ತೇನೆ' ಎಂದು ಹೇಳಿದ್ದಾರೆ.

'ಸಿದ್ದಾರ್ಥ ಟ್ರಸ್ಟ್‌ಗೆ ಯಾವುದೇ ರಿಯಾಯಿತಿ ಇಲ್ಲದೆ ಸಿಎ ನಿವೇಶನ ನೀಡಿದ್ದರೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಹೆಸರನ್ನು ಅನವಶ್ಯಕವಾಗಿ ಎಳೆದು ತಂದು ಹಗರಣವಾಗಿದೆ ಎಂದು ಬಿಜೆಪಿಯವರು ಬಿಂಬಿಸುತ್ತಿರುವುದಕ್ಕೆ ಪ್ರತಿಯಾಗಿ ನಾನು ಪತ್ರಿಕಾಗೋಷ್ಠಿ ನಡೆಸಿದ್ದೆ. ಬಿಜೆಪಿ ಅವಧಿಯಲ್ಲಿ ಬಿಜೆಪಿ ನಾಯಕರು ಯಾರು, ಯಾರು ಎಷ್ಟೆಷ್ಟು ಲಾಭ ಪಡೆದಿದ್ದಾರೆ ಎಂಬುದನ್ನು ತಿಳಿಸುವುದು ನನ್ನ ಉದ್ದೇಶವಾಗಿತ್ತು. ಈ ಸಂದರ್ಭದಲ್ಲಿ ಮಿ. ನಿರಾಣಿ ತನ್ನ ಶಿಕ್ಷಣ ಸಂಸ್ಥೆ ಮತ್ತು ಸಕ್ಕರೆ ಕಾರ್ಖಾನೆಗೆ ಪಡೆದಿರುವ ಲಾಭದ ಮಾಹಿತಿಯನ್ನು ನೀಡಿದ್ದೇನೆ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ದಾಖಲೆ ಪರಿಶೀಲನೆ ಬಳಿಕ ದರ್ಶನ್‌ಗೆ 'ಸರ್ಜಿಕಲ್ ಚೇರ್'

ಪ್ರಜಾವಾಣಿ ವಾರ್ತೆ



ದರ್ಶನ್

ಬಳ್ಳಾರಿ: ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್‌ಗೆ 'ಸರ್ಜಿಕಲ್ ಚೇರ್' ನೀಡಲು ಕಾರಾಗೃಹ ಇಲಾಖೆ ಒಪ್ಪಿದೆಯಾದರೂ ದಾಖಲೆ ಪರಿಶೀಲನೆ ಬಳಿಕ ತೀರ್ಮಾನ ಕೈಗೊಳ್ಳಲಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ದರ್ಶನ್ ಅವರಿಗೆ ಬೆನ್ನು ಮೂಳೆ (ಎಲ್ -5) ನಲ್ಲಿ ಸಮಸ್ಯೆ ಇರುವ ಬಗ್ಗೆ ಮತ್ತು ಹಿಂದೊಮ್ಮೆ ಆಗಿದ್ದ ಕೈ ಮುರಿತದ ನೋವು ಇನ್ನೂ ಇರುವ ಬಗ್ಗೆ ಕುಟುಂಬಸ್ಥರು ಬಳ್ಳಾರಿ ಕೇಂದ್ರ ಕಾರಾಗೃಹದ ಅಧಿಕಾರಿಗಳಿಗೆ ದಾಖಲೆಗಳನ್ನು ಸಲ್ಲಿಸಿ, ಶೌಚಕ್ಕೆ 'ಸರ್ಜಿಕಲ್ ಚೇರ್' ಒದಗಿಸಿಕೊಡುವಂತೆ ಮನವಿ ಮಾಡಿದ್ದಾರೆ. ಅದರ ಪರಿಶೀಲನೆ ಬೆಂಗಳೂರಿನಲ್ಲಿ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

'ಕೆಲವು ಜೈಲುಗಳಲ್ಲಿ 'ವೆಸ್ಟರ್ನ್ ಕಮೋಡ್'(ಪಾಶ್ಚಾತ್ಯ ಮಾದರಿ ಶೌಚಾಲಯ) ಇದೆ. ಇಲ್ಲಿಯೂ ಒದಗಿಸಬಹುದು. ಆದರೆ, ಜೈಲಿನ ಎಲ್ಲ ಕೈದಿಗಳು 'ಇಂಡಿಯನ್ ಕಮೋಡ್' ಅನ್ನೇ ಬಳಸುತ್ತಿರುವಾಗ ದರ್ಶನ್ ಗೆ ಮಾತ್ರ ವೆಸ್ಟರ್ನ್ ಕಮೋಡ್ ನೀಡುವುದು ತಾರತಮ್ಯವಾಗಲಿದೆ. ಹಾಗಾಗಿ ವೆಸ್ಟರ್ನ್ ಕಮೋಡ್ ವ್ಯವಸ್ಥೆ ಒದಗಿಸುತ್ತಿಲ್ಲ' ಎಂದು ಕಾರಾಗೃಹ ಇಲಾಖೆಯ ಉತ್ತರ ವಲಯ ಉಪಮಹಾ ನಿರೀಕ್ಷಕ ಟಿ. ಪಿ ಶೇಷ 'ಪ್ರಜಾವಾಣಿ'ಗೆ ತಿಳಿಸಿದರು.

ಇನ್ನೊಂದೆಡೆ, ಹೊರ ವಿಶೇಷ ಭದ್ರತಾ ಕೊಠಡಿಯಲ್ಲಿ ಪ್ರತ್ಯೇಕವಾಗಿರುವ ದರ್ಶನ್ ತಮ್ಮೊಂದಿಗೆ ಮಾತನಾಡಲು ಯಾರೂ ಇಲ್ಲದಿರುವ ಬಗ್ಗೆ ಸಿಬ್ಬಂದಿಯೊಂದಿಗೆ ಬೇಸರ ತೋಡಿಕೊಂಡಿದ್ದಾರೆ ಎನ್ನಲಾಗಿದೆ.

ಕೈದಿಗಳಿಂದ ಪ್ರತಿಭಟನೆ ನಡೆದಿಲ್ಲ: ಡಿಐಜಿ

ಬೆಳಗಾವಿ: 'ತಾಲ್ಲೂಕಿನ ಹಿಂಡಲಗಾದ ಕೇಂದ್ರೀಯ ಕಾರಾಗೃಹದಲ್ಲಿ ಇರುವ ಕೈದಿಗಳು ತಮಗೆ ಬೀಡಿ, ಸಿಗರೇಟ್, ತಂಬಾಕು ನೀಡುವಂತೆ ಪ್ರತಿಭಟನೆ ನಡೆಸಿದ್ದಾರೆ. ಅವುಗಳನ್ನು ಕೊಡುವವರೆಗೆ ಉಪಾಹಾರ ಸೇವಿಸುವುದಿಲ್ಲ ಎಂದು ಪಟ್ಟು ಹಿಡಿದಿದ್ದಾರೆ' ಎಂಬ ಮಾಹಿತಿ ಭಾನುವಾರ ಸಾಮಾಜಿಕ ಜಾಲತಾಣಗಳಲ್ಲಿ ಇಡೀ ದಿನ ಹರಿದಾಡಿತು.

'ಬೆಂಗಳೂರಿನ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿ ದರ್ಶನ್ ಸಿಗರೇಟ್ ಸೇದಿರುವ ಹಿನ್ನೆಲೆಯಲ್ಲಿ ಇಲ್ಲಿಯೂ ಅವನ್ನೆಲ್ಲ ಒದಗಿಸಬೇಕು' ಎಂದು ಕೈದಿಗಳು ಒತ್ತಾಯಿಸಿದ್ದರು ಎನ್ನಲಾಗಿದೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಕಾರಾಗೃಹ ಇಲಾಖೆ ಉತ್ತರ ವಲಯದ ಡಿಐಜಿ ಟಿ.ಪಿ.ಶೇಷ, 'ಬೀಡಿ, ಸಿಗರೇಟ್, ತಂಬಾಕು ನೀಡುವಂತೆ ಹಿಂಡಲಗಾ ಜೈಲಿನಲ್ಲಿ ಯಾರೂ ಪ್ರತಿಭಟನೆ ನಡೆಸಿಲ್ಲ. ಉಪಾಹಾರ ಸೇವನೆಯನ್ನೂ ತಿರಸ್ಕರಿಸಿಲ್ಲ. ವಾತಾವರಣ ಎಂದಿನಂತಿದೆ' ಎಂದು ಸ್ಪಷ್ಟಪಡಿಸಿದರು.

ಅತ್ಯಾಚಾರದಂತ ಸೂಕ್ಷ್ಮ ಕೃತ್ಯಗಳಲ್ಲೂ ನ್ಯಾಯದಾನ ವಿಳಂಬ – ದ್ರೌಪದಿ ಮುರ್ಮು ವಿಷಾದ

‘ವಿಚಾರಣೆ ಮುಂದೂಡಿಕೆ ಸಂಸ್ಕೃತಿ ತಪ್ಪಿಸಿ’

ನವದೆಹಲಿ (ಪಿಟಿಐ): ‘ತ್ವರಿತಗತಿಯಲ್ಲಿ ನ್ಯಾಯ ಒದಗಿಸಲು, ಕೋರ್ಟ್‌ಗಳಲ್ಲಿರುವ ವಿಚಾರಣೆಯನ್ನು ‘ಮುಂದೂಡುವ ಸಂಸ್ಕೃತಿ’ಯನ್ನು ಬದಲಿಸಬೇಕಾದ ಅಗತ್ಯವಿದೆ’ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾನುವಾರ ಪ್ರತಿಪಾದಿಸಿದರು.

‘ಅತ್ಯಾಚಾರದಂತಹ ಗಂಭೀರ ಸ್ವರೂಪದ ಪ್ರಕರಣಗಳಲ್ಲೂ ಈಗ ನ್ಯಾಯದಾನ ವಿಳಂಬ ಆಗುತ್ತಿದೆ. ಇದರಿಂದ, ಜನಸಾಮಾನ್ಯರು ನ್ಯಾಯಾಂಗ ಪ್ರಕ್ರಿಯೆಗಳಲ್ಲಿ ಸೂಕ್ಷ್ಮತೆಯ ಕೊರತೆ ಇದೆ ಎಂದು ಭಾವಿಸುವಂತಾಗಿದೆ’ ಎಂದು ಅಭಿಪ್ರಾಯಪಟ್ಟರು.

ಜಿಲ್ಲಾ ನ್ಯಾಯಾಂಗದ ಎರಡು ದಿನದ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾನುವಾರ ಇಲ್ಲಿ ಸಮಾರೋಪ ಭಾಷಣ ಮಾಡಿದ ಅವರು, ‘ಕೋರ್ಟ್‌ಗಳಲ್ಲಿ ದಾವೆಗಳು ದೀರ್ಘಕಾಲ ಬಾಕಿ ಉಳಿದಿರುವುದು ನಮಗೆಲ್ಲರಿಗೂ ಅತಿದೊಡ್ಡ ಸವಾಲಾಗಿದೆ’ ಎಂದು ಹೇಳಿದರು.

ಅತ್ಯಾಚಾರದಂತಹ ಕೃತ್ಯಗಳಲ್ಲಿ ದೀರ್ಘಕಾಲದ ನಂತರ ನ್ಯಾಯ ದೊರೆತರೆ ನ್ಯಾಯಾಂಗಕ್ಕೆ ಸೂಕ್ಷ್ಮತೆಯ ಕೊರತೆ ಇದೆ ಎಂದು ಭಾವನೆ ಮೂಡುತ್ತದೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಎಲ್ಲ ಭಾಗಿದಾರರೂ ಪ್ರಾಮುಖ್ಯತೆ ನೀಡಬೇಕು ಎಂದರು.

ಕೆಲ ಪ್ರಕರಣಗಳಲ್ಲಿ ಸಂಪನ್ಮೂಲ ಉಳ್ಳವರು ಅಪರಾಧ ಎಸಗಿಯೂ ಸಮಾಜದಲ್ಲಿ ಮುಕ್ತ ಹಾಗೂ ನಿರ್ಭೀತಿಯಿಂದ ಓಡಾಡಿಕೊಂಡಿರುತ್ತಾರೆ. ಆದರೆ, ಅಪರಾಧದಿಂದ ನರಳುವವರು, ತಾವೇ ಅಪರಾಧ ಎಸಗಿದ ನೋವಿನಲ್ಲಿ ಬಳಲುತ್ತಾರೆ. ಗ್ರಾಮೀಣ ಭಾಗದ ಬಡಜನರು ಕೋರ್ಟ್‌ಗೆ ಹೋಗಲೂ ಹೆದರುತ್ತಾರೆ ಎಂದು ಹೇಳಿದರು.



> ನ್ಯಾಯಾಂಗ ವ್ಯವಸ್ಥೆಯಿಂದಾಗಿ ಸಾಮಾನ್ಯ ಜನರಲ್ಲಿ ಮಾನಸಿಕ ಒತ್ತಡ ಹೆಚ್ಚಾಗುತ್ತಿದೆ
> **ದ್ರೌಪದಿ ಮುರ್ಮು,** ರಾಷ್ಟ್ರಪತಿ

ಇಂತಹ ಸ್ಥಿತಿಯನ್ನು ತಪ್ಪಿಸಲು ವಿಚಾರಣೆ ಮುಂದೂಡುವ ಸಂಸ್ಕೃತಿಯನ್ನು ಬದಲಿಸಬೇಕು. ಇದಕ್ಕಾಗಿ ಅಗತ್ಯವಿರುವ ಕ್ರಮಗಳನ್ನು ವಹಿಸಬೇಕು. ನ್ಯಾಯರಕ್ಷಿಸುವ ಹೊಣೆಗಾರಿಕೆ ಎಲ್ಲ ನ್ಯಾಯಮೂರ್ತಿಗಳು ಮತ್ತು ನ್ಯಾಯಾಧೀಶರ ಮೇಲಿದೆ ಎಂದರು.

ವಿಚಾರಣೆ ಮುಂದೂಡುವ ಪ್ರವೃತ್ತಿಯನ್ನು ‘ಕಪ್ಪುಕೋಟಿನ ಬೇನೆ’ ಎಂದೂ ಬಣ್ಣಿಸಿದ ರಾಷ್ಟ್ರಪತಿ, ಈ ಕುರಿತು ಅಧ್ಯಯನ ನಡೆಯಬೇಕಾಗಿದೆ ಎಂದು ಹೇಳಿದರು.

ಇದೇ ವೇಳೆ ದೀರ್ಘಕಾಲದಿಂದ ಬಾಕಿ ಉಳಿದಿರುವ ವ್ಯಾಜ್ಯಗಳನ್ನು ತ್ವರಿತಗತಿಯಲ್ಲಿ ಇತ್ಯರ್ಥಪಡಿಸಲು ವಿಶೇಷ ಲೋಕ ಅದಾಲತ್ ಸಪ್ತಾಹಗಳನ್ನು ನಿಯಮಿತವಾಗಿ ಆಯೋಜಿಸಬೇಕು ಎಂದು ಸಲಹೆ ಮಾಡಿದರು.

ರಾಷ್ಟ್ರೀಯ ಮಟ್ಟದಲ್ಲಿ ನೇಮಕಾತಿ –ಸಿಜೆಐ ಸಲಹೆ

ನವದೆಹಲಿ (ಪಿಟಿಐ): ನ್ಯಾಯಾಂಗ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರಾಷ್ಟ್ರ ಮಟ್ಟದಲ್ಲಿ ನೇಮಕಾತಿಗೆ ಚಿಂತನೆ ನಡೆಯಬೇಕು ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹೇಳಿದರು.

ನ್ಯಾಯಾಂಗ ಕ್ಷೇತ್ರದ ನೇಮಕಾತಿ ಪ್ರಕ್ರಿಯೆಯನ್ನು ಪ್ರಾದೇಶಿಕತೆಯ ಗೋಡೆ ಮತ್ತು ರಾಜ್ಯ ಕೇಂದ್ರಿತ ಆಯ್ಕೆ ಪ್ರಕ್ರಿಯೆಗಳಿಂದ ಹೊರತರಲು ಇದು ಸಕಾಲ ಎಂದು ಅವರು ಹೇಳಿದರು.

ಜಿಲ್ಲಾ ನ್ಯಾಯಾಂಗ ಕುರಿತ ರಾಷ್ಟ್ರೀಯ ಸಮ್ಮೇಳನದ ಸಮಾರೋಪದಲ್ಲಿ ಮಾತನಾಡಿದ ಅವರು, ಪ್ರಕರಣಗಳು ದೀರ್ಘಕಾಲ ಬಾಕಿ ಇರುವುದನ್ನು ತಪ್ಪಿಸಲು ಕೌಶಲಯುಕ್ತ ಅಭ್ಯರ್ಥಿಗಳನ್ನು ಸೆಳೆಯುವುದು ಪರಿಹಾರ. ಇದಕ್ಕೆ ಪೂರಕವಾಗಿ ದೇಶವ್ಯಾಪಿಗೆ ಅನ್ವಯಿಸಿ ನೇಮಕಾತಿ ಪ್ರಕ್ರಿಯೆ ನಡೆಸಬೇಕು. ಸಕಾಲದಲ್ಲಿ ಖಾಲಿ ಹುದ್ದೆ ಭರ್ತಿ ಮಾಡಬೇಕು’ ಎಂದರು.

ಇದೇ ವೇಳೆ ‘ಜಿಲ್ಲಾಮಟ್ಟದ ಕೋರ್ಟ್‌ಗಳಲ್ಲಿನ ಮೂಲಸೌಕರ್ಯಗಳಲ್ಲಿ ಶೇ 6.7ರಷ್ಟು ಮಾತ್ರ ಮಹಿಳಾ ಸ್ನೇಹಿಯಾಗಿದೆ. ಯಾವುದೇ ಪ್ರಶ್ನೆಗೆ ಆಸ್ಪದವಿಲ್ಲದಂತೆ ಈ ಸ್ಥಿತಿಯನ್ನು ಬದಲಿಸಬೇಕಿದೆ ಎಂದು ಹೇಳಿದರು.

ಕೋರ್ಟ್‌ನಲ್ಲಿ ವೈದ್ಯಕೀಯ ಸೌಲಭ್ಯ, ಇ–ಸೇವಾ ಕೇಂದ್ರಗಳ ಸ್ಥಾಪನೆ, ವಿಡಿಯೊ ಕಾನ್ಫರೆನ್ಸ್ ಸೌಲಭ್ಯ ಒದಗಿಸಬೇಕು. ಇದು, ನ್ಯಾಯದಾನದ ಪ್ರಮಾಣವನ್ನು ಉತ್ತಮಪಡಿಸಲಿದೆ ಎಂದು ಸಲಹೆ ಮಾಡಿದರು.

ಕೋರ್ಟ್‌ಗಳಲ್ಲಿ ಸುರಕ್ಷತೆಯ ವಾತಾವರಣ ಕಲ್ಪಿಸಬೇಕು. ಮುಖ್ಯವಾಗಿ ಮಹಿಳೆಯರು, ನಿರ್ಲಕ್ಷಿತ ವರ್ಗ, ಅಂಗವಿಕಲರು, ಪರಿಶಿಷ್ಟರು, ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಉತ್ತಮ ವಾತಾವರಣ ಕಲ್ಪಿಸುವುದು ಅಗತ್ಯ ಎಂದು ಪ್ರತಿಪಾದಿಸಿದರು.

ಹೊಸ ಲಾಂಛನ ಅನಾವರಣ

ನವದೆಹಲಿ: ಸುಪ್ರೀಂ ಕೋರ್ಟ್‌ನ 75ನೇ ವಾರ್ಷಿಕೋತ್ಸವದ ನಿಮಿತ್ತ ಹೊಸ ಧ್ವಜ ಮತ್ತು ಲಾಂಛನವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾನುವಾರ ಇಲ್ಲಿ ಅನಾವರಣಗೊಳಿಸಿದರು.

ನ್ಯಾಯ ಮತ್ತು ಪ್ರಜಾಪ್ರಭುತ್ವವನ್ನು ಬಿಂಬಿಸುವ ಈ ಧ್ವಜ ಮತ್ತು ಲಾಂಛನವು ರಾಷ್ಟ್ರೀಯ ಫ್ಯಾಷನ್ ಟೆಕ್ನಾಲಜಿ ಸಂಸ್ಥೆಯ (ಎನ್‌ಐಎಫ್‌ಟಿ) ಪರಿಕಲ್ಪನೆಯಾಗಿದೆ. ನೂತನ ಧ್ವಜ ಮತ್ತು ಲಾಂಛನವು ಅಶೋಕ ಚಕ್ರ, ಸುಪ್ರೀಂ ಕೋರ್ಟ್‌ನ ಕಟ್ಟಡ ಮತ್ತು ಸಂವಿಧಾನದ ಚಿತ್ರವನ್ನು ಒಳಗೊಂಡಿದೆ

‘ಗಾಡ್ಗೀಳ್, ಕಸ್ತೂರಿರಂಗನ್ ವರದಿಗಳು ವಾಸ್ತವಿಕವಾಗಿಲ್ಲ’

ವಯನಾಡ್ ಭೂಕುಸಿತ: ಪಿಣರಾಯಿ ವಿಜಯನ್ ಹೇಳಿಕೆ

ತಿರುವನಂತಪುರ(ಪಿಟಿಐ): ‘ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಸಂಬಂಧಿಸಿ, ತಜ್ಞರಾದ ಮಾಧವ ಗಾಡ್ಗೀಳ್ ಮತ್ತು ಕೆ.ಕಸ್ತೂರಿರಂಗನ್ ನೇತೃತ್ವದ ಸಮಿತಿಗಳು ನೀಡಿರುವ ಶಿಫಾರಸುಗಳು ವಾಸ್ತವಿಕವಾಗಿಲ್ಲ. ಹೀಗಾಗಿ ವಯನಾಡ್ ಭೂಕುಸಿತಕ್ಕೆ ಸಂಬಂಧಿಸಿ ರಾಜ್ಯವು ಕೇಂದ್ರದಿಂದ ಉತ್ತಮ ಪರಿಹಾರ ನಿರೀಕ್ಷಿಸುತ್ತದೆ’ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ.

ವಯನಾಡ್‌ನಲ್ಲಿ ಸಂಭವಿಸಿದ ಭೂಕುಸಿತಗಳಿಗೆ ಸಂಬಂಧಿಸಿ ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿರುವ ಅವರು, ‘ಪಶ್ಚಿಮ ಘಟ್ಟಗಳ ಕುರಿತು ವರದಿ ನೀಡುವ ಸಂದರ್ಭದಲ್ಲಿ ಈ ತಜ್ಞರ ನೇತೃತ್ವದ ಸಮಿತಿಗಳು, ರಾಜ್ಯದಲ್ಲಿನ ಸಾಮಾಜಿಕ ನಿರೀಕ್ಷೆಗಳು ಹಾಗೂ ವಾಸ್ತವ ಸಂಗತಿಗಳನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ’ ಎಂದಿದ್ದಾರೆ.

‘ಈ ಎರಡು ಸಮಿತಿಗಳನ್ನು ನೇಮಕ ಮಾಡಿದ ಸಚಿವಾಲಯಗಳು/ಇಲಾಖೆಗಳೇ ಅವುಗಳು ಸಲ್ಲಿಸಿದ್ದ ವರದಿಗಳನ್ನು ಅಂಗೀಕರಿಸಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದಾರೆ.

‘ಕೆಲವರು ಶತಮಾನಗಳಿಂದಲೂ ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆ. ಅವರನ್ನು ಸಹ ಈ ಸಮಿತಿಗಳು ಪರಿಗಣನೆಗೆ ತೆಗೆದುಕೊಂಡಿಲ್ಲ. ಪ್ಲಾಂಟೇಷನ್‌ಗಳ ಮಾಲೀಕರು, ರಿಯಲ್ ಎಸ್ಟೇಟ್ ಉದ್ಯಮಿಗಳು ಅಥವಾ ಗಣಿಗಾರಿಕೆ ನಡೆಸುತ್ತಿರುವ ಶ್ರೀಮಂತರ ಜೊತೆ ಸಣ್ಣ ಹಾಗೂ ಅತಿಸಣ್ಣ ರೈತರನ್ನು ಹೋಲಿಕೆ ಮಾಡಲಾಗದು’ ಎಂದಿದ್ದಾರೆ.

‘ಪರಿಸರ ಸೂಕ್ಷ್ಮ ಪ್ರದೇಶಗಳ (ಇಎಸ್‌ಎ) ಕುರಿತು ಕೇಂದ್ರ ಸರ್ಕಾರ ಕರಡು ಅಧಿಸೂಚನೆ ಹೊರಡಿಸಿದೆ. ಈ ಕುರಿತು ಸಮಗ್ರ ಅಧ್ಯಯನ ನಡೆಸದೆ, ಈ ವರದಿಗಳನ್ನು ಆಧಾರವಾಗಿಟ್ಟುಕೊಂಡು ಅವಸರದಲ್ಲಿ ನಿಲುವು ತೆಗೆದುಕೊಳ್ಳುವ ಯಾವುದೇ ಅಪೇಕ್ಷೆ ನನ್ನ ಸರ್ಕಾರಕ್ಕೆ ಇಲ್ಲ’ ಎಂದು ಹೇಳಿದ್ದಾರೆ.

‘₹2 ಸಾವಿರ ಕೋಟಿ ಪರಿಹಾರಕ್ಕೆ ಬೇಡಿಕೆ’

ವಯನಾಡ್‌ನಲ್ಲಿ ಇತ್ತೀಚೆಗೆ ಹಿಂದೆಂದೂ ಸಂಭವಿಸದಷ್ಟು ಪ್ರಮಾಣದ ಹಾನಿ ಉಂಟಾಗಿದೆ. ಇದಕ್ಕಾಗಿ ₹ 2 ಸಾವಿರ ಕೋಟಿ ಪರಿಹಾರ ನೀಡುವಂತೆ ಮನವಿ ಮಾಡಲಾಗಿದ್ದು, ಕೇಂದ್ರ ಸರ್ಕಾರ ಉತ್ತಮ ನೆರವು ನೀಡುವ ಭರವಸೆ ಇದೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ.



ಪಿಣರಾಯಿ ವಿಜಯನ್

ಇತ್ತೀಚೆಗೆ ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ, ಈ ಕುರಿತು ಮನವಿ ಸಲ್ಲಿಸಲಾಗಿದ್ದು, ಅವರು ಕೂಡ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಹೇಳಿದ್ದಾರೆ.

ಕೇಂದ್ರದ ತಂಡವೊಂದು ರಾಜ್ಯಕ್ಕೆ ಶೀಘ್ರವೇ ಭೇಟಿ ನೀಡಲಿದೆ. ತಂಡವು ಹಾನಿ ಕುರಿತು ವರದಿ ಸಲ್ಲಿಸಿದ ನಂತರ, ಕೇಂದ್ರ ಸರ್ಕಾರ ಪರಿಹಾರ ಬಿಡುಗಡೆ ಮಾಡುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

‘ವಯನಾಡ್‌ನಲ್ಲಿನ ಭೂಕುಸಿತವನ್ನು ರಾಷ್ಟ್ರೀಯ ಅಥವಾ ತೀವ್ರ ಸ್ವರೂಪದ ಪ್ರಾಕೃತಿಕ ವಿಕೋಪ ಎಂಬುದಾಗಿ ಘೋಷಿಸಬೇಕು. ಅಂದಾಗ ಮಾತ್ರ ಎಲ್ಲ ಸಂಸದರು ತಲಾ ₹ 1 ಕೋಟಿ ಕೇರಳ ಪರಿಹಾರ ನಿಧಿಗೆ ದೇಣಿಗೆ ನೀಡಲು ಅವಕಾಶ ಸಿಗುತ್ತದೆ. ಇಲ್ಲದಿದ್ದರೆ, ಸ್ಥಳೀಯ ಸಂಸದರು ಮಾತ್ರ ನೆರವು ನೀಡಬೇಕಾಗುತ್ತದೆ’ ಎಂದು ಪಿಣರಾಯಿ ವಿಜಯನ್ ಹೇಳಿದ್ದಾರೆ.

ಮಳೆ: ಏಳು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’

ಬೆಂಗಳೂರು: ರಾಜ್ಯದ ಕರಾವಳಿ ಹಾಗೂ ಉತ್ತರ ಒಳನಾಡಿನ ಕೆಲವೆಡೆ ಸೋಮವಾರ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು ಏಳು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ಉತ್ತರ ಕನ್ನಡ, ಬೆಳಗಾವಿ, ಬಾಗಲಕೋಟೆ, ವಿಜಯಪುರ, ಯಾದಗಿರಿ, ಕಲಬುರಗಿ ಹಾಗೂ ಬೀದರ್ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ ಎಂದು ಇಲಾಖೆ ತಿಳಿಸಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್ *	124.80	124.36	15,220	15,027
ಹಾರಂಗಿ	2,859	2,858.64	2.390	2,179
ಕಬಿನಿ	2,284.00	2,283.69	9,201	7,350
ಹೇಮಾವತಿ	2,922	2,921.85	7,339	6,175
ಲಿಂಗನಮಕ್ಕಿ	1,819	1,817.50	17,710	12,638
ಸೂಪಾ (ಮೀ)	564	560.60	10,627	4,513.68
ಮಾಣಿ	595	590.27	1,831	-
ತುಂಗಭದ್ರಾ	1,633	1,630.73	40,107	13,475
ಮಲಪ್ರಭಾ	2,079.5	2,078.50	6,342	5,544
ಘಟಪ್ರಭಾ	2175	2,174.16	8,845	5,633
ಭದ್ರಾ *	186	182.11	7,918	5,569
ಆಲಮಟ್ಟಿ (ಮೀ)	519.6	519.25	1,75,000	176,651
ನಾರಾಯಣಪುರ (ಮೀ)	492.25	490.99	1,70,000	1,40,750

* ನೆಲಮಟ್ಟದಿಂದ

‘ಶಿವಾಜಿ ಗುಣಗಾನ, ಔರಂಗಜೇಬ್ ಅನುಕರಣೆ’

ಶಿವಾಜಿ ಪ್ರತಿಮೆ ಕುಸಿದ ಪ್ರಕರಣ: ಉದ್ಧವ್ ಠಾಕ್ರೆ ವಿರುದ್ಧ ಸಿ.ಎಂ ಏಕನಾಥ ಶಿಂಧೆ ವಾಗ್ದಾಳಿ

ಮುಂಬೈ (ಪಿಟಿಐ): ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ವಿರುದ್ಧ ಭಾನುವಾರ ಟೀಕಾ ಪ್ರಹಾರ ನಡೆಸಿದ್ದಾರೆ.

‘ಛತ್ರಪತ್ರಿ ಶಿವಾಜಿ ಮಹಾರಾಜರ ಹೆಸರಿನಲ್ಲಿ ರಾಜಕಾರಣ ಮಾಡುವ ಉದ್ಧವ್ ಠಾಕ್ರೆ, ಔರಂಗಜೇಬ್ ಮತ್ತು ಅಫ್ಜಲ್ ಖಾನ್ ಕೃತ್ಯಗಳನ್ನು ಅನುಕರಣೆ ಮಾಡುತ್ತಿದ್ದಾರೆ’ ಎಂದು ಶಿಂದೆ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಅವರ ಸ್ಥಾನ ಏನು ಎಂಬುದನ್ನು ರಾಜ್ಯದ ಜನರು ಎರಡು ವರ್ಷಗಳಹಿಂದೆಯೇತೋರಿಸಿದ್ದಾರೆ.ಈಗ,ವಿಪಕ್ಷಗಳಿಗೆ ಮಹಾರಾಷ್ಟ್ರ ಜನರು ಮತ್ತೊಮ್ಮೆ ಪಾಠ ಕಲಿಸಲಿದ್ದಾರೆ’ ಎಂದರು.

‘ನೆರೆಯ ಕರ್ನಾಟಕದಲ್ಲಿ ಎರಡು ಜೆಸಿಬಿಗಳನ್ನು ಬಳಸಿ, ಛತ್ರಪತಿ ಶಿವಾಜಿ ಮಹಾಜರಾಜರ ಪ್ರತಿಮೆಯನ್ನು ತೆರವು ಮಾಡಲಾಗಿದೆ’ ಎಂದರು.

‘ದುರದೃಷ್ಟಕರ’: ಶಿವಾಜಿ ಮಹಾರಾಜರ ಪ್ರತಿಮೆ ಕುಸಿದಿರುವುದನ್ನು ಮುಂದಿಟ್ಟುಕೊಂಡು ಎಂವಿಎ ರಾಜಕೀಯ ಮಾಡುತ್ತಿರುವುದು ದುರದೃಷ್ಟಕರ ಎಂದು ಎನ್‌ಸಿಪಿ–ಅಜಿತ್ ಪವಾರ್ ಬಣ ಹೇಳಿದೆ.

‘ಈ ವಿಚಾರವಾಗಿ ಪ್ರಧಾನಿ ಮೋದಿ, ಮುಖ್ಯಮಂತ್ರಿ ಶಿಂದೆ, ಇಬ್ಬರು ಡಿಸಿಎಂಗಳು ಕ್ಷಮೆ ಯಾಚಿಸಿದ್ದಾರೆ. ಈ ಕುರಿತು ರಾಜಕೀಯ ಮಾಡುವುದು ಸರಿಯಲ್ಲ’ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸುನಿಲ್ ತತ್ಕರೆ ಹೇಳಿದ್ದಾರೆ.

ಶಕ್ತಿ ಪ್ರದರ್ಶನ

ಒಂದನೇ ಪುಟದಿಂದ...

‘ಶಿವಾಜಿ ಮಹಾರಾಜರ ಪ್ರತಿಮೆ ಜೋರಾಗಿ ಬೀಸಿದ ಗಾಳಿಯಿಂದಾಗಿ ಕುಸಿದಿದೆ ಎಂದು ಮುಖ್ಯಮಂತ್ರಿ ಏಕನಾಥ ಶಿಂದೆ ಹೇಳಿದ್ದಾರೆ. ಗೇಟ್ ವೇ ಆಫ್‌ಇಂಡಿಯಾ ಎದುರು ಹಲವು ವರ್ಷಗಳಿಂದ ಪ್ರತಿಮೆ ಇದೆ. ರಾಜ್ಯದ ಹಲವೆಡೆಯ ಪ್ರತಿಮೆಗಳು ಈಗಲೂ ಸದೃಢವಾಗಿವೆ’ ಎಂದರು.

ನೆಹರೂ ಲೇಖನ ಉಲ್ಲೇಖ: ಕಾಂಗ್ರೆಸ್ ಕ್ಷಮೆ ಯಾಚಿಸುವುದೇ?

‘ಛತ್ರಪತಿ ಶಿವಾಜಿ ಮಹಾರಾಜ್ ಸೂರತ್ ನಗರ ಲೂಟಿ ಮಾಡಿದ್ದರು ಎಂಬುದಾಗಿ ಪಂಡಿತ ಜವಾಹರಲಾಲ್ ನೆಹರೂ ಅವರು ತಮ್ಮ ‘ದಿ ಡಿಸ್ಕವರಿ ಆಫ್ ಇಂಡಿಯಾ’ ಕೃತಿಯಲ್ಲಿ ಬರೆದಿದ್ದಾರೆ. ಇದಕ್ಕಾಗಿ ಕಾಂಗ್ರೆಸ್ ಪಕ್ಷ ಕ್ಷಮೆ ಕೇಳುವುದೇ’ ಎಂದು ಬಿಜೆಪಿ ಭಾನುವಾರ ಪ್ರಶ್ನಿಸಿದೆ.

‘ನೆಹರೂ ಅವರು ತಮ್ಮ ಕೃತಿಯಲ್ಲಿ ಶಿವಾಜಿ ಮಹಾರಾಜರನ್ನು ಅವಮಾನಿಸಿದ್ದಾರೆ. ಸ್ವಾತಂತ್ರ್ಯಾನಂತರವೂ, ಶಿವಾಜಿ ಮಹಾರಾಜರು ಸೂರತ್ ನಗರ ಲೂಟಿ ಮಾಡಿದ್ದಾಗಿ ಕಾಂಗ್ರೆಸ್ ನಮಗೆ ಬೋಧಿಸಿದೆ. ಆದರೆ, ಅವರು ಎಂದಿಗೂ ಸೂರತ್ ಲೂಟಿ ಮಾಡಿಲ್ಲ. ಸೂರತ್ ನಿವಾಸಿಗಳು ತಮ್ಮ ನಗರದಲ್ಲಿ ಶಿವಾಜಿ ಮಹಾರಾಜರ ಬೃಹತ್ ಪ್ರತಿಮೆಯನ್ನು ಪ್ರತಿಷ್ಠಾಪಿಸಿದ್ದಾರೆ. ಈ ಕುರಿತು ಕಾಂಗ್ರೆಸ್ ಕ್ಷಮೆ ಕೇಳುವುದೇ’ ಎಂದು ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಪ್ರಶ್ನಿಸಿದ್ದಾರೆ.

ತಿರುಗೇಟು: ಶಿವಾಜಿ ಮಹಾರಾಜರ ವಿಚಾರವಾಗಿ ಜವಾಹರಲಾಲ್ ನೆಹರೂ ಅವರ ಕೃತಿಯನ್ನು ಉಲ್ಲೇಖಿಸಿರುವುದಕ್ಕೆ ಕಿಡಿ ಕಾರಿರುವ ಕಾಂಗ್ರೆಸ್ ವಕ್ತಾರ ಪವನ್ ಖೇರಾ, ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಸೇರಿದಂತೆ ಬಿಜೆಪಿ ನಾಯಕರು ಸುಳ್ಳು ಸಂಕಥನಗಳನ್ನು ಹಬ್ಬಿಸುತ್ತಿದ್ದಾರೆ ಎಂದು ಟೀಕಿಸಿದ್ದಾರೆ.

> ಪ್ರಧಾನಿ ನರೇಂದ್ರ ಮೋದಿ ಕ್ಷಮೆ ಕೇಳಿದ್ದಾರೆ. ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವಾಗ ಎಂವಿಎ ಮುಖಂಡರು ರಾಜ್ಯದಲ್ಲಿ ಅರಾಜಕತೆ ಸೃಷ್ಟಿಸಲು ಯತ್ನಿಸುತ್ತಿದ್ದಾರೆ
> **ಚಂದ್ರಶೇಖರ ಬವಾಂಕುಲೆ** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

‘ನೆಹರೂ ಅವರು ತಮ್ಮ ಕೃತಿಯ ಮೊದಲ ಮುದ್ರಣವನ್ನು ಪರಿಷ್ಕರಣೆ ಮಾಡಿದ್ದರು. ಕೃತಿಯ ಪರಿಷ್ಕರಣೆಗೆ ಅಗತ್ಯವಿರುವ ಮಾಹಿತಿ ಒದಗಿಸುವಂತೆ 1936ರಲ್ಲಿ ನೆಹರೂ ಅವರು ಇತಿಹಾಸಕಾರರಿಗೆ ಪತ್ರ ಬರೆದಿದ್ದರು’ ಎಂದು ಖೇರಾ ಹೇಳಿದ್ದಾರೆ.

‘ನೆಹರೂ ದೊಡ್ಡ ವಿದ್ವಾಂಸರಾಗಿದ್ದರು. ತಮ್ಮ ಪುಸ್ತಕವನ್ನು ಜೈಲಿನಲ್ಲಿದ್ದಾಗ ಬರೆದಿದ್ದರು. ಆಗ, ಕೆಲ ವಿಷಯಗಳ ಕುರಿತ ಆಕರ ಗ್ರಂಥಗಳು ಲಭ್ಯ ಇದ್ದಿರಲಿಲ್ಲ ಎಂಬುದನ್ನು ಒಪ್ಪಿಕೊಂಡಿದ್ದರು ’ ಎಂದಿದ್ದಾರೆ.

‘ಛತ್ರಪತಿ ಶಿವಾಜಿ ಮಹಾರಾಜರನ್ನು ಸೋಲಿಸಲು ಮೊಘಲರಿಗೆ ಸಾಧ್ಯವಾಗಿರಲಿಲ್ಲ. ಮೊಘಲರಿಗೆ ಮಾಡಲು ಸಾಧ್ಯವಾಗದ್ದನ್ನು ಈ ಭ್ರಷ್ಟ ಸರ್ಕಾರ ಮಾಡಿದೆ’ ಎಂದೂ ಅವರು ಟೀಕಿಸಿದ್ದಾರೆ.

ಗುಜರಾತ್‌ನಲ್ಲಿ ಮಳೆ: 24 ಮೊಸಳೆಗಳ ರಕ್ಷಣೆ

ವಡೋದರಾ, ಗುಜರಾತ್ (ಪಿಟಿಐ): ಆಗಸ್ಟ್ 27ರಿಂದ 29ರವರೆಗೆ ಸುರಿದ ಭಾರಿ ಮಳೆಯಿಂದಾಗಿ ವಿಶ್ವಾಮಿತ್ರಿ ನದಿಯಲ್ಲಿ ನೀರಿನ ಮಟ್ಟ ಗಣನೀಯ ಪ್ರಮಾಣದಲ್ಲಿ ಏರಿಕೆಯಾದ ಪರಿಣಾಮ, ವಡೋದರ ನಗರದ ವಸತಿ ಪ್ರದೇಶಗಳಲ್ಲಿ ಮೊಸಳೆಗಳು ಕಂಡು ಬಂದಿವೆ.

ಈ ಅವಧಿಯಲ್ಲಿ ಒಟ್ಟು 24 ಮೊಸಳೆಗಳನ್ನು ಸಂರಕ್ಷಿಸಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ವಿಶ್ವಾಮಿತ್ರಿ ನದಿಯಲ್ಲಿ 440ಕ್ಕೂ ಹೆಚ್ಚು ಮೊಸಳೆಗಳಿವೆ. ಅಜ್ವಾ ಅಣೆಕಟ್ಟೆಯಿಂದ ನೀರು ಹರಿಸಿದ್ದರಿಂದ ನದಿಯಲ್ಲಿ ಪ್ರವಾಹ ಉಂಟಾಗಿ ಮೊಸಳೆಗಳು ವಸತಿ ಪ್ರದೇಶಗಳತ್ತ ಬಂದಿವೆ ಎಂದು ವಡೋದರ ವಲಯ ಅರಣ್ಯಾಧಿಕಾರಿ ಕರಣ್‌ಸಿನ್ಹಾ ರಜಪೂತ್ ತಿಳಿಸಿದ್ದಾರೆ.

‘ಕಲ್ಯಾಣ’ದ ವಿವಿಧೆಡೆ ಭಾರಿ ವರ್ಷಧಾರೆ

ಒಂದನೇ ಪುಟದಿಂದ...

ಚಿಂಚೋಳಿಯ ಬೆನಕನಳ್ಳಿಯಲ್ಲಿ 30 ಹಾಗೂ ಕಲ್ಲೂರು ರೋಡ್ ಗ್ರಾಮದ 15ಕ್ಕೂ ಹೆಚ್ಚು ಮನೆಗಳಿಗೆ ಮಳೆ ನೀರು ನುಗ್ಗಿದೆ. ಹೊಲಗಳಲ್ಲಿ ನೀರು ನಿಂತು ಕೆರೆಗಳಾಗಿ ಮಾರ್ಪಟ್ಟಿವೆ.

ಕಲಬುರಗಿಯ ಕಿರು ಮೃಗಾಲಯದಲ್ಲಿ ಒಂದೂವರೆ ಅಡಿಗಳಷ್ಟು ನೀರು ನಿಂತಿದ್ದು, ಮೃಗಾಲಯದ ಪ್ರಾಣಿಗಳು ಪರದಾಡಿದವು. ಬೆಣ್ಣೆತೊರಾ ಜಲಾಶಯದ ನೀರು ಹರಿ ಬಿಟ್ಟಿದ್ದರಿಂದ ನದಿ ಪಾತ್ರದಲ್ಲಿನ ಸೇತುವೆಗಳು ಮುಳುಗಡೆಯಾಗಿ ಕಾಳಗಿ- ಚಿತ್ತಾಪುರ-ಸೇಡಂ ಸಂಪರ್ಕ ಕಡಿತಗೊಂಡಿತು.

ಕೊಪ್ಪಳ ತಾಲ್ಲೂಕಿನ ಹಿರೇಸಿಂದೋಗಿ ಗ್ರಾಮದಲ್ಲಿ ಮಳೆ ಹಾಗೂ ಬಿರುಸಿನ ಗಾಳಿಗೆ ಮನೆಯ ಚಾವಣಿ ಕಿತ್ತು ಹೋಗಿದೆ. ಬೀದರ್ ಜಿಲ್ಲೆಯಲ್ಲಿ 38 ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಜಿಲ್ಲಾ ರಂಗಮಂದಿರ, ಡಿಡಿಪಿಐ ಕಚೇರಿ, ನೆಹರೂ ಕ್ರೀಡಾಂಗಣ, ಜಿಲ್ಲಾ ಉಸ್ತುವಾರಿ ಸಚಿವರ ಕಚೇರಿ ಜಲಾವೃತವಾದವು. ಯಾದಗಿರಿಯ ಬಸವಸಾಗರ ಜಲಾಶಯದ 25 ಗೇಟ್‌ಗಳಿಂದ 1.02 ಲಕ್ಷ ಕ್ಯುಸೆಕ್ ನೀರನ್ನು ಕೃಷ್ಣಾ ನದಿಗೆ ಹರಿಬಿಡಲಾಗಿದೆ. ಶಹಾಪುರ ತಾಲ್ಲೂಕಿನ ದೋರನಹಳ್ಳಿಯಲ್ಲಿ ಮನೆಗೆ ನೀರು ನುಗ್ಗಿದೆ.

ಹೆಚ್ಚಿದ ಒಳಹರಿವು: ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ನವಿಲುತೀರ್ಥ ಜಲಾಶಯದಲ್ಲಿ ಒಳಹರಿವಿನ ಪ್ರಮಾಣ ಏರಿಕೆಯಾಗಿದೆ. 37.73 ಟಿಎಂಸಿ ಅಡಿ ಗರಿಷ್ಠ ನೀರು ಸಂಗ್ರಹ ಸಾಮರ್ಥ್ಯದ ನವಿಲುತೀರ್ಥ ಜಲಾಶಯದಲ್ಲಿ 36.34 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ. ಶನಿವಾರ 5,331 ಕ್ಯುಸೆಕ್ ನೀರು ಜಲಾಶಯಕ್ಕೆ ಹರಿದುಬರುತ್ತಿತ್ತು. ಭಾನುವಾರ ಈ ಪ್ರಮಾಣ 6,342 ಕ್ಯುಸೆಕ್‌ಗೆ ಏರಿಕೆಯಾಗಿದೆ.

ಗದಗ ಜಿಲ್ಲೆಯ ವಿವಿಧೆಡೆ ನಿರಂತರವಾಗಿ ಜಿಟಿಜಿಟಿ ಮಳೆ ಮುಂದುವರಿದಿದ್ದು ಬಹುತೇಕ ಕೃಷಿ ಚಟುವಟಿಕೆಗಳು ಸ್ಥಗಿತಗೊಂಡಿವೆ. ಇದೇ ರೀತಿಯ ಮಳೆ ಮುಂದುವರಿದಲ್ಲಿ ತೇವಾಂಶ ಹೆಚ್ಚಾಗಿ ವಿವಿಧ ರೋಗಗಳಿಗೆ ಬೆಳೆ ಕೊಳೆಯುವ ಸ್ಥಿತಿ ಬರುವ ಆತಂಕದಲ್ಲಿ ರೈತ ಸಮುದಾಯವಿದೆ.

ಮಡಿಕೇರಿ ವರದಿ: ನಗರವೂ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ ಮತ್ತು ಸಂಪಾಜೆಯಲ್ಲಿ ಬಿರುಸಿನ ಮಳೆ ಮುಂದುವರಿದಿದೆ. ಶನಿವಾರ ರಾತ್ರಿ ಹಾಗೂ ಭಾನುವಾರ ನಸುಕಿನಲ್ಲಿ ಜೋರು ಮಳೆ ಬಿದ್ದಿತು. ಕೊಡಗು ಜಿಲ್ಲೆಯ ಉಳಿದ ಭಾಗಗಳಲ್ಲಿ ಸಾಧಾರಣ ಮಳೆಯಾಗಿದೆ.

ಭಾನುವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಗಳಲ್ಲಿ ಸಂಪಾಜೆಯಲ್ಲಿ 5, ಮಡಿಕೇರಿ ಹಾಗೂ ಸುತ್ತಮುತ್ತ 4, ಭಾಗಮಂಡಲ ಹಾಗೂ ಶಾಂತಳ್ಳಿಯಲ್ಲಿ ತಲಾ 2 ಸೆಂ.ಮೀ. ಮಳೆಯಾಗಿದೆ.



ಸೇಡಂ ತಾಲ್ಲೂಕಿನಲ್ಲಿ ಭಾನುವಾರ ಕಾಗಿಣಾ ನದಿ ತೀರದ ಸಂಗಾವಿ (ಎಂ) ಗ್ರಾಮದ ಸಂಗಮೇಶ್ವರ ದೇವಾಲಯ ಜಲಾವೃತವಾಯಿತು

ಆಂಧ್ರ, ತೆಲಂಗಾಣದಲ್ಲಿ ಭಾರಿ ಮಳೆ

ಒಂದನೇ ಪುಟದಿಂದ...

ಕಾರು ಪತ್ತೆಯಾಗಿದ್ದು, ಮಹಿಳೆಯ ಶವ ದೊರೆತಿದೆ. ನಾಪತ್ತೆಯಾಗಿರುವ ಅವರ ತಂದೆಗಾಗಿ ಹುಡುಕಾಟ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಖಮ್ಮಂ ಜಿಲ್ಲೆಯ ಕುಸುಮಂಚಿ ಮಂಡಲದಲ್ಲಿ ಭಾರಿ ಮಳೆಗೆ ಮನೆಯ ಗೋಡೆ ಕುಸಿದ ಪರಿಣಾಮ ಇಬ್ಬರು ಕೊಚ್ಚಿಕೊಂಡು ಹೋಗಿದ್ದು, ಅವರಿಗಾಗಿ ಶೋಧ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

ಆಂಧ್ರ:13,227 ಜನರ ಸ್ಥಳಾಂತರ

ತೆಲಂಗಾಣ: ಭಾರಿ ಮಳೆ– 99 ರೈಲು ಸಂಚಾರ ರದ್ದು

ಅಮರಾವತಿ,ಹೈದರಾಬಾದ್: ಭಾರೀ ಮಳೆಯ ಕಾರಣ ಆಂಧ್ರ ಪ್ರದೇಶದ ಐದು ಜಿಲ್ಲೆಗಳ 294 ಗ್ರಾಮಗಳಿಂದ 13,227 ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಆಂಧ್ರ ಪ್ರದೇಶದ ಗೃಹ ಸಚಿವರಾದ ವಂಗಲಪುಡಿ ಅನಿತಾ ತಿಳಿಸಿದ್ದಾರೆ.

100 ಪುನರ್ವಸತಿ ಕೇಂದ್ರಗಳು: ಆಂಧ್ರದ ಕೃಷ್ಣಾ, ಎನ್‌ಟಿಆರ್, ಬಾಪಟ್ಲಾ, ಗುಂಟೂರು ಮತ್ತು ಪಲ್ನಾಡು ಜಿಲ್ಲೆಗಳಲ್ಲಿ 100 ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, 61 ವೈದ್ಯಕೀಯ ಶಿಬಿರಗಳ ವ್ಯವಸ್ಥೆಯನ್ನೂ ಮಾಡಲಾಗಿದೆ ಎಂದು ಗೃಹ ಸಚಿವರು ವಿವರಿಸಿದ್ದಾರೆ.

‘ಎರಡು ದಿನಗಳಿಂದ ಸುರಿಯುತ್ತಿರುವ ಭಾರಿ ಮಳೆಗೆ ರಾಜ್ಯದಲ್ಲಿ ಇಲ್ಲಿಯವರೆಗೆ ಒಂಬತ್ತು ಮಂದಿ ಮೃತಪಟ್ಟಿದ್ದಾರೆ. ಪೊಲೀಸ್, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ತಂಡಗಳು ರಕ್ಷಣಾ ಕಾರ್ಯ ಕೈಗೊಂಡಿವೆ’ ಎಂದು ಅವರು ಹೇಳಿದ್ದಾರೆ.

‘ಸುಮಾರು 62,644 ಹೆಕ್ಟೇರ್ ಭತ್ತದ ಬೆಳೆ ಮತ್ತು 7,218 ಹೆಕ್ಟೇರ್ ತೋಟಗಾರಿಕಾ ಪ್ರದೇಶ ಮಳೆಯಿಂದ ನಾಶವಾಗಿದೆ’ ಎಂದು ಅವರು ಮಾಹಿತಿ ನೀಡಿದ್ದಾರೆ.

ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಹಿರಿಯ ಅಧಿಕಾರಿಗಳ ಜತೆ ಮಳೆ ಹಾನಿ ಮತ್ತು ಹವಾಮಾನ ಪರಿಸ್ಥಿತಿಯನ್ನು ಪರಿಶೀಲಿಸಿದ್ದಾರೆ. ಪ್ರವಾಹ ಕುರಿತು ಮಾಹಿತಿ ರವಾನಿಸಲು ತಂತ್ರಜ್ಞಾನದ ನೆರವು ಪಡೆಯುವಂತೆ ಮತ್ತು ಸಂತ್ರಸ್ತರಿಗೆ ಅಗತ್ಯ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ರೈಲು ಸಂಚಾರ ರದ್ದು: ತೆಲಂಗಾಣದ ವಿವಿಧೆಡೆ ಭಾರೀ ಮಳೆ ಮತ್ತು ರೈಲು ಹಳಿಗಳ ಮೇಲೆ ನೀರು ನಿಂತ ಕಾರಣ 99 ರೈಲುಗಳ ಸಂಚಾರವನ್ನು ರದ್ದುಗೊಳಿಸಲಾಗಿದೆ.

ಅಲ್ಲದೆ ನಾಲ್ಕು ರೈಲುಗಳ ಸಂಚಾರವನ್ನು ಭಾಗಶಃ ರದ್ದುಗೊಳಿಸಲಾಗಿದ್ದು, 54 ರೈಲುಗಳ ಸಂಚಾರದ ಮಾರ್ಗವನ್ನು ಬದಲಿಸಲಾಗಿದೆ ಎಂದು ದಕ್ಷಿಣ ಮಧ್ಯ ರೈಲ್ವೆ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಪರಿಶೀಲನೆ ನಡೆಸಿದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ • ಮೂರು ತಿಂಗಳಲ್ಲಿ ಸಂಚಾರ ಆರಂಭ

ವಂದೇ ಭಾರತ್ ಮೊದಲ ಸ್ಲೀಪರ್ ರೈಲು ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್‌ನಲ್ಲಿ (ಬೆಮೆಲ್) ತಯಾರಾಗಿರುವ ರಾತ್ರಿ ವೇಳೆ ಸಂಚರಿಸಲಿರುವ ಭಾರತದ ಮೊದಲ ವಂದೇ ಭಾರತ್ ಸ್ಲೀಪರ್ ರೈಲನ್ನು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಭಾನುವಾರ ಅನಾವರಣಗೊಳಿಸಿದರು.

ಮುಂದಿನ ಮೂರು ತಿಂಗಳ ಒಳಗೆ ಸ್ಲೀಪರ್ ರೈಲು ಸಂಚಾರ ಆರಂಭವಾಗಲಿದೆ. ಆರಂಭಕ್ಕೂ ಮುನ್ನ ಹತ್ತು ದಿನ ತಾಂತ್ರಿಕ ಪರೀಕ್ಷೆ, ವಿವಿಧ ಪ್ರಾಯೋಗಿಕ ಸಂಚಾರ ನಡೆಸಲಾಗುವುದು ಎಂದು ಅಶ್ವಿನಿ ವೈಷ್ಣವ್ ತಿಳಿಸಿದರು.

‘ಎರಡು ಪ್ರೊಟೊಟೈಪ್ (ಮೂಲಮಾದರಿ) ರೈಲುಗಳನ್ನು ಪರಿಶೀಲಿಸಿದ್ದೇನೆ. ರೈಲು ವಿನ್ಯಾಸಗೊಳಿಸಿದ ಎಂಜಿನಿಯರ್‌ಗಳೊಂದಿಗೆ ಸಮಾಲೋಚನೆ ನಡೆಸಿದ್ದೇನೆ. ರೈಲು ತಪಾಸಣೆ ಮುಗಿದ ಬಳಿಕ ಇನ್ನಷ್ಟು ರೈಲುಗಳನ್ನು ತಯಾರಿಸಲಾಗುವುದು. ಮುಂದಿನ ಹಂತದ ರೈಲುಗಳು ಒಂದೂವರೆ ವರ್ಷಗಳಲ್ಲಿ ತಯಾರಾಗಲಿವೆ. ಬಳಿಕ ಪ್ರತಿ ತಿಂಗಳಿಗೆ ಎರಡರಿಂದ ಮೂರು ರೈಲುಗಳು ಸಂಚಾರಕ್ಕೆ ಸಿದ್ಧಗೊಳ್ಳಲಿವೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವಂದೇ ಭಾರತ್ ರೈಲಿನ ವಿನ್ಯಾಸವನ್ನು ನಿರಂತರವಾಗಿ ಮೇಲ್ದರ್ಜೆಗೇರಿಸಲಾಗುತ್ತಿದೆ. ಅದೇ ರೀತಿ ವಂದೇ ಭಾರತ್ ಮೆಟ್ರೊ, ವಂದೇ ಭಾರತ್ ಸ್ಲೀಪರ್, ಅಮೃತ್ ಭಾರತ್ ರೈಲುಗಳನ್ನೂ ಹೊಸದಾಗಿ ರೂಪಿಸಲಾಗುತ್ತಿದೆ. ಗಂಟೆಗೆ 160 ಕಿ.ಮೀ ವೇಗದಲ್ಲಿ ಚಲಿಸುವ ಸಾಮರ್ಥ್ಯವಿರುವ ಈ ರೈಲು, ಸುಧಾರಿತ ಅಪಘಾತ ಸುರಕ್ಷಾ ವಿನ್ಯಾಸವನ್ನು ಹೊಂದಿದೆ. ಜೊತೆಗೆ ರೈಲ್ವೆ ಬೋಗಿಗಳು ಐಷಾರಾಮಿ, ಸಕಲ ಸೌಲಭ್ಯದ ಸಂಚಾರಿ ಅನುಭವ ನೀಡಲಿವೆ ಎಂದು ಮಾಹಿತಿ ನೀಡಿದರು.

‘ರಾತ್ರಿ ವೇಳೆ 800-1200 ಕಿ.ಮೀ ದೂರ ಕ್ರಮಿಸಲು ಅನುಕೂಲವಾಗುಂತೆ ವಂದೇ ಭಾರತ್ ಸ್ಲೀಪರ್ ರೈಲನ್ನು ರೂಪಿಸಲಾಗಿದೆ. ಮಧ್ಯಮ ವರ್ಗದ ಜನರಿಗೆ ಅನುಕೂಲಕರವಾಗಲಿದೆ. ರಾಜಧಾನಿ ಎಕ್ಸ್‌ಪ್ರೆಸ್ ರೈಲಿನ ದರಕ್ಕೆ ಸರಿಸಮವಾಗಿ ವಂದೇ ಭಾರತ್ ಸ್ಲೀಪರ್ ದರ ಇರಲಿದೆ’ ಎಂದು ವಿವರಿಸಿದರು.

‘ನಾಯಿಗೂ ಜಾಗ’: ಆರ್‌ಪಿಎಫ್ ಸೇರಿ ಭದ್ರತಾ ಸಿಬ್ಬಂದಿಯ ಶ್ವಾನದಳ ತಂಗಲು ‘ಡಾಗ್ ಬಾಕ್ಸ್’ ಇಡಲಾಗಿದೆ. ಅಗತ್ಯವಿದ್ದರೆ ಪ್ರಯಾಣಿಕರ ಸಾಕುನಾಯಿಗೂ ‘ಡಾಗ್ ಬಾಕ್ಸ್’ ಬಳಸಲು ಅವಕಾಶ ಸಿಗಲಿದೆ.

ಅಡುಗೆ ಸಿದ್ಧಪಡಿಸಲು ವಿಶೇಷ ಕೋಣೆಯಿದ್ದು, ಇಲ್ಲಿ ಓವೆನ್, ಫ್ರಿಡ್ಜ್, ನೀರು ಕಾಯಿಸುವ ವ್ಯವಸ್ಥೆ ಇದೆ. ಜೊತೆಗೆ ತ್ಯಾಜ್ಯದ ತೊಟ್ಟಿ ವ್ಯವಸ್ಥೆ ಮಾಡಲಾಗಿದೆ.

ಹ್ಯಾಂಗರ್ ನಿರ್ಮಾಣ: ಬೆಮೆಲ್ ನೂತನ ವಂದೇ ಭಾರತ್ ನಿರ್ಮಾಣ ಘಟಕ ಹಾಗೂ 9 ಎಕರೆ 2 ಗುಂಟೆ ವಿಸ್ತೀರ್ಣದಲ್ಲಿ ನೂತನ ಹ್ಯಾಂಗರ್ ನಿರ್ಮಾಣಕ್ಕೆ ರೈಲ್ವೆ ಸಚಿವರು ಚಾಲನೆ ನೀಡಿದರು. ಇಲ್ಲಿ ಬ್ರಾಡ್ ಗೇಜ್, ಸ್ಟ್ಯಾಂಡರ್ಡ್ ಗೇಜ್ ರೋಲಿಂಗ್ ಸ್ಟಾಕ್ ನಿರ್ಮಾಣಗೊಳ್ಳಲಿದೆ. ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ರೈಲ್ವೆ ಮಂಡಳಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಅಧ್ಯಕ್ಷ ಸತೀಶ್ ಕುಮಾರ್, ಬೆಮೆಲ್ ವ್ಯವಸ್ಥಾಪಕ ನಿರ್ದೇಶಕ ಶಂತನು ರಾಯ್ ಭಾಗವಹಿಸಿದ್ದರು.



ಬೆಮೆಲ್ ಅಭಿವೃದ್ಧಿಪಡಿಸಿರುವ ದೇಶದ ಮೊದಲ ವಂದೇ ಭಾರತ್ ಸ್ಲೀಪರ್ ರೈಲಿನ ಒಳಭಾಗದ ನೋಟ – ಪ್ರಜಾವಾಣಿ ಚಿತ್ರ

ವಂದೇ ಭಾರತ್ ಸ್ಲೀಪರ್ ವಿಶೇಷತೆಗಳು

- ನಿದ್ರಿಸಲು ಆರಾಮದಾಯಕ ಮಂಚ
- ಅತ್ಯುತ್ತಮ ಒಳಾಂಗಣ ವಿನ್ಯಾಸ
- ಏರೋಡೈನಾಮಿಕ್ ಬಾಹ್ಯನೋಟ
- ಅಗ್ನಿ ಅಪಾಯದ ಮಟ್ಟ ಅತಿಕಡಿಮೆ
- ಅಂಗವಿಕಲರಿಗೆ ವಿಶೇಷ ಆಸನ ಮತ್ತು ಶೌಚಾಲಯ ವ್ಯವಸ್ಥೆ
- ಸ್ವಯಂಚಾಲಿತ ಬಾಗಿಲುಗಳು
- ಬೋಗಿಗಳ ಮಧ್ಯೆ ಸೆನ್ಸರ್ ಆಧಾರಿತ ಬಾಗಿಲುಗಳು
- ರೈಲಿನ ಕೊನೆ ಬೋಗಿಯಲ್ಲಿ ದೂರದಿಂದಲೇ ಕಾರ್ಯನಿರ್ವಹಿಸುವ ಬೆಂಕಿ ತಡೆಗೋಡೆ ಬಾಗಿಲುಗಳು
- ವಾಸನೆ ಮುಕ್ತ ಶೌಚಾಲಯ ವ್ಯವಸ್ಥೆ
- ಚಾಲನಾ ಸಿಬ್ಬಂದಿಗೆ ಶೌಚಾಲಯ
- ಪ್ರಥಮ ದರ್ಜೆ ಎಸಿ ಕಾರಿನಲ್ಲಿ ಸ್ನಾನಕ್ಕೆ ಬಿಸಿನೀರಿನ ವ್ಯವಸ್ಥೆ
- ಯುಎಸ್‌ಬಿ ಚಾರ್ಜಿಂಗ್, ರೀಡಿಂಗ್ ಲೈಟ್
- ಸಾರ್ವಜನಿಕ ಪ್ರಕಟಣೆ ಮತ್ತು ದೃಶ್ಯ ಮಾಹಿತಿ ವ್ಯವಸ್ಥೆ
- ವಿಶಾಲವಾದ ಲಗೇಜ್ ಕೊಠಡಿ

ವಂದೇ ಭಾರತ್ ಸ್ಲೀಪರ್

ಬೋಗಿ ವಿಭಾಗ	ಬೋಗಿ ಸಂಖ್ಯೆ	ಆಸನ
ಎಸಿ 3 ಟೈರ್	11	611
ಎಸಿ 2ಟೈರ್	4	188
ಮೊದಲ ದರ್ಜೆ ಎಸಿ	1	24
ಒಟ್ಟು	16	823



ಸುಭಾಷಿತ

ಪ್ರತಿಸ್ಪರ್ಧಿಗಳಿಂದ ಆಗುವ ಪರಾಜಯ ನಿಜವಾದ ಸೋಲಲ್ಲ; ನಮ್ಮಲ್ಲಿ, ನಮ್ಮ ಶ್ರದ್ಧೆಯಲ್ಲಿ ನಮಗೆ ನಂಬಿಕೆ ಹೋಗುವುದು ನಿಜವಾದ ಸೋಲು.

-ತ.ರಾ.ಸು.

ಕೈಗಾರಿಕಾ ನಗರ ಸ್ಥಾಪನೆ ಯೋಜನೆ ಅನುಷ್ಠಾನ ಸಮರ್ಪಕವಾಗಿ ಆಗಲಿ

ಹತ್ತು ರಾಜ್ಯಗಳಲ್ಲಿ 12 ಕೈಗಾರಿಕಾ ನಗರಗಳನ್ನು ಅಭಿವೃದ್ಧಿಪಡಿಸುವ ಯೋಜನೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ತಯಾರಿಕಾ ವಲಯಕ್ಕೆ ಈ ಯೋಜನೆಯು ಉತ್ತೇಜನ ನೀಡಲಿದೆ ಮತ್ತು ಭಾರತದಂತಹ ಮಹತ್ವಾಕಾಂಕ್ಷಿ ಅರ್ಥ ವ್ಯವಸ್ಥೆಯಲ್ಲಿ ಮಹತ್ವದ ಪಾತ್ರ ವಹಿಸಲಿದೆ. ಆರು ಕೈಗಾರಿಕಾ ಕಾರಿಡಾರ್‌ಗಳಲ್ಲಿ ಈ 12 ಕೈಗಾರಿಕಾ ನಗರಗಳು ತಲೆ ಎತ್ತಲಿವೆ. ಇವುಗಳಿಗಾಗಿ ಒಟ್ಟು ₹ 28,600 ಕೋಟಿ ವಿನಿಯೋಗ ಆಗಲಿದೆ. ಈ ಕೈಗಾರಿಕಾ ನಗರಗಳು ಸಂಪೂರ್ಣವಾಗಿ ಹೊಸದಾಗಿ ಸ್ಮಾರ್ಟ್ ಸಿಟಿ ರೂಪದಲ್ಲಿ ತಲೆ ಎತ್ತಲಿವೆ; ಸುಸ್ಥಿರತೆಗೆ ಒತ್ತು ನೀಡಲಿರುವ ಈ ಕೈಗಾರಿಕಾ ನಗರಗಳ ಜೊತೆಗೆ ವಸತಿ ಮತ್ತು ವಾಣಿಜ್ಯ ವಲಯಗಳೂ ಇರಲಿವೆ. ರಾಜ್ಯ ಸರ್ಕಾರಗಳ ಜೊತೆಗೆ ಖಾಸಗಿ ಕ್ಷೇತ್ರವೂ ಈ ಯೋಜನೆಯಲ್ಲಿ ತನ್ನದೇ ಆದ ಪಾಲು ಹೊಂದಲಿದೆ. ಕೈಗಾರಿಕಾ ನಗರಕ್ಕೆ ಅಗತ್ಯವಿರುವ ಜಮೀನನ್ನು ರಾಜ್ಯ ಸರ್ಕಾರಗಳು ಒದಗಿಸಲಿವೆ. ಬಂಡವಾಳ ಅಥವಾ ಸಾಲ ನೀಡಿಕೆ ರೂಪದಲ್ಲಿ ಕೇಂದ್ರ ಸರ್ಕಾರವು ಯೋಜನೆಯಲ್ಲಿ ಭಾಗಿಯಾಗಲಿದೆ. ವಿದೇಶಿ ಸಹಭಾಗಿತ್ವಕ್ಕೂ ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಯಲ್ಲಿ ಒಟ್ಟಾಗಿ ₹ 1.5 ಲಕ್ಷ ಕೋಟಿ ಹೂಡಿಕೆ ಆಗಲಿದೆ ಎಂಬ ಭರವಸೆಯನ್ನು ಸರ್ಕಾರ ಹೊಂದಿದೆ. ಈ ಯೋಜನೆಯಿಂದ ನೇರವಾಗಿ 10 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ. ಪರೋಕ್ಷವಾಗಿ 30 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ. ಈ ಯೋಜನೆಯನ್ನು 'ಸುವರ್ಣ ಚತುಷ್ಪಥ' ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಬಣ್ಣಿಸಿದ್ದಾರೆ.



ಭಾರತದ ಅರ್ಥ ವ್ಯವಸ್ಥೆಯ ಈ ಸಂದರ್ಭದಲ್ಲಿ ಇಂತಹ ಬೃಹತ್ ಯೋಜನೆಯ ಅಗತ್ಯ ಖಂಡಿತ ಇದೆ

ಭಾರತದ ಅರ್ಥ ವ್ಯವಸ್ಥೆಯ ಈ ಸಂದರ್ಭದಲ್ಲಿ ಇಂತಹ ಬೃಹತ್ ಯೋಜನೆಯ ಅಗತ್ಯ ಖಂಡಿತ ಇದೆ. ಕೈಗಾರಿಕಾ ನಗರಗಳನ್ನು ಸ್ಥಾಪಿಸುವ ಸ್ಥಳವನ್ನು ಹೆಚ್ಚು ಜಾಣತನದಿಂದ ಆಯ್ಕೆ ಮಾಡಿಕೊಳ್ಳಬೇಕಿದೆ. ಜಾಗತಿಕ ಪೂರೈಕೆ ಸರಪಳಿಯಲ್ಲಿ ದೇಶದ ಸ್ಥಿತಿಯನ್ನು ಉತ್ತಮ ಪಡಿಸುವುದು ಈ ಯೋಜನೆಯ ಉದ್ದೇಶಗಳಲ್ಲಿ ಒಂದು. ಜವಳಿ, ಫಾರ್ಮಾಸ್ಯೂಟಿಕಲ್ಸ್, ಬ್ಯಾಟರಿ ಚಾಲಿತ ವಾಹನ, ವಿಮಾನಯಾನ ಮೂಲಸೌಕರ್ಯ, ಆಹಾರ ಸಂಸ್ಕರಣೆ, ಪ್ರವಾಸೋದ್ಯಮ ಮತ್ತು ಇತರ ಕ್ಷೇತ್ರಗಳ ಉದ್ದಿಮೆಗಳು ಈ ಕೈಗಾರಿಕಾ ನಗರಗಳಲ್ಲಿ ಸ್ಥಾಪನೆ ಆಗಲಿವೆ. ₹ 2 ಲಕ್ಷ ಕೋಟಿ ಮೌಲ್ಯದ ಸರಕುಗಳ ರಫ್ತು ಈ ಯೋಜನೆಯ ಮೂಲಕ ಸಾಧ್ಯವಾಗಬಹುದು ಎಂಬ ಗುರಿ ಇರಿಸಿಕೊಳ್ಳಲಾಗಿದೆ. ಯೋಜನೆಯ ಕುರಿತು ಗಾಢವಾದ ಚಿಂತನೆ ನಡೆದಿದೆ. ಆದರೆ, ಯೋಜನೆ ಹೇಗೆ ಜಾರಿಯಾಗಲಿದೆ ಎಂಬುದರ ಮೇಲೆ ಇದರ ಯಶಸ್ಸು ನಿಂತಿದೆ. 2005ರಲ್ಲಿ ಅನುಷ್ಠಾನಕ್ಕೆ ಬಂದ ವಿಶೇಷ ಆರ್ಥಿಕ ವಲಯಗಳು (ಎಸ್‌ಇಜೆಡ್), 2014ರ 'ಭಾರತದಲ್ಲಿ ತಯಾರಿಸಿ' ಮತ್ತು 2015ರ ಸ್ಮಾರ್ಟ್ ಸಿಟಿ ಯೋಜನೆಗಳೊಂದಿಗೆ ಈ ಯೋಜನೆಯನ್ನು ಹೋಲಿಸಬಹುದು.

ಈ ಹಿಂದಿನ ಯೋಜನೆಗಳು ಸಿದ್ಧವಾದ ಬಳಿಕ ಅವುಗಳ ಅನುಸರಣೆ ಚಟುವಟಿಕೆಯಲ್ಲಿ ಆರಂಭದಲ್ಲಿ ಇದ್ದ ಉಮೇದು ಕಾಣಿಸಲಿಲ್ಲ. ಕಾರ್ಯಕ್ಷಮತೆಯು ಕಳಪೆಯಾಗಿದೆ. ಎಸ್‌ಇಜೆಡ್‌ಗಳ ಕಾರ್ಯಕ್ಷಮತೆ ಕೂಡ ಚೆನ್ನಾಗಿದ್ದ ಇದೇ ರೀತಿಯ ಯೋಜನೆಯ ಕಾರ್ಯಕ್ಷಮತೆಯ ಮಟ್ಟದಲ್ಲಿ ಇಲ್ಲ. ಇತರ ಕಾರ್ಯಕ್ರಮಗಳು ಕೂಡ ತಮ್ಮ ಪೂರ್ಣ ಸಾಮರ್ಥ್ಯಕ್ಕೆ ಅನುಗುಣವಾಗಿ ಕೆಲಸ ಮಾಡಲಿಲ್ಲ. ಈ ಯೋಜನೆಗಳ ಅನುಷ್ಠಾನದಲ್ಲಿ ಇದ್ದ ತೊಡಕುಗಳು ಮತ್ತು ಸಮಸ್ಯೆಗಳ ಬಗ್ಗೆ ಅಧ್ಯಯನ ನಡೆಸಬೇಕು. ಇಲ್ಲಿ ಕಲಿತ ಪಾಠಗಳು ಕೈಗಾರಿಕಾ ನಗರ ಸ್ಥಾಪನೆ ಯೋಜನೆಯಲ್ಲಿ ಮಾರ್ಗದರ್ಶಕವಾಗಬೇಕು. ಇದು ಬಹಳ ದೊಡ್ಡ ಗಾತ್ರದ ಯೋಜನೆ. ಈ ಯೋಜನೆಗೆ ಸಾಮಾಜಿಕ ಮತ್ತು ಭೌತಿಕ ಮೂಲಸೌಕರ್ಯ, ಹೂಡಿಕೆ ಮಾಡಲು ಕಂಪನಿಗಳ ಆಸಕ್ತಿ ಮತ್ತು ಸಾಮರ್ಥ್ಯ, ಜಮೀನು ಸ್ವಾಧೀನ, ನಿಯಮಗಳು ಮತ್ತು ತೆರಿಗೆಗಳು, ಹೂಡಿಕೆಯಂಥವು ಬಹಳ ಮುಖ್ಯವಾಗಿವೆ. ನೀತಿಯ ಸ್ಥಿರತೆ ಕೂಡ ಯೋಜನೆಯ ಯಶಸ್ಸಿನ ಮೇಲೆ ಮಹತ್ವದ ಪರಿಣಾಮ ಬೀರುತ್ತದೆ. ಕೈಗಾರಿಕಾ ನಗರ ಸ್ಥಾಪನೆಗೆ ಸಂಬಂಧಿಸಿದ ಎಲ್ಲ ಕಾಮಗಾರಿಗಳ ಮೇಲೆ ನಿಕಟ ನಿಗಾ ಇರಿಸಿ ಕೆಲಸ ಮಾಡಬೇಕು. ಅನುಷ್ಠಾನದ ಹಂತದಲ್ಲಿ ಯೋಜನೆಯು ಬಿದ್ದು ಹೋಗದಂತೆ ಕಟ್ಟುನಿಟ್ಟಿನ ಅನುಸರಣೆಯೂ ಇರಬೇಕು.

ದಿನದ ಟ್ವೀಟ್

ಪ್ರಬಲ ಸಂದೇಶ

ಗುಜರಾತ್‌ನ ವಡೋದರದಲ್ಲಿ ವೃದ್ಧ ನಾಯಿಯೊಂದು ಪ್ರವಾಹದಲ್ಲಿ ಸಿಲುಕಿತ್ತು. ಆದರೆ ಅದನ್ನು ಸುರಕ್ಷಿತವಾಗಿ ಕರೆತರಲು ಎಲ್ಲರೂ ಕೈಜೋಡಿಸಿದರು. ಇಂತಹ ಸಹಾನುಭೂತಿ ಮತ್ತು ಪ್ರೀತಿ ನಿಜಕ್ಕೂ ಸ್ಫೂರ್ತಿದಾಯಕ– ಇದು, ಸಂಕಷ್ಟದ ಸಮಯದಲ್ಲಿ ಯಾರನ್ನೂ ಒಬ್ಬಂಟಿಯಾಗಿಸಬೇಡಿ ಎಂಬ ಪ್ರಬಲ ಸಂದೇಶವನ್ನು ನಮಗೆಲ್ಲ ರವಾನಿಸಿದೆ.

ವಿದಿತ್ ಶರ್ಮಾ, ಸಂಸ್ಥಾಪಕ, ಸೇವ್ ಎ ಸ್ಟ್ರೇ ಟ್ರಸ್ಟ್

ಕಿಡಿನುಡಿ

ತಮಿಳು ಚಿತ್ರರಂಗ, ರಂಗಭೂಮಿ ಎರಡೂ ಕೆಟ್ಟುಹೋಗುವ ವಿಚಾರದಲ್ಲಿ ಮಲಯಾಳ ಚಿತ್ರರಂಗಕ್ಕಿಂತ ಕಡಿಮೆ ಅಲ್ಲ. ಕೆಲಸದ ಸ್ಥಳದಲ್ಲಿ ಮಹಿಳೆಯರ ಕನಸುಗಳನ್ನು ಕೊಲ್ಲುವ ಶೋಷಕರ ವಿರುದ್ಧ ನಾವೆಲ್ಲ ಒಂದುಗೂಡುವ ಅಗತ್ಯವಿದೆ. ತಮಿಳು ಚಿತ್ರೋದ್ಯಮದ ಸಂತ್ರಸ್ತರ ಪರವಾಗಿ ನಾನು ನಿಲ್ಲುತ್ತೇನೆ, ಇದನ್ನು ತಮಿಳ್ ಮೀ ಟೂ ಎಂದು ಕರೆಯ ಬಯಸುತ್ತೇನೆ...



ಕೃತ್ತಿಕಾ ಶ್ರೀನಿವಾಸನ್, ಪತ್ರಕರ್ತೆ

25 ವರ್ಷಗಳ ಹಿಂದೆ

ಗುರುವಾರ, 2-9-1999

● **ಇನ್ನೈದು ವರ್ಷ ಮಂದಿರ ನಿರ್ಮಾಣವಿಲ್ಲ: ವಾಜಪೇಯಿ**

ಹೈದರಾಬಾದ್, ಸೆ. 1– ಬಿಜೆಪಿಯು ಈ ಚುನಾವಣೆಯಲ್ಲಿ ಸಂಪೂರ್ಣ ಬಹುಮತ ಪಡೆದರೂ ರಾಮಮಂದಿರ ನಿರ್ಮಾಣ, ಏಕರೂಪ ನಾಗರಿಕ ಸಂಹಿತೆ ಮತ್ತು 370ನೇ ವಿಧಿ ವಿಷಯಗಳನ್ನು ಮುಂದಿನ 5 ವರ್ಷಗಳ ಕಾಲ ಎತ್ತುವುದಿಲ್ಲ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಇಂದು ಇಲ್ಲಿ ಸ್ಪಷ್ಟಪಡಿಸಿದರು.

ಸುದ್ದಿಗಾರರ ಜೊತೆ ಮಾತನಾಡುತ್ತಿದ್ದ ಅವರು, ಪಕ್ಷವು ಸಮ್ಮಿಶ್ರ ಸರ್ಕಾರ ಮತ್ತು ರಾಷ್ಟ್ರೀಯ ಅಜೆಂಡಾಕ್ಕೆ ಬದ್ಧವಾಗಿದೆ ಎಂದು ಹೇಳಿದರು.

'ಬಿಜೆಪಿಯು ಏಕೆ ಈ ವಿಷಯಗಳನ್ನು ಶಾಶ್ವತವಾಗಿ ಕೈಬಿಡಲು ತಯಾರಿಲ್ಲ?' ಎಂಬ ಪ್ರಶ್ನೆಗೆ 'ಈ ಪ್ರಣಾಳಿಕೆ ಐದು ವರ್ಷ ಅವಧಿಯದ್ದು. ಐದು ವರ್ಷಗಳ ನಂತರ ಏನಾಗುತ್ತದೆ ಎಂಬುದನ್ನು ನನಗೆ ಹೇಳಲು ಸಾಧ್ಯವಿಲ್ಲ' ಎಂದರು.

● **ಭಾರತಕ್ಕೆ ನುಸುಳುವ ಉಗ್ರರ ಯತ್ನ ವಿಫಲ**

ಜಮ್ಮು, ಸೆ. 1– ಜಮ್ಮು ವಿಭಾಗದ ಪೂಂಚ್ ಮತ್ತು ಚಾಂಬ್‌ಗಳಲ್ಲಿನ ವಾಸ್ತವ ನಿಯಂತ್ರಣ ರೇಖೆ ಪ್ರದೇಶಗಳಲ್ಲಿ ನಿನ್ನೆ ರಾತ್ರಿ ಭಾರತದೊಳಕ್ಕೆ ನುಸುಳುವ ಪಾಕಿಸ್ತಾನಿ ಬೆಂಬಲಿತ ಉಗ್ರಗಾಮಿಗಳ ಎರಡು ಯತ್ನಗಳನ್ನು ಭಾರತೀಯ ಪಡೆಗಳು ವಿಫಲಗೊಳಿಸಿವೆ.

ಇದೂ ಸೇರಿದಂತೆ ನಿನ್ನೆ ಸಂಜೆಯಿಂದ ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದ ಪ್ರತ್ಯೇಕ ಘಟನೆಗಳಲ್ಲಿ 30 ಮಂದಿ ಮೃತಪಟ್ಟಿದ್ದಾರೆ. ಇವರಲ್ಲಿ 22 ಮಂದಿ ಅತಿಕ್ರಮಣಕಾರರು ಮತ್ತು ಆರು ಸೈನಿಕರು ಸೇರಿದ್ದಾರೆ. ದೋಡಾ ಮತ್ತು ರಾಜೌರಿ ಪ್ರದೇಶದಲ್ಲಿ ಗುಂಡುಗಳಿಂದ ತುಂಬಿದ್ದ ಎರಡು ಮೃತದೇಹಗಳು ಪತ್ತೆಯಾಗಿವೆ ಎಂದು ಭಾರತದ ರಕ್ಷಣಾ ಇಲಾಖೆಯ ವಕ್ತಾರರು ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಸೋಮವಾರ, 2-9-1974

● **ಆಹಾರ ಅಭಾವದಿಂದ ಈ ವರ್ಷ ವಿಶ್ವದಲ್ಲಿ ಕೋಟ್ಯಂತರ ಸಾವು?**

ನ್ಯೂಯಾರ್ಕ್, ಸೆ. 1– ಆಹಾರದ ಅಭಾವದಿಂದ ಈ ವರ್ಷ ಜಗತ್ತಿನಾದ್ಯಂತ ಕೋಟ್ಯಂತರ ಮಂದಿ ಸಾಯಬಹುದು.

ಅನಾವೃಷ್ಟಿ ಹಾಗೂ ವಿದ್ಯುತ್ ಕೊರತೆಯಿಂದ ಗೊಬ್ಬರದ ಉತ್ಪಾದನೆ ಇಳಿ-ಮುಖವಾಗಿರುವುದು ಆಹಾರದ ಅಭಾವಕ್ಕೆ ಕಾರಣ.

ಕೆಲವು ವರ್ಷಗಳ ಕೆಳಗೆ ಏಷ್ಯಾದಲ್ಲಿ 'ಹಸಿರು ಕ್ರಾಂತಿ' ಚಳವಳಿಗೆ ಕಾರಣಕರ್ತರಾದ ನೊಬೆಲ್ ಪ್ರಶಸ್ತಿ ವಿಜೇತರೂ ಸಸ್ಯಶಾಸ್ತ್ರ ವಿಜ್ಞಾನಿಯೂ ಆದ ಡಾ. ನಾರ್ಮನ್ ಬೋರ್ಲಾಗ್ ಅವರು ಹಸಿವಿನಿಂದ ಜನ ಸಾಯುವರೆಂಬ ಎಚ್ಚರಿಕೆ ನೀಡಿದ್ದಾರೆ. ಅರವತ್ತು ವರ್ಷ ವಯಸ್ಸಿನ ಬೋರ್ಲಾಗ್ ಅವರು ಇಲ್ಲಿ ನೀಡಿದ ಸಂದರ್ಶನದಲ್ಲಿ ಈ ಮಾತು ಹೇಳಿದ್ದಾರೆ.

● **ಆಧ್ಯಾತ್ಮಿಕ ಜೀವನಕ್ಕೆ ಮರಳಲು ಜತ್ತಿ ಕರೆ**

ನವದೆಹಲಿ, ಸೆ. 1– ಜನತೆಯು ಆಧ್ಯಾತ್ಮಿಕ ಜೀವನಕ್ಕೆ ಮರಳುವ ಹಾಗೂ ಧರ್ಮವು ಬೋಧಿಸುವ ನೀತಿ, ಆದರ್ಶಗಳನ್ನು ಅನುಸರಿಸುವ ಅಗತ್ಯವನ್ನು ಉಪರಾಷ್ಟ್ರಪತಿ ಶ್ರೀ ಜತ್ತಿ ಅವರು ಇಂದು ಇಲ್ಲಿ ಒತ್ತಿ ಹೇಳಿದರು.

ಬದುಕಿನ ಮೇಲೆ ಯಾಂತ್ರಿಕತೆ, ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಭಾವ ಹೆಚ್ಚಾಗಿ ಮನುಷ್ಯನೇ ಹೆಚ್ಚುಕಮ್ಮಿ ಸರ್ವಶಕ್ತನೆಂಬ ಭಾವನೆ ಬೆಳೆಯುತ್ತಿರುವುದನ್ನು ತಡೆಗಟ್ಟದಿದ್ದ ಪಕ್ಷದಲ್ಲಿ ಮುಂದಿನ ಜನಾಂಗ ಅಪಾಯಕ್ಕೊಳಗಾಗುವುದೆಂದು ತಿಳಿಸಿದರು. ಶ್ರೀ ರಮಣಮಹರ್ಷಿ ಕೇಂದ್ರದ ಉದ್ಘಾಟನೆಯನ್ನು ಶ್ರೀ ಜತ್ತಿ ಅವರು ನೆರವೇರಿಸುತ್ತ, 'ಯಾಂತ್ರಿಕತೆಯ ದುಷ್ಪರಿಣಾಮಗಳಿಗೆ ಉತ್ತಮ ಔಷಧಿಯೆಂದರೆ ಆಧ್ಯಾತ್ಮಿಕ ಜೀವನಕ್ಕೆ ವಾಪಸಾಗುವುದು' ಎಂದರು.

ಅನುಭವಗಳಿಂದ ಪಾಠ ಕಲಿಯುವುದಿಲ್ಲ ಎಂಬುದನ್ನು ಹಲವು ಪ್ರಕರಣಗಳು ಸಾಬೀತು ಮಾಡುತ್ತಿವೆ

'ನಿರ್ಭಯಾ' ತರಲಿಲ್ಲವೇಕೆ ಅಭಯ?



ವಿಶ್ಲೇಷಣೆ

ಡಾ. ಕೆ.ಎಸ್. ಪವಿತ್ರ

2012ರ ಡಿಸೆಂಬರ್ 16ರಂದು ಯಾವ ಹೃದಯ ವಿದ್ರಾವಕ ಪ್ರಕರಣ ನಡೆಯಿತು? ನಮಗೆ ಥಟ್ಟೆಂದು ಉತ್ತರ ಹೊಳೆಯುವುದು ಕಷ್ಟ. ಅಂದು ರಾತ್ರಿ ದೆಹಲಿಯಲ್ಲಿ ನಡೆದ ಸಾಮೂಹಿಕ ಅತ್ಯಾಚಾರ- ಕೊಲೆ ಅದೆಷ್ಟು ಭೀಕರವಾಗಿತ್ತೆಂದರೆ, ದೇಶದ ಅಸಂಖ್ಯಾತ ಮಹಿಳೆಯರನ್ನು, ಹೆಣ್ಣುಮಕ್ಕಳ ತಂದೆ-ತಾಯಂದಿರನ್ನು ಬೆಚ್ಚಿ ಬೀಳಿಸಿತು. ಧೈರ್ಯವಾಗಿ ಹೊರಗೆ ಹೋಗಿ ಎಲ್ಲವನ್ನೂ ಸಾಧಿಸಬೇಕಾಗಿದ್ದ ಹೆಣ್ಣುಮಕ್ಕಳನ್ನು 'ಎಚ್ಚರದಿಂದಿರು, ಬೇರೆ ಎಲ್ಲಕ್ಕಿಂತ ಸುರಕ್ಷತೆಯೇ ಆದ್ಯತೆ' ಎಂದು ತಡೆಯಬೇಕಾದ ಪರಿಸ್ಥಿತಿ ಸೃಷ್ಟಿಯಾಯಿತು. ಅಂತಹ ಪರಿಸ್ಥಿತಿ ಈಗಲೂ ಮರುಕಳಿಸುತ್ತಲೇ ಇದೆ!

ಹಿಂದಿನ ಅನುಭವಗಳಿಂದ ಒಂದು ಸಮಾಜವಾಗಿ ಯಾವ ಪಾಠವನ್ನೂ ಕಲಿತಿಲ್ಲ ಎಂಬ ಸತ್ಯವನ್ನು ಈ ಹನ್ನೆರಡು ವರ್ಷಗಳಲ್ಲಿ ನಡೆದಿರುವ ಬಹುಸಂಖ್ಯೆಯ ಅತ್ಯಾಚಾರಗಳು, ಅವೆಲ್ಲವನ್ನೂ ಮೀರಿಸುವ ಕ್ರೌರ್ಯದಿಂದ ಕೂಡಿದ ಕೋಲ್ಕತ್ತದ ವೈದ್ಯಕೀಯ ವಿದ್ಯಾರ್ಥಿನಿಯ ಮೇಲಿನ ಅತ್ಯಾಚಾರ– ಕೊಲೆಯ ಪ್ರಕರಣ ನಮಗೆ ತೋರಿಸಿವೆ.

ನಿರ್ಭಯಾ ಪ್ರಕರಣದ ಯುವತಿಯು ಅರೆವೈದ್ಯಕೀಯ ಕ್ಷೇತ್ರದ ವಿದ್ಯಾರ್ಥಿನಿಯಾಗಿದ್ದರೆ, ಕೋಲ್ಕತ್ತ ಪ್ರಕರಣದಲ್ಲಿ ಬಲಿಯಾದದ್ದು ವೈದ್ಯಕೀಯ ವಿದ್ಯಾರ್ಥಿನಿ. ಮಹಿಳೆಗೆ ಶಿಕ್ಷಣ, ಆರ್ಥಿಕ ಸ್ವಾವಲಂಬನೆ ನೀಡುವ ಉದ್ಯೋಗವನ್ನು ನೀಡಿದರೆ ಆಕೆಯ ಸುರಕ್ಷತೆಯ ಬಗ್ಗೆ ಆತ್ಮವಿಶ್ವಾಸ ಮೂಡಿಸಿದಂತೆ ಎಂಬ ನಮ್ಮ ನಂಬಿಕೆಯ ಬುಡವನ್ನೇ ಅಲುಗಾಡಿಸುವಂತೆ ಈ ಪ್ರಕರಣಗಳು ನಿಲ್ಲುತ್ತವೆ. ಇಂತಹ ಪ್ರಕರಣಗಳು ಮರುಕಳಿಸಬಾರದು ಎಂಬ ಆಶಯ ನಮಗಿರುವುದು ಸಹಜವಾದ್ದರಿಂದ, ಅವು ನಡೆದ ಕೆಲ ದಿನಗಳು ಮಾತ್ರ ಗದ್ದಲ, ಚಳವಳಿ, ಮಾಧ್ಯಮಗಳಲ್ಲಿ ಭರಪೂರ ಗಲಾಟೆ ಎಬ್ಬಿಸುವ ತತ್‌ಕ್ಷಣದ ಪ್ರತಿಕ್ರಿಯೆಗಳನ್ನು ಪಕ್ಕಕ್ಕಿರಿಸಿ, ದೀರ್ಘಕಾಲಿಕವಾಗಿ ಉಪಯುಕ್ತವಾಗಬಲ್ಲ ವಿಶ್ಲೇಷಣೆ, ಸುಧಾರಣೆಯನ್ನು ಸಾಧ್ಯವಾಗಿಸುವ ಪರಿವರ್ತನೆಯತ್ತ ನಾವು ಸಾಗಬೇಕಿದೆ.

ಕೋಲ್ಕತ್ತದ ಪ್ರಕರಣ ಕೆಲವು ಮುಖ್ಯ ಪ್ರಶ್ನೆಗಳನ್ನು ನಮ್ಮೆದುರು ತರುತ್ತದೆ. ಅವುಗಳಲ್ಲಿ ಒಂದು, ಮಹಿಳೆಯ ಸುರಕ್ಷತೆ. ಮತ್ತೊಂದು, ವೈದ್ಯಕೀಯದಂತಹ ಕ್ಷೇತ್ರಗಳಲ್ಲಿ ಹಗಲು-ರಾತ್ರಿ ಎನ್ನದೆ ಡಾಕ್ಟರ್, ನರ್ಸ್ ಹೀಗೆ ಲಿಂಗಭೇದವಿಲ್ಲದೆ ದುಡಿಯಬೇಕಾದ ಅವಶ್ಯಕತೆ. ಇವುಗಳ ಜೊತೆಗಿರುವ ಮತ್ತೊಂದು ಚರ್ಚಾರ್ಹ ಅಂಶವೆಂದರೆ, ಇಡೀ ಸಮಾಜದಲ್ಲಿ ಇಂದಿನ ದಿನಗಳಲ್ಲಿ ನೈತಿಕತೆಯ ಮಟ್ಟ ಎಷ್ಟು ಕೆಳಗಿಳಿದಿದೆ ಎಂಬುದು.

2012ರ ಸಂದರ್ಭದಲ್ಲಿ, ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊದಲ್ಲಿ ವಾರ್ಷಿಕವಾಗಿ 25 ಸಾವಿರ ಅತ್ಯಾಚಾರ ಪ್ರಕರಣಗಳು ದಾಖಲಾಗುತ್ತಿದ್ದವು. ಅಲ್ಲಿಂದ 2020ರ ಕೋವಿಡ್ ಸಮಯದವರೆಗೆ ಈ ಸಂಖ್ಯೆ 30,000ಕ್ಕೆ ಏರಿತು. ಕೋವಿಡ್ ಉಲ್ಬಣಿಸಿದ ಸಂದರ್ಭದಲ್ಲಿ ಅದು ಹಠಾತ್ತನೆ ಕೆಳಗಿಳಿಯಿತು. ಅದಾದ ಮೇಲೆ ಸತತವಾಗಿ ಅದು 30,000ದ ಆಸುಪಾಸಿನಲ್ಲೇ ಉಳಿದಿದೆ. 2018- 22ರವರೆಗಿನ ದಾಖಲೆಗಳಂತೆ, ಅತ್ಯಾಚಾರ ಅಪರಾಧದ ತೀರ್ಪು-ಶಿಕ್ಷೆ-ನ್ಯಾಯ ನಿರ್ಣಯದ ಪ್ರಮಾಣ ಶೇಕಡ 27-28ರಷ್ಟು ಮಾತ್ರ! 2012ರ ಪ್ರಕರಣದ ನಂತರ ಶಿಕ್ಷೆಯನ್ನು ಕಠಿಣವಾಗಿಸಲಾಯಿತು. ಆದರೆ, ಪ್ರಕರಣಗಳಲ್ಲಿ ಶಿಕ್ಷೆಯಾಗುವ ಪ್ರಮಾಣ ಹೆಚ್ಚಾಗಿಲ್ಲ.

ಪ್ರಸ್ತುತ ಅಂಕಿ ಅಂಶಗಳು ಏನನ್ನು ಹೇಳುತ್ತವೆ? ಕಾನೂನು ಕಠಿಣವಾದರಷ್ಟೇ ಸಾಲದು, ನ್ಯಾಯಾಂಗವನ್ನು ಮುನ್ನಡೆಸುವ ಮಂದಿಯನ್ನೂ ಒಳಗೊಂಡಂತೆ ನಮ್ಮೆಲ್ಲರಲ್ಲಿ ಇರುವ ರೂಢಿಗತ ಧೋರಣೆಗಳು ಬದಲಾಗದೆ ಸಮಾಜದಲ್ಲಿ ಪರಿವರ್ತನೆ ಸಾಧ್ಯವಾಗದು ಎನ್ನುವ ಸತ್ಯವನ್ನಲ್ಲವೇ? ಶಿಕ್ಷೆಯನ್ನು ಕಠಿಣವಾಗಿಸಿರುವುದರ ಬಗೆಗಿನ ಮಾಹಿತಿಯು ಜನರನ್ನು ವ್ಯಾಪಕವಾಗಿ ತಲುಪಿದ್ದರೆ, ಜನ ಈ ರೀತಿ ವರ್ತಿಸದಂತೆ ಅದು ಮಾಡಬೇಕಲ್ಲವೇ? ಹೆಣ್ಣುಮಕ್ಕಳನ್ನು ಹೊರಗೆ ಕಳಿಸಿದರೆ ಅವರಿಗೆ ಅಪಾಯ ಒದಗಬಹುದೆಂದು ನಾವು ಯೋಚಿಸುತ್ತೇವೆ. ಆದರೆ ನಮ್ಮ ಗಂಡುಮಕ್ಕಳು ಇತರರಿಗೆ ಅಪಾಯ ಉಂಟು ಮಾಡುವುದನ್ನು ತಡೆಯಲು, ಆತ್ಮಸಾಕ್ಷಿ ಬಿಡಿ, ಕನಿಷ್ಠಪಕ್ಷ ಕಠಿಣ ಶಿಕ್ಷೆಯ ಬಗ್ಗೆ ಹೆದರುವುದನ್ನಾದರೂ ಅವರಿಗೆ ಕಲಿಸಲೇಬೇಕಲ್ಲವೇ?

ಈಗ ವೈದ್ಯಕೀಯ ಕ್ಷೇತ್ರಕ್ಕೆ ಬರೋಣ. ಆಸ್ಪತ್ರೆಗಳು ಸದಾ ಚಟುವಟಿಕೆಯ ತಾಣಗಳು. 'ಡಾಕ್ಟರ್' ಎಂಬ ಇಂಗ್ಲಿಷ್ ಪದ ಲಿಂಗನಿರಪೇಕ್ಷವಾಗಿದ್ದರೂ, ವೈದ್ಯಕೀಯ ಕ್ಷೇತ್ರದ ಎಲ್ಲೆಲ್ಲೂ ಲಿಂಗಸಮಾನತೆ ಬಂದಿದೆ ಎಂದು ಹೇಳುವಂತಿಲ್ಲ. ವೈದ್ಯೆಯರಿಗೆ ಸಾಮಾನ್ಯವಾಗಿ 'ಪ್ರತ್ಯೇಕ ಕಾರ್ಯನಿರತ ವಿಶ್ರಾಂತಿಯ ಕೊಠಡಿ' ಎನ್ನುವುದು ಕಷ್ಟಪಟ್ಟು, ಬೇಡಿಕೆಯಿಟ್ಟು ಪಡೆಯಬೇಕಾದಂತಹ 'ಲಕ್ಷುರಿ'! ಇಲ್ಲಿ, ಸೌಲಭ್ಯಗಳಿಗಾಗಿ ಹೋರಾಡುವವರ ಸಂಖ್ಯೆ ಕಡಿಮೆ. ಈ ಕಾರಣದಿಂದಾಗಿಯೇ, ಒಂದೊಮ್ಮೆ ಆಸ್ಪತ್ರೆಗಳ ಆಡಳಿತ ವ್ಯವಸ್ಥೆ ಸೌಲಭ್ಯ ನೀಡಿದರೂ ಅದರ ಬಳಕೆಯ ಅವಕಾಶವನ್ನು ಇತರ ಸಿಬ್ಬಂದಿಗೂ ಬಿಟ್ಟುಕೊಡಬೇಕಾದ ಸಾಧ್ಯತೆಯೇ ಹೆಚ್ಚು. ಇಂತಹ ಸಮಸ್ಯೆಗಳ ಕಾರಣದಿಂದ, ಹೆಸರು ಮಾಡಿರುವ ಕೆಲವು ವೈದ್ಯಕೀಯ ಕಾಲೇಜು- ಆಸ್ಪತ್ರೆಗಳನ್ನು ಸಹ ತಮ್ಮ ಮಕ್ಕಳಿಗೆ ಆಯ್ದುಕೊಳ್ಳಲು ಎಷ್ಟೋ ಬಾರಿ ಅಪ್ಪ- ಅಮ್ಮ ಹಿಂದೆಮುಂದೆ ನೋಡುತ್ತಾರೆ. ಮತ್ತೆ ಕೆಲವೊಮ್ಮೆ ಬೆಳಿಗ್ಗೆ 9ರಿಂದ ಸಂಜೆ 6ರವರೆಗೆ ದುಡಿಯುವ ಕೆಲಸವಾದರೆ ಸಾಕು, ರಾತ್ರಿ ಪಾಳಿ ಮಾಡುವ ಕೆಲಸ ಬೇಡ ಎಂದು ಭಾವಿಸಿ ವೈದ್ಯಕೀಯ ವೃತ್ತಿಯನ್ನೇ ಹೆಣ್ಣುಮಕ್ಕಳು ಆರಿಸಿಕೊಳ್ಳುವುದು ಬೇಡ ಎನ್ನುತ್ತಾರೆ. ಇವೆಲ್ಲವೂ ಹೆಣ್ಣುಮಕ್ಕಳ ಅರ್ಹತೆ, ಸಾಮರ್ಥ್ಯ, ಗಳಿಸಿದ ಅಂಕ, ಯಾವುದೇ ಕೆಲಸವನ್ನು ಮಾಡುವ ಧೈರ್ಯ ಇವ್ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ, ಬರೀ ಅವರ ಸುರಕ್ಷತೆಯನ್ನು ಕೇಂದ್ರವಾಗಿಟ್ಟು ಅಪ್ಪ-ಅಮ್ಮ ತೆಗೆದುಕೊಳ್ಳುವ ನಿರ್ಧಾರಗಳು ಎನ್ನುವುದು ಗಮನಾರ್ಹ.



2019ರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಸಹಯೋಗದಲ್ಲಿ 'ಜಾಗತಿಕ ಆರೋಗ್ಯದಲ್ಲಿ ಮಹಿಳೆ' ಎಂಬ ಸಂಘಟನೆಯು 'ಸೇವೆ ನೀಡುವವರು ಮಹಿಳೆಯರು; ಮುಂದಾಳತ್ವ ಮಾತ್ರ ಪುರುಷರದು; ಜಾಗತಿಕ ಆರೋಗ್ಯ ಕ್ಷೇತ್ರದಲ್ಲಿ ಲಿಂಗ ಸಮಾನತೆಯ ವಿಶ್ಲೇಷಣೆ' ಎಂಬ ವರದಿಯನ್ನು ಬಿಡುಗಡೆ ಮಾಡಿದೆ. ಅದು ಹಲವು ಮುಖ್ಯ ಅಂಶಗಳನ್ನು ಪ್ರಸ್ತಾಪಿಸಿದೆ. ಮುಂದಾಳತ್ವದಲ್ಲಿ, ಪ್ರಬಲ ಸ್ಥಾನಗಳಲ್ಲಿ ಮಹಿಳೆಯರ ಕೊರತೆಯನ್ನು ಸ್ಪಷ್ಟವಾಗಿ ಎತ್ತಿ ಹಿಡಿದಿದೆ. ಉದ್ಯೋಗ ಸ್ಥಳದಲ್ಲಿ ಮಹಿಳಾ ವೈದ್ಯಕೀಯ ಸಿಬ್ಬಂದಿಗೆ ಎದುರಾಗುವ ಲೈಂಗಿಕ ಕಿರುಕುಳವನ್ನು ಪ್ರಮುಖವಾಗಿ ಗುರುತಿಸಿದೆ. ಪುರುಷ ಸಹೋದ್ಯೋಗಿಗಳು, ಪುರುಷ ರೋಗಿಗಳು ಮತ್ತು ಸಮಾಜದ ಇತರರು ಮಹಿಳಾ ವೈದ್ಯಕೀಯ ಸಿಬ್ಬಂದಿಗೆ ನೀಡುವ ಹಿಂಸೆ, ಲೈಂಗಿಕ ಕಿರುಕುಳದ ಪ್ರಮಾಣ ಕಡಿಮೆಯೇನೂ ಅಲ್ಲವಾದರೂ ತಮ್ಮ ಹೆಸರಿಗೆ ಕಳಂಕ ಅಂಟುತ್ತದೆ, ಹಿಂಸೆ ಮತ್ತಷ್ಟು ಹೆಚ್ಚಬಹುದು ಎಂಬ ಕಾರಣಗಳಿಂದ ಇವು ಹೊರಬರುವ ಸಾಧ್ಯತೆ ಕಡಿಮೆ ಎಂಬುದನ್ನೂ ಈ ವರದಿ ಗುರುತಿಸಿದೆ. ಹೆಚ್ಚಿನ ವೈದ್ಯಕೀಯ ಆಡಳಿತ ವ್ಯವಸ್ಥೆಗಳು 'ಪುರುಷರಿಗಾಗಿ- ಪುರುಷರಿಂದ ಇರುವ ವ್ಯವಸ್ಥೆಗಳಲ್ಲಿ ಮಹಿಳೆಯರು ಹೇಗೋ ಹೊಂದಿಕೊಳ್ಳಬೇಕು' ಎಂದೇ ನಿರೀಕ್ಷಿಸುತ್ತವೆ ಎಂಬುದನ್ನು ಇಲ್ಲಿ ಗಮನಿಸಲಾಗಿದೆ.

ಮತ್ತೊಂದು ಚರ್ಚಾರ್ಹ ಅಂಶವೆಂದರೆ, ಇಂದಿನ ಸಂದರ್ಭದಲ್ಲಿ ನಿರಂತರವಾಗಿ ಕುಸಿಯುತ್ತಿರುವಂತೆ ಭಾಸ-ವಾಗುತ್ತಿರುವ ಸಮಾಜದ ನೈತಿಕತೆಯ ಮಟ್ಟ. ಕೋಲ್ಕತ್ತದ ಪ್ರಕರಣದಲ್ಲಿ ಹೊರಬರುತ್ತಿರುವ ಕೊಳೆಯನ್ನು ಗಮನಿಸುತ್ತಾ ಸಾಗಿದಂತೆ, ಆತ್ಮಸಾಕ್ಷಿಯನ್ನು ಪೂರ್ತಿಯಾಗಿ ಇಲ್ಲವಾಗಿಸಿಕೊಂಡ ನೈತಿಕ ಅಧಃಪತನ ಢಾಳಾಗಿ ಗೋಚರಿಸುತ್ತದೆ. ಇಂತಹ ಪರಿಸ್ಥಿತಿಯ ಚಿಕಿತ್ಸೆಗಾಗಿ ನಾವು ಒಂದು ಸಮುದಾಯವಾಗಿ ತುರ್ತು ಕ್ರಮಗಳನ್ನು ಮತ್ತು ದೀರ್ಘಾವಧಿಯಲ್ಲೂ ದುರ್ಬಲಗೊಳ್ಳದ, ನಿಷ್ಕ್ರಿಯ-ಗೊಳ್ಳದ, ಆಗಾಗ ಮೌಲ್ಯಮಾಪನಕ್ಕೆ ಒಳಗಾಗುವಂತಹ ಯೋಜನೆಗಳನ್ನು ರೂಪಿಸಿ, ಜಾರಿಗೊಳಿಸಬೇಕಾಗಿದೆ.

ಉನ್ನತ ಅಧಿಕಾರ ಸ್ಥಾನಗಳಲ್ಲಿರುವ ಮೂವರು ಮಹಿಳೆಯರನ್ನು ಒಳಗೊಂಡ ಕಾರ್ಯಪಡೆಯನ್ನೇನೋ ಸರ್ಕಾರ ರಚಿಸಿದೆ. ಕಾರ್ಯಪಡೆಯ ಪ್ರತಿ ಸದಸ್ಯರಿಗೂ 300- 400 ಸಲಹೆಗಳು ಸಮಾಜದ ವಿವಿಧ ವರ್ಗಗಳಿಂದ ಬಂದಿವೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಇಂಥ ಕ್ರಮಗಳು ಯಶಸ್ವಿಯಾಗಿ ಅನುಷ್ಠಾನಗೊಳ್ಳಲಿ, ಮಹಿಳಾ ಸುರಕ್ಷತೆ ಎಂಬುದು ಕ್ರಿಯಾಶೀಲವಾಗಿ ರೂಪುಗೊಂಡು, ಭಯಮುಕ್ತವಾದ, ಹೆಣ್ಣುಮಕ್ಕಳು ಪ್ರಗತಿಯೆಡೆಗೆ ಸಾಗುವಂತಹ ದಾರಿ ನಿರ್ಮಾಣವಾಗಲಿ ಎಂದು ಈ ಹೊತ್ತು ಆಶಿಸೋಣ.

ಲೇಖಕಿ: ಮನೋವೈದ್ಯೆ

ಚುರುಮುರಿ



ಸೂಚ್ಯಂಕ ಸ್ವಾವಲಂಬನೆ

● ಸುಮಂಗಲಾ

'ಜಾಗತಿಕ ಹಸಿವಿನ ಸೂಚ್ಯಂಕದಾಗೆ ಒಟ್ಟು 125 ದೇಶಗಳ ಪಟ್ಟಿಯಲ್ಲಿ ನಮ್ಮ ದೇಶ 111ನೇ ಸ್ಥಾನದಲ್ಲಿ ಅಂದ್ರೆ ಅಷ್ಟು ಕೆಳಗೈತಂತ ವರದಿ ಹೇಳಿತ್ತಲ್ಲ... ಎಲ್ಲಾ ಸುಳ್ಳೇ...' ಬೆಕ್ಕಣ್ಣ ನನ್ನ ಮುಖಕ್ಕೆ ತಿವಿದು, ಸುದ್ದಿಯೊಂದನ್ನು ತೋರಿಸಿತು.

'ನೋಡಿಲ್ಲಿ... ಹತ್ತು ವರ್ಸದಾಗೆ ಆರು ಪರ್ಸೆಂಟ್‌ನಿಂದ ನಲವತ್ತು ಪರ್ಸೆಂಟ್‌ಗೆ ಏರಿಕೆ ಆಗ್ಯೈತಂದ್ರ ನಮ್ಮ ದೇಶ ಒಂದು ದಶಕದಾಗೆ ಎಷ್ಟ್ ಪ್ರಗತಿಯಾಗೈತಿ' ಎಂದಿತು.

ಏನು ಏರಿಕೆ ಎಂದು ಕಕಮಕ ನೋಡಿದೆ.

'2011-12ರಲ್ಲಿ ವಾಹನ ಹೊಂದಿದ್ದ ಅತಿಬಡವರ ಸಂಖ್ಯೆ ಆರು ಪರ್ಸೆಂಟ್ ಇದ್ದರೆ, 2022-23ರಲ್ಲಿ ವಾಹನ ಹೊಂದಿರೋ ಅತಿಬಡವರ ಸಂಖ್ಯೆ ನಲವತ್ತು ಪರ್ಸೆಂಟ್ ಆಗ್ಯೈತಂತ. ಯಾರೋ ಕಾಂಜಿಪೀಂಜಿ ವ್ಯಕ್ತಿ ಹೇಳಿದ್ದಲ್ಲ ಇದು. ನಮ್ ಪ್ರಧಾನಿಗಳ ಆರ್ಥಿಕ ಸಲಹಾ ಮಂಡಳಿಯ ಸದಸ್ಯರೇ ಹೇಳ್ಯಾರೆ' ಎಂದು ವಿವರಿಸಿತು.

'ನೋಡಲೇ... ಪ್ರತಿವರ್ಷ ಸರಾಸರಿ ಒಂದೂವರೆ ಕೋಟಿ ಟೂವ್ಹೀಲರ್‌ಗಳು, 30-40 ಲಕ್ಷ ಹೊಸ ಕಾರುಗಳು ಮಾರಾಟ ಆಗತಾವೆ. ಹೊಸ ಹೊಸ ಗಾಡಿ ತಗಳೋ ಮಂದಿ ಹಳೆ ಗಾಡಿಗಳನ್ನು ಕಡಿಮೆ ಬೆಲೆಗೆ ಮಾರತಾರೆ. ಹಳೆ ಗಾಡಿಗಳು ಕಡಿಮೆ ಬೆಲೆಗೆ ಸಿಕ್ಕಾಗ ಬಡಮಂದಿ ಕೊಳ್ಳತಾರೆ' ಎಂದು ನನ್ನ ವಾದ ಮುಂದಿಟ್ಟೆ.

'ಹಳೇದೋ ಹೊಸದೋ, ಒಟ್ 40 ಪರ್ಸೆಂಟ್ ಬಡವರ ಹತ್ರ ಗಾಡಿ ಐತಿ ಅಂದ್ರೆ ಅವ್ರು ಪ್ರಗತಿಯಾದಂಗೆ ಆತಿಲ್ಲೋ'.

'40 ಪರ್ಸೆಂಟ್ ಬಡವರ ಹತ್ರ ಗಾಡಿ ಐತಿ ಅಂದರೆ ಇನ್ನುಳಿದ 60 ಪರ್ಸೆಂಟ್ ಮಂದಿವಳಗ ಒಂದು ಹೊತ್ತಿನ ಊಟಕ್ಕೂ ತತ್ವಾರ ಆಗಿರೋರೂ ಇರತಾರಲ್ಲ?'

'ಮಂದಿ ಹತ್ರ ಗಾಡಿ ಐತಿ ಅಂದ್ರ ಅವ್ರು ಅಷ್ಟ್ ದುಡಿಲಾಕೆ ಹತ್ಯಾರೆ, ಕೈಯಾಗೆ ಅಷ್ಟ್ ರೊಕ್ಕ ಓಡಾಡತೈತಿ ಅಂತನೇ ಅರ್ಥ. ಈ ವಿಶ್ವಬ್ಯಾಂಕು, ಬ್ಯಾರೆ ಮಂದಿ ಹೇಳೋ ಸೂಚ್ಯಂಕ ಎಲ್ಲಾನೂ ಸುಳ್ಳೆ. ನಮ್ಮದೇ ಅಳತೆಗೋಲು ಇಟ್ಟುಕೋಬೇಕು. ಸೂಚ್ಯಂಕ ಸ್ವಾವಲಂಬನೆ ಗಳಿಸಬೇಕು' ಎಂದು ಭಾಷಣ ಕುಟ್ಟಿದ ಬೆಕ್ಕಣ್ಣ ವಿವಿಧ ಸೂಚ್ಯಂಕಗಳ ಮಾನದಂಡ ರೂಪಿಸತೊಡಗಿತು!

ಚರ್ಚೆ

ರಾಜಕೀಯ ಪರಿಭಾಷೆ: ವಿಶ್ಲೇಷಣೆಗೆ ಸಕಾಲ

ರಾಜಕೀಯ ಚಿಂತನೆಗಳು ನಮ್ಮ ರಾಜಕೀಯ ತೀರ್ಮಾನಗಳನ್ನು ಪ್ರಭಾವಿಸದೇ ಇರುವುದರ ಹಿಂದಿನ ಕಾರಣಗಳನ್ನು ನಾವು ಗಮನಿಸಬೇಕಿದೆ

● ಕಿರಣ್ ಎಂ. ಗಾಜನೂರು

'ಹೋದರೆಲ್ಲಿ ನಮ್ಮ ರಾಜಕೀಯ ಚಿಂತಕರು?' ಎಂಬ ಪ್ರಶ್ನೆಯನ್ನು ಯೋಗೇಂದ್ರ ಯಾದವ್ ನಮ್ಮ ಮುಂದಿಟ್ಟಿದ್ದಾರೆ (ಪ್ರ.ವಾ., ಆ. 31). ಅವರ ಪ್ರಕಾರ, ಇಂದು ನಾವು ರಾಜಕೀಯ ನೈತಿಕತೆಯ ಕುಸಿತದ ಕುರಿತು ಹೆಚ್ಚು ಚರ್ಚಿಸುತ್ತಿದ್ದೇವೆ. ವಸಾಹತೋತ್ತರ ಭಾರತದ ಎರಡು ದಶಕಗಳಲ್ಲೇ ಆರಂಭಗೊಂಡ 'ರಾಜಕೀಯ ಚಿಂತನೆಯ ಸವೆತ ಮತ್ತು ಪರಿಭಾಷೆಗಳ ಕುಸಿತ' ನಮ್ಮ ಕಾಲದ ಬಹಳ ದೊಡ್ಡ ಬಿಕ್ಕಟ್ಟು. ವಾಸ್ತವದಲ್ಲಿ ಆ ಕುರಿತ ಚರ್ಚೆಯಿಂದ ನಾವು ವಿಮುಖರಾಗುತ್ತಿದ್ದೇವೆ ಎನ್ನುವ ಸಂಗತಿಯ ಕಡೆ ನಮ್ಮ ಗಮನ ಸೆಳೆದಿದ್ದಾರೆ.

ಆದರೆ ರಾಜಕೀಯ ಪರಿಭಾಷೆಗಳ ಕುಸಿತಕ್ಕೆ ಕಾರಣವಾದ ಚಾರಿತ್ರಿಕ ಸಂಗತಿಗಳನ್ನು ಅವರು ಚರ್ಚೆಯ ಭಾಗವಾಗಿಸಿಲ್ಲ. ಆದ್ದರಿಂದ, ನಮ್ಮ ಕಾಲದಲ್ಲಿ ರಾಜಕೀಯ ಚಿಂತನೆಗಳು ಏಕೆ ನಮ್ಮ ರಾಜಕೀಯ ತೀರ್ಮಾನಗಳನ್ನು ಪ್ರಭಾವಿಸುತ್ತಿಲ್ಲ ಎನ್ನುವ ಸಂಗತಿಗಳನ್ನು, ಅದಕ್ಕೆ ಇರುವ ಕಾರಣಗಳನ್ನು ಗಮನಿಸಬೇಕಿದೆ ಅನ್ನಿಸುತ್ತದೆ.

ಹಾಗೆ ನೋಡುವುದಾದರೆ, ಮಾನವ ನಾಗರಿಕತೆಯ ಆರಂಭದಿಂದಲೂ ಜನರ ನಡುವೆ ಭಿನ್ನಾಭಿಪ್ರಾಯಗಳು ಇವೆ. ಆದರೆ ಅಂತಹ ಭಿನ್ನಾಭಿಪ್ರಾಯಗಳು ಜನರನ್ನು ವಿಘಟಿಸುತ್ತಿರಲಿಲ್ಲ. ಏಕೆಂದರೆ ಆ ಕಾಲದ ಬೌದ್ಧಿಕತೆ 'ಭಿನ್ನವಿದ್ದೂ ಬೆರೆತು ಇರುವ ಲೋಕದೃಷ್ಟಿ'ಯ ತಿಳಿವನ್ನು ಆಧರಿಸಿತ್ತು. ಆದರೆ ಬದಲಾದ ಕಾಲದಲ್ಲಿ 'ಎಲ್ಲವನ್ನೂ ವಿರೋಧಿಸುವ' ಮಾದರಿಯೊಂದು ನಮ್ಮ ನಡುವೆ ಬೆಳೆದು ನಿಂತಿದೆ.

ದೇಶದಲ್ಲಿ 18ನೇ ಲೋಕಸಭಾ ಚುನಾವಣಾ ಪ್ರಚಾರದಲ್ಲಿ ಬಹುತೇಕ ಎಲ್ಲ ಪಕ್ಷಗಳ ರಾಜಕೀಯ ನಾಯಕರು ಬಳಸಿದ ಭಾಷೆ ಮತ್ತು ನುಡಿಗಟ್ಟುಗಳ ಸ್ವರೂಪವು ಈ 'ಬೌದ್ಧಿಕ ವಿರೋಧಿ' ಪರಿಕಲ್ಪನೆಯಿಂದ ಪ್ರಭಾವಿತವಾಗಿದ್ದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಇದರ ಜೊತೆ ಜೊತೆಗೆ ಇತ್ತೀಚೆಗೆ ಪ್ರಮುಖ ಕಂಪನಿಯೊಂದರ ಸಿಇಒ ಅವರ ಡಿಎನ್‌ಎ ಕುರಿತ ಹೇಳಿಕೆ, ಕಂಗನಾ ರನೌತ್ ಅವರ ಹೇಳಿಕೆಗಳು ಈ ಸಂಗತಿಯನ್ನು ಇನ್ನಷ್ಟು ಸ್ಪಷ್ಟಪಡಿಸುತ್ತವೆ.

ಅಮೆರಿಕದ ಸಮಾಜಶಾಸ್ತ್ರಜ್ಞ ಡೇನಿಯಲ್ ರಿಗ್ನಿ, ವರ್ತಮಾನದ ಆಳುವ ವರ್ಗದ ಈ 'ಬೌದ್ಧಿಕತೆ ವಿರೋಧಿ' ನಿಲುವು ಮೂರು ಮುಖ್ಯ ಲಕ್ಷಣಗಳನ್ನು ಹೊಂದಿದೆ ಎಂಬ ವಿಶ್ಲೇಷಣೆಯನ್ನು ಮಂಡಿಸಿದ್ದಾರೆ. ಅವುಗಳೆಂದರೆ, 1. ತಮ್ಮ ಅನುಭವಕ್ಕೆ ವಿರುದ್ಧವಾದ ಅಥವಾ ಅನುಭವವನ್ನು ಯಾವ ಅರ್ಥದಲ್ಲೂ ಪ್ರತಿಫಲಿಸದ ವಾದಗಳನ್ನು ಮುಂದಿಡುವುದು. ಉದಾಹರಣೆಗೆ, ನಮ್ಮ ಸಮಾಜದಲ್ಲಿ ಜಾತಿ ಮತ್ತು ಲಿಂಗತಾರತಮ್ಯ ಎಲ್ಲರ ಅನುಭವವೂ ಹೌದು. ಆದರೂ ಬಹುತೇಕರು ಎಲ್ಲಿದೆ ತಾರತಮ್ಯ ಎನ್ನುವಂತೆ ವಾದಿಸುವ ಮೂಲಕ ತಮ್ಮ ಅನುಭವವನ್ನೇ ನಿರಾಕರಿಸಿಕೊಂಡು ಬಿಡುವುದು.

2. ಧಾರ್ಮಿಕತೆಯು ಹರಡುವ ವೈಚಾರಿಕ ವಿರೋಧಿ ಆಲೋಚನೆಗಳನ್ನೇ ಅರಿವು ಎನ್ನುವಂತೆ ಪ್ರಚಾರ ಮಾಡುವುದು. 3. ಬುದ್ಧಿಜೀವಿಗಳು ಯಾವ ಕೆಲಸವನ್ನೂ ಮಾಡುತ್ತಿಲ್ಲ, ಅವರಿಂದ ಯಾವ ಪ್ರಯೋಜನವೂ ಇಲ್ಲ, ಬೌದ್ಧಿಕತೆಯು ವಿಶ್ವವಿದ್ಯಾಲಯದಲ್ಲಿ ಕುಳಿತ ಗಣ್ಯರ ಕಸರತ್ತು ಮಾತ್ರ ಎನ್ನುವ ಧೋರಣೆಯನ್ನು ಜನರ ಸಾಮಾನ್ಯ ಜ್ಞಾನವಾಗಿಸುವ ಮೂಲಕ, ದುಡಿಯುವ ಜನರ ಮೇಲೆ ದಿನನಿತ್ಯ ನಡೆಯುವ ಶೋಷಣೆಯ ವಿರುದ್ಧ ಧ್ವನಿ ಎತ್ತುವ, ಪ್ರಭುತ್ವದ ವಿರುದ್ಧ ಗಟ್ಟಿಯಾಗಿ ನಿಂತು ಹೋರಾಡುವ ಚಳವಳಿಗಳನ್ನು ಬೌದ್ಧಿಕತೆಯ ಪರಿಧಿಯ ಆಚೆ ಇಟ್ಟುಬಿಡುವುದು.

ಇಂದಿನ ಆಳುವವರ್ಗವು ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ, ಬಹಳ ಮುಖ್ಯವಾಗಿ ಸುಳ್ಳು ಸುದ್ದಿಗಳನ್ನು ಹರಡುವ ಮೂಲಕ ಮೇಲಿನ ಎಲ್ಲಾ ಮನೋಧೋರಣೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಜನರಿಗೆ ತಲುಪಿಸುತ್ತಿದೆ. ಆ ಮೂಲಕ ಅವರು ಎದುರಿಸುತ್ತಿರುವ ಮುಖ್ಯ ಸಮಸ್ಯೆಗಳಿಂದ ವಿಮುಖರಾಗಿ ಯೋಚಿಸುವಂತೆ ಅವರನ್ನು ಮಾಡಲಾಗುತ್ತಿದೆ.



ಬಹುತೇಕ ಬುದ್ಧಿಜೀವಿಗಳು ದೇಶದ ಅಭಿವೃದ್ಧಿಗೆ ಮಾರಕ, ಜಾತ್ಯತೀತತೆ ಒಂದು ರೋಗಪೂರಿತ ಪರಿಭಾಷೆ, ಜನಾಂಗೀಯವಾದ ಈ ಕಾಲಕ್ಕೆ ಬೇಕು ಎಂಬ ಮಾನಸಿಕತೆಯನ್ನು ನಮ್ಮ ಸಮಾಜ ಇಂದು ಬೆಳೆಸಿಕೊಂಡಿರುವುದನ್ನು ನಾವು ಗಮನಿಸಬಹು-ದಾಗಿದೆ. ಹಾಗಾಗಿ, ಯಾದವ್ ವಾದಿಸಿರುವಂತೆ 'ರಾಜಕೀಯ ಪರಿಭಾಷೆಯ ಕುಸಿತ'ವು ಬುದ್ಧಿಜೀವಿಗಳ ಸಮಸ್ಯೆ ಮಾತ್ರವಲ್ಲ. ಬದಲಾಗಿ, 21ನೇ ಶತಮಾನದ ಆಳುವವರ್ಗವು ಮೂಲತಃ ಬೌದ್ಧಿಕತೆ, ವೈಚಾರಿಕತೆ ಮತ್ತು ವೈಜ್ಞಾನಿಕ ಅರಿವಿನ ವಿರುದ್ಧ ಮತ್ತು ಯಥಾಸ್ಥಿತಿವಾದದ ಪರವಾಗಿರುವ ಸಮಸ್ಯೆಯನ್ನಾಗಿಯೂ ಅದನ್ನು ನೋಡಬೇಕಿದೆ ಅನ್ನಿಸುತ್ತದೆ.

ಆಳುವವರ್ಗವು ವೈಜ್ಞಾನಿಕತೆಯ ವಿರೋಧಿ ಅನ್ನುವುದರ ಅರ್ಥ, ವಿಜ್ಞಾನ ಉತ್ಪಾದಿಸುವ ತಂತ್ರಜ್ಞಾನವನ್ನು ಅದು ವಿರೋಧಿಸುತ್ತದೆ ಎಂದಲ್ಲ. ಅದು ಇಂದಿನ ಆಳುವವರ್ಗಕ್ಕೆ ಬೇಕು. ಆದರೆ ವಿಜ್ಞಾನ ಉತ್ಪಾದಿಸುವ 'ತಿಳಿವು ಮತ್ತು ಲೋಕದೃಷ್ಟಿ' ಅಪಾಯಕಾರಿ ಅನ್ನುವ ಧೋರಣೆಯನ್ನು ಆಳುವವರ್ಗ ಹೊಂದಿದೆ. ಆದ್ದರಿಂದಲೇ ಶಿಕ್ಷಣವು ಅರಿವಿಗಿಂತ ಕೌಶಲಕ್ಕೆ ಹೆಚ್ಚು ಮಹತ್ವ ನೀಡಬೇಕು ಎನ್ನುವ ನಿಲುವನ್ನು ನೀತಿಯಾಗಿ ಹೊಂದಿದ್ದೇವೆ. ಹಾಗಾಗಿ, ನಮ್ಮ ರಾಜಕೀಯ ಸಂಸ್ಥೆಗಳಲ್ಲಿ ರಾಚನಿಕ ಬದಲಾವಣೆಯನ್ನು ತರುವುದು 'ರಾಜಕೀಯ ಪರಿಭಾಷೆಯ ಕುಸಿತ'ವನ್ನು ತಡೆಯುವ ಪರಿಣಾಮಕಾರಿ ಆಯ್ಕೆ ಅನ್ನಿಸುತ್ತದೆ.

ಲೇಖಕ: ಸಹಾಯಕ ಪ್ರಾಧ್ಯಾಪಕ
ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ

ವಾಚಕರ ವಾಣಿ

ಕನ್ನಡದಲ್ಲಿ ಮಾತಾಡಿ, ವಂಚನೆ ತಡೆಯಿರಿ!

'ಕನ್ನಡದಲ್ಲಿ ಮಾತಾಡಿ ಸೈಬರ್ ವಂಚನೆಯಿಂದ ಪಾರಾಗಿ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಜನರಿಗೆ ಕರೆ ನೀಡಿರುವುದು ತಮಾಷೆ ಎನಿಸಿದರೂ ಸತ್ಯಕ್ಕೆ ದೂರವಿಲ್ಲದ ಹೇಳಿಕೆ ಎನ್ನಬಹುದು. ಬಹುತೇಕ ಸೈಬರ್ ವಂಚಕರ ಮೂಲ ಹಿಂದಿ ಭಾಷಿಕ ರಾಜ್ಯಗಳಾಗಿದ್ದು, ಕರೆಗಳು ಹಿಂದಿ ಅಥವಾ ಇಂಗ್ಲಿಷ್ ಭಾಷೆಯಲ್ಲಿ ಇರುತ್ತವೆ. ಹಿಂದಿ ಭಾಷೆಯಲ್ಲಿನ ಅವರ ಕರೆಗಳಿಗೆ ಹಿಂದಿಯಲ್ಲಿ ಸ್ಪಂದಿಸಿದರೆ ಅವರು ಇನ್ನೂ ಉತ್ತೇಜಿತರಾಗಿ ತಮ್ಮ ಕುಕೃತ್ಯವನ್ನು ಮುಂದುವರಿಸುತ್ತಾರೆ. ಇಂಗ್ಲಿಷ್ ಭಾಷೆಯಲ್ಲಿ ಉತ್ತರಿಸಿದರೆ ಸ್ವಲ್ಪ ಮಟ್ಟಿಗೆ ತಡವರಿಸುತ್ತಾರೆ. ಕನ್ನಡದಲ್ಲಿ ಮಾತನಾಡಿದರೆ ಬೈದು ಫೋನ್ ಕಟ್ ಮಾಡುತ್ತಾರೆ. ಕೆಲವು ಕನ್ನಡಿಗರು ತಮ್ಮ ಭಾಷಾ ಪ್ರಾವೀಣ್ಯವನ್ನು ತೋರಿಸಲು ಹಿಂದಿಯಲ್ಲಿ ಉತ್ತರಿಸುತ್ತಿದ್ದು, ವಂಚಕರ ಜಾಲಕ್ಕೆ ಸುಲಭವಾಗಿ ಬಲಿಯಾಗುತ್ತಿದ್ದಾರೆ. ಅಪ್ಪಟ ಭಾಷಾ ಪ್ರೇಮ ಇರುವ ತಮಿಳುನಾಡಿನಲ್ಲಿ ಇಂತಹ ಪ್ರಕರಣಗಳು ಕಡಿಮೆ ಎನ್ನಲಾಗುತ್ತದೆ. ಪೊಲೀಸ್ ಅಧಿಕಾರಿ ಹೇಳಿದಂತೆ, ಕನ್ನಡಿಗರು ತಮ್ಮ ಪರಭಾಷಾ ವ್ಯಾಮೋಹವನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಿಕೊಂಡರೆ ಇಂತಹ ಸೈಬರ್ ವಂಚನೆಗಳಿಂದ ಪಾರಾಗಬಹುದೇನೊ.

ರಮಾನಂದ ಶರ್ಮಾ, ಬೆಂಗಳೂರು

ಚಟಗಳೆಂದರೇ ಹಾಗೆ...

ಜಗಿಯಲು ತಂಬಾಕು ಕೊಡಲಿಲ್ಲವೆಂದು ಕಾರವಾರ ಜೈಲಿನಲ್ಲಿ ವಿಚಾರಣಾಧೀನ ಕೈದಿಗಳು ಗಲಾಟೆ ನಡೆಸಿರುವುದಾಗಿ, ಒಬ್ಬನಂತೂ ಕಲ್ಲಿಗೆ ತಲೆಯನ್ನು ಜಜ್ಜಿಕೊಂಡಿರುವುದಾಗಿ ವರದಿಯಾಗಿದೆ (ಪ್ರ.ವಾ., ಆ. 30). ಚಟಗಳೆಂದರೇ ಹಾಗೆ. ಬಯಸಿದಾಗ ಸಿಗದಿದ್ದರೆ ಮನುಷ್ಯ ಏನು ಮಾಡುತ್ತಾನೋ ಹೇಳಲಾಗುವುದಿಲ್ಲ. ವಿಶೇಷವಾಗಿ ಗುಟ್ಕಾ, ಸಿಗರೇಟು ಸೇವನೆ ಸಮಾಜದಲ್ಲಿ ಅತಿಯಾಗುತ್ತಿದೆ. ಒಂದು ಶಾಲೆಯ ಕಾಂಪೌಂಡ್ ಹೊರಗಿನಿಂದ ಮಕ್ಕಳಿಗೆ ಅಂಗಡಿಯವನು ಗುಟ್ಕಾ ಪ್ಯಾಕೆಟ್ ಕೊಡುವುದನ್ನು ನೋಡಿದೆ. ಕೇಳಿದರೆ ಅದು ಸೋಂಪಿನ ಪ್ಯಾಕೆಟ್ ಎಂದ.

ವೈಯಕ್ತಿಕವಾಗಿ ಮತ್ತು ಸಾಮಾಜಿಕವಾಗಿ ತಂಬಾಕು ಚಟ ತುಂಬಾ ಹಾನಿ ಉಂಟುಮಾಡುತ್ತಿದೆ. ನಮ್ಮ ಸಾರ್ವಜನಿಕ ಸ್ಥಳಗಳು ಹೊಲಸಾಗಲು ಗುಟ್ಕಾ ತಿಂದು ಉಗುಳುವವರು ಪ್ರಮುಖ ಕಾರಣ. ನಮ್ಮ ಧರ್ಮ, ಜಾತಿಗಳು ಆಹಾರದ ವಿಷಯದಲ್ಲಿ ಭೇದಭಾವ ಹೊಂದಿವೆ. ಆದರೆ ತಂಬಾಕು ಚಟಕ್ಕೆ ಸಂಬಂಧಿಸಿದಂತೆ ಹಿಂದೂ, ಕ್ರೈಸ್ತ, ಮುಸ್ಲಿಂ ಎಲ್ಲರೂ ಸಮಾನರು. ನಮ್ಮ ಸ್ವಾಮಿಗಳು, ಮೌಲ್ವಿಗಳು, ಪಾದ್ರಿಗಳು ಎಲ್ಲರೂ ಸೇರಿ ಸಿಗರೇಟು, ಗುಟ್ಕಾ ವಿರುದ್ಧ ಧ್ವನಿ ಎತ್ತಬೇಕು.

ಪ್ರೊ. ಶಶಿಧರ ಪಾಟೀಲ್, ಬಾಗಲಕೋಟೆ

ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ?

ಗೋಮಾಂಸ ತಿಂದ ಶಂಕೆಯಿಂದ ಪಶ್ಚಿಮ ಬಂಗಾಳ ಮೂಲದ ಚಿಂದಿ ಆಯುವ ಒಬ್ಬ ಬಡಪಾಯಿ ವಲಸೆ ಕಾರ್ಮಿಕನನ್ನು ಚಂಡೀಗಢದಲ್ಲಿ ಥಳಿಸಿ ಕೊಂದಿರುವುದಾಗಿ ವರದಿಯಾಗಿದೆ (ಪ್ರ.ವಾ., ಸೆ. 1). ದೇಶದ ಎಲ್ಲಾ ಭಾಗಗಳಲ್ಲಿ ಗೋಮಾಂಸವನ್ನು ಅನೇಕ ಧರ್ಮದವರು ಆಹಾರವಾಗಿ ಬಳಸುತ್ತಿರುವುದು, ಕೆಲವು ಹೋಟೆಲುಗಳು ಗೋಮಾಂಸದ ಖಾದ್ಯವನ್ನು ನೀಡುತ್ತಿರುವುದು ತಿಳಿದ ವಿಷಯವೇ ಆಗಿದೆ. ಆಹಾರ ಕ್ರಮ ಅವರವರ ವೈಯಕ್ತಿಕ ವಿಷಯ. ಹೀಗಿರುವಾಗ, ಬಡಪಾಯಿ ಕಾರ್ಮಿಕನನ್ನು ಗೋಮಾಂಸ ತಿಂದಿರುವ ಶಂಕೆಯಿಂದ ಐದು ಮಂದಿ ಸೇರಿ ಕೊಂದಿರುವುದು ಯಾವ ನ್ಯಾಯ? ಇದು ಮಾನವ ಹಕ್ಕು ಉಲ್ಲಂಘನೆಗೆ ಎಡೆ ಮಾಡಿಕೊಟ್ಟಿದ್ದು 'ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ' ಬಿಟ್ಟಂತಾಗಿದೆ. ಇಂತಹ ಸಂವಿಧಾನ ವಿರೋಧಿ ಪ್ರಕರಣಗಳು, ಶಾಂತಿಪ್ರಿಯ ದೇಶವೆಂದು ಕರೆಸಿಕೊಳ್ಳುವ ನಮ್ಮ ಭಾರತದಲ್ಲಿ ಹೆಚ್ಚುತ್ತಿರುವುದು ತಲೆ ತಗ್ಗಿಸುವಂತಹ ವಿದ್ಯಮಾನ.

ಡಿ.ಪ್ರಸನ್ನಕುಮಾರ್, ಬೆಂಗಳೂರು

ಈ ಭಾಷಾಂತರಕ್ಕೆ ಸಿಗಲಿ ರಾಜ್ಯೋತ್ಸವ ಪ್ರಶಸ್ತಿ!

'ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗಾಗಿ ನಡೆದ ಪೂರ್ವಭಾವಿ ಪರೀಕ್ಷೆಯ ಪ್ರಶ್ನೆಗಳ ಕನ್ನಡ ಅನುವಾದ ಮಾಡಿದ್ದು ಗೂಗಲ್ ಅಥವಾ ಎ.ಐ. ಅಲ್ಲ. ಭಾಷಾಂತರ ಇಲಾಖೆಯ ಭಾಷಾಂತರಕಾರರು' ಎಂದು ಈ ಪ್ರಶ್ನೆಪತ್ರಿಕೆ ವಿವಾದದ ಕುರಿತು ಕೆಪಿಎಸ್‌ಸಿ ಸ್ಪಷ್ಟನೆ ನೀಡಿದೆ (ಪ್ರ.ವಾ., ಆ. 30). ಅಂತಹ 'ಅದ್ಭುತ' ಭಾಷಾಂತರಕ್ಕಾಗಿ ಆ ಭಾಷಾಂತರಕಾರರಿಗೆ ಈ ಬಾರಿಯ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಬೇಕು! ಮೊದಲಿಗೆ ಕನ್ನಡ ಭಾಷೆಯ ಬಗ್ಗೆ ಕನಿಷ್ಠ ಪ್ರಜ್ಞೆಯೂ ಇಲ್ಲದವರಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸುವಂತಹ ದೊಡ್ಡ ಜವಾಬ್ದಾರಿ ನೀಡಿದ್ದು ಅಕ್ಷಮ್ಯ. ಈ ಮೂಲಕ ಲಕ್ಷಾಂತರ ಉದ್ಯೋಗಾಕಾಂಕ್ಷಿಗಳಿಗೆ ಕೆಪಿಎಸ್‌ಸಿ ಭಾರಿ ಅನ್ಯಾಯ ಎಸಗಿದೆ. ಕೇಂದ್ರ ಸರ್ಕಾರದ ಪರೀಕ್ಷೆಗಳು ಕನ್ನಡದಲ್ಲಿ ನಡೆಯಬೇಕು ಎಂದು ಒತ್ತಾಯಿಸುವ ನಾವು, ಕನ್ನಡದಲ್ಲೇ ಪರೀಕ್ಷೆ ನಡೆಸುವ ಕೆಪಿಎಸ್‌ಸಿಯ ಈ ನಿರ್ಲಕ್ಷ್ಯ ಧೋರಣೆಯನ್ನು ಹೇಗೆ ಸಹಿಸುವುದು? ಇಂತಹ ನಿರ್ಲಕ್ಷ್ಯದ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಇದು ಬರೀ ಸುದ್ದಿಯಾಗಿ ಉಳಿಯುವುದು ಖಚಿತ.

ಸತೀಶಗೌಡ ಪಾಟೀಲ, ಹಾವೇರಿ

ಜನೌಷಧಿ: ಏಕರೂಪದ ಬೆಲೆ ಇರಲಿ

ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಜನೌಷಧಿ ಕೇಂದ್ರದಲ್ಲಿ ಒಳ್ಳೆಯ ಗುಣಮಟ್ಟದ ಜೆನರಿಕ್ ಔಷಧಿಗಳು ದೊರೆಯುತ್ತಿವೆ. ಬ್ರ್ಯಾಂಡೆಡ್ ಔಷಧಿ ಕಂಪನಿಗಳಿಗಿಂತ ಸರಿಸುಮಾರು ಶೇ 70ರಿಂದ ಶೇ 80ರಷ್ಟು ಕಡಿಮೆ ಬೆಲೆಯಲ್ಲಿ ಔಷಧಿ ಲಭ್ಯವಿರುವುದು ಕಡಿಮೆ ಆದಾಯದವರೂ ಸೇರಿದಂತೆ ಎಲ್ಲರಿಗೂ ಪ್ರಯೋಜನಕಾರಿಯಾಗಿದೆ. ಆದರೆ ನಮ್ಮ ಮಂಗಳೂರಿನ ಜನಔಷಧಿ ಕೇಂದ್ರಗಳಲ್ಲಿ ಒಂದೇ ಕಂಪನಿಯ ಅದೇ ಔಷಧಿಗೆ ಬೇರೆ ಬೇರೆ ರೀತಿಯಲ್ಲಿ ಹಣ ವಸೂಲಿ ಮಾಡುತ್ತಾರೆ. ಅದೇ ಕಂಪನಿ, ಅದೇ ಮದ್ದು, ಅದೇ ಬ್ಯಾಚ್ ನಂಬರ್ ಮತ್ತು ತಯಾರಿಸಿದ ದಿನಾಂಕ ಹಾಗೂ ಅದೇ ಗರಿಷ್ಠ ಮಾರಾಟ ಬೆಲೆ ಹೊಂದಿದ್ದರೂ ಒಂದು ಜನೌಷಧಿ ಕೇಂದ್ರಕ್ಕಿಂತ ಇನ್ನೊಂದರಲ್ಲಿ ಅದರ ಬೆಲೆಯಲ್ಲಿ ಸುಮಾರು ಶೇ 40ರಿಂದ ಶೇ 50ರಷ್ಟು ವ್ಯತ್ಯಾಸ ಇರುತ್ತದೆ. ಈ ರೀತಿ ಕೆಲ ಜನೌಷಧಿ ಕೇಂದ್ರದವರು ಜಾಸ್ತಿ ಹಣ ವಸೂಲಿ ಮಾಡಿ ಜನರನ್ನು ಸುಲಿಗೆ ಮಾಡುತ್ತಾರೆ.

ಇದಕ್ಕೆ ಕಾರಣ, ಔಷಧಿ ಕಂಪನಿಯವರು ಅದರಲ್ಲಿ ಜನೌಷಧಿ ಕೇಂದ್ರದಲ್ಲಿ ಮಾರುವ ರಿಯಾಯಿತಿ ದರವನ್ನು ಮುದ್ರಿಸುವ ಬದಲು ರಿಯಾಯಿತಿ ಇಲ್ಲದೇ ಮಾರಾಟ ಮಾಡುವ ಗರಿಷ್ಠ ಮಾರಾಟ ಬೆಲೆಯನ್ನು ಮುದ್ರಿಸಿರುವುದು. ಇದನ್ನು ಕೆಲವು ಕೇಂದ್ರಗಳು ದುರ್ಬಳಕೆ ಮಾಡಿಕೊಳ್ಳುತ್ತಿವೆ. ಕೇಂದ್ರ ಆರೋಗ್ಯ ಇಲಾಖೆ ಅಧಿಕಾರಿಗಳು ಇದರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು.

ಲಕ್ಷ್ಮೀಕಾಂತ್ ಕೊಟ್ಟಾರಚೌಕಿ, ಮಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಹೆಚ್ಚುತ್ತಿರುವ ಕೆಲಸದ ಅವಧಿ; ಉದ್ಯೋಗ ಮತ್ತು ಖಾಸಗಿ ಬದುಕಿನ ನಡುವೆ ಸಮತೋಲನದ ಸಮಸ್ಯೆ

ಬಸವಳಿಯುತ್ತಿರುವ ಭಾರತೀಯರು

ಜಾಗತಿಕ ಮಟ್ಟದಲ್ಲಿ ವೃತ್ತಿ ಮತ್ತು ವೈಯಕ್ತಿಕ ಜೀವನದ ನಡುವಿನ ಗೆರೆ ಕಿರಿದಾಗುತ್ತಾ ಸಾಗುತ್ತಿದೆ. ಈಚಿನ ದಿನಗಳಲ್ಲಂತೂ ಇದು ದೊಡ್ಡ ಸಮಸ್ಯೆಯಾಗಿದೆ. ಭಾರತದಲ್ಲಿ ಕೆಲಸ ಮತ್ತು ಖಾಸಗಿ ಬದುಕಿನ ನಡುವೆ ಸಮತೋಲನದ ಕೊರತೆ ತೀವ್ರವಾಗುತ್ತಿದೆ. ಹೆಚ್ಚುತ್ತಿರುವ ಕೆಲಸದ ಅವಧಿ, ಒತ್ತಡ, ದೈಹಿಕ ಚಟುವಟಿಕೆಗಳ ಕೊರತೆಯಿಂದ ಯುವ ಜನಾಂಗ ಬಸವಳಿಯುತ್ತಿದೆ. ಮಹತ್ವಾಕಾಂಕ್ಷೆ, ಸ್ಪರ್ಧೆ, ವೃತ್ತಿ ಮತ್ತು ವೈಯಕ್ತಿಕ ಬದುಕಿನ ಏಳಿಗೆಯ ಚಕ್ರಸುಳಿಯಲ್ಲಿ ಸಿಲುಕಿರುವ ಉದ್ಯೋಗಿಗಳು ವಿಪರೀತ ಒತ್ತಡ, ದಣಿವು ಅನುಭವಿಸುತ್ತಿದ್ದಾರೆ

ಪ್ರಜಾವಾಣಿ ವಾರ್ತೆ

ಮನುಷ್ಯನಿಗೆ ವೃತ್ತಿ ಬದುಕು ಎಷ್ಟು ಮುಖ್ಯವೋ, ವೈಯಕ್ತಿಕ ಬದುಕು ಕೂಡ ಅಷ್ಟೇ ಮುಖ್ಯ. ದಕ್ಷತೆಯಿಂದ ಕೆಲಸ ಮಾಡಬೇಕೆಂದರೆ, ವ್ಯಕ್ತಿಯ ಆರೋಗ್ಯ, ಕೌಟುಂಬಿಕ ಜೀವನ ಉತ್ತಮವಾಗಿರಬೇಕು. ಕೆಲಸ ಮತ್ತು ವೈಯಕ್ತಿಕ ಜೀವನದ ನಡುವೆ ಸಮತೋಲನ ಸಾಧಿಸಬೇಕು. ಜಾಗತಿಕ ಮಟ್ಟದಲ್ಲಿ ಹಲವು ದೇಶಗಳು ಈ ಸಮಸ್ಯೆಯನ್ನು ಎದುರಿಸುತ್ತಿವೆ. ಭಾರತದಲ್ಲಿ ಔಪಚಾರಿಕ ವಲಯದ ಉದ್ಯೋಗಿಗಳ ವೃತ್ತಿ ಜೀವನ ಮತ್ತು ವೈಯಕ್ತಿಕ ಜೀವನದ ನಡುವೆ ಸಮತೋಲನದ ಕೊರತೆ ಇರುವುದು ಹಲವು ಅಧ್ಯಯನಗಳಿಂದ ತಿಳಿದುಬಂದಿದೆ.

2024ರ ಜಾಗತಿಕ ವೃತ್ತಿಜೀವನ ಮತ್ತು ವೈಯಕ್ತಿಕ ಬದುಕಿನ ಸಮತೋಲನ ಸೂಚ್ಯಂಕದಲ್ಲಿ ಭಾರತವು 60 ದೇಶಗಳ ಪೈಕಿ 48ನೇ ಸ್ಥಾನ ಪಡೆದಿರುವುದು ಸಮಸ್ಯೆಯ ತೀವ್ರತೆಗೆ ಕನ್ನಡಿ ಹಿಡಿಯುತ್ತಿದೆ. ಈ ಬಗ್ಗೆ 'ಯುಕೆಜಿ ವರ್ಕ್‌ಫೋರ್ಸ್ ಇನ್‌ಸ್ಟಿಟ್ಯೂಟ್', 'ಯುವರ್ ದೋಸ್ತ್' ವಿಸ್ತೃತ ಅಧ್ಯಯನ ನಡೆಸಿದ್ದು, ಸಮೀಕ್ಷೆ ನಡೆಸಿದವರ ಪೈಕಿ ಶೇ 78 ಭಾರತೀಯರು ವೃತ್ತಿ–ಮನೆ ನಡುವಿನ ಸಂಘರ್ಷದಲ್ಲಿ ಬಸವಳಿಯುತ್ತಿದ್ದಾರೆ ಎಂದು ತಿಳಿಸಿದೆ. ಸಮೀಕ್ಷೆಗಾಗಿ 'ಯುಕೆಜಿ' 4 ಸಾವಿರಕ್ಕೂ ಹೆಚ್ಚು ಮಂದಿಯನ್ನು ಸಂದರ್ಶನ ಮಾಡಿತ್ತು. 'ಯುವರ್ ದೋಸ್ತ್' 5000ಕ್ಕೂ ಹೆಚ್ಚು ಉದ್ಯೋಗಿಗಳಿಂದ ಅಭಿಪ್ರಾಯ ಸಂಗ್ರಹಿಸಿದೆ.

'ಯುಕೆಜಿ' ಸಮೀಕ್ಷೆಗೊಳಪಡಿಸಿದವರ ಪೈಕಿ ಶೇ 89ರಷ್ಟು ಮಂದಿ ಕೆಲಸದ ಅವಧಿ ವಿಸ್ತರಣೆ ಮಾಡಲು ಹಾಗೂ ಹೊಸ ಸವಾಲುಗಳನ್ನು ಎದುರಿಸಲು ಸಿದ್ಧವಾಗಿರುವುದಾಗಿ ಹೇಳಿದ್ದಾರೆ. ಆದರೆ, ಅದಕ್ಕೆ ತಕ್ಕಂತೆ ಬಹುತೇಕ ಉದ್ಯೋಗಿಗಳಲ್ಲಿ ಒತ್ತಡವೂ ಏರುತ್ತಿದ್ದು, ವೈಯಕ್ತಿಕ ಬದುಕಿನ ಮೇಲೆ ಪರಿಣಾಮ ಬೀರುತ್ತಿದೆ. 2023ಕ್ಕೆ ಹೋಲಿಸಿದರೆ, ಭಾರತೀಯ ವೃತ್ತಿಪರರು ಶೇ 31ರಷ್ಟು ಹೆಚ್ಚು ಮತ್ತು ವಿಪರೀತ ಮಟ್ಟದ ಒತ್ತಡ ಅನುಭವಿಸುತ್ತಿದ್ದಾರೆ ಎಂದು 'ಯುವರ್‌ದೋಸ್ತ್' ಅಧ್ಯಯನದಲ್ಲಿ ಕಂಡುಬಂದಿದೆ.

ಇದೇ ಕಾರಣಕ್ಕೆ, ಕರ್ನಾಟಕದಲ್ಲಿ ಮಾಹಿತಿ ತಂತ್ರಜ್ಞಾನ (ಐಟಿ) ವಲಯದಲ್ಲಿ ಕೆಲಸದ ಅವಧಿಯನ್ನು ಹೆಚ್ಚಳ ಮಾಡುವ ಪ್ರಸ್ತಾವಕ್ಕೆ ಭಾರಿ ವಿರೋಧ ವ್ಯಕ್ತವಾಗಿತ್ತು. ಐಟಿ ಕ್ಷೇತ್ರದ ಉದ್ಯೋಗಿಗಳಿಗೆ ದುಡಿಮೆಯ ಅವಧಿಯನ್ನು 12 ಗಂಟೆಯಿಂದ 14 ಗಂಟೆಗಳಿಗೆ ಹೆಚ್ಚಿಸಬೇಕು ಎಂದು ಉದ್ಯಮಿಗಳು ಜುಲೈನಲ್ಲಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದರು. 'ಕೆಲಸದ ಅವಧಿಯನ್ನು 8 ಗಂಟೆಯಿಂದ 12 ಗಂಟೆಗೆ ಹೆಚ್ಚಿಸಿರುವುದೇ ಕಾರ್ಮಿಕ ವಿರೋಧಿ ನೀತಿ ಆಗಿದ್ದು, ಅದನ್ನು ಮತ್ತೆ 2 ಗಂಟೆ ಹೆಚ್ಚಿಸಿದರೆ ಅದು ಜೀವ ವಿರೋಧಿ ನೀತಿ ಆಗುತ್ತದೆ' ಎಂದು ಕಾರ್ಮಿಕ ಸಂಘಟನೆಗಳು ವಿರೋಧ ವ್ಯಕ್ತಪಡಿಸಿದ್ದವು.


ತಮಿಳುನಾಡಿನಲ್ಲಿಯೂ ಎರಡು ವರ್ಷಗಳ ಹಿಂದೆ ಇದೇ ರೀತಿಯ ಪ್ರಯತ್ನ ನಡೆದಿತ್ತು. ಆಯ್ದ ವಲಯಗಳ ಸೀಮಿತ ಉದ್ಯೋಗಿಗಳಿಗೆ ಕೆಲಸದ ಅವಧಿಯನ್ನು ಹೆಚ್ಚಿಸುವುದಕ್ಕೆ ಡಿಎಂಕೆ ಸರ್ಕಾರ ಮುಂದಾಗಿತ್ತು. ಆದರೆ, ಡಿಎಂಕೆ ಮಿತ್ರಪಕ್ಷಗಳೇ ಅದನ್ನು ವಿರೋಧಿಸಿದ್ದರಿಂದ ಸರ್ಕಾರ ಪ್ರಸ್ತಾವವನ್ನು ಕೈಬಿಟ್ಟಿತು.

2023ರ ಅಕ್ಟೋಬರ್‌ನಲ್ಲಿ ಕೆಲಸದ ಅವಧಿಗೆ ಸಂಬಂಧಿಸಿ ಇನ್ಫೊಸಿಸ್ ಸಹಸಂಸ್ಥಾಪಕ ಎನ್.ಆರ್.ನಾರಾಯಣಮೂರ್ತಿ ಅವರು ನೀಡಿದ್ದ ಹೇಳಿಕೆ ರಾಷ್ಟ್ರ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗಿತ್ತು. ಭಾರತದ ಕೆಲಸದ ಸಂಸ್ಕೃತಿ ಬದಲಾಗಬೇಕಿದ್ದು, ಯುವಜನರು ವಾರಕ್ಕೆ 70 ಗಂಟೆಗೂ ಹೆಚ್ಚು ಅವಧಿ ಕೆಲಸ ಮಾಡಬೇಕು ಎಂದು ನಾರಾಯಣಮೂರ್ತಿ ಹೇಳಿದ್ದರು. ವಿಶೇಷ ಅಂದರೆ, 21ರಿಂದ 30 ವರ್ಷದ ಒಳಗಿನ ಯುವಜನರಲ್ಲಿ ಕೆಲಸದ ಒತ್ತಡ ಹೆಚ್ಚು (ಶೇ 64ರಷ್ಟು) ಎಂದು 'ಯುವರ್‌ದೋಸ್ತ್' ಅಧ್ಯಯನ ತಿಳಿಸಿದೆ.

ಔದ್ಯೋಗಿಕ ವಲಯಕ್ಕೆ 1995ರ ಬಳಿಕ ಜನಿಸಿದವರ ಪ್ರವೇಶದಿಂದ ಪರಿಸ್ಥಿತಿ ಮತ್ತಷ್ಟು ಸಂಕೀರ್ಣವಾಗಿದ್ದು, ಅವರು ಹೆಚ್ಚು ಅವಧಿಯನ್ನು ಕೆಲಸದಲ್ಲಿ ಕಳೆಯುತ್ತಿದ್ದಾರೆ. ಇದರಿಂದ ಉತ್ತೇಜಿತವಾಗಿರುವ ಕೆಲವು ಕಂಪನಿಗಳು, ವಾರಕ್ಕೆ ನಾಲ್ಕು ದಿನ ಕೆಲಸದ ನೀತಿಯನ್ನು ಅಳವಡಿಕೊಳ್ಳಲು ಮುಂದಾಗಿವೆ. ಮನೆಯಿಂದ ಕೆಲಸ ಮಾಡುವ ಕೆಲವರು ಮೂನ್‌ಲೈಟಿಂಗ್ (ಏಕಕಾಲಕ್ಕೆ ಎರಡು ಉದ್ಯೋಗ ಮಾಡುವುದು) ಕೂಡ ಮಾಡುತ್ತಿದ್ದಾರೆ. ಇದು ಒಂದು ಹಂತದವರೆಗೆ ಉತ್ತಮವಾಗಿ ಕಂಡರೂ ಉದ್ಯೋಗದಾತರ ಬೇಡಿಕೆ ಮತ್ತು ಉದ್ಯೋಗಿಯ ಅಗತ್ಯಗಳ ನಡುವೆ ಸಮನ್ವಯ ಸಾಧ್ಯವಾಗದಿದ್ದರೆ, ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಅವುಗಳ ಅಂತಿಮ ಪರಿಣಾಮ ಎದುರಿಸಬೇಕಾದವರು ಉದ್ಯೋಗಿಗಳೇ.

ಕೋಟ್ಯಂತರ ಮಂದಿ ಕೆಲಸ ಮತ್ತು ಮನೆಯ ನಡುವೆ ಸಮನ್ವಯ ಸಾಧಿಸಲು ಹೋರಾಟವನ್ನೇ ನಡೆಸುತ್ತಿದ್ದಾರೆ. ಇದು ಅವರ ದೈಹಿಕ ಮತ್ತು ಮಾನಸಿಕ ಜೀವನದ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನು ಬೀರುತ್ತಿದೆ. ಕೆಲವು ಕಂಪನಿಗಳು ಉದ್ಯೋಗಿಗಳ ಒತ್ತಡ ನಿವಾರಣೆಗಾಗಿ ಹಲವು ರೀತಿಯ ಮನರಂಜನಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿವೆ; ಜಿಮ್, ಯೋಗ ಶಿಬಿರಗಳನ್ನು ಆಯೋಜಿಸುತ್ತಿವೆ.

ಕೆಲವು ಉದ್ಯೋಗಿಗಳು ಕೆಲಸದ ಅವಧಿಯ ಹೆಚ್ಚಳದ ಪರವಾಗಿದ್ದರೂ ಬಹುತೇಕರು ಅದನ್ನು ವಿರೋಧಿಸುತ್ತಿದ್ದು, ವೈಯಕ್ತಿಕ ಜೀವನದ ಕಡೆ ಗಮನ ಕೊಡಲು ಅಗತ್ಯ ಸಮಯ ಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಕೌಟುಂಬಿಕ ಜೀವನ, ಅಗತ್ಯ ಪ್ರಮಾಣದ ದೈಹಿಕ ಚಟುವಟಿಕೆ, ಮನರಂಜನೆ, ಊಟ, ನಿದ್ರೆ ಎಲ್ಲವೂ ಸಮರ್ಪಕವಾಗಿದ್ದಾಗ ಮಾತ್ರ ಉತ್ತಮವಾಗಿ ಕೆಲಸ ಮಾಡಲು ಸಾಧ್ಯ. ದೀರ್ಘಕಾಲದ ವೃತ್ತಿಜೀವನವನ್ನು ಉತ್ತಮವಾಗಿ ಸಾಗಿಸಬೇಕು ಎಂದರೆ, ಕೆಲಸದ ಗುಣಮಟ್ಟ, ಉತ್ಪಾದಕತೆ ಚೆನ್ನಾಗಿರಬೇಕು ಎಂದರೆ ಉದ್ಯೋಗಿಗೆ ಬಿಡುವಿನ ಅವಧಿ ಮುಖ್ಯ ಎಂದು ಮನಃಶಾಸ್ತ್ರಜ್ಞರು ಹೇಳುತ್ತಾರೆ.



48 ಗಂಟೆಗಳು
ವಾರದಲ್ಲಿ ಇಷ್ಟು ಅವಧಿಗಿಂತಲೂ ಹೆಚ್ಚು ಸಮಯ ಕೆಲಸ ಮಾಡುವ ಉದ್ಯೋಗಿಗಳು ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಹೆಚ್ಚಿದ್ದಾರೆ

78%
ಕೆಲಸದ ಒತ್ತಡ ಹೆಚ್ಚಾಗಿ ಬಸವಳಿಯುವ ಭಾರತದ ಉದ್ಯೋಗಿಗಳ ಪ್ರಮಾಣ

64%
ವೇತನ ಮತ್ತು ಕೆಲಸದ ಅವಧಿ ಕಡಿತಗೊಳಿಸುವ ಪ್ರಸ್ತಾವವನ್ನು ಒಪ್ಪಲು ಸಿದ್ಧರಿರುವ ಉದ್ಯೋಗಿಗಳ ಪ್ರಮಾಣ

64%
ಕೆಲಸದ ಒತ್ತಡದಿಂದ ಬಳಲುತ್ತಿರುವ 21ರಿಂದ 30 ವರ್ಷ ವಯೋಮಾನದ ಉದ್ಯೋಗಿಗಳ ಪ್ರಮಾಣ

72.2%
ಹೆಚ್ಚು ಒತ್ತಡ ಅನುಭವಿಸುತ್ತಿರುವ ಮಹಿಳಾ ಉದ್ಯೋಗಿಗಳ ಪ್ರಮಾಣ

53.64%
ಒತ್ತಡದಿಂದ ಬಳಲುತ್ತಿರುವ ಪುರುಷ ಉದ್ಯೋಗಿಗಳ ಪ್ರಮಾಣ

ವೃತ್ತಿ–ವೈಯಕ್ತಿಕ ಜೀವನ ಸಮತೋಲನ ಸೂಚ್ಯಂಕ: ಭಾರತಕ್ಕೆ 48ನೇ ಸ್ಥಾನ

ರ‍್ಯಾಂಕ್	ದೇಶ	ಸೂಚ್ಯಂಕ ಅಂಕ (100ಕ್ಕೆ)	ಕನಿಷ್ಠ ವಾರ್ಷಿಕ ರಜೆ	ಅನಾರೋಗ್ಯ ಭತ್ಯೆ (%ಗಳಲ್ಲಿ)	ವೇತನ ಸಹಿತ ಹೆರಿಗೆ ರಜೆ	ಕನಿಷ್ಠ ವೇತನ (₹ಗಳಲ್ಲಿ ಪ್ರತಿ ಗಂಟೆಗೆ)	ಸರಾಸರಿ ವಾರದ ಅವಧಿ ಗಂಟೆಗಳು
1	ನ್ಯೂಜಿಲೆಂಡ್	80.76	32	80	26 ವಾರ	1,351	33
2	ಐರ್ಲೆಂಡ್	77.89	30	70	26 ವಾರ	1,171	35.58
3	ಬೆಲ್ಜಿಯಂ	73.45	30	100	15 ವಾರ	1,019	35
4	ಡೆನ್ಮಾರ್ಕ್	73.45	35	100	18 ವಾರ	-	33.91
5	ಕೆನಡಾ	72.75	17	100	17 ವಾರ	973	32.1
48	ಭಾರತ	38.83	35	50	12 ವಾರ	22.65	46.74
49	ಚೀನಾ	38.47	16	60	–	106.54	46.1
50	ಪಾಕಿಸ್ತಾನ	36.29	29	100	12 ವಾರ	43.62	46.93
55	ಅಮೆರಿಕ	31.82	-	-	12 ವಾರ	608	46.74
60	ನೈಜೀರಿಯಾ	16.15	5	20	12 ವಾರ	26	-

ಆಧಾರ: ಪಿಟಿಐ, ಯುಕೆಜಿ ವರ್ಕ್‌ಫೋರ್ಸ್ ಇನ್‌ಸ್ಟಿಟ್ಯೂಟ್, ರಿಮೋಟ್:ಜಾಗತಿಕ ವೃತ್ತಿ–ಖಾಸಗಿ ಬದುಕು ಸಮತೋಲನ ಸೂಚ್ಯಂಕ–2024, ಯುವರ್‌ದೋಸ್ತ್: ಎಮೋಷನಲ್ ವೆಲ್‌ನೆಸ್ ಆಫ್ ಸ್ಟೇಟ್ ಎಂಪ್ಲಾಯೀಸ್

2,480 ಗಂಟೆ
ಭಾರತದಲ್ಲಿ ಉದ್ಯೋಗಿಗಳು ವಾರ್ಷಿಕವಾಗಿ ಕೆಲಸ ಮಾಡುವ ಸರಾಸರಿ ಅವಧಿ

1,890 ಗಂಟೆ
ಜಾಗತಿಕ ಮಟ್ಟದಲ್ಲಿ ಉದ್ಯೋಗಿಗಳು ವಾರ್ಷಿಕವಾಗಿ ಕೆಲಸ ಮಾಡುವ ಸರಾಸರಿ ಅವಧಿ

ಕಾನೂನು ಏನು ಹೇಳುತ್ತದೆ?

- 1948ರ ಭಾರತೀಯ ಕೈಗಾರಿಕೆಗಳ ಕಾಯ್ದೆಯ ಸೆಕ್ಷನ್ 51ರ ಪ್ರಕಾರ, ಯಾವುದೇ ವಯಸ್ಕ ನೌಕರ ವಾರಕ್ಕೆ 48 ಗಂಟೆಗಳಿಗಿಂತ ಹೆಚ್ಚು ಅವಧಿ ಕೆಲಸ ಮಾಡಬೇಕಾಗಿಲ್ಲ ಅಥವಾ ಕೆಲಸ ಮಾಡಲು ಅವಕಾಶ ನೀಡುವಂತಿಲ್ಲ
- ಹಾಗಿದ್ದರೂ, ಕೆಲವು ರಾಜ್ಯಗಳು ಕಾಯ್ದೆಯ ಸೆಕ್ಷನ್ 65(2)ರ ಅಡಿಯಲ್ಲಿ ದಿನದ ಕೆಲಸದ ಅವಧಿಯನ್ನು 12 ಗಂಟೆಗಳವರೆಗೆ ಹೆಚ್ಚಿಸಿವೆ
- ವೃತ್ತಿ ಸ್ಥಳದಲ್ಲಿ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಸ್ಥಿತಿಗಳ ಸಂಹಿತೆ–2020ರ ಪ್ರಕಾರ, ದಿನಕ್ಕೆ ಎಂಟು ಗಂಟೆಗಳಿಗಿಂತ ಹೆಚ್ಚು ಯಾರೊಬ್ಬರೂ ಕೆಲಸ ಮಾಡುವಂತಿಲ್ಲ ಅಥವಾ ಮಾಡಬೇಕಾಗಿಲ್ಲ. ಆದರೆ, ಈ ಸಂಹಿತೆಗೆ ತಿದ್ದುಪಡಿ ತಂದು ಕೆಲಸದ ಅವಧಿಯನ್ನು 12 ಗಂಟೆಗೆ ಹೆಚ್ಚಿಸಬೇಕು ಎಂಬ ಪ್ರಸ್ತಾವ ಇದೆ
- ಭಾರತದಲ್ಲಿರುವ ಈ ನಿಯಮಗಳು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ (ಐಎಲ್‌ಒ) ಮಾನದಂಡಗಳಿಗೆ ಅನುಗುಣವಾಗಿದೆ. ಐಎಲ್‌ಒ ಪ್ರಕಾರ, ಪ್ರತಿ ದಿನದ ಕೆಲಸ ಅವಧಿ ಎಂಟು ಗಂಟೆ ಮತ್ತು ವಾರದ ಅವಧಿ 48 ಗಂಟೆಗಳನ್ನು ಮೀರುವಂತಿಲ್ಲ

ಭಾರತದಲ್ಲಿ ವಾರಕ್ಕೆ 48 ಗಂಟೆಗಳಿಗಿಂತಲೂ ಹೆಚ್ಚು ಕೆಲಸ ಮಾಡುವವರು

61.8% ಪುರುಷರು

25.9% ಮಹಿಳೆಯರು


50.5% ಒಟ್ಟು ಉದ್ಯೋಗಿಗಳ ಪೈಕಿ ನಿಗದಿತ ಅವಧಿಗಿಂತಲೂ ಹೆಚ್ಚು ಕೆಲಸ ಮಾಡುವ ಉದ್ಯೋಗಿಗಳು

ದೈಹಿಕ ಚಟುವಟಿಕೆಯ ಮೇಲೆ ಪರಿಣಾಮ

50% ಸಾಕಷ್ಟು ದೈಹಿಕ ಚಟುವಟಿಕೆಗಳು ಇಲ್ಲದ ಭಾರತದ ವಯಸ್ಕರ ಪ್ರಮಾಣ

57% ದೈಹಿಕ ಚಟುವಟಿಕೆಗಳಲ್ಲಿ ತೊಡಗಿರದ ಮಹಿಳೆಯರ ಪ್ರಮಾಣ

42% ದೈಹಿಕ ಚಟುವಟಿಕೆಯ ಕೊರತೆ ಎದುರಿಸುತ್ತಿರುವ ಪುರುಷರ ಪ್ರಮಾಣ



ಭಾರತದಲ್ಲಿ ದೈಹಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳದವರು

ಕೆಲಸದ ಅವಧಿ ಹೆಚ್ಚಾಗಿರುವುದು ಮತ್ತು ಉದ್ಯೋಗಿಗಳ ಮೇಲಿನ ಕೆಲಸದ ಒತ್ತಡದಿಂದಾಗಿ ಅವರ ದೈಹಿಕ ಚಟುವಟಿಕೆಗಳು ಕಡಿಮೆಯಾಗಿದ್ದು, ಇದು ಉದ್ಯೋಗಿಗಳ ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ ಎಂದು ಹೇಳುತ್ತವೆ ಅಧ್ಯಯನಗಳು.

ಭಾರತದ ಶೇ 50ರಷ್ಟು ವಯಸ್ಕರು ದೈಹಿಕ ಚಟುವಟಿಕೆಯಲ್ಲಿ ತೊಡಗಿಲ್ಲ ಎಂದು ಲ್ಯಾನ್ಸೆಟ್ ನಡೆಸಿರುವ ಅಧ್ಯಯನ ಹೇಳಿದೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ಮನುಷ್ಯರು ದೈಹಿಕವಾಗಿ ಹೆಚ್ಚು ಸಕ್ರಿಯವಾಗಿರಬೇಕಾದರೆ ವಾರಕ್ಕೆ ಕನಿಷ್ಠ 150 ನಿಮಿಷಗಳಷ್ಟು ಹೊತ್ತು ಮಧ್ಯಮ ಮಟ್ಟದ ಇಲ್ಲವೇ 75 ನಿಮಿಷಗಳಷ್ಟು ಸಮಯ ತೀವ್ರ ಮಟ್ಟದ ದೈಹಿಕ ಕಸರತ್ತು ನಡೆಸಬೇಕು.

ಮೆಜೆಸ್ಟಿಕ್‌-2: ಮಾಲಾಶ್ರೀ ಡ್ಯಾನ್ಸ್




ದರ್ಶನ್ ಅಭಿನಯದ 'ಮೆಜೆಸ್ಟಿಕ್' ಚಿತ್ರದ ಕಥೆ ಬರೆದಿದ್ದ ರಾಮು ನಿರ್ದೇಶಿಸುತ್ತಿರುವ 'ಮೆಜೆಸ್ಟಿಕ್-2' ಚಿತ್ರದ ಚಿತ್ರೀಕರಣ ಬಹುತೇಕ ಮುಕ್ತಾಯ ಹಂತ ತಲುಪಿದೆ. ಚಿತ್ರದ ವಿಶೇಷ ಪಾತ್ರದಲ್ಲಿ ಮಾಲಾಶ್ರೀ ಕಾಣಿಸಿಕೊಂಡಿದ್ದಾರೆ.

'ಇದರಲ್ಲಿ ನನ್ನದು ಒಂದು ವಿಶೇಷ ಪಾತ್ರ. ನಿರ್ದೇಶಕ ರಾಮು ಅವರು ನಮ್ಮ ರಾಮು ಫಿಲಂಸ್ ಬ್ಯಾನರಿನಲ್ಲಿ ಕೆಲಸ ಮಾಡಿದ್ದಾರೆ. ನನ್ನನ್ನು ಕಂಡರೆ ತುಂಬಾ ಅಭಿಮಾನ. ಹೀಗಾಗಿ ಚಿತ್ರದ ಹಾಡೊಂದಕ್ಕೆ ನಾನು ಸ್ಟೆಪ್ ಹಾಕಿದ್ದೇನೆ. ಮಾರಮ್ಮ ದೇವಿ ಹಾಡಿಗೆ ನನ್ನ ಸ್ಟೆಪ್ಸ್ ನೋಡಿ ನನಗೇ ಖುಷಿಯಾಯ್ತು. ನನ್ನ ಹಿಂದಿನ ದಿನಗಳನ್ನು ನೆನಪಿಸಿತು' ಎಂದಿದ್ದಾರೆ ಮಾಲಾಶ್ರೀ.

ಈಗಿನ ಮೆಜೆಸ್ಟಿಕ್‌ನಲ್ಲಿ ಏನೆಲ್ಲ ಕರಾಳ ದಂಧೆಗಳು, ಅಕ್ರಮ ಚಟುವಟಿಕೆಗಳು ನಡೆಯುತ್ತವೆ ಎಂಬುದನ್ನು ಅಲ್ಲಿಯೇ ಹುಟ್ಟಿ ಬೆಳೆದ ಹುಡುಗನೊಬ್ಬನ ಕಥೆಯ ಮೂಲಕ ಈ ಚಿತ್ರದಲ್ಲಿ ಹೇಳಲು ನಿರ್ದೇಶಕರು ಪ್ರಯತ್ನಿಸಿದ್ದಾರೆ. ಈ ಚಿತ್ರದಿಂದ ನಿರ್ಮಾಪಕ ಶಿಲ್ಪಾ ಶ್ರೀನಿವಾಸ್ ಅವರ ಪುತ್ರ ಭರತ್ ನಾಯಕನಾಗಿ ಚಿತ್ರೋದ್ಯಮಕ್ಕೆ ಕಾಲಿಡುತ್ತಿದ್ದಾರೆ. ಅಮ್ಮಾ ಎಂಟರ್‌ಪ್ರೈಸಸ್ ಮೂಲಕ ಚಿತ್ರದುರ್ಗದ ಹೆಚ್.ಆನಂದಪ್ಪ ಅವರು ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

ಸಂಹಿತಾ ವಿನ್ಯಾ ಚಿತ್ರದ ನಾಯಕಿ. ಈ ಚಿತ್ರಕ್ಕೆ ವಿನು ಮನಸು ಅವರ ಸಂಗೀತ ನಿರ್ದೇಶನವಿದ್ದು, ವೀನಸ್ ಮೂರ್ತಿ ಛಾಯಾಚಿತ್ರಗ್ರಹಣವಿದೆ.

ಕರಿಕಾನು ಗುಡ್ಡವೇರಿದ ಪ್ರಮೋದ್ ಶೆಟ್ಟಿ



'ಲಾಫಿಂಗ್ ಬುದ್ಧ'ನಾಗಿ ಸದ್ಯ ಪ್ರೇಕ್ಷಕರನ್ನು ನಗಿಸುತ್ತಿರುವ ನಟ ಪ್ರಮೋದ್ ಶೆಟ್ಟಿ ತಮ್ಮ ನೂತನ ಚಿತ್ರದ ಕುರಿತು ಹೊಸ ಅಪ್‌ಡೇಟ್ ನೀಡಿದ್ದಾರೆ. ಈಗಾಗಲೇ ಚಿತ್ರೀಕರಣ ಪೂರ್ಣಗೊಳಿಸಿರುವ ಪ್ರಮೋದ್ ಶೆಟ್ಟಿ ನಟನೆಯ 'ಕರಿಕಾನು ಗುಡ್ಡದ ಮೇಲೊಂದು ಅಧಿಕ ಪ್ರಸಂಗ' ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ.

ಮಲೆನಾಡಿನ ಗುಡ್ಡವೊಂದರ ಮೇಲೆ ನಡೆಯುವ ಹಾಸ್ಯಮಯ ಕಥಾಹಂದರ ಹೊಂದಿರುವ ಚಿತ್ರಕ್ಕೆ ಅನೀಶ್ ಶರ್ಮಾ ಆ್ಯಕ್ಷನ್–ಕಟ್ ಹೇಳಿದ್ದಾರೆ. ಈ ಹಿಂದೆ ಇವರು 'ವಡ್ಡಾರಾಧಕ', 'ಶಬರಿ' ಕಿರುಚಿತ್ರಗಳನ್ನು ನಿರ್ದೇಶಿಸಿದ್ದರು.

ಜೋಗದ ಬಳಿಯ ಇಡುವಾಣಿ, ತಲವಾಟದ ಸುತ್ತಮುತ್ತ ಚಿತ್ರೀಕರಣಗೊಂಡಿರುವ ಚಿತ್ರದಲ್ಲಿ ಶೆಟ್ಟರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕಾಣಿಸಿಕೊಂಡಿದ್ದಾರೆ. ಸದ್ಯದಲ್ಲಿಯೇ ಚಿತ್ರದ ಟೀಸರ್ ಹೊರಬರಲಿದೆ, ನಂತರ ಚಿತ್ರ ಬಿಡುಗಡೆ ದಿನಾಂಕ ಘೋಷಿಸುತ್ತೇವೆ ಎಂದು ಚಿತ್ರತಂಡ ಹೇಳಿದೆ.

ಚಿತ್ತರಂಜನ್ ಕಶ್ಯಪ್, ವಲ್ಲಭ್ ಸೂರಿ, ಸುನಿತ್ ಹಲಗೇರಿ ಈ ಚಿತ್ರದ ನಿರ್ಮಾಪಕರು. ರಾಘು ಶಿವಮೊಗ್ಗ, ಕಿರಣ್ ನಾಯಕ್, ಮಂಜುನಾಥ್ ಹೆಗಡೆ ಮೊದಲಾದವರು ಚಿತ್ರದಲ್ಲಿದ್ದಾರೆ. ಚೇತನ್ ಕುಮಾರ್ ಸಂಗೀತ, ಸುಮಂತ್ ಶರ್ಮಾ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಇಲ್ಲಿ ಯಾವುದೂ ಕನಿಷ್ಠ ಅಲ್ಲ!



ನುಡಿ ಬೆಳಗು
ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ
13

ಒಂದೂರಲ್ಲಿ ಒಬ್ಬ ಹುಡುಗಿ ಇದ್ದಳು. ಆಕಿಗೆ ಮದುವೆ ಮಾಡಬೇಕು ಎಂದು ಅವಳ ತಂದೆ, 'ನೋಡಮ್ಮ ನಿನ್ನ ಮದುವಿ ಮಾಡಬೇಕು ಅನಕೊಂಡೇನಿ, ಅಲ್ಲಿ ಇಲ್ಲಿ ಯಾಕೆ ಹುಡುಕೋದು, ಇಲ್ಲೇ ನಮ್ಮ ಓಣ್ಯಾಗೆ ಕಲ್ಲು ಒಡಿತಾನಲ್ಲ ಅವನ್ನ ಮದುವ್ಯಾಗು' ಎಂದ. 'ಕಲ್ಲು ಒಡೆಯುವ ಹುಡುಗನನ್ನು ನಾನು ಮದುವ್ಯಾಗಲ್ಲ. ನಾನು ಮದಿವ್ಯಾಗೋ ಹುಡುಗ ಭಾರೀ ಶಕ್ತಿವಂತನಾಗಿರಬೇಕು' ಎಂದಳು. 'ಅಂತಹ ಶಕ್ತಿವಂತನನ್ನು ನಾನೆಲ್ಲಿ ಹುಡುಕಲಿ? ನೀನೇ ಹುಡುಕಿಕೋ' ಎಂದ ಅಪ್ಪ.

ಆಕಿ ಚಂದ್ರನನ್ನು ಕೇಳಿದಳು. 'ಚಂದಮಾಮಾ ಚಂದಮಾಮಾ ನೀನು ಬಾಳ ಚಂದ ಅದಿ. ನಿನ್ನೇ ಮದುವಿ ಆಗ್ತೀನಿ' ಅಂದಳು. ಅದಕ್ಕೆ ಚಂದ್ರ, 'ನೋಡಮ್ಮ ನಾನು ನೋಡೋಕಷ್ಟೇ ಚಂದ. ನನಗೆ ಸ್ವಂತ ಬೆಳಕೆಂಬುದು ಇಲ್ಲ. ಸೂರ್ಯನ ಬೆಳಕು ಬಿದ್ದರಷ್ಟೇ ನನಗೆ ಬೆಳಕು. ನೀನು ಮದುವ್ಯಾಗೋದಿದ್ದರೆ ಸೂರ್ಯನನ್ನೇ ಮದುವ್ಯಾಗು' ಎಂದ. ಆಕಿ ಸೂರ್ಯನನ್ನು ಕೇಳಿದಳು. ಸೂರ್ಯ ಅಂದ, '15 ಕೋಟಿ ಕಿಮೀ ದೂರದಲ್ಲಿದ್ದರೇ ನನ್ನ ಶಾಖ ತಡೆಯೋರಲ್ಲ ನೀವು. ಅಲ್ಲದೆ ನಾನು ಎಷ್ಟೇ ಪ್ರಖರವಾಗಿದ್ದರೂ ಮೋಡ ಅಡ್ಡ ಬಂದರೆ ನಾನು ಕಾಣೋದೇ ಇಲ್ಲ. ನನಗಿಂತ ಮೇಘರಾಜ ಶಕ್ತಿಶಾಲಿ. ಅವನನ್ನೇ ಮದುವ್ಯಾಗು' ಎಂದ.

ಹುಡುಗಿ ಮೇಘನನ್ನು ಕೇಳಿದಳು. 'ನಾನೇನು ಶಕ್ತಿವಂತ ಅಲ್ಲ. ನಾನು ಎಷ್ಟೇ ವೇಗವಾಗಿ ಸಾಗಿದರೂ ಕಲ್ಲಿನ ಬೆಟ್ಟ ಅಡ್ಡ ಬಂದರೆ ನಾನು ಮುಂದಕ್ಕೆ ಹೋಗಲಾರೆ. ಅದಕ್ಕೆ ನೀನು ಕಲ್ಲಿನ ಗುಡ್ಡವನ್ನು ಮದುವೆ ಆಗು' ಅಂದ. ಆಕೆ ಕಲ್ಲಿನ ಗುಡ್ಡಕ್ಕೆ ಕೇಳಿದಳು. 'ನಾನೇನು ಶಕ್ತಿಶಾಲಿ ಅಲ್ಲ. ಆ ಕಲ್ಲು ಒಡೆಯುವ ಹುಡುಗ ಚಾಣದಿಂದ ಚಚ್ಚಿದರೆ ನಾನು ಪುಡಿಪುಡಿಯಾಗುತ್ತೇನೆ. ಅದಕ್ಕೆ ಮದುವೆಯಾಗುವುದಿದ್ದರೆ ನೀನು ಆ ಕಲ್ಲು ಒಡೆಯುವ ಹುಡುಗನನ್ನೇ ಮದುವ್ಯಾಗು' ಎಂತು.

ಅಂದರೆ, ಇಲ್ಲಿ ಯಾರೂ ಸಣ್ಣವರಲ್ಲ. ಯಾರೂ ದೊಡ್ಡವರೂ ಅಲ್ಲ. ಈ ಜಗತ್ತಿನಲ್ಲಿ ಯಾರೂ ಕೀಳಲ್ಲ. ಯಾರೂ ಶ್ರೇಷ್ಠರಲ್ಲ. ಅಲ್ಲಮ ಅಂತಾನೆ, 'ಭೂಮಿಯಾಕಾಶ ಒಂದು ಜೀವನದುದರ, ಅಲ್ಲಿ ಘನವೇನು ಘನವೆನ್ನದವಂಗೆ? ಕಿರಿದೇನು ಕಿರಿದೆನ್ನದವಂಗೆ? ಆ ಘನವು ಮನಕ್ಕೆ ಗಮಿಸಿದೆಡೆ ಇನ್ನು ಸರಿಯುಂಟೆ ಗುಹೇಶ್ವರ?' ಎಂದು.

ಸೂರ್ಯ ಬಹಳ ದೊಡ್ಡವ, ದೀಪ ಸಣ್ಣದು ಅನ್ನಲಿಕ್ಕಾಗ್ತದೇನು? ಸೂರ್ಯ ಜಗತ್ತನ್ನೇ ಬೆಳಗಬಹುದು, ಆದರೆ ಸೂರ್ಯ ಮುಳುಗಿನ ನಂತರ ಮನೆ ಬೆಳಗಲು ದೀಪವೇ ಬೇಕು. ಅದಕ್ಕೆ ದೀಪ ಸಣ್ಣದೆನ್ನಲಾಗದು. ಹೂವು ಬಲಿಷ್ಠ, ಬೇರು ಕನಿಷ್ಠ ಅನ್ನೋ ಹಾಗಿಲ್ಲ. ಯಾಕೆಂದರೆ ಬೇರು ನೀರು ಕಳಿಸದಿದ್ದರೆ ಹೂವು ಒಣಗಬೇಕಾಗುತ್ತದೆ. ಹೂವೂ ಮುಖ್ಯ, ಬೇರೂ ಮುಖ್ಯ. ಒಬ್ಬ ಗುರು ಎಲ್ಲ ಜನರಲ್ಲಿಯೂ ನಾವು ಸಣ್ಣವರಲ್ಲ ಎಂಬ ಭಾವನೆಯನ್ನು ತುಂಬ ಬೇಕಾಗುತ್ತದೆ.

ಬಿ.ಆರ್. ಅಂಬೇಡ್ಕರ್ ಪ್ರತಿ ಸಮಾಜಕ್ಕೂ ಶಿಕ್ಷಣ ಮುಖ್ಯ ಅಂತ ಹೇಳ್ತಾರೆ. 'ನಿನ್ನ ಬಳಿ ಎರಡು ರೂಪಾಯಿ ಇತ್ತು ಅಂದ್ರ ಒಂದು ರೂಪಾಯಿ ಆಹಾರಕ್ಕೆ ಖರ್ಚು ಮಾಡು. ಇನ್ನೊಂದು ರೂಪಾಯಿಯಲ್ಲಿ ಪುಸ್ತಕ ತೆಗೆದುಕೊ. ಒಂದು ರೂಪಾಯಿ ಆಹಾರ ನಿನ್ನನ್ನು ಬದುಕಿಸುತ್ತದೆ. ಇನ್ನೊಂದು ರೂಪಾಯಿಯಲ್ಲಿ ತೆಗೆದುಕೊಂಡ ಪುಸ್ತಕ ಸಮಾಜದಲ್ಲಿ ಹ್ಯಾಗೆ ಬದುಕಬೇಕು ಎನ್ನುವುದನ್ನು ಕಲಿಸುತ್ತದೆ' ಎಂದು ಅವರು ಹೇಳ್ತಾರೆ.

ಪುಸ್ತಕ, ಶಿಕ್ಷಣ ನಮಗೆ ಬಹಳ ಮುಖ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಸೆಪ್ಟೆಂಬರ್ 2, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಅಮಾವಾಸ್ಯೆ ಅಹೋರಾತ್ರ ನಕ್ಷತ್ರ: ಮಘ ಗಂ. 24-20 ಯೋಗ: ಶಿವ ಗಂ. 18-20 ಕರಣ: ಚತುಷ್ಪಾದ ಗಂ. 18-21, ಸಿಂಹ ಮಾಸದ 16 ನೇ ದಿನ, ಮಳೆನಕ್ಷತ್ರ: ಪೂರ್ವಫಲ್ಗುಣಿ 1.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 06-23 ಸೂರ್ಯಾಸ್ತ : 06-37
ಮುಸ್ಲಿಂ ದಿನಾಂಕ : 28 ಸಫರ್, ದಿನ ವಿಶೇಷ : ಕುಶೋತ್ಪತಿನಿ, ಶಹದತ್-ಎ-ಇಮಾನ್-ಹಸನ್ (ಮುಸ್ಲಿಂ), ಅದೃಷ್ಟ ಸಂಖ್ಯೆ : 5, 7

ಮೇಷ: ನಿಶ್ಚಿತ ಕಾರ್ಯಗಳು ಪ್ರಕೃತಿಯಲ್ಲಿನ ಅನಿಶ್ಚಿತ ಬದಲಾವಣೆಗಳಿಂದಾಗಿ ಹಿಂದುಮುಂದಾಗಬಹುದು. ಹೊಸ ಕೆಲಸವನ್ನು ಆರಂಭ ಮಾಡುವುದು ಸರಿಯಲ್ಲ. ರಾಜಕೀಯ ರಂಗದಲ್ಲಿ ಉತ್ತಮ ಅನುಕೂಲಗಳ ಸಂಭವವಿದೆ.

ವೃಷಭ: ಅಣ್ಣ-ತಮ್ಮಂದಿರ ಮನೆಯಲ್ಲಿನ ಶುಭಕಾರ್ಯಗಳಲ್ಲಿ ಜವಾಬ್ದಾರಿ ವಹಿಸುವಿರಿ. ಮನೆಯಲ್ಲಿ ಆಗಾಗ ಅಶಾಂತಿಯ ವಾತಾವರಣ ಸೃಷ್ಟಿಯಾಗಬಹುದು. ನಿವೇಶನ ಖರೀದಿಸುವ ಯೋಜನೆ ಹಾಕಿಕೊಳ್ಳಬಹುದು.

ಮಿಥುನ: ಕನ್ನಡ ಅಥವಾ ಮಾತೃಭಾಷೆಯ ಸಾಹಿತ್ಯದಲ್ಲಿ ಸಂಶೋಧನೆ ನಡೆಸುತ್ತಿರುವವರಿಗೆ ಸಮ್ಮಾನವಾಗುವ ಸಾಧ್ಯತೆ ಇದೆ. ಉದ್ಯೋಗಕ್ಕಾಗಿ ಪರಿಶ್ರಮ ಮತ್ತು ದೇವರ ಕೃಪಾಕಟಾಕ್ಷ ಪಡೆಯಬೇಕಾಗುವುದು.

ಕರ್ಕಾಟಕ: ನಿಮ್ಮ ಜತೆ ಸ್ಪರ್ಧಿಸುತ್ತಿದ್ದವರಿಗೆ ನೀವು ಎಚ್ಚರ ತಪ್ಪಿದಲ್ಲಿ ಜಯ ಸಿಗುವುದು. ಸಮಯವನ್ನು ಅರಿತು ಎಚ್ಚರಿಕೆಯಿಂದ ವರ್ತಿಸುವುದರಿಂದ ಯಶಸ್ಸು ಹಾಗೂ ಅಭಿವೃದ್ಧಿಗೆ ಕಾರಣವಾಗುತ್ತದೆ. ಹೆಚ್ಚಿನ ಉತ್ಸಾಹವಿರುವುದು.

ಸಿಂಹ: ಮನೆಯ ಹಿರಿಯರ ಮಧ್ಯಸ್ಥಿಕೆಯಿಂದ ವಿವಾದಗಳು ಬಗೆಹರಿದು ಪುನಃ ಮೊದಲಿನಂತೆ ಸಂಬಂಧ ಗಟ್ಟಿಯಾಗಲಿದೆ. ಹತ್ತಾರು ಜನರಿಗೆ ಮಾರ್ಗದರ್ಶಕ ವ್ಯಕ್ತಿಯಾಗಿ ನೇಮಕಗೊಳ್ಳುವ ಯೋಗವಿದೆ.

ಕನ್ಯಾ: ಪ್ರವಾಸಕ್ಕಾಗಿ ಹೋದ ಪ್ರದೇಶದಲ್ಲಿ ಕೆಲವು ತೊಂದರೆಗಳಾಗುವಂಥ ಸಂದರ್ಭಗಳಿವೆ. ಸತ್ಯ ಮಾರ್ಗದಿಂದ ಕಾರ್ಯ ಪ್ರವೃತ್ತರಾದಲ್ಲಿ ಅಭಿವೃದ್ಧಿ ಅನುಭವಕ್ಕೆ ಬರಲಿದೆ. ಹೊಸ ವಾಹನ ಖರೀದಿಸುವ ಯೋಗವಿದೆ.

ತುಲಾ: ಪ್ರಕೃತಿಸಹಜವಾದ ಅವಿನಾಭಾವ ಸಂಬಂಧಗಳನ್ನು ಕಂಡು ನಿಮ್ಮಲ್ಲಿನ ಸಾಹಿತ್ಯ ಅಥವಾ ಚಿತ್ರಕಲಾ ಪ್ರಜ್ಞೆಯು ಎಚ್ಚೆತ್ತುಕೊಳ್ಳುವುದು. ಪುಸ್ತಕ ಮುದ್ರಕ ಹಾಗೂ ಮಾರಾಟಗಾರರಿಗೆ ಅಧಿಕ ಕೆಲಸ ಇರುತ್ತದೆ.

ವೃಶ್ಚಿಕ: ವಾತ ಅಥವಾ ಪಿತ್ತದಿಂದ ಉಂಟಾದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಪ್ರಾಣಾಯಾಮ ಯೋಗದಂಥ ಮಾರ್ಗ ಉತ್ತಮ. ದುರ್ಗಾ ದೇವಿಯನ್ನು ಆರಾಧಿಸಿದಲ್ಲಿ ಶುಭವು ಪ್ರಾಪ್ತಿಯಾಗುವುದು.

ಧನು: ಪತ್ನಿಯ ಮೇಲೆ ಗೌರವ ಹೆಚ್ಚಾಗುವುದು. ಇಷ್ಟ ಬಂಧುಗಳಿಂದ ವಿಶೇಷ ವಸ್ತು ಉಡುಗೊರೆಯ ರೂಪದಲ್ಲಿ ದೊರೆಯುವುದು. ಹಾಲು ಮಾರಾಟಗಾರರಿಗೆ ಲಾಭ ಇರುವುದು.

ಮಕರ: ಬಹುಕಾಲ ನೆನಪಿನಲ್ಲಿ ಉಳಿಯುವಂಥ ಮಧುರ ಘಟನೆ ಮನೆಯಲ್ಲಿ ನಡೆಯಲಿದೆ. ಔದ್ಯೋಗಿಕವಾಗಿ ಅನುಭವಸ್ಥರಿಂದ ಕೇಳಿ ಪಡೆದ ಸಲಹೆ ಸೂಚನೆಗಳಿಂದಾಗಿ ಅಭಿವೃದ್ಧಿ ಹೊಂದುವಿರಿ.

ಕುಂಭ: ಮನೆಯಲ್ಲಿ ದೇವರ ಪ್ರಾರ್ಥನೆಯನ್ನು ನಡೆಸಿದ ನಂತರ ದೊರೆತ ಸಂತಾನಭಾಗ್ಯದ ಫಲವಾಗಿ ಹರ್ಷ ತುಂಬಿರುತ್ತದೆ. ವಾತಾವರಣದ ಫಲವಾಗಿ ಮಂಡಿಯಲ್ಲಿ ನೋವು ಕಾಣಿಸುತ್ತದೆ. ಹಸಿರು ಬಣ್ಣ ಶುಭ ತರುವುದು.


ಮೀನ: ಕೆಲಸದ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಲಿಕ್ಕಾಗಿ ತರಬೇತಿಗಳನ್ನು ತೆಗೆದುಕೊಳ್ಳಲು ಯೋಚನೆ ನಡೆಸುವಿರಿ. ಮಗನಿಗೆ ಹೆಚ್ಚಿನ ಪರಿಶ್ರಮವಿಲ್ಲದೇ ಕೆಲಸ ದೊರೆತಿದ್ದಕ್ಕೆ ಕುಟುಂಬ ಸಂತಸದಲ್ಲಿರುವುದು.

ಪದಬಂಧ 5791

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಗಿಡದಲ್ಲಿ ಕುಳಿತಿರುವ ಡೇಗೆ (3)
4.ಸಿಂಹದ ಕತ್ತಿನ ಮೇಲಿರುವ ಜೂಲು ಕೂದಲು (3)
6.ಅಡೆತಡೆಯಿಲ್ಲದ್ದನ್ನು ಹೀಗೆನ್ನಿ (3)
8.ಈಕೆ ಮಾತು ಬಾರದವಳು (2)
9.ಕಸವರದಲ್ಲಿ ಕಾಣಿಸಿದ ಕೊಳೆ (2)
11. ಗತಿಸಿದ ಪತಿಯೊಡನೆ ಚಿತೆಯೇರುವಿಕೆ (5)
12.ಕಠೋರವಾದ ಕೈ! (2)
14.ಹಾರವನು ಧರಿಸಿರುವ ಮಾಲೆ (2)
15.ನೂಲು ತೆಗೆಯುವ ಉಪಕರಣ (3)
17.ಕೈ ಕೊನೆಗಿದ್ದರೆ ಗುಂಪು ಕಾಣುತ್ತಿದೆಯಲ್ಲಾ! (3)
18.ಅತಿಯಾದ ಆಸೆ (3)

ಮೇಲಿಂದ ಕೆಳಕ್ಕೆ
1.ಆಗಸ ನೋಡುತ್ತಿರುವ ಮಡಿವಾಳ (3)
2.ಸಂಕುಚಿತ ಮನಸ್ಸಿನಿಂದ ನೀಡಿದ ಸೂಚನೆ (3)
3.ಕೊಡುಕೊಳ್ಳುವವನು ಗಿರಕಿ ಹೊಡೆಯುತ್ತಿದ್ದಾನಲ್ಲಾ! (3)
5.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
7. ಶಿರವನ್ನು ಕಡಿಯುವವನು (5)
8.ಗಣಪತಿಯ ವಾಹನ (3)
10.ವಾರದ ಕೊನೆಗೆ ಕಾಣಿಸಿದ ಆರೋಹಿ (3)
13.ಇರುಳಿಗೊಂದು ಪರ್ಯಾಯ ಪದ (3)
14.ಹಸೆ ಹಾಕುವ ಜಾಗದಲ್ಲಿ ಬೆಳೆದ ಪಾಚಿ (3)
15.ಒಣಗಿದ ಎಲೆ ಗರಿ ಇತ್ಯಾದಿ (3)
16.ಲೀಲಾಜಾಲವಾಗಿ ನಡೆದ ಏಲಂ (3)



5790ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಂಬುಧಿ 3.ಪ್ರಸ್ತ
5.ಚಿರಶಾಂತಿ 6.ಸಲಿಲ
7.ಲವ 9.ಕುಮಾರವ್ಯಾಸ
11.ತಮ 13.ವಿದುರ
14.ಕಾವ್ಯಾನಂದ 15.ಶ್ರಾವ್ಯ
16.ಹಸುರು

ಮೇಲಿಂದ ಕೆಳಕ್ಕೆ:
2.ಬುಸುಕಲಕು 3.ಪ್ರತಿಫಲ
4.ವಿಶ್ವಾಸಘಾತ
5.ಚಿಕವೀರರಾಜೇಂದ್ರ
8.ವಯಿರಮುಡಿ 10.ಸವಿಗನಸು
12.ಮಹಾಕಾವ್ಯ

ಸುಡೊಕು 6176

8				2		3		5
3		6	5		8		1	
	4			7		2		6
	6						7	9
9		1		8				
						1		8
		2	3		7		5	
7	1					6		3
		3	4		2		9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6175 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ವಾಣಿಜ್ಯ ಸಿಲಿಂಡರ್ ದರ ₹39 ಏರಿಕೆ



ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು 19 ಕೆ.ಜಿ ತೂಕದ ವಾಣಿಜ್ಯ ಬಳಕೆಯ ಸಿಲಿಂಡರ್ ಬೆಲೆಯನ್ನು ₹39 ಏರಿಕೆ ಮಾಡಿವೆ.

ಏಪ್ರಿಲ್‌ನಿಂದ ಜುಲೈವರೆಗೆ ಸಿಲಿಂಡರ್ ಬೆಲೆಯನ್ನು ₹148 ಕಡಿತಗೊಳಿಸಿದ್ದ ತೈಲ ಕಂಪನಿಗಳು, ಆಗಸ್ಟ್‌ನಲ್ಲಿ ₹6.5 ಏರಿಕೆ ಮಾಡಿದ್ದವು.

ಸದ್ಯ ದೆಹಲಿಯಲ್ಲಿ ಸಿಲಿಂಡರ್ ಬೆಲೆ ₹1,691.50, ಮುಂಬೈನಲ್ಲಿ ₹1,644, ಕೋಲ್ಕತ್ತ ₹1,802.50 ಹಾಗೂ ಚೆನ್ನೈನಲ್ಲಿ ₹1,855 ಆಗಿದೆ. 14.2 ಕೆ.ಜಿ ತೂಕದ ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ಪರಿಷ್ಕರಿಸಿಲ್ಲ. ಇದರ ಬೆಲೆ ಸದ್ಯ ₹803 ಇದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇಂಧನ ದರ ಏರಿಕೆ, ವಿದೇಶಿ ವಿನಿಮಯ ದರಕ್ಕೆ ಅನುಗುಣವಾಗಿ ತೈಲ ಮಾರಾಟ ಕಂಪನಿಗಳು ಈ ದರ ಪರಿಷ್ಕರಣೆ ಮಾಡುತ್ತವೆ.

ಎಟಿಎಫ್ ದರ ಇಳಿಕೆ: ವಿಮಾನ ಇಂಧನ (ಎಟಿಎಫ್) ದರವನ್ನು ಶೇ 4.6ರಷ್ಟು ಕಡಿತಗೊಳಿಸಲಾಗಿದೆ. ಒಟ್ಟಾರೆ ಕಿಲೋ ಲೀಟರಿಗೆ ₹4,495 ಇಳಿಕೆ ಮಾಡಲಾಗಿದೆ (ಒಂದು ಕಿಲೋ ಲೀಟರ್ ಎಂದರೆ ಒಂದು ಸಾವಿರ ಲೀಟರ್). ದೆಹಲಿಯಲ್ಲಿ ಪ್ರತಿ ಕಿಲೋ ಲೀಟರ್ ಬೆಲೆಯು ₹93,480ಕ್ಕೆ ಇಳಿಕೆಯಾಗಿದೆ.

ಕಳೆದ ಎರಡು ತಿಂಗಳಿನಲ್ಲಿ ಎಟಿಎಫ್ ಬೆಲೆಯನ್ನು ಏರಿಕೆ ಮಾಡಲಾಗಿತ್ತು.

ಭಾನುವಾರ ಮುಂಬೈನಲ್ಲಿ ಎಟಿಎಫ್ ಬೆಲೆ ಪ್ರತಿ ಕಿಲೋ ಲೀಟರ್‌ಗೆ ₹87,432 ಆಗಿದೆ. ರಾಜ್ಯದಿಂದ ರಾಜ್ಯಕ್ಕೆ ಈ ದರದಲ್ಲಿ ವ್ಯತ್ಯಾಸ ಇರುತ್ತದೆ.

ವಿಮಾನಗಳ ಕಾರ್ಯಾಚರಣೆಯಲ್ಲಿ ಶೇ 40ರಷ್ಟು ಹಣವು ಇಂಧನಕ್ಕೆ ವೆಚ್ಚವಾಗುತ್ತದೆ. ಹಾಗಾಗಿ, ಬೆಲೆ ಇಳಿಕೆಯು ಕಂಪನಿಗಳಿಗೆ ವರದಾನವಾಗಿದೆ.

ಶಂಕರ್ ಐಎಎಸ್ ಅಕಾಡೆಮಿಗೆ ₹5 ಲಕ್ಷ ದಂಡ

ನವದೆಹಲಿ (ಪಿಟಿಐ): ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ನಡೆಸಿದ ನಾಗರಿಕ ಸೇವಾ ಪರೀಕ್ಷೆಯ ಫಲಿತಾಂಶದ ಬಗ್ಗೆ ಸುಳ್ಳು ಜಾಹೀರಾತು ನೀಡಿದ ಆರೋಪದ ಮೇರೆಗೆ, ದೆಹಲಿಯ ಶಂಕರ್ ಐಎಎಸ್ ಅಕಾಡೆಮಿಗೆ ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರ (ಸಿಸಿಪಿಎ) ₹5 ಲಕ್ಷ ದಂಡ ವಿಧಿಸಿದೆ.

2022ರ ನಾಗರಿಕ ಸೇವಾ ಪರೀಕ್ಷೆಯಲ್ಲಿ ಅರ್ಹತೆ ಗಳಿಸಿ, ಆಯ್ಕೆಯಾದ 933 ಅಭ್ಯರ್ಥಿಗಳ ಪೈಕಿ 336 ಅಭ್ಯರ್ಥಿಗಳು ಶಂಕರ್ ಐಎಎಸ್ ಅಕಾಡೆಮಿಯಲ್ಲಿ ತರಬೇತಿ ಪಡೆದಿದ್ದಾರೆ. ಮೊದಲ 100 ಸ್ಥಾನ ಪಡೆದವರ ಪೈಕಿ 40 ಅಭ್ಯರ್ಥಿಗಳು ನಮ್ಮ ಅಕಾಡೆಮಿಯಲ್ಲಿ ಅಧ್ಯಯನ ಮಾಡಿದ್ದಾರೆ. ಇಡೀ ದೇಶದಲ್ಲಿಯೇ ನಮ್ಮ ಸಂಸ್ಥೆಯು ಅತ್ಯುತ್ತಮವಾಗಿದೆ ಎಂದು ಜಾಹೀರಾತು ಪ್ರಕಟಿಸಲಾಗಿತ್ತು.

ಈ ಕುರಿತು ತನಿಖೆ ನಡೆಸಿದ ಸಿಸಿಪಿಎ, 336 ಅಭ್ಯರ್ಥಿಗಳ ಪೈಕಿ 221 ಅಭ್ಯರ್ಥಿಗಳು ಮಾತ್ರ ಉಚಿತ ಸಂದರ್ಶನ, ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾರೆ. ಉಳಿದವರು ಅಲ್ಪಾವಧಿ ಅಥವಾ ನಿರ್ದಿಷ್ಟ ಪರೀಕ್ಷೆಗೆ ಮಾತ್ರ ಭಾಗವಹಿಸಿದ್ದಾರೆ. ಉದ್ದೇಶಪೂರ್ವಕವಾಗಿ ಸಂಸ್ಥೆಯು ಈ ಮಾಹಿತಿಯನ್ನು ತಿರುಚಿದೆ ಎಂದು ಹೇಳಿದೆ.

'ತರಬೇತಿ ಸಂಸ್ಥೆಗಳು ನೀಡುವ ದಾರಿ ತಪ್ಪಿಸುವ ಮಾಹಿತಿಗೆ ಕಡಿವಾಣ ಹಾಕಲು ಹಾಗೂ ಗ್ರಾಹಕರಿಗೆ ರಕ್ಷಣೆ ನೀಡುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ' ಎಂದು ಸಿಸಿಪಿಎ ಮುಖ್ಯ ಆಯುಕ್ತೆ ನಿಧಿ ಖರೆ ಹೇಳಿದ್ದಾರೆ.

ಎನ್‌ಇಸಿಸಿ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹510
12 ಕ್ಕೆ	₹70
ಮೈಸೂರು	
100ಕ್ಕೆ	₹512

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹261-521
ದ್ವಿತಳಿ (ಬಿ.ವಿ)	₹249-656

ಹೂಡಿಕೆಯಲ್ಲಿ ಗೆಲುವಿನ ಸೂತ್ರ



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

'ಎಲ್ಲ ಮೊಟ್ಟೆಗಳನ್ನು ಒಂದೇ ಬುಟ್ಟಿಯಲ್ಲಿ ಇಡಬೇಡಿ' ಎಂದು ಖ್ಯಾತ ಹೂಡಿಕೆ ತಜ್ಞ ವಾರನ್ ಬಫೆಟ್ ಹೇಳುತ್ತಾರೆ. ಇದರರ್ಥ ಇಷ್ಟೇ, ನಾವು ಹೂಡಿಕೆಯಲ್ಲಿ ಸದಾ ವೈವಿಧ್ಯತೆ ಕಾಯ್ದುಕೊಳ್ಳಬೇಕು ಎಂಬುದಾಗಿದೆ.

ಹಣಕಾಸಿನ ಉತ್ಪನ್ನಗಳ ಮೇಲೆ ಹೂಡಿಕೆ ಮಾಡಿ ಯಾವ ಪ್ರಮಾಣದಲ್ಲಿ ಲಾಭ ಗಳಿಸುತ್ತೇವೆ ಎನ್ನುವುದು ಎಷ್ಟು ಮುಖ್ಯವೋ, ಮಾರುಕಟ್ಟೆ ಇಳಿಮುಖವಾಗಿದ್ದಾಗ ನಮ್ಮ ಹೂಡಿಕೆ ಸಂಪತ್ತನ್ನು ಹೇಗೆ ರಕ್ಷಣೆ ಮಾಡಿಕೊಳ್ಳುತ್ತೇವೆ ಅನ್ನೋದು ಅಷ್ಟೇ ಮುಖ್ಯ. ಈ ನಿಟ್ಟಿನಲ್ಲಿ 12:20:80 ಸೂತ್ರ ಹೂಡಿಕೆದಾರರ ನೆರವಿಗೆ ಬರುತ್ತದೆ.

ಯಾವ ಮಾದರಿಯ ಹೂಡಿಕೆಗಳಲ್ಲಿ ಎಷ್ಟು ಹೂಡಿಕೆ ಮಾಡಬೇಕು ಮತ್ತು ಅನಿರೀಕ್ಷಿತ ತುರ್ತುಗಳಿಗೆ ಹೇಗೆ ಸನ್ನದ್ಧರಾಗಿರಬೇಕು ಎನ್ನುವುದಕ್ಕೆ ಈ ಸೂತ್ರ ಒಂದು ಚೌಕಟ್ಟು ಒದಗಿಸುತ್ತದೆ. ಅಲ್ಲದೆ, ದೀರ್ಘಾವಧಿಯಲ್ಲಿ ಹಣಕಾಸಿನ ಗುರಿಗಳನ್ನು ತಲುಪಲು ಇದು ಅನುಕೂಲ ಮಾಡಿಕೊಡುತ್ತದೆ. ಬನ್ನಿ, ಈ ಸೂತ್ರದ ಬಗ್ಗೆ ಇನ್ನಷ್ಟು ತಿಳಿಯೋಣ.

ಈ ಹೂಡಿಕೆ ಸೂತ್ರವು ಪ್ರಮುಖವಾಗಿ ಮೂರು ವಿಚಾರಗಳ ಬಗ್ಗೆ ಪ್ರಸ್ತಾಪಿಸುತ್ತದೆ.

- ಅನಿಶ್ಚಿತ ಸಂದರ್ಭಗಳಿಗ ಬೇಕಾದ 12 ತಿಂಗಳ ಖರ್ಚಿನ ಮೊತ್ತವನ್ನು ತುರ್ತು ನಿಧಿಯಲ್ಲಿಟ್ಟುಕೊಳ್ಳಬೇಕು.
- ಚಿನ್ನದ ಮೇಲೆ, ಉಳಿತಾಯದ ಶೇ 20ರಷ್ಟು ಮೊತ್ತವನ್ನು ಹೂಡಿಕೆ ಮಾಡಬೇಕು.
- ಉಳಿಸಿದ ಒಟ್ಟು ಹಣದಲ್ಲಿ ಶೇ 80ರಷ್ಟು ಹಣವನ್ನು ಷೇರು ಮಾರುಕಟ್ಟೆ ಹೂಡಿಕೆಗಳ ಮೇಲೆ ತೊಡಗಿಸಬೇಕು.

12 ತಿಂಗಳಿಗೆ ಬೇಕಾದ ಅಗತ್ಯ ಹಣ ಲಿಕ್ವಿಡ್ ಫಂಡ್‌ನಲ್ಲಿ ಇರಲಿ: ಜೀವನದಲ್ಲಿ ಅನಿಶ್ಚಿತ ಸಂದರ್ಭ ಬರುವುದು ಸರ್ವೇ ಸಾಮಾನ್ಯ. ಮನೆಯಲ್ಲಿ ಯಾರೋ ಅನಾರೋಗ್ಯಕ್ಕೆ ತುತ್ತಾಗಬಹುದು, ಮತ್ಯಾರಿಗೋ ಉದ್ಯೋಗ ನಷ್ಟವಾಗಬಹುದು. ಇಂತಹ ತುರ್ತು ಹಣಕಾಸಿನ ಸಂದರ್ಭ ಎದುರಿಸಲು 12 ತಿಂಗಳ ಖರ್ಚಿಗೆ ಬೇಕಾದ ಹಣವನ್ನು ಲಿಕ್ವಿಡ್ ಮ್ಯೂಚುವಲ್ ಫಂಡ್‌ಗಳಲ್ಲಿ, ಸ್ವೀಪ್ ಇನ್ ಫಿಕ್ಸೆಡ್ ಡೆಪಾಸಿಟ್‌ಗಳಲ್ಲಿ ಅಥವಾ ಸೇವಿಂಗ್ಸ್ ಬ್ಯಾಂಕ್ ಅಕೌಂಟ್‌ಗಳಲ್ಲಿ ಇಟ್ಟುಕೊಳ್ಳುವುದು ಅತ್ಯಗತ್ಯ. ಆಪತ್ಕಾಲದಲ್ಲಿ ಹೂಡಿಕೆಗಳ ಮೇಲೆ ಯಾವುದೇ ಪರಿಣಾಮವಾಗದಂತೆ ತುರ್ತು ನಿಧಿ ನೋಡಿಕೊಳ್ಳುತ್ತದೆ.

ತುರ್ತು ನಿಧಿಯು ಕಷ್ಟಕಾಲದಲ್ಲಿ ನಿಮ್ಮ ಆಪ್ತಮಿತ್ರನಂತೆ ಕೆಲಸ ಮಾಡುತ್ತದೆ. 12 ತಿಂಗಳ ತುರ್ತು ನಿಧಿಯನ್ನು ಕಾಯ್ದಿರಿಸುವಾಗ ಇಲ್ಲಿ, ಹೂಡಿಕೆ ಮೇಲಿನ ಗಳಿಕೆಗಿಂತ ಬೇಕಾದಾಗ ಹಣ ತೆಗೆದುಕೊಳ್ಳುವ ಸಾಧ್ಯತೆಗೆ (ಲಿಕ್ವಿಡಿಟಿ) ಹೆಚ್ಚು ಒತ್ತು ನೀಡಬೇಕಾಗುತ್ತದೆ. ಉದಾಹರಣೆಗೆ ನಿಮ್ಮ ತಿಂಗಳ ವೆಚ್ಚ ₹30 ಸಾವಿರ ಅಂತಾದರೆ ನಿಮ್ಮ ತುರ್ತು ನಿಧಿಯಲ್ಲಿ (30,000x 12 = 3,60,000) ₹3.60 ಲಕ್ಷ ಇರಬೇಕು.

ಚಿನ್ನದ ಮೇಲಿನ ಹೂಡಿಕೆ ಕಡೆಗಣಿಸಬೇಡಿ: ಆರ್ಥಿಕ ಹಿಂಜರಿತ, ಹಣದುಬ್ಬರದಂತಹ ಸಂದರ್ಭ ನಿಭಾಯಿಸಲು ಚಿನ್ನದ ಮೇಲಿನ ಹೂಡಿಕೆ ಅತ್ಯಗತ್ಯ. ಆರ್ಥಿಕ ಪ್ರಗತಿ ಕುಂಠಿತವಾದಾಗ ಷೇರು ಮಾರುಕಟ್ಟೆ ಮತ್ತು ಮ್ಯೂಚುವಲ್ ಫಂಡ್ ಹೂಡಿಕೆಗಳಿಗೆ ಅನಿಶ್ಚಿತತೆಯ ಬಿಸಿ ತಟ್ಟುತ್ತದೆ. ಆದರೆ, ಇಂತಹ ಕ್ಲಿಷ್ಟ ಸನ್ನಿವೇಶದಲ್ಲೂ ಬಂಗಾರದ ಮೇಲಿನ ಹೂಡಿಕೆ ಸ್ಥಿರವಾಗಿ ನಿಲ್ಲುತ್ತದೆ. ಹಾಗಾಗಿ, ಶೇ 20ರಷ್ಟು ಉಳಿತಾಯದ ಮೊತ್ತವನ್ನು ಚಿನ್ನದ ಮೇಲೆ ಹೂಡಿಕೆ ಮಾಡುವುದನ್ನು ಪರಿಗಣಿಸ ಬೇಕು ಎಂದು 12:20:80 ಸೂತ್ರ ಹೇಳುತ್ತದೆ.

ಗೋಲ್ಡ್ ಮ್ಯೂಚುವಲ್ ಫಂಡ್‌ಗಳು, ಗೋಲ್ಡ್ ಇಟಿಎಫ್, ಸಾವರಿನ್ ಗೋಲ್ಡ್ ಬಾಂಡ್‌ನಂತಹ ಹೂಡಿಕೆಗಳನ್ನು ಇಲ್ಲಿ ಪರಿಗಣಿಸಬಹುದು. ಒಡವೆ ಚಿನ್ನ ಖರೀದಿಯ ಆಯ್ಕೆಯೂ ಇದೆ. ಆದರೆ, ಆಭರಣ ಚಿನ್ನ ಕೊಳ್ಳುವುದು ಅಷ್ಟೇನು ಲಾಭದಾಯಕವಲ್ಲ.

ಸಂಪತ್ತು ಬೆಳೆಸಲು ಷೇರು, ಮ್ಯೂಚುವಲ್ ಫಂಡ್ ಬೇಕೇ ಬೇಕು: ಯಾವುದೇ ವ್ಯಕ್ತಿ ದೀರ್ಘಾವಧಿಯಲ್ಲಿ ಸಂಪತ್ತು ಸೃಷ್ಟಿಸಬೇಕಾದರೆ ಷೇರು ಮತ್ತು ಮ್ಯೂಚುವಲ್ ಫಂಡ್ ಹೂಡಿಕೆಯನ್ನು ಪರಿಗಣಿಸಲೇಬೇಕು. ಅಲ್ಪಾವಧಿಯಲ್ಲಿ ಷೇರು ಮತ್ತು ಮ್ಯೂಚುವಲ್ ಫಂಡ್ ಹೂಡಿಕೆಗಳು ಏರಿಳಿತಕ್ಕೆ ಒಳಪಟ್ಟರೂ ದೀರ್ಘಾವಧಿಯಲ್ಲಿ ಸಂಪತ್ತು ಸೃಷ್ಟಿಸುವ ತಾಕತ್ತು ಈ ಹೂಡಿಕೆಗಳಿಗೆ ಇದೆ.

ಈ ಎಲ್ಲಾ ಕಾರಣಗಳಿಂದ ಉಳಿತಾಯದ ಶೇ 80ರಷ್ಟು ಹಣವನ್ನು ಷೇರು ಮಾರುಕಟ್ಟೆ ಆಧಾರಿತ ಹೂಡಿಕೆಗಳ ಮೇಲೆ ತೊಡಗಿಸುವ ಬಗ್ಗೆ ಆಲೋಚನೆ ಮಾಡಬೇಕು. ಷೇರು ಮಾರುಕಟ್ಟೆ ಮತ್ತು ಮ್ಯೂಚುವಲ್ ಫಂಡ್ ಹೂಡಿಕೆ ಮಾಡುವಾಗ ವೈವಿಧ್ಯತೆ ಕಾಯ್ದುಕೊಳ್ಳುವುದನ್ನು ಮರೆಯಬಾರದು. ದೊಡ್ಡ ಗಾತ್ರ, ಮಧ್ಯಮ ಗಾತ್ರ ಮತ್ತು ಸಣ್ಣ ಗಾತ್ರದ ಕಂಪನಿಗಳನ್ನು ಹೂಡಿಕೆಗೆ ಪರಿಗಣಿಸುವ ಜೊತೆಗೆ ಆಂತರಿಕ ಮೌಲ್ಯ ಹೊಂದಿರುವ, ಭವಿಷ್ಯದಲ್ಲಿ ಬೆಳವಣಿಗೆ ಸಾಧ್ಯತೆ ಕಾಣಿಸುವ, ವಿವಿಧ ವಲಯದ ಕಂಪನಿಗಳನ್ನು ಪರಿಗಣಿಸಿ ಅಧ್ಯಯನ ಮಾಡಿ ಹೂಡಿಕೆ ಮಾಡಬೇಕು.

ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ವಿವಿಧ ಮಾದರಿಗಳನ್ನು ಹೂಡಿಕೆಗೆ ಆಯ್ಕೆ ಮಾಡಿಕೊಂಡು ಮುನ್ನಡೆಯಬೇಕು. ಹೀಗೆ ಮಾಡಿದಾಗ ಸಂಪತ್ತು ಬೆಳೆಸಲು ಸಾಧ್ಯವಾಗುತ್ತದೆ ಎನ್ನುವುದನ್ನು ಈ ಸೂತ್ರ ತಿಳಿಸುತ್ತದೆ.

ಕಿವಿಮಾತು: ಈ ಹೂಡಿಕೆ ಸೂತ್ರ ಒಂದು ಮಾನದಂಡವಾಗಿದ್ದು, ವ್ಯಕ್ತಿಗತವಾಗಿ ಹೂಡಿಕೆ ವಿಧಾನಗಳಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಿಕೊಳ್ಳಬಹುದು. ಇದೇ ಮಾರ್ಗದಲ್ಲಿ ನಡೆಯಲೇಬೇಕು ಎಂದೇನಿಲ್ಲ. 12:20:80 ಸೂತ್ರವನ್ನು ಒಂದು ಮಾದರಿಯನ್ನಾಗಿ ಪರಿಗಣಿಸಿ ನಿಮ್ಮ ಹೂಡಿಕೆ ಗುರಿಗಳು ಮತ್ತು ಹಣಕಾಸಿನ ಸ್ಥಿತಿಗತಿಗೆ ಅನುಗಣವಾಗಿ ಹೊಂದಾಣಿಕೆ ಮಾಡಿಕೊಳ್ಳಬಹುದು.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಗಳಿಕೆ ದಾಖಲಿಸಿದ ಸೂಚ್ಯಂಕಗಳು

ಷೇರುಪೇಟೆ

ಆಗಸ್ಟ್ 30ಕ್ಕೆ ಕೊನೆಗೊಂಡ ವಾರದಲ್ಲಿ ಷೇರು ಸೂಚ್ಯಂಕಗಳು ಉತ್ತಮ ಗಳಿಕೆ ದಾಖಲಿಸಿವೆ. 82,365 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.58ರಷ್ಟು ಗಳಿಸಿಕೊಂಡಿದೆ. 25,235 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.66ರಷ್ಟು ಜಿಗಿದಿದೆ.

ಭಾರತದ ಮಾರುಕಟ್ಟೆಯಲ್ಲಿ ಕಂಡುಬಂದ ಸಕಾರಾತ್ಮಕತೆ, ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಉತ್ಸಾಹ, ಐ.ಟಿ ಕಂಪನಿಗಳ ಷೇರುಗಳಲ್ಲಿ ಉತ್ತಮ ಪ್ರಗತಿ, ಬಡ್ಡಿದರ ಇಳಿಕೆಯಾಗಲಿದೆ ಎಂಬ ಆಶಾಭಾವ, ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಬೆಲೆ ಏರಿಕೆ ಇಳಿಕೆಯಾಗುತ್ತಿರುವುದು ಸೇರಿ ಹಲವು ಅಂಶಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಮತ್ತು ಎಫ್‌ಎಂಸಿಜಿ ಸೂಚ್ಯಂಕ ಹೊರತುಪಡಿಸಿ ಇನ್ನುಳಿದ ಸೂಚ್ಯಂಕಗಳು ಉತ್ತಮ ಗಳಿಕೆ ಕಂಡಿವೆ.

ನಿಫ್ಟಿ ಐ.ಟಿ ಶೇ 4.2, ರಿಯಲ್ ಎಸ್ಟೇಟ್ ಶೇ 3.33, ಫಾರ್ಮಾ ಶೇ 3.02, ಅನಿಲ ಮತ್ತು ತೈಲ ಶೇ 2.25, ಫೈನಾನ್ಸ್ ಶೇ 1.65, ಮಾಧ್ಯಮ ಶೇ 1.65, ಲೋಹ ಶೇ 1.36, ಆಟೊ ಶೇ 1.33, ಎನರ್ಜಿ ಶೇ 1.03, ಬ್ಯಾಂಕ್ ಶೇ 0.74ರಷ್ಟು ಗಳಿಸಿಕೊಂಡಿವೆ.

ಇಳಿಕೆ–ಗಳಿಕೆ: ನಿಫ್ಟಿಯಲ್ಲಿ ಕೋಲ್ ಇಂಡಿಯಾ ಶೇ 2.71, ಕೋಟಕ್ ಮಹೀಂದ್ರ ಬ್ಯಾಂಕ್ ಶೇ 2.02, ಗ್ರಾಸಿಮ್ ಇಂಡಸ್ಟ್ರಿಸ್ ಶೇ 1.95, ನೆಸ್ಲೆ ಇಂಡಿಯಾ ಶೇ 1.73, ಅದಾನಿ ಎಂಟರ್‌ಪ್ರೈಸಸ್ ಶೇ 1.53, ಹಿಂದುಸ್ತಾನ್ ಯೂನಿಲಿವರ್ ಶೇ 1.06, ಅಲ್ಟ್ರಾ ಟೆಕ್ ಸಿಮೆಂಟ್ ಶೇ 0.78, ಐಟಿಸಿ ಶೇ 0.64, ಏಷ್ಯನ್ ಪೇಂಟ್ಸ್ ಶೇ 0.61, ಅದಾನಿ ಪೋರ್ಟ್ಸ್ ಶೇ 0.5, ಟಾಟಾ ಸ್ಟೀಲ್ ಶೇ 0.49ರಷ್ಟು ಕುಸಿದಿವೆ.

ಎಲ್‌ಟಿಐ ಮೈಂಡ್ ಟ್ರೀ ಶೇ 9.04, ಬಜಾಜ್ ಫಿನ್‌ಸರ್ವ್ ಶೇ 8.58, ಬಜಾಜ್ ಫೈನಾನ್ಸ್ ಶೇ 7.09, ಏರ್‌ಟೆಲ್ ಶೇ 5.37, ಸಿಪ್ಲಾ ಶೇ 5.27, ವಿಪ್ರೊ ಶೇ 5.22, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 5.16, ಡಿವೀಸ್ ಲ್ಯಾಬ್ಸ್ ಶೇ 4.96, ಇನ್ಫೊಸಿಸ್ ಶೇ 4.65, ಬಜಾಜ್ ಆಟೊ ಶೇ 4.54, ಎನ್‌ಟಿಪಿಸಿ ಶೇ 3.78 ಮತ್ತು ಒಎನ್‌ಜಿಸಿ ಶೇ 3.46ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಸ್ಥೂಲ ಅರ್ಥಶಾಸ್ತ್ರದ ಬೆಳವಣಿಗೆಗಳತ್ತ ಹೂಡಿಕೆದಾರರು ಚಿತ್ತ ಹರಿಸಲಿದ್ದಾರೆ. ಹಣದುಬ್ಬರ ದರ, ಜಾಗತಿಕ ವಿದ್ಯಮಾನಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ. ದೇಶೀಯ ಬೆಳವಣಿಗೆಗಳ ಮೇಲೂ ಹೂಡಿಕೆದಾರರು ದೃಷ್ಟಿ ಇಟ್ಟಿದ್ದಾರೆ.

ವಾಹನ ಮಾರಾಟ ಏರಿಕೆ

ನವದೆಹಲಿ (ಪಿಟಿಐ): ದೇಶದ ಪ್ರಮುಖ ವಾಹನ ತಯಾರಿಕಾ ಕಂಪನಿಗಳಾದ ಟೊಯೊಟ, ಜೆಎಸ್‌ಡಬ್ಲ್ಯು ಎಂ.ಜಿ. ಮೋಟರ್ ಇಂಡಿಯಾ, ಕಿಯಾ, ಟಿವಿಎಸ್ ವಾಹನಗಳ ಸಗಟು ಮಾರಾಟವು ಆಗಸ್ಟ್‌ನಲ್ಲಿ ಏರಿಕೆಯಾಗಿದೆ. ಆದರೆ ಟಾಟಾ, ಮಾರುತಿ ಸುಜುಕಿ ವಾಹನಗಳ ಮಾರಾಟ ಇಳಿಕೆ ಕಂಡಿದೆ.

'ಮುಂಬರುವ ಹಬ್ಬದ ಋತುವಿನಲ್ಲಿ ವಾಹನಗಳ ಮಾರಾಟ ಮತ್ತಷ್ಟು ಹೆಚ್ಚಳವಾಗುವ ನಿರೀಕ್ಷೆ ಇದೆ' ಎಂದು ಟೊಯೊಟ ಕಿರ್ಲೋಸ್ಕರ್ ಮೋಟರ್‌ನ ಮಾರಾಟ ಸೇವಾ ವಿಭಾಗದ ಉಪಾಧ್ಯಕ್ಷ ಶಬರಿ ಮನೋಹರ್ ಭಾನುವಾರ ತಿಳಿಸಿದ್ದಾರೆ.

ಟೊಯೊಟ: ಟೊಯೊಟ ಕಿರ್ಲೋಸ್ಕರ್ ಮೋಟರ್‌ನ ವಾಹನಗಳ ಮಾರಾಟದಲ್ಲಿ ಶೇ 35ರಷ್ಟು ಏರಿಕೆಯಾಗಿದ್ದು, 30,879 ವಾಹನಗಳು ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 22,910 ವಾಹನಗಳು ಮಾರಾಟವಾಗಿದ್ದವು.

ಕಿಯಾ ಇಂಡಿಯಾ: ಕಿಯಾ ಇಂಡಿಯಾದ 22,523 ವಾಹನಗಳು ಮಾರಾಟವಾಗಿದ್ದು, ಶೇ 17ರಷ್ಟು ಏರಿಕೆ ಕಂಡಿದೆ. ಕಳೆದ ವರ್ಷದ ಆಗಸ್ಟ್‌ನಲ್ಲಿ 19,219 ವಾಹನಗಳು ಮಾರಾಟವಾಗಿದ್ದವು.

ಟಿವಿಎಸ್: ಟಿವಿಎಸ್ ಮೋಟರ್‌ನ 3.91 ಲಕ್ಷ ವಾಹನಗಳು ಮಾರಾಟವಾಗಿದ್ದು, ಶೇ 13ರಷ್ಟು ಹೆಚ್ಚಳವಾಗಿದೆ. ದೇಶೀಯವಾಗಿ 2.89 ಲಕ್ಷ ದ್ವಿಚಕ್ರ ವಾಹನಗಳು ಮಾರಾಟವಾಗಿದ್ದರೆ, 99,976 ವಾಹನಗಳು ರಫ್ತಾಗಿವೆ.

ಜೆಎಸ್‌ಡಬ್ಲ್ಯು: ಜೆಎಸ್‌ಡಬ್ಲ್ಯು ಎಂ.ಜಿ. ಮೋಟರ್ ಇಂಡಿಯಾದ ಚಿಲ್ಲರೆ ವಾಹನಗಳ ಮಾರಾಟದಲ್ಲಿ ಶೇ 9ರಷ್ಟು ಏರಿಕೆಯಾಗಿದ್ದು, 4,185 ವಾಹನಗಳು ಮಾರಾಟವಾಗಿವೆ.

6 ತಿಂಗಳಿಗೆ ಉದ್ಯೋಗ ಅಪಥ್ಯ

ಕೆಲಸ ತೊರೆಯುವ 22–23 ವಯೋಮಾನದವರ ಸಂಖ್ಯೆ ಹೆಚ್ಚು



ಮುಂಬೈ (ಪಿಟಿಐ): ಖಾಸಗಿ ಕಂಪನಿಗಳಲ್ಲಿ ಹೊಸದಾಗಿ ಕೆಲಸಕ್ಕೆ ಸೇರಿದ ಆರು ತಿಂಗಳೊಳಗೆ ಉದ್ಯೋಗ ತೊರೆಯುವವರ ಪ್ರಮಾಣವು ವಾರ್ಷಿಕ ಶೇ 4ರಿಂದ ಶೇ 5ರಷ್ಟು ಏರಿಕೆಯಾಗಿದೆ ಎಂದು ಉದ್ಯೋಗ ಮತ್ತು ಮಾನವ ಸಂಪನ್ಮೂಲ ಸೇವೆ ಒದಗಿಸುವ ಟೀಮ್‌ಲೀಸ್ ಸರ್ವಿಸಸ್ ಕಂಪನಿ ತಿಳಿಸಿದೆ.

ಕೆಲಸಕ್ಕೆ ಸೇರಿದ ತಕ್ಷಣ ಉದ್ಯೋಗ ಮತ್ತು ವೈಯಕ್ತಿಕ ಜೀವನದಲ್ಲಿ ಸಮತೋಲನ ಕಾಯ್ದುಕೊಳ್ಳಲು ಹೊಸಬರು ಪರದಾಡುತ್ತಾರೆ. ಉದ್ಯೋಗ ಸ್ಥಳದಲ್ಲಿ ಹೊಂದಿಕೊಳ್ಳಲು ಸೋಲುತ್ತಾರೆ. ಇದರಿಂದ ಕೆಲಸದ ಬಗ್ಗೆ ಅತೃಪ್ತಿ ತಳೆಯುತ್ತಾರೆ. ಕೆಲಸ ತೊರೆಯುವವರಲ್ಲಿ 22ರಿಂದ 23 ವಯೋಮಾನದವರು ಹೆಚ್ಚಿದ್ದಾರೆ ಎಂದು ಕಂಪನಿಯ ಕಾರ್ಯತಂತ್ರ ವಿಭಾಗದ ಮುಖ್ಯ ಅಧಿಕಾರಿ ಸುಬ್ಬುರತಿನಂ ಅವರು, ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಎಲೆಕ್ಟ್ರಾನಿಕ್ ಉಪಕರಣ ತಯಾರಿಕೆ, ಮಾಹಿತಿ ತಂತ್ರಜ್ಞಾನ, ಬ್ಯಾಂಕಿಂಗ್, ಹಣಕಾಸು ಸೇವೆ ಮತ್ತು ವಿಮಾ ವಲಯ, ಟೆಲಿಕಾಂ, ರಿಟೇಲ್ ಹಾಗೂ ತಯಾರಿಕಾ ವಲಯ ಸೇರಿ ಇತರೆ ವಲಯಗಳಲ್ಲಿ ಈ ಪ್ರವೃತ್ತಿ ಹೆಚ್ಚುತ್ತಿದೆ ಎಂದು ಹೇಳಿದ್ದಾರೆ.

ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು, ಉತ್ತರಪ್ರದೇಶ ಮತ್ತು ತೆಲಂಗಾಣದಲ್ಲಿ ಕೆಲಸ ತೊರೆಯುವವರ ಪ್ರಮಾಣ ಹೆಚ್ಚಿದೆ ಎಂದು ವಿವರಿಸಿದ್ದಾರೆ.

ಉದ್ಯೋಗ ತೊರೆಯುವವರ ಪೈಕಿ ಪುರುಷರ ಪ್ರಮಾಣ ಶೇ 84.5ರಷ್ಟಿದ್ದರೆ, ಮಹಿಳೆಯರ ಪ್ರಮಾಣ ಶೇ 15.5ರಷ್ಟಿದೆ.

ಈ ಬೆಳವಣಿಗೆಯು ಕಂಪನಿಗಳ ಹಣಕಾಸು ಸ್ಥಿತಿಯ ಮೇಲೆ ಪರಿಣಾಮ ಬೀರಲಿದೆ. ವಾರ್ಷಿಕವಾಗಿ ಉದ್ಯೋಗ ತೊರೆಯುವವರ ಸಂಖ್ಯೆ ಶೇ 10ರಿಂದ 15ರಷ್ಟಿದೆ. ಇದಕ್ಕೂ ಈ ಬೆಳವಣಿಗೆಯು ಗಣನೀಯ ಪಾಲು ನೀಡುತ್ತಿದೆ ಎಂದು ತಿಳಿಸಿದ್ದಾರೆ.

ಯುವ ಉದ್ಯೋಗಿಗಳು ಎದುರಿಸುವ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ. ಹಾಗಾಗಿ, ಅವರು ಹೊಸ ಅವಕಾಶ ಹುಡುಕುತ್ತಾ ಕಂಪನಿ ತೊರೆದು ಹೋಗುವುದು ಹೆಚ್ಚುತ್ತಿದೆ ಎಂದಿದ್ದಾರೆ.

2000ರಲ್ಲಿ ಮಾಹಿತಿ ತಂತ್ರಜ್ಞಾನ ವಲಯದಲ್ಲಿ ಇಂತಹ ಬೆಳವಣಿಗೆ ಕಂಡುಬಂದಿತ್ತು. ಆಗ ಈ ವಲಯವು ಕ್ಷಿಪ್ರಗತಿಯಲ್ಲಿ ಪ್ರಗತಿ ಕಾಣುತ್ತಿತ್ತು. ಕೌಶಲ ಹೊಂದಿದ ವೃತ್ತಿಪರರಿಗೆ ಬೇಡಿಕೆ ಹೆಚ್ಚಿತ್ತು. ಹಾಗಾಗಿ, ಕಂಪನಿಗಳು ಹೊಸಬರನ್ನು ಕೆಲಸದಲ್ಲಿ ಉಳಿಸಿಕೊಳ್ಳಲು ಹರಸಾಹಸಪಟ್ಟಿದ್ದವು ಎಂದು ಹೇಳಿದ್ದಾರೆ.

ಕೆಲಸಕ್ಕೆ ಸೇರಿದ ಆರು ತಿಂಗಳಿನಲ್ಲಿ ಅಥವಾ ಪ್ರೊಬೆಷನರಿ ಅವಧಿಯಲ್ಲಿ ಉದ್ಯೋಗ ತೊರೆಯುತ್ತಾರೆ. ಕೆಲವು ಕಂಪನಿಗಳಲ್ಲಿ ಮೂರು ತಿಂಗಳಿಗೆ ಕೆಲಸ ತೊರೆಯುವವರ ಸಂಖ್ಯೆ ಹೆಚ್ಚಿದೆ.

ಆರು ಒತ್ತೆಯಾಳುಗಳ ಮೃತದೇಹ ವಶಪಡಿಸಿಕೊಂಡ ಇಸ್ರೇಲ್

ಜೆರುಸಲೇಂ (ಎಪಿ): ಗಾಜಾದಲ್ಲಿ ಹಮಾಸ್ ಬಂಡುಕೋರರು ಒತ್ತೆಯಾಗಿರಿಸಿಕೊಂಡಿದ್ದ ಆರು ಮಂದಿಯ ಮೃತದೇಹಗಳನ್ನು ವಶಪಡಿಸಿಕೊಂಡಿರುವುದಾಗಿ ಇಸ್ರೇಲ್ ಭಾನುವಾರ ತಿಳಿಸಿದೆ.


ಗಾಜಾದಲ್ಲಿ ಒತ್ತೆಯಾಳುಗಳಾಗಿರುವ ತನ್ನ ಪ್ರಜೆಗಳ ರಕ್ಷಣಾ ಕಾರ್ಯಾಚರಣೆಯನ್ನು ಇಸ್ರೇಲ್ ಪಡೆಗಳು ಚುರುಕುಗೊಳಿಸಿವೆ. ಇದರ ಭಾಗವಾಗಿ ರಫಾದಲ್ಲಿ ಕಾರ್ಯಾಚರಣೆ ಆರಂಭಿಸಿದ್ದ ಸೇನೆಯು, ಅಲ್ಲಿಯ ಸುರಂಗವೊಂದರಲ್ಲಿ ಈ ಮೃತದೇಹಗಳನ್ನು ವಶಪಡಿಸಿಕೊಂಡಿದೆ. ಒತ್ತೆಯಾಳುಗಳ ರಕ್ಷಣೆಗೆ ಇಸ್ರೇಲ್ ಸೇನೆ ಕೈಗೊಂಡಿರುವ ಕಾರ್ಯಾಚರಣೆಯ ಮಾಹಿತಿ ತಿಳಿದ ಹಮಾಸ್ ಬಂಡುಕೋರರು, ಒತ್ತೆಯಾಳುಗಳನ್ನು ಕೊಂದು ಪರಾರಿಯಾಗಿದ್ದಾರೆ.

ಮೃತರನ್ನು ಅಮೆರಿಕ ಮೂಲದ ಇಸ್ರೇಲ್ ಉದ್ಯಮಿ ಜೋನ್ ಪೋಲಿನ್ ಅವರ ಪುತ್ರ ಹರ್ಷ್ ಗೋಲ್ಡ್‌ಬರ್ಗ್ ಪೋಲಿನ್(23), ಓರಿ ಡ್ಯಾನಿನೊ(25), ಈಡನ್ ಯೆರುಶಲ್ಮಿ(24), ಅಲ್ಮೊಗ್ ಸಾರುಸಿ(27), ಅಲೆಕ್ಸಾಂಡರ್ ಲೊಬನೊವ್(33), ಕಾರ್ಮೆಲ್ ಗ್ಯಾಟ್(40) ಎಂದು ಗುರುತಿಸಲಾಗಿದೆ ಎಂದು ಇಸ್ರೇಲ್ ಸೇನೆ ಹೇಳಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಇಸ್ರೇಲ್‌ನ ಅಮಾಯಕ ಪ್ರಜೆಗಳನ್ನು ಹತ್ಯೆ ಮಾಡಿರುವ ಹಮಾಸ್‌ಗೆ ತಕ್ಕ ಶಾಸ್ತಿ ಮಾಡಲಾಗುವುದು ಎಂದು ಗುಡುಗಿದ್ದಾರೆ. ಹಮಾಸ್ ಬಂಡುಕೋರರು ಶಾಂತಿ ಒಪ್ಪಂದ ಬಯಸುತ್ತಿಲ್ಲ ಎನ್ನುವುದು ಈ ಕೃತ್ಯದಿಂದ ಸಾಬೀತಾಗಿದೆ ಎಂದು ಹೇಳಿದ್ದಾರೆ.

ಜೋ ಬೈಡನ್ ಸಾಂತ್ವನ: ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಗೋಲ್ಡ್‌ಬರ್ಗ್ ಪೋಲಿನ್ ಪೋಷಕರನ್ನು ಭೇಟಿಯಾಗಿ, ಸಾಂತ್ವನ ಹೇಳಿದ್ದಾರೆ. ಹಮಾಸ್ ಬಂಡುಕೋರರ ಕೃತ್ಯವನ್ನು ಖಂಡಿಸಿದ್ದು, ತಮ್ಮ ಕೃತ್ಯಗಳಿಗೆ ಹಮಾಸ್ ತಕ್ಕ ಬೆಲೆ ತೆರಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಅಲ್ಲದೆ, ಉಳಿದ ಒತ್ತೆಯಾಳುಗಳ ಬಿಡುಗಡೆಗೆ ಹೆಚ್ಚಿನ ಪ್ರಯತ್ನ ಮಾಡುವುದಾಗಿ ತಿಳಿಸಿದ್ದಾರೆ.

ವೆಸ್ಟ್ ಬ್ಯಾಂಕ್‌ನಲ್ಲಿ ಭಾನುವಾರ ನಡೆದ ಮತ್ತೊಂದು ಘಟನೆಯಲ್ಲಿ ಮೂವರು ಪೊಲೀಸ್ ಅಧಿಕಾರಿಗಳು ಮೃತಪಟ್ಟಿದ್ದಾರೆ ಎಂದು ಇಸ್ರೇಲ್ ತಿಳಿಸಿದೆ.



ಪತನಗೊಂಡಿರುವ ಎಂಐ–8 ಹೆಲಿಕಾಪ್ಟರ್‌ನ ಅವಶೇಷಗಳು – ಎಎಫ್‌ಪಿ ಚಿತ್ರ

ಹೆಲಿಕಾಪ್ಟರ್ ಪತನ: 17 ಮೃತದೇಹ ಪತ್ತೆ

ಮಾಸ್ಕೊ (ಎಪಿ): ರಷ್ಯಾದ ಪೂರ್ವ ಭಾಗದಲ್ಲಿ ನಾಪತ್ತೆಯಾಗಿದ್ದ ಹೆಲಿಕಾಪ್ಟರ್‌ನ ಅವಶೇಷಗಳು ಮತ್ತು 17 ಜನರ ಮೃತದೇಹಗಳು ಪತ್ತೆಯಾಗಿವೆ.

'ಹೆಲಿಕಾಪ್ಟರ್‌ನಲ್ಲಿ ಒಟ್ಟು 22 ಜನರು ಪ್ರಯಾಣಿಸುತ್ತಿದ್ದರು. ಉಳಿದ ಐವರಿಗಾಗಿ ಶೋಧ ಕಾರ್ಯ ನಡೆಯುತ್ತಿದೆ' ಎಂದು ರಷ್ಯಾದ ತುರ್ತುಪರಿಸ್ಥಿತಿ ನಿರ್ವಹಣೆಯ ಸಚಿವಾಲಯ ಭಾನುವಾರ ತಿಳಿಸಿದೆ.

'ಹೆಲಿಕಾಪ್ಟರ್‌ನಲ್ಲಿದ್ದ ಎಲ್ಲರೂ ಮೃತಪಟ್ಟಿದ್ದಾರೆ' ಎಂದು ರಷ್ಯಾದ ಸರ್ಕಾರಿ ಸುದ್ದಿ ಸಂಸ್ಥೆ ಆರ್‌ಐಎ ನೊವೊಸ್ತಿ ವರದಿ ಮಾಡಿದೆ.

'ಹವಾಮಾನ ವೈಪರೀತ್ಯದ ಪರಿಣಾಮ ಹೆಲಿಕಾಪ್ಟರ್ ಪತನಗೊಂಡಿರುವ ಸಾಧ್ಯತೆಯಿದೆ' ಎಂದು ಸಚಿವಾಲಯ ತಿಳಿಸಿರುವುದಾಗಿ ವರದಿಯಾಗಿದೆ.

'ಶನಿವಾರ ಕಾಮ್ಚಟ್ಕ ಪ್ರದೇಶದಲ್ಲಿ ಸಂಚರಿಸುತ್ತಿದ್ದ ಎಂಐ–8 ಹೆಲಿಕಾಪ್ಟರ್ ನಿಗದಿತ ಸ್ಥಳಕ್ಕೆ ತಲುಪದೇ ಸಂಪರ್ಕ ಕಳೆದುಕೊಂಡಿತ್ತು. ಸಂಪರ್ಕ ಕಳೆದುಕೊಂಡಿರುವ ಸ್ಥಳದಲ್ಲೇ ಹೆಲಿಕಾಪ್ಟರ್‌ನ ಅವಶೇಷಗಳು ಪತ್ತೆಯಾಗಿದೆ' ಎಂದು ರಷ್ಯಾದ ಫೆಡರಲ್ ವಿಮಾನಯಾನ ಸಂಸ್ಥೆ ತಿಳಿಸಿದೆ.

ಅಲ್ಪಸಂಖ್ಯಾತ ಸಮುದಾಯದವರ ಮೇಲೆ ಹಲ್ಲೆ ಆರೋಪ

49 ಶಿಕ್ಷಕರಿಂದ ಬಲವಂತದ ರಾಜೀನಾಮೆ

ಢಾಕಾ (ಪಿಟಿಐ): ಬಾಂಗ್ಲಾದೇಶದಲ್ಲಿ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ನೇತೃತ್ವದ ಸರ್ಕಾರ ಪತನಗೊಂಡ ಬಳಿಕ ಅಲ್ಲಿನ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಸುಮಾರು 49 ಶಿಕ್ಷಕರಿಂದ ಬಲವಂತವಾಗಿ ರಾಜೀನಾಮೆ ಪಡೆಯಲಾಗಿದೆ ಎಂದು ಸಂಘಟನೆಯೊಂದು ದೂರಿದೆ.

ಬಾಂಗ್ಲಾದೇಶ ಹಿಂದೂ, ಬೌದ್ಧ, ಕ್ರೈಸ್ತ ಓಯಿಕ್ಯ ಪರಿಷತ್ತಿನ ವಿದ್ಯಾರ್ಥಿ ವಿಭಾಗವಾದ ಬಾಂಗ್ಲಾದೇಶ ಛತ್ರ ಓಯಿಕ್ಯ ಪರಿಷತ್ ಸಂಘಟನೆಯ ಸಂಯೋಜಕ ಸಾಜಿಬ್ ಸರ್ಕಾರ್ ಶನಿವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ್ದಾರೆ ಎಂದು 'ದಿ ಡೈಲಿ ಸ್ಟಾರ್' ವರದಿ ಮಾಡಿದೆ.

ಶೇಖ್ ಹಸೀನಾ ಅವರು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿ, ದೇಶ ತ್ಯಜಿಸಿದ ಬಳಿಕ ದೇಶದಾದ್ಯಂತ ನಡೆದ ಹಿಂಸಾಚಾರದಲ್ಲಿ ಅಲ್ಪಸಂಖ್ಯಾತ ಶಿಕ್ಷಕರ ಮೇಲೆ ದೈಹಿಕ ಹಲ್ಲೆ ನಡೆದಿದೆ. ಅಲ್ಲದೆ, ಬಲವಂತವಾಗಿ 49 ಶಿಕ್ಷಕರಿಂದ ರಾಜೀನಾಮೆ ಪಡೆಯಲಾಗಿದೆ ಎಂದು ಅವರು ಆರೋಪಿಸಿದರು.

ನಂತರ ಕೆಲ ದಿನಗಳಲ್ಲಿ ಸುಮಾರು 19 ಮಂದಿಯನ್ನು ಪುನಃ ಕೆಲಸಕ್ಕೆ ನಿಯೋಜಿಸಿಕೊಳ್ಳಲಾಗಿದೆ ಎಂದೂ ಅವರು ತಿಳಿಸಿದರು.

ಹಿಂಸಾಚಾರದ ವೇಳೆ ಧಾರ್ಮಿಕ, ಜನಾಂಗೀಯ ಅಲ್ಪಸಂಖ್ಯಾತರ ಮೇಲೆ ದಾಳಿ, ಲೂಟಿಗಳು ನಡೆದಿವೆ. ಮಹಿಳೆಯರ ಮೇಲೆ ಹಲ್ಲೆಗಳು ನಡೆದಿದ್ದು, ದೇಗುಲಗಳನ್ನು ಧ್ವಂಸಗೊಳಿಸಲಾಗಿದೆ. ಮನೆ ಮತ್ತು ಅಂಗಡಿ ಮುಂಗಟ್ಟುಗಳಿಗೆ ಬೆಂಕಿಯಿಟ್ಟು ನಾಶ ಮಾಡಲಾಗಿದೆ. ಕೆಲವರ ಕೊಲೆ ಮಾಡಲಾಗಿದೆ ಎಂದು ಅವರು ವಿವರಿಸಿದ್ದಾರೆ.

ರಾಜಕೀಯ ಪಕ್ಷಗಳ ಜತೆ ಯೂನುಸ್ ಸಭೆ

ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ ಯೂನುಸ್ ಮುಹಮ್ಮದ್ ಅವರು ಜಾತಿಯಾ ಪಾರ್ಟಿ, ಗೊನೊ ಫೋರಂ, ಇಸ್ಲಾಮಿ ಆಂದೋಲನ್ ಬಾಂಗ್ಲಾದೇಶ, ಲಿಬರಲ್ ಡೆಮಾಕ್ರಟಿಕ್ ಪಾರ್ಟಿ ಸೇರಿದಂತೆ 35 ರಾಜಕೀಯ ಪಕ್ಷಗಳ ಜತೆ ಶನಿವಾರ ಸರಣಿ ಸಭೆಗಳನ್ನು ನಡೆಸಿದ್ದಾರೆ.

ಮಧ್ಯಂತರ ಸರ್ಕಾರ ತರಬಹುದಾದ ಸುಧಾರಣೆಗಳ ಕುರಿತು ಮತ್ತು ಅವುಗಳ ರೂಪುರೇಷೆಗಳ ಕುರಿತು ಯೂನುಸ್ ಅವರು ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಜತೆ ಚರ್ಚಿಸಿದರು ಎಂದು ಅವರ ವಿಶೇಷ ಸಹಾಯಕ ಮಹ್‌ಫುಜ್ ಆಲಂ ತಿಳಿಸಿದ್ದಾರೆ.

ಯೂನುಸ್ ಅವರು ತಾವು ಕೈಗೊಳ್ಳಲಿರುವ ಸುಧಾರಣೆಗಳ ಕುರಿತ ಸಮಗ್ರ ಚೌಕಟ್ಟನ್ನು ಶೀಘ್ರದಲ್ಲಿಯೇ ತರಲಿದ್ದಾರೆ ಎಂದು ಅವರಿ ತಿಳಿಸಿದ್ದಾರೆ.

ದಕ್ಷಿಣ ವಲಯ ಶಾರ್ಟ್‌ಕೋರ್ಸ್ ಈಜು ಚಾಂಪಿಯನ್‌ಷಿಪ್

ಕರ್ನಾಟಕ ತಂಡಕ್ಕೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಂಡ್ಯ: ಕರ್ನಾಟಕ ತಂಡವು ಮೊದಲ ದಕ್ಷಿಣ ವಲಯ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು. ನಗರದ ಪಿಇಟಿ ಅಕ್ವೆಟಿಕ್ ಸೆಂಟರ್‌ನಲ್ಲಿ ಸ್ಪರ್ಧೆಯ ಕೊನೆಯ ದಿನವಾದ ಭಾನುವಾರವೂ ರಾಜ್ಯದ ಈಜುಪಟುಗಳು ಪಾರಮ್ಯ ಮೆರೆದರು.

ಕರ್ನಾಟಕದ ಹರಿಕಾರ್ತಿಕ್ ವೇಲು ಮತ್ತು ಶ್ರುತಿ ಕೆ.ಆರ್. ಅವರು 50 ಮೀ ಫ್ರೀಸ್ಟೈಲ್‌ನಲ್ಲಿ (ಗುಂಪು 1) ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಒಂದನೇ ಗುಂಪಿನ 50 ಮೀ ಬ್ಯಾಕ್‌ಸ್ಟ್ರೋಕ್‌ನ ಬಾಲಕರ ವಿಭಾಗದಲ್ಲಿ ಕುಶಾಲ್ ಕೆ. ಮತ್ತು ಬಾಲಕಿಯರ ವಿಭಾಗದಲ್ಲಿ ಸಿದ್ಧಿ ಜಿ. ಶಾ ಅಗ್ರಸ್ಥಾನಿಯಾದರು. 100 ಮೀಟರ್ ಬಟರ್‌ಫ್ಲೈ ಸ್ಪರ್ಧೆಯ ಬಾಲಕರ ವಿಭಾಗದಲ್ಲಿ ಅನೀಶ್ ಅನಿರುದ್ಧ ಕೋರೆ ಮತ್ತು ಬಾಲಕಿಯರ ವಿಭಾಗದಲ್ಲಿ ರಿಶಿಕಾ ಯು. ಮಂಗಲ್ ಮೊದಲಿಗರಾದರು.

ಕರ್ನಾಟಕ ತಂಡವು 1905 ಪಾಯಿಂಟ್‌ನೊಂದಿಗೆ ಅಗ್ರಸ್ಥಾನ ಪಡೆದರೆ, ತಮಿಳುನಾಡು ತಂಡ (522 ಅಂಕ) ಎರಡನೇ ಸ್ಥಾನ ಪಡೆಯಿತು. ಕೇರಳ (313), ತೆಲಂಗಾಣ (288) ಮತ್ತು ಆಂಧ್ರಪ್ರದೇಶ (109) ನಂತರದ ಸ್ಥಾನ ಪಡೆದವು.



ಮಂಡ್ಯದಲ್ಲಿ ಭಾನುವಾರ ಮುಕ್ತಾಯವಾದ ದಕ್ಷಿಣ ವಲಯ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿಯನ್ನು ಗೆದ್ದುಕೊಂಡ ಕರ್ನಾಟಕ ತಂಡದ ಈಜುಪಟುಗಳು

ಚಿನ್ನ ಗೆದ್ದ ಕರ್ನಾಟಕದ ಈಜುಪಟುಗಳು: **ಬಾಲಕರು:** 1ನೇ ಗುಂಪು): 50 ಮೀ. ಫ್ರೀಸ್ಟೈಲ್: ಹರಿಕಾರ್ತಿಕ್ ವೇಲು, ಕಾಲ; 24.94ಸೆ.; 50 ಮೀ. ಬ್ಯಾಕ್‌ಸ್ಟ್ರೋಕ್: ಕುಶಾಲ್ ಕೆ., ಕಾಲ: 27.45ಸೆ.; 100 ಮೀ. ಬಟರ್‌ಫ್ಲೈ: ಅನೀಶ್ ಅನಿರುದ್ಧ ಕೋರೆ, ಕಾಲ: 59.02 ಸೆ.; 200 ಮೀ. ಬ್ರೆಸ್ಟ್ ಸ್ಟ್ರೋಕ್: ಆಯುಷ್ ಶಿವರಾಜು ಎಂ. ಕಾಲ: 2 ನಿ.26.78 ಸೆ.; 200 ಮೀ. ಮಿಡ್ಲೆ: ಸೂರ್ಯ ಜೆ.ಟಿ. ಕಾಲ: 2ನಿ.11. 51ಸೆ; 1500 ಮೀ. ಫ್ರೀಸ್ಟೈಲ್: ಅಂಕಿತ್ ಭಟ್ ಅರ್ನಡಿ, ಕಾಲ: 16 ನಿ.29.36ಸೆ; 4x200 ಫ್ರೀಸ್ಟೈಲ್ ರಿಲೆ: ಕರ್ನಾಟಕ, ಕಾಲ: 8ನಿ.11.37ಸೆ. ಎರಡನೇ ಗುಂಪು): 50 ಮೀ. ಫ್ರೀಸ್ಟೈಲ್: ದಕ್ಷಿತ್ ಎಂ. ಕಾಲ: 26.85 ಸೆ.; 50 ಮೀ. ಬ್ಯಾಕ್‌ಸ್ಟ್ರೋಕ್: ಭವ್ಯೇಶ್ ಸಾಯಿ ಚೌಧರಿ, ಕಾಲ: 30.14 ಸೆ.; 100 ಮೀ. ಬಟರ್‌ಫ್ಲೈ: ಅಮೋಘ್ ಎಸ್.ಎಂ, ಕಾಲ 1 ನಿ.02.45ಸೆ.: 200 ಮೀ. ಬ್ರೆಸ್ಟ್ ಸ್ಟ್ರೋಕ್: ರಿಯಾಂಶ್ ಕಾಂತಿ ವೈ, ಕಾಲ: 2ನಿ.39.99ಸೆ.; 200 ಮೀ. ಮಿಡ್ಲೆ: ಅಮೋಘ್ ಎಸ್.ಎಂ, ಕಾಲ: 2ನಿ.21.57ಸೆ.; 1500 ಮೀ. ಫ್ರೀಸ್ಟೈಲ್: ದಕ್ಷ್ ಪ್ರಸಾದ್, ಕಾಲ: 17 ನಿ.49.81ಸೆ. 4x200 ಫ್ರೀಸ್ಟೈಲ್ ರಿಲೆ: ಕರ್ನಾಟಕ, ಕಾಲ: 8ನಿ.55.19ಸೆ. ಮೂರನೇ ಗುಂಪು: 50 ಮೀ. ಫ್ರೀಸ್ಟೈಲ್: ಆರಿತ್ ಚಂದ್ರಶೇಖರ್, ಕಾಲ: 31.15ಸೆ, 50 ಮೀ. ಬ್ಯಾಕ್‌ಸ್ಟ್ರೋಕ್: ಆರಿತ್ ಚಂದ್ರಶೇಖರ್, ಕಾಲ: 34.76ಸೆ, 100 ಮೀ. ಬಟರ್‌ಫ್ಲೈ: 200 ಮೀ. ಮಿಡ್ಲೆ; ಸ್ನಿಥಿಕ್ ಎನ್, ಕಾಲ: 2ನಿ.54. 05ಸೆ.

ಬಾಲಕಿಯರು: 1ನೇ ಗುಂಪು): 50 ಮೀ. ಫ್ರೀಸ್ಟೈಲ್: ಶ್ರುತಿ ಕೆ.ಆರ್, ಕಾಲ: 28.35 ಸೆ.; 50 ಮೀ. ಬ್ಯಾಕ್‌ಸ್ಟ್ರೋಕ್: ಸಿದ್ಧಿ ಜಿ. ಶಾ (30.94ಸೆ), 100 ಮೀ. ಬಟರ್‌ಫ್ಲೈ: ರಿಶಿಕಾ ಯು. ಮಂಗಲ್, ಕಾಲ: 1ನಿ.06. 51ಸೆ, 200 ಮೀ. ಬ್ರೆಸ್ಟ್ ಸ್ಟ್ರೋಕ್: ಸಮನ್ವಿ ಇ.ಎಸ್, ಕಾಲ: 2ನಿ.53.48ಸೆ, 200 ಮೀ. ಮಿಡ್ಲೆ: ಅಂಶು ಆನಂದ್ ದೇಶಪಾಂಡೆ, ಕಾಲ: 2ನಿ.32.73ಸೆ.; 1500 ಮೀ. ಫ್ರೀಸ್ಟೈಲ್: ಜನ್ಯಾ ಬಿ.ಎಸ್, ಕಾಲ: 18ನಿ.43.27ಸೆ.; 4x200 ಫ್ರೀಸ್ಟೈಲ್ ರಿಲೆ: ಕರ್ನಾಟಕ, ಕಾಲ: 10ನಿ.04.16ಸೆ. 2ನೇ ಗುಂಪು): 50 ಮೀ. ಫ್ರೀಸ್ಟೈಲ್: ಸೋನಾಕ್ಷಿ ಸತ್ಯನಾರಾಯಣ, ಕಾಲ: 29.47ಸೆ, 100 ಮೀ. ಬಟರ್‌ಫ್ಲೈ: ಸೋನಾಕ್ಷಿ ಸತ್ಯನಾರಾಯಣ, ಕಾಲ: 1ನಿ.09.78ಸೆ.; 200 ಮೀ. ಬ್ರೆಸ್ಟ್ ಸ್ಟ್ರೋಕ್: ಗಗನಾ ಸಿ.ಎಂ, ಕಾಲ: 2ನಿ.55.19ಸೆ.; 200 ಮೀ. ಮಿಡ್ಲೆ: ಸುಮನ್ವಿ ವಿ. ಕಾಲ: 2ನಿ.39.12ಸೆ.; 1500 ಮೀ. ಫ್ರೀಸ್ಟೈಲ್: ಸಂಜನಾ ಪಿ.ವಿ, ಕಾಲ: 18ನಿ.48.57ಸೆ.; 4x200 ಫ್ರೀಸ್ಟೈಲ್ ರಿಲೆ: ಕರ್ನಾಟಕ, ಕಾಲ: 9ನಿ.39.13ಸೆ. ಮೂರನೇ ಗುಂಪು: 50 ಮೀ. ಫ್ರೀಸ್ಟೈಲ್:ಸ್ಮೃತಿ ಮಹೇಶ್, ಕಾಲ: 33.07ಸೆ, 50 ಮೀ. ಬ್ಯಾಕ್‌ಸ್ಟ್ರೋಕ್: ಧೃತಿ ಎಸ್.ವಶಿಷ್ಠ, ಕಾಲ: 37.66 ಸೆ,; 100 ಮೀ. ಬಟರ್‌ಫ್ಲೈ: ಸ್ಮೃತಿ ಮಹೇಶ್, ಕಾಲ: 1ನಿ.24.23ಸೆ,; 200 ಮೀ. ಮಿಡ್ಲೆ; ಜರ್ನಾ ಸಿಸೋಡಿಯಾ, ಕಾಲ: 2ನಿ.59.18ಸೆ.

ನಾಲ್ಕನೇ ಸುತ್ತಿಗೆ ಸಿನ್ನರ್

ಅಮೆರಿಕ ಓಪನ್: ಮೆಡ್ವೆಡೇವ್, ಇಗಾ ಶ್ವಾಂಟೆಕ್‌ಗೆ ಜಯ

ನ್ಯೂಯಾರ್ಕ್ (ಎಪಿ): ಅಗ್ರ ಶ್ರೇಯಾಂಕದ ಯಾನಿಕ್ ಸಿನ್ನರ್ ಅವರು ಆಸ್ಟ್ರೇಲಿಯಾದ ಎದುರಾಳಿ ಕ್ರಿಸ್ ಒ'ಕಾನೆಲ್ ಅವರಿಗೆ ಪ್ರತಿರೋಧ ತೋರಲು ಕೊಂಚವೂ ಅವಕಾಶ ನೀಡದೇ ನೇರ ಸೆಟ್‌ಗಳಿಂದ ಗೆದ್ದು ಅಮೆರಿಕ ಓಪನ್ ಟೆನಿಸ್ ಟೂರ್ನಿಯ ನಾಲ್ಕನೇ ಸುತ್ತಿಗೆ ದಾಪುಗಾಲಿಟ್ಟರು.

ಹಾಲಿ ಚಾಂಪಿಯನ್ ನೊವಾಕ್ ಜೊಕೊವಿಚ್ ಮತ್ತು ಮೂರನೇ ಶ್ರೇಯಾಂಕದ ಕಾರ್ಲೊಸ್ ಅಲ್ಕರಾಜ್ ಅವರು ತಮಗಿಂತ ಕೆಳ ಕ್ರಮಾಂಕದ ಆಟಗಾರರೆದುರು ಹಿಮ್ಮೆಟ್ಟಿದ ನಂತರ ಸಿನ್ನರ್ ಅಂಥ ಯಾವುದೇ ಸಾಧ್ಯತೆಗಳಿಗೆ ಅವಕಾಶ ಕಲ್ಪಿಸಲಿಲ್ಲ. ಆರ್ಥರ್ ಆ್ಯಷ್ ಸ್ಟೇಡಿಯಂನಲ್ಲಿ ಶನಿವಾರ ರಾತ್ರಿ ನಡೆದ ಮೂರನೇ ಸುತ್ತಿನ ಪಂದ್ಯದಲ್ಲಿ ಎರಡು ಗಂಟೆಗಳ ಒಳಗೆ 6-1, 6-4, 6-2 ರಲ್ಲಿ ಒ'ಕಾನೆಲ್ ಅವರನ್ನು ಮಣಿಸಿದರು.

ಸರ್ಬಿಯಾದ ಜೊಕೊವಿಚ್ ಮತ್ತು ಸ್ಪೇನ್‌ನ ಅಲ್ಕರಾಜ್ ನಿರ್ಗಮನದ ನಂತರ ಫ್ಲಷಿಂಗ್ ಮಿಡೊದಲ್ಲಿ ಸಿನ್ನರ್ ಅವರು ಪ್ರಶಸ್ತಿಗೆ ನೆಚ್ಚಿನ ಆಟಗಾರರಾಗಿ ಕಾಣಿಸಿಕೊಂಡಿದ್ದಾರೆ. ಸಿನ್ನರ್ ಪಂದ್ಯದಲ್ಲಿ 15 ಏಸ್‌ಗಳನ್ನು ಸಿಡಿಸಿದರು. ಅವರು ಬ್ರೇಕ್ ಪಾಯಿಂಟ್ ಎದುರಿಸಲಿಲ್ಲ. ಓ'ಕಾನೆಲ್ ಅವರ 12 ಸರ್ವ್ ಗೇಮ್‌ಗಳಲ್ಲಿ ಐದನ್ನು ಸಿನ್ನರ್ ಗೆದ್ದರು.

ಜೊಕೊವಿಚ್ ಅವರು ಅಲೆಕ್ಸೈ ಪಾಪಿರಿನ್ ಅವರಿಗೆ ಮಣಿದರೆ, ಅಲ್ಕರಾಜ್ ಅವರು ಡಚ್ ಆಟಗಾರ ಬೊಟಿಕ್ ಫನ್‌ಡ ಶೋಪ್‌ಶುಪ್ ಅವರಿಗೆ ಶರಣಾಗಿದ್ದರು.

ಅಮೆರಿಕ ಓಪನ್ ಮಾಜಿ ಚಾಂಪಿಯನ್ನರಲ್ಲಿ ಕಣದಲ್ಲಿರುವ ಏಕೈಕ ಆಟಗಾರ ಎಂದರೆ 2021ರ ವಿಜೇತ ಡೇನಿಯಲ್ ಮೆಡ್ವೆಡೇವ್ ಮಾತ್ರ. ಅವರು ಮೂರನೇ ಸುತ್ತಿನಲ್ಲಿ 31ನೇ ಕ್ರಮಾಂಕದ ಫ್ಲಾವಿಯೊ ಕೊಬೊಲ್ಲಿ ಅವರನ್ನು 6-3, 6-4, 6-3 ರಿಂದ ಸೋಲಿಸಿದರು. ಐದನೇ ಶ್ರೇಯಾಂಕದ ಅವರ ಮುಂದಿನ ಎದುರಾಳಿ ನುನೊ ಬೊರ್ಗೆಸ್. ಇನ್ನೊಂದು ಪಂದ್ಯದಲ್ಲಿ ನುನೊ ಸೋಲಿನ ಸುಳಿಯಿಂದ ಚೇತರಿಸಿ 6-7 (5), 6-1, 3-6, 7-6 (6), 6-0 ಯಿಂದ ಜಾಕುಬ್ ಮೆನ್ಸಿಕ್ ಅವರನ್ನು ಸೋಲಿಸಿದರು.

ಶ್ವಾಂಟೆಕ್‌ಗೆ ಜಯ: ವಿಶ್ವದ ಅಗ್ರಮಾನ್ಯ ಆಟಗಾರ್ತಿ ಇಗಾ ಶ್ವಾಂಟೆಕ್ 6-4, 6-2 ರಿಂದ ಅನಸ್ತೇಸಿಯಾ ಪಾವ್ಲಿಚೆಂಕೊವಾ ಅವರನ್ನು ಹಿಮ್ಮೆಟ್ಟಿಸಿದರು. ಶ್ವಾಂಟೆಕ್ ಎರಡು ವರ್ಷ ಹಿಂದೆ ಇಲ್ಲಿ ಚಾಂಪಿಯನ್ ಆಗಿದ್ದರು. ಇಟಲಿಯ ಜಾಸ್ಮಿನ್ ಪಾವೊಲಿನಿ ಇನ್ನೊಂದು ಪಂದ್ಯದಲ್ಲಿ 6-3, 6-4 ರಿಂದ 30ನೇ ಶ್ರೇಯಾಂಕದ ಯುಲಿಯಾ ಪುಟಿಂಟ್ಸೆವಾ ಅವರನ್ನು ಸೋಲಿಸಿ ಮೊದಲ ಬಾರಿ ನಾಲ್ಕನೇ ಸುತ್ತನ್ನು ತಲುಪಿದ್ದಾರೆ.



ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಮೂರನೇ ಸುತ್ತಿನಲ್ಲಿ ಆಸ್ಟ್ರೇಲಿಯಾದ ಕ್ರಿಸ್ಟೋಫರ್ ಒ'ಕಾನೆಲ್ ಅವರನ್ನು ಸೋಲಿಸಿದ ನಂತರ ಅಗ್ರ ಶ್ರೇಯಾಂಕದ ಯಾನಿಕ್ ಸಿನ್ನರ್ ಸಂಭ್ರಮಿಸಿದ್ದು ಹೀಗೆ... ಎಎಫ್‌ಪಿ ಚಿತ್ರ

ಮಿಶ್ರ ಡಬಲ್ಸ್ ಎಂಟರ ಘಟ್ಟಕ್ಕೆ ಬೋಪಣ್ಣ



ನ್ಯೂಯಾರ್ಕ್ (ಪಿಟಿಐ): ಸೋಲಿನ ಸುಳಿಯಿಂದ ಗೆಲುವು ಪಡೆದ ಭಾರತದ ರೋಹನ್ ಬೋಪಣ್ಣ ಮತ್ತು ಇಂಡೊನೇಷ್ಯಾದ ಜೊತೆಗಾರ್ತಿ ಅಲ್ದಿಲಾ ಸುತ್ಜಿಯಾದಿ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಶನಿವಾರ ಮಿಶ್ರ ಡಬಲ್ಸ್ ಎಂಟರ ಘಟ್ಟಕ್ಕೆ ಮುನ್ನಡೆದರು.

ಎಂಟನೇ ಶ್ರೇಯಾಂಕದ ಪಡೆದಿರುವ ಬೋಪಣ್ಣ– ಸುತ್ಜಿಯಾದಿ ಅವರು ಒಂದು ಗಂಟೆ 13 ನಿಮಿಷಗಳ ಪಂದ್ಯದಲ್ಲಿ 0–6, 7–6 (5), 10–7 ರಿಂದ ಆಸ್ಟ್ರೇಲಿಯಾದ ಜಾನ್ ಪಿಯರ್ಸ್– ಝೆಕ್ ರಿಪಬ್ಲಿಕ್‌ನ ಕ್ಯಾಥರಿನಾ ಸಿನಿಯಾಕೋವಾ ಜೋಡಿಯನ್ನು ಸೋಲಿಸಿದರು. ಭಾರತ–ಇಂಡೊನೇಷ್ಯಾ ಜೋಡಿ ಎಂಟರ ಘಟ್ಟದ ಪಂದ್ಯದಲ್ಲಿ ನಾಲ್ಕನೇ ಶ್ರೇಯಾಂಕದ ಮ್ಯಾಥ್ಯೂ ಎಬ್ಡೆನ್ (ಆಸ್ಟ್ರೇಲಿಯಾ)– ಬಾರ್ಬರಾ ಕ್ರಾಚಿಕೋವಾ (ಝೆಕ್ ರಿಪಬ್ಲಿಕ್) ಜೋಡಿಯನ್ನು ಎದುರಿಸಲಿದೆ.

ಭಾಂಬ್ರಿ-ಒಲಿವೆಟ್ಟಿ ಜೋಡಿಗೆ ಸೋಲು: ಪುರುಷರ ಡಬಲ್ಸ್‌ನ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಭಾರತದ ಯುಕಿ ಭಾಂಬ್ರಿ ಮತ್ತು ಫ್ರಾನ್ಸ್‌ನ ಅಲ್ಬಾನೊ ಒಲಿವೆಟ್ಟಿ ನಿರಾಸೆ ಅನುಭವಿಸಿದರು. ಅವರು 6-2, 6-2ರ ನೇರ ಸೆಟ್‌ಗಳಿಂದ ಅಗ್ರ ಶ್ರೇಯಾಂಕದ ಮಾರ್ಸೆಲ್ ಗ್ರಾನೊಲ್ಲರ್ಸ್ (ಸ್ಪೇನ್) ಮತ್ತು ಹೊರಾಸಿಯಾ ಜೆಬಾಲ್ಲೋಸ್ (ಅರ್ಜೆಂಟೀನಾ) ಜೋಡಿಗೆ ಮಣಿದರು.



ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ ವಿವಿಧ ವಯೋವರ್ಗಗಳಲ್ಲಿ ವಿಜೇತರಾದವರು: (ಎಡದಿಂದ) ತನಿಷ್ಕಾ ಕಪಿಲ್ ಕಾಲಭೈರವ, ಸಾಕ್ಷ್ಯಾ ಸಂತೋಷ್, ಸುಚೇತ್ ಧರೆಣ್ಣವರ, ಅಭಿನವ್ ಪ್ರಸನ್ನ

ಟಿಟಿ: ತನಿಷ್ಕಾಗೆ ಮತ್ತೊಂದು ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಶನಿವಾರ 15 ವರ್ಷದೊಳಗಿನವರ ವಿಭಾಗದಲ್ಲಿ ವಿಜೇತೆಯಾಗಿದ್ದ ತನಿಷ್ಕಾ ಕಪಿಲ್ ಕಾಲಭೈರವ್, ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಭಾನುವಾರ ನೇರ ಸೆಟ್‌ಗಳಿಂದ ಮಿಹಿಕಾ ಆರ್.ಉಡುಪ ವಿರುದ್ಧ ಗೆದ್ದು 13 ವರ್ಷದೊಳಗಿನವರ ವಿಭಾಗದಲ್ಲೂ ಚಾಂಪಿಯನ್ ಪಟ್ಟಕ್ಕೇರಿದಳು.

ಇದೇ ವಯೋವರ್ಗದ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಅಭಿನವ್ ಪ್ರಸನ್ನ ಪ್ರಶಸ್ತಿ ಗೆದ್ದುಕೊಂಡನು.

ಟೂರ್ನಿಯ ಅಂತಿಮ ದಿನ ನಡೆದ ಫೈನಲ್‌ನಲ್ಲಿ ತನಿಷ್ಕಾ 11-1, 11-2, 11-5 ರಿಂದ ಮಿಹಿಕಾ ಮೇಲೆ ಸುಲಭ ಜಯಗಳಿಸಿದಳು. ಸೆಮಿಫೈನಲ್ ಪಂದ್ಯಗಳಲ್ಲಿ ತನಿಷ್ಕಾ 11-4, 11-4, 11-8 ರಿಂದ ಐರೀನ್ ಅನ್ನ ಸುಭಾಷ್ ವಿರುದ್ಧ ಜಯಗಳಿಸಿದರೆ, ಮಿಹಿಕಾ ಉತ್ತಮ ಹೋರಾಟದ ನಂತರ ಸಾಕ್ಷ್ಯಾ ಸಂತೋಷ್ ವಿರುದ್ಧ 11-8, 11-7, 8-11, 12-10 ರಲ್ಲಿ ಗೆಲುವನ್ನು ದಾಖಲಿಸಿದಳು.

13 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ ಅಭಿನವ್ 11-4, 11-5, 13-11ರಿಂದ ಸಾತ್ವಿಕ್ ಎಂ. ವಿರುದ್ಧ ಜಯಗಳಿಸಿದನು. ಸೆಮಿಫೈನಲ್ ಪಂದ್ಯಗಳಲ್ಲಿ ಅಭಿನವ್ 11-4, 11-6, 9-11, 12-10 ರಿಂದ ಶಮಂತ್ ಭಟ್ ವಿರುದ್ಧ, ಸಾತ್ವಿಕ್ 11-3, 11-8, 5-11, 11-7 ರಲ್ಲಿ ಸುಚೇತ್ ಸಿ.ಧರೆಣ್ಣವರ ವಿರುದ್ಧ ಜಯಗಳಿಸಿದರು.

ಸಾಕ್ಷ್ಯಾ, ಸುಚೇತ್‌ಗೆ ಪ್ರಶಸ್ತಿ: ಹೋಪ್ (11 ವರ್ಷದೊಳಗಿನವರ) ವಿಭಾಗದ ಫೈನಲ್‌ಲ್ಲಿ ಸಾಕ್ಷ್ಯಾ ಸಂತೋಷ್ 14-12, 11-3, 11-4 ರಿಂದ ಆಧ್ಯಾ ಎಂ. ವಿರುದ್ಧ ಜಯಗಳಿಸಿ ಪ್ರಶಸ್ತಿ ಗೆದ್ದುಕೊಂಡಳು.

ಸೆಮಿಫೈನಲ್ ಪಂದ್ಯಗಳಲ್ಲಿ ಆಧ್ಯಾ 11-6, 11-9, 10-12, 12-10 ರಲ್ಲಿ ಸೃಷ್ಟಿ ಧಾರಿವಾಲ್ ವಿರುದ್ಧ, ಸಾಕ್ಷ್ಯಾ 11-4, 11-1, 11-6 ರಿಂದ ಆಂಜೆಲಿನಾ ಕ್ರಿಸ್ಟಿ ಪ್ರದೀಪ್ ವಿರುದ್ಧ ಜಯಗಳಿಸಿದ್ದರು.

ಬಾಲಕರ ವಿಭಾಗದ ಫೈನಲ್‌ನಲ್ಲಿ ಸುಚೇತ್ 6-11, 11-7, 11-8, 11-7 ರಲ್ಲಿ ಆರ್ಣವ್ ಮಿಥುನ್ ಮೇಲೆ ಜಯಗಳಿದನು.

ನಾಲ್ಕರ ಘಟ್ಟದ ಪಂದ್ಯಗಳಲ್ಲಿ ಸುಚೇತ್ 9-11, 11-9, 13-11, 6-11, 11-5 ರಿಂದ ಅಂಕುಶ್ ಬಾಳಿಗ ವಿರುದ್ಧ, ಆರ್ಣವ್ 11-7, 7-11, 11-6, 11-6 ರಲ್ಲಿ ಶಾರ್ವಿಲ್ ಕರಂಬೆಲ್ಕರ್ ವಿರುದ್ಧ ಗೆಲುವು ಪಡೆದರು.

ಕೌಂಟಿ ಕ್ರಿಕೆಟ್: ಅಜಿಂಕ್ಯ ರಹಾನೆ ಶತಕ



ಕಾರ್ಡಿಫ್ (ಪಿಟಿಐ): ಇಂಗ್ಲಿಷ್ ಕೌಂಟಿ ಕ್ರಿಕೆಟ್‌ನಲ್ಲಿ ಲೀಸ್ಟರ್‌ಶೈರ್ ತಂಡದಲ್ಲಿ ಆಡುತ್ತಿರುವ ಭಾರತದ ಅನುಭವಿ ಬ್ಯಾಟರ್ ಅಜಿಂಕ್ಯ ರಹಾನೆ ಭಾನುವಾರ ನಡೆದ ಪಂದ್ಯದಲ್ಲಿ ಶತಕ ಗಳಿಸಿದರು.

ಗ್ಲಾಮರ್ಗನ್ ಎದುರಿನ ಪಂದ್ಯದಲ್ಲಿ ಅವರು 192 ಎಸೆತಗಳಲ್ಲಿ 102 ರನ್ ಗಳಿಸಿದರು. ಇದರಿಂದಾಗಿ ಲೀಸ್ಟರ್ ತಂಡವು ಎರಡನೇ ಇನಿಂಗ್ಸ್‌ನಲ್ಲಿ 6 ವಿಕೆಟ್‌ಗಳಿಗೆ 327 ರನ್ ಗಳಿಸಿದೆ. ತಂಡದಲ್ಲಿರುವ ಪೀಟರ್ ಹ್ಯಾಂಡ್ಸ್‌ಕಂಬ್ ಕೂಡ ಶತಕ (ಬ್ಯಾಟಿಂಗ್ 117) ಗಳಿಸಿದರು. ನಾಲ್ಕನೇ ದಿನದಾಟದಲ್ಲಿ ತಂಡವು 28 ರನ್‌ಗಳ ಮುನ್ನಡೆ ಸಾಧಿಸಿದೆ.

ಟೇಕ್ವಾಂಡೊ: ಹನ್ಸಿಕಾಗೆ 2 ಪದಕ

ಬೆಂಗಳೂರು: ಹನ್ಸಿಕಾ ಯಾದವ್ ಅವರು ಬೆಂಗಳೂರಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಈಚೆಗೆ ನಡೆದ 10ನೇ ಏಷ್ಯಾ ಐಟಿಎಫ್ ಟೇಕ್ವಾಂಡೊ ಚಾಂಪಿಯನ್‌ಷಿಪ್ ನಲ್ಲಿ ಒಂದು ಚಿನ್ನ ಮತ್ತು ಒಂದು ಬೆಳ್ಳಿ ಪದಕವನ್ನು ಜಯಿಸಿದ್ದಾರೆ.

ಬಾಲಕಿಯರ ಸ್ಪಾರಿಂಗ್ ಜೂನಿಯರ್ (14–15 ವರ್ಷ) ಸ್ಪರ್ಧೆಯಲ್ಲಿ ಹನ್ಸಿಕಾ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಅವರು ಯೂರೊ ಸ್ಕೂಲ್ ನಾರ್ತ್ ಕ್ಯಾಂಪಸ್‌ನ 10ನೇ ತರಗತಿ ವಿದ್ಯಾರ್ಥಿನಿಯಾಗಿದ್ದು, ಅಶ್ವಥಾಮ ಯಾದವ್ ವಿ. ಅವರ ಪುತ್ರಿ.



ಪ್ರಶಸ್ತಿಯೊಂದಿಗೆ ಹನ್ಸಿಕಾ ಯಾದವ್

ಚೆಸ್: ಪೂಜಿತಾಗೆ ಅಚ್ಚರಿಯ ಜಯ

ಮೈಸೂರು: ಕರ್ನಾಟಕದ ಆಟಗಾರ್ತಿ ಈ. ಪೂಜಿತಾ ಭಾನುವಾರ ಇಲ್ಲಿ ಆರಂಭಗೊಂಡ 7 ವರ್ಷದ ಒಳಗಿನವರ 37ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನ ಬಾಲಕಿಯರ ವಿಭಾಗದ ಮೊದಲ ಸುತ್ತಿನಲ್ಲಿ 1466 ರೇಟಿಂಗ್ ಪಡೆದಿರುವ ಚಂಡೀಗಢದ ಜಿಯಾನ ಗಾರ್ಗ್ ವಿರುದ್ಧ ಅನಿರೀಕ್ಷಿತ ಜಯಗಳಿಸಿ ಮಣಿಸಿ ಶುಭಾರಂಭ ಮಾಡಿದಳು.

ಕರ್ನಾಟಕ ರಾಜ್ಯ ಚೆಸ್ ಸಂಸ್ಥೆ, ಎಂ.ಎಂ. ಚೆಸ್ ಡೆವಲಪ್‌ಮೆಂಟ್ ಟ್ರಸ್ಟ್, ಮೈಸೂರು ಚೆಸ್ ಸೆಂಟರ್ ಸಹಯೋಗದಲ್ಲಿ ಇಲ್ಲಿನ ವಿಜಯನಗರದಲ್ಲಿರುವ ಸಂಭ್ರಮ ಕಲ್ಯಾಣ ಮಂಟಪದಲ್ಲಿ ಆಯೋಜಿಸಿರುವ ಟೂರ್ನಿಯಲ್ಲಿ ಬಾಲಕಿಯರ ವಿಭಾಗದ ಮತ್ತೊಂದು ಪಂದ್ಯದಲ್ಲಿ ಕರ್ನಾಟಕದ ದರ್ಶ್ವಿ ರೈ, ಕೇರಳದ ಪಿ. ಪೌರ್ಣಮಿ ಎದುರು ಗೆದ್ದು ಮುನ್ನಡೆ ಕಾಯ್ದುಕೊಂಡರು. ಮುಕ್ತ ವಿಭಾಗದ ಮೊದಲ ಸುತ್ತಿನಲ್ಲಿ ಕರ್ನಾಟಕದ ಎಚ್.ಎನ್. ಹಿತನ್, ಮಧ್ಯಪ್ರದೇಶದ ಭವ್ಯಾ ಅಗ್ರವಾಲ್ ಎದುರು ಪರಾಭವಗೊಂಡು ನಿರಾಸೆ ಅನುಭವಿಸಿದರು. 28 ರಾಜ್ಯಗಳ 382 ಸ್ಪರ್ಧಿಗಳು ಪ್ರಶಸ್ತಿಗಾಗಿ ಸೆಣಸಲಿದ್ದಾರೆ.

ಡಬ್ಲ್ಯುಬಿಬಿಎಲ್‌ಗೆ ಭಾರತದ ಆರು ಆಟಗಾರ್ತಿಯರು

ಮೆಲ್ಬರ್ನ್ (ಪಿಟಿಐ): ಸ್ಮೃತಿ ಮಂದಾನ ಸೇರಿದಂತೆ ಭಾರತದ ಒಟ್ಟು ಆರು ಆಟಗಾರ್ತಿಯರು ಮಹಿಳಾ ಬಿಗ್ ಬ್ಯಾಷ್ ಕ್ರಿಕೆಟ್ ಲೀಗ್ (ಡಬ್ಲ್ಯುಬಿಬಿಎಲ್) ಟೂರ್ನಿಯ ತಂಡಗಳಲ್ಲಿ ಸ್ಥಾನ ಪಡೆದಿದ್ದಾರೆ.

ಭಾರತ ತಂಡದ ಉಪನಾಯಕಿಯಾಗಿರುವ ಸ್ಮೃತಿ ಅವರು ಅಡಿಲೇಡ್ ಸ್ಟ್ರೈಕರ್ಸ್ ತಂಡದೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಹೇಮಲತಾ ದಯಾಳನ್ ಅವರನ್ನು ಪರ್ಥ್ ಸ್ಕಾರ್ಚರ್ಸ್ ಸೇರ್ಪಡೆಗೊಳಿಸಿಕೊಂಡಿದೆ. ವಿಕೆಟ್‌ಕೀಪರ್ ಯಷ್ಟಿಕಾ ಭಾಟಿಯಾ ಡಬ್ಲ್ಯುಬಿಬಿಎಲ್‌ಗೆ ಮೆಲ್ಬರ್ನ್ ಸ್ಟಾರ್ಸ್ ಮೂಲಕ ಪದಾರ್ಪಣೆ ಮಾಡುತ್ತಿದ್ದಾರೆ. ಅದೇ ತಂಡದಲ್ಲಿ ದೀಪ್ತಿ ಶರ್ಮಾ ಕೂಡ ಇದ್ದಾರೆ.

ಆಲ್‌ರೌಂಡರ್ ಶಿಖಾ ಪಾಂಡೆ ಅವರನ್ನು ಬ್ರಿಸ್ಬೇನ್ ಹೀಟ್ ತಂಡವು ಆಯ್ಕೆ ಮಾಡಿಕೊಂಡಿದೆ. ಆ ತಂಡದಲ್ಲಿ ಈಗಾಗಲೇ ಜೆಮಿಮಾ ರಾಡ್ರಿಗಸ್ ಆಡುತ್ತಿದ್ದಾರೆ.

ಅಕ್ಟೋಬರ್ 27ರಿಂದ ಅಡಿಲೇಡ್‌ನಲ್ಲಿ ಟೂರ್ನಿ ಆರಂಭವಾಗಲಿದೆ.

ಬಾಂಗ್ಲಾದೇಶದ ರಕ್ಷಣೆಗೆ ನಿಂತ ಲಿಟನ್ ದಾಸ್

ರಾವಲ್ಪಿಂಡಿ (ರಾಯಿಟರ್ಸ್): ಅಲ್ಪಮೊತ್ತಕ್ಕೆ ಕುಸಿಯುವ ಭೀತಿಯಲ್ಲಿದ್ದ ಬಾಂಗ್ಲಾದೇಶ ತಂಡವನ್ನು ಲಿಟನ್ ದಾಸ್ ಅವರು ಕೆಚ್ಚೆದೆಯ ಶತಕ (138, 4x13, 6x4) ಮತ್ತು ಆಲ್‌ರೌಂಡರ್ ಮೆಹಿದಿ ಹಸನ್ ಮಿರಾಜ್ (78, 4x12 6x1) ಅವರು ದಿಟ್ಟ ಅರ್ಧ ಶತಕದ ಮೂಲಕ ಕಾಪಾಡಿದರು.

ಪಾಕಿಸ್ತಾನದ 274 ರನ್‌ಗಳಿಗೆ ಉತ್ತರವಾಗಿ ಎರಡನೇ ಟೆಸ್ಟ್ ಪಂದ್ಯದ ಮೂರನೇ ದಿನವಾದ ಭಾನುವಾರ ಬಾಂಗ್ಲಾದೇಶ ಮೊದಲ ಇನಿಂಗ್ಸ್‌ನಲ್ಲಿ 262 ರನ್ ಪೇರಿಸಿತು.

ದಿನದಾಟ ಕೊನೆಗೊಂಡಾಗ ಪಾಕಿಸ್ತಾನ 2 ವಿಕೆಟ್‌ಗೆ 9 ರನ್ ಗಳಿಸಿ ಆರಂಭದ ಕುಸಿತ ಕಂಡಿದೆ. ಖುರ್ರಂ ಶೆಹಜಾದ್ 90 ರನ್ನಿಗೆ 6 ವಿಕೆಟ್ ಪಡೆದರು.

ಬಾಂಗ್ಲಾದೇಶ ಒಂದು ಹಂತದಲ್ಲಿ 26 ರನ್ನಿಗೆ 6 ವಿಕೆಟ್ ಕಳೆದುಕೊಂಡು ಹೀನಾಯ ಸ್ಥಿತಿಯಲ್ಲಿತ್ತು. ಆದರೆ ದಾಸ್ ಮತ್ತು ಮಿರಾಜ್ ಏಳನೇ ವಿಕೆಟ್‌ಗೆ 165 ರನ್ ಸೇರಿಸಿದರು. ದಾಸ್ ನಂತರ 9ನೇ ವಿಕೆಟ್‌ಗೆ 69 ರನ್ ಸೇರಿಸಿ ತಂಡದ ಹಿನ್ನಡೆಯನ್ನು 12 ರನ್ನುಗಳಿಗೆ ಸೀಮಿತಗೊಳಿಸಿದರು.

ಮಣಿಪುರ: ಗುಂಡಿನ ಚಕಮಕಿ ಮಹಿಳೆ ಸಾವು, ನಾಲ್ವರಿಗೆ ಗಾಯ

ಪ್ರಜಾವಾಣಿ ವಾರ್ತೆ/ಪಿಟಿಐ

ಇಂಫಾಲ್: ಮೈತೇಯಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿರುವ ಪಶ್ಚಿಮ ಇಂಫಾಲ್ ಮತ್ತು ಕುಕಿ ಬಾಹುಳ್ಯದ ಕಂಗ್‌ಪೋಕ್ಪಿ ಜಿಲ್ಲೆಯ ಗಡಿಯಲ್ಲಿ ಭಾನುವಾರ ನಡೆದ ಗುಂಡಿನ ಚಕಮಕಿಯಲ್ಲಿ ಮೈತೇಯಿ ಮಹಿಳೆ ಮೃತಪಟ್ಟು, ಇತರ ನಾಲ್ವರು ಗಾಯಗೊಂಡಿದ್ದಾರೆ.

ಮೃತ ಮಹಿಳೆಯನ್ನು, ಕೌತುಕ್ರ ಗ್ರಾಮದ 31 ವರ್ಷದ ನಂಗ್‌ಬಮ್ ಸುರ್ಬಲಾ ದೇವಿ ಎಂದು ಗುರುತಿಸಲಾಗಿದೆ. ಗುಂಡಿನ ಚಕಮಕಿ ವೇಳೆ, ಗುಂಡು ತಲೆಗೆ ಹೊಕ್ಕ ಪರಿಣಾಮ ಸುರ್ಬಲಾ ದೇವಿ ಮೃತಪಟ್ಟರು. ಅವರ 8 ವರ್ಷದ ಪುತ್ರಿಯ ಬಲ ತೋಳಿಗೆ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸ್ ಅಧಿಕಾರಿ ಎನ್. ರಾಬರ್ಟ್ ಸೇರಿದಂತೆ ಇತರ ಮೂವರು ಈ ಘಟನೆಯಲ್ಲಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಇಲ್ಲಿನ ಪ್ರಾದೇಶಿಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿಮ್ಸ್) ಆಸ್ಪತ್ರೆಗೆ ದಾಖಲಿಸಲಾಗಿದೆ.

ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ವಿರುದ್ಧ ಕುಕಿ–ಜೊ ಸಮುದಾಯದವರು ಕಂಗ್‌ಪೋಕ್ಪಿ ಮತ್ತು ಚುರಚಾಂದಪುರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದ್ದರು. ಇದರ ಬೆನ್ನಲ್ಲೇ, ಹೊಸದಾಗಿ ಈ ಗುಂಡಿನ ಚಕಮಕಿ ನಡೆದಿದೆ.

ಹೇಳಿಕೆ ಬಿಡುಗಡೆ: ಗುಂಡಿನ ಚಕಮಕಿ ಬೆನ್ನಲ್ಲೇ, ಕುಕಿ ಸಮುದಾಯದ ಪ್ರಮುಖ ಸಂಘಟನೆ 'ಕುಕಿ ಇನ್‌ಪಿ ಮಣಿಪುರ' ಭಾನುವಾರ ಹೇಳಿಕೆ ಬಿಡುಗಡೆ ಮಾಡಿದೆ.

'ಕಂಗ್‌ಗುಯಿ–ಲಮ್ಕಾ ಪ್ರದೇಶದಲ್ಲಿ ಕುಕಿ–ಜೊ ನಾಗರಿಕರನ್ನು ಗುರಿಯಾಗಿಸಿ ಎರಡು ದಿಕ್ಕಿನಿಂದಲೂ ಗುಂಡಿನ ದಾಳಿ ನಡೆಸಲಾಗಿದೆ. ಮೈತೇಯಿ ತೀವ್ರಗಾಮಿಗಳ ಗುಂಪು 'ಅರಂಬಾಯಿ ತೆಂಗೋಲ್' ಸದಸ್ಯರು, ಕೆಲ ಬಂಡುಕೋರರ ಗುಂಪುಗಳು ಹಾಗೂ ರಾಜ್ಯ ಪೊಲೀಸರು ಜಂಟಿಯಾಗಿ ಈ ದಾಳಿ ನಡೆಸಿದ್ದಾರೆ' ಎಂದು 'ಕುಕಿ ಇನ್‌ಪಿ ಮಣಿಪುರ' ಪ್ರಕಟಣೆಯಲ್ಲಿ ತಿಳಿಸಿದೆ.

ಆನ್‌ಲೈನ್ ಹಣ ಪಾವತಿ ವಿಳಂಬ: ಗಂಗೆಯಲ್ಲಿ ಮುಳುಗಿದ ಅಧಿಕಾರಿ

ಪ್ರಜಾವಾಣಿ ವಾರ್ತೆ

ಲಖನೌ: ನೀರಿನಲ್ಲಿ ಮುಳುಗುತ್ತಿದ್ದ ಅಧಿಕಾರಿಯೊಬ್ಬರನ್ನು ರಕ್ಷಿಸಲು ಮುಳುಗುತಜ್ಞರೊಬ್ಬರಿಗೆ ಆನ್‌ಲೈನ್ ಮೂಲಕ ಹಣ ಪಾವತಿಸಲು ವಿಳಂಬವಾಗಿದ್ದರಿಂದ ಗಂಗಾ ನದಿಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಉತ್ತರಪ್ರದೇಶ ಆರೋಗ್ಯ ಇಲಾಖೆಯ ಜಂಟಿ ನಿರ್ದೇಶಕ ಆದಿತ್ಯ ವರ್ಧನ್ ಸಿಂಗ್ ಅವರು ಶನಿವಾರ ಕಾನ್ಪುರದಲ್ಲಿ ಗಂಗಾ ನದಿಗೆ ಬಿದ್ದು ನೀರಿನ ಸೆಳೆತಕ್ಕೆ ಕೊಚ್ಚಿಹೋಗಿ ಕೊನೆಯುಸಿರೆಳೆದಿದ್ದಾರೆ.

ಆಗಿದ್ದೇನು?: ಸಿಂಗ್ ಹಾಗೂ ಸ್ನೇಹಿತರು ಗಂಗಾ ನದಿಯಲ್ಲಿ ಸ್ನಾನ ಮಾಡಲು ಇಳಿದಿದ್ದಾರೆ. ಈ ವೇಳೆ ಅಧಿಕಾರಿಯು ಆಯತಪ್ಪಿ ನೀರಿಗೆ ಬಿದ್ದಿದ್ದಾರೆ. ಸ್ಥಳದಲ್ಲಿದ್ದ ಮುಳುಗುತಜ್ಞ ಶೈಲೇಶ್ ಕಶ್ಯಪ್ ಅವರನ್ನು ಸ್ನೇಹಿತರು ನೆರವಿಗಾಗಿ ಕರೆದಿದ್ದಾರೆ. ₹10 ಸಾವಿರ ನೀಡಿದರೆ ಮಾತ್ರ ನೀರಿಗೆ ಧುಮುಕುವುದಾಗಿ ಕಶ್ಯಪ್ ಬೇಡಿಕೆ ಇಟ್ಟಿದ್ದಾರೆ.

ಸಿಂಗ್ ಸ್ನೇಹಿತರ ಬಳಿ ನಗದು ಇರಲಿಲ್ಲ. ತಕ್ಷಣವೇ, ಆನ್‌ಲೈನ್ ಮೂಲಕ ಹಣ ವರ್ಗಾವಣೆಗೆ ಮುಂದಾಗಿದ್ದಾರೆ. ಹಣ ಖಾತೆಗೆ ವರ್ಗಾವಣೆಯಾಗುವವರೆಗೆ ಮುಳುಗುತಜ್ಞ ದಡದ ಮೇಲೆ ಕಾದು ಕೂತಿದ್ದರು. ಅಷ್ಟು ಹೊತ್ತಿಗಾಗಲೇ ಅಧಿಕಾರಿಯು ನೀರಿನ ಸೆಳೆತಕ್ಕೆ ಕೊಚ್ಚಿ ಹೋಗಿದ್ದರು.

'ಹಣ ಬಂದಿರುವುದು ಖಚಿತವಾದ ಮೇಲೆ ನೀರಿಗೆ ಧುಮುಕಿದರೂ, ಅಧಿಕಾರಿಯನ್ನು ಪತ್ತೆಹಚ್ಚಲು ಸಾಧ್ಯವಾಗಲಿಲ್ಲ. ಸಿಂಗ್ ಅವರು ನೀರಿಗೆ ಬಿದ್ದ ತಕ್ಷಣವೇ ನೀರಿಗೆ ಇಳಿದಿದ್ದರೆ ಅವರು ಬದುಕುತ್ತಿದ್ದರು' ಎಂದು ಸ್ನೇಹಿತರು ದೂರಿದ್ದಾರೆ.

'ಆದಿತ್ಯವರ್ಧನ್ ಸಿಂಗ್ ಅವರನ್ನು ಕಾನ್ಪುರಕ್ಕೆ ನಿಯೋಜಿಸಲಾಗಿತ್ತು. ಇಲ್ಲಿನ 'ನಾನಾಮಾವೂ' ಘಾಟ್‌ಗೆ ಸ್ನೇಹಿತರ ಜತೆಗೆ ಸ್ನಾನ ಮಾಡಲು ಬಂದಿದ್ದು, ಸೆಲ್ಫಿ ತೆಗೆದುಕೊಳ್ಳುತ್ತಿದ್ದಾಗ ಕಾಲುಜಾರಿ ನದಿಗೆ ಬಿದ್ದು ಕೊಚ್ಚಿ ಹೋಗಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಧಿಕಾರಿಯ ಪತ್ನಿ ಮಹಾರಾಷ್ಟ್ರದಲ್ಲಿ ನ್ಯಾಯಾಧೀಶೆಯಾಗಿದ್ದಾರೆ.

'ಬಿಹು ಗೀತೆ'ಯ ಭಿನ್ನ ಪ್ರಸ್ತುತಿ: ಗಾಯಕನ ಸೆರೆ

ಗುವಾಹಟಿ (ಪಿಟಿಐ): ಅಸ್ಸಾಂನ ಸಾಂಪ್ರದಾಯಿಕ ನೆಲೆಯ ಬಿಹು ಗೀತೆಯನ್ನು ಭಿನ್ನವಾಗಿ ಹಾಡಿ 'ಪರಿವರ್ತಿಸಿದ' ಆರೋಪದಡಿ 'ಮಿಯಾ ಬಿಹು' ಗೀತೆಯ ಗಾಯಕ ಅಲ್ತಾಫ್ ಹುಸೇನ್ ಎಂಬುವವರನ್ನು ಅಸ್ಸಾಂನ ಪೊಲೀಸರು ಬಂಧಿಸಿದ್ದಾರೆ.

ಈ ಬಂಧನವನ್ನು ಸಮರ್ಥಿಸಿಕೊಂಡಿರುವ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು, 'ಸಾಂಪ್ರದಾಯಿಕ ಬಿಹು ಗೀತೆಯನ್ನು ಪರಿವರ್ತಿಸಿ ಭಿನ್ನವಾಗಿ ಪ್ರಸ್ತುತಪಡಿಸುವುದನ್ನು ಅಸ್ಸಾಂನ ಯಾರೊಬ್ಬರೂ ಸಹಿಸಲಾರರು' ಎಂದು ಹೇಳಿದ್ದಾರೆ.

ಈ ಕುರಿತು ಫೇಸ್‌ಬುಕ್ ಪೋಸ್ಟ್‌ನಲ್ಲಿ ಪ್ರತಿಕ್ರಿಯಿಸಿರುವ ಅವರು, 'ಅಸ್ಸಾಂನ ಸಾಮಾಜಿಕ ವ್ಯವಸ್ಥೆ ಮೇಲಿನ ದಾಳಿ ಅಥವಾ ಇಂಥ ಯಾವುದೇ ಯತ್ನವನ್ನು ಸಹಿಸಲಾಗದು. ಸಮುದಾಯದ ಮೂಲಗುಣವನ್ನು ಮೊದಲಿಗೆ ಅರ್ಥ ಮಾಡಿಕೊಳ್ಳಬೇಕಿದೆ' ಎಂದಿದ್ದಾರೆ.

ಕಾನೂನು ಹೋರಾಟ ನಡೆಸಲು ನಟ ಜಯಸೂರ್ಯ ನಿರ್ಧಾರ

ಲೈಂಗಿಕ ಕಿರುಕುಳ ಆರೋಪ ನಿರಾಕರಣೆ

ತಿರುವನಂತಪುರ (ಪಿಟಿಐ): ತಮ್ಮ ವಿರುದ್ಧ ಕೇಳಿಬಂದಿರುವ ಲೈಂಗಿಕ ಕಿರುಕುಳದ ಆರೋಪಗಳಿಗೆ ಸಂಬಂಧಿಸಿದಂತೆ ಮೌನ ಮುರಿದಿರುವ ನಟ ಜಯಸೂರ್ಯ, 'ಇದರಿಂದ ಕುಟುಂಬ ಹಾಗೂ ಆಪ್ತರು ತೀವ್ರವಾಗಿ 'ಗಾಸಿಗೊಂಡಿದ್ದಾರೆ' ಎಂದು ಪ್ರತಿಕ್ರಿಯಿಸಿದ್ದಾರೆ.

'ಕಳೆದೊಂದು ತಿಂಗಳಿನಿಂದ ವೈಯಕ್ತಿಕ ಕೆಲಸದ ನಿಮಿತ್ತ ನಾನು ಹಾಗೂ ಕುಟುಂಬಸ್ಥರು ಅಮೆರಿಕದಲ್ಲಿದ್ದೇವೆ. ನಾನು ಮರಳಿ ಸ್ವದೇಶಕ್ಕೆ ಬರುವವರೆಗೂ, ನನ್ನ ವಿರುದ್ಧ ಕೇಳಿಬಂದಿರುವ ಎಲ್ಲ ಆರೋಪಗಳಿಗೆ ವಕೀಲರು ಕಾನೂನು ಹೋರಾಟದ ಪ್ರಕ್ರಿಯೆಗಳನ್ನು ನೋಡಿಕೊಳ್ಳಲಿದ್ದಾರೆ' ಎಂದು ತಿಳಿಸಿದ್ದಾರೆ.

'ವಿದೇಶಕ್ಕೆ ತೆರಳಿದ್ದ ವೇಳೆ ಲೈಂಗಿಕ ಕಿರುಕುಳ ನೀಡಿದ್ದೇನೆ ಎಂದು ಎರಡು ಸುಳ್ಳು ಆರೋಪ ಮಾಡಲಾಗಿದೆ. ಇದರಿಂದ, ಸಹಜವಾಗಿ ನಾನು ಹಾಗೂ ಕುಟುಂಬಸ್ಥರು ಆಘಾತಗೊಂಡಿದ್ದೇವೆ. ನ್ಯಾಯಾಂಗದ ಮೇಲೆ ಪೂರ್ಣ ನಂಬಿಕೆಯಿದೆ. ಕಾನೂನು ಹೋರಾಟದ ಮೂಲಕವೇ ಉತ್ತರ ನೀಡಲು ನಿರ್ಧರಿಸಿದ್ದೇನೆ' ಎಂದು ಫೇಸ್‌ಬುಕ್ ಪುಟದಲ್ಲಿ ಲಗತ್ತಿಸಿರುವ ಪತ್ರದಲ್ಲಿ ತಿಳಿಸಿದ್ದಾರೆ. ಆಗಸ್ಟ್ 31ರಂದು ತನ್ನ ಹುಟ್ಟುಹಬ್ಬಕ್ಕೆ ಶುಭಾಶಯ ಕೋರಿದ ಪ್ರತಿಯೊಬ್ಬರಿಗೂ ಧನ್ಯವಾದ ಸಲ್ಲಿಸಿದ್ದಾರೆ.



ಸುಳ್ಳು ಸತ್ಯಕ್ಕಿಂತ ವೇಗವಾಗಿ ಹರಡುತ್ತದೆ. ಆದರೆ ಸತ್ಯವೇ ಮೇಲುಗೈ ಸಾಧಿಸುತ್ತದೆ ಎಂದು ನಾನು ನಂಬುತ್ತೇನೆ. ಪಾಪ ಮಾಡದವರು ತಪ್ಪು ಮಾಡಿದವರತ್ತ ಕಲ್ಲು ಎಸೆಯಲಿ

ಜಯಸೂರ್ಯ, ನಟ

'ಆತ್ಮಸಾಕ್ಷಿ ಇಲ್ಲದವರು ಯಾರ ಮೇಲಾದರೂ ಸುಳ್ಳು ಆರೋಪ ಮಾಡಬಹುದು. ಅದು ತುಂಬಾ ಸುಲಭ. ಆದರೆ, ಕಿರುಕುಳದ ಸುಳ್ಳು ಆರೋಪವನ್ನು ಎದುರಿಸುವುದು ಕಿರುಕುಳದಷ್ಟೇ ನೋವುಂಟು ಮಾಡುತ್ತದೆ' ಎಂದು ಹೇಳಿದ್ದಾರೆ.

ನ್ಯಾ. ಹೇಮಾ ಸಮಿತಿ ವರದಿ ಬಿಡುಗಡೆಯಾದ ಬೆನ್ನಲ್ಲೇ ಜಯಸೂರ್ಯ ವಿರುದ್ಧ ನಟಿಯರ ಮೇಲೆ ಲೈಂಗಿಕ ಕಿರುಕುಳ ನೀಡಿದ ಆರೋಪಗಳು ಕೇಳಿಬಂದಿದ್ದವು. ಅವರ ವಿರುದ್ಧ ತಿರುವನಂತಪುರದ ಕಂಟೋನ್ಮೆಂಟ್ ಪೊಲೀಸ್ ಠಾಣೆಯಲ್ಲಿ ಮೊದಲ ದೂರು ದಾಖಲಾದರೆ, ಕರಮಾನಾ ಠಾಣೆಯಲ್ಲಿ ಮತ್ತೊಂದು ದೂರು ದಾಖಲಾಗಿತ್ತು.

10 ದಂಡುಪ್ರದೇಶ ಸ್ಥಳೀಯಾಡಳಿತಕ್ಕೆ ಹಸ್ತಾಂತರ

ನವದೆಹಲಿ: ದೇಶದ ವಿವಿಧೆಡೆ ಇರುವ 10 ದಂಡು ಪ್ರದೇಶಗಳನ್ನು ಆಯಾ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲು ಭಾರತೀಯ ಸೇನೆ ನಿರ್ಧರಿಸಿದೆ.

ಹಸ್ತಾಂತರಕ್ಕೆ ಅಗತ್ಯವಿರುವ ಪ್ರಕ್ರಿಯೆ ಪೂರ್ಣಗೊಳಿಸುವಲ್ಲಿ ಸೇನೆಯ ಮೂರು ಕಮಾಂಡ್‌ಗಳು ಕಾರ್ಯಪ್ರವೃತ್ತವಾಗಿವೆ ಎಂದು ಮೂಲಗಳು ಹೇಳಿವೆ.

ಡೆಹ್ರಾಡೂನ್, ದೇವಲಾಲಿ, ನಾಸಿರಾ ಬಾದ್, ಬಬಿನಾ, ಅಜ್ಮೇರ್, ರಾಮಗಢ, ಮಥುರಾ, ಶಹಜಹಾನ್‌ಪುರ, ಕ್ಲೆಮೆಂಟ್ ಟೌನ್ ಹಾಗೂ ಫತೇಹಗಢದಲ್ಲಿರುವ ದಂಡುಪ್ರದೇಶಗಳನ್ನು ಹಸ್ತಾಂತರ ಮಾಡಲಾಗುತ್ತದೆ.

ಈ ಕುರಿತು ಕೇಂದ್ರ ಸರ್ಕಾರ ಇತ್ತೀಚೆಗೆ ನಿರ್ಧಾರ ಕೈಗೊಂಡಿತ್ತು.

ವೈದ್ಯ ವಿದ್ಯಾರ್ಥಿನಿ ಅತ್ಯಾಚಾರ, ಕೊಲೆ ಪ್ರಕರಣ ಖಂಡಿಸಿ ರ‍್ಯಾಲಿ

ಕೋಲ್ಕತ್ತ: ಪ್ರತಿಭಟನೆಗೆ ಚಿತ್ರರಂಗದ ಸಾಥ್

ಕೋಲ್ಕತ್ತ (ಪಿಟಿಐ): ಇಲ್ಲಿನ ಕೆ.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲೆ ನಡೆದ ಅತ್ಯಾಚಾರ ಹಾಗೂ ಕೊಲೆ ಪ್ರಕರಣವನ್ನು ಖಂಡಿಸಿ ಸಿನಿಮಾ ನಿರ್ದೇಶಕರಾದ ಅಪರ್ಣಾ ಸೇನ್ ಸೇರಿದಂತೆ ಬಂಗಾಳಿ ಚಿತ್ರ ರಂಗದ ಹಲವು ಪ್ರಮುಖರು ಭಾನುವಾರ ಪ್ರತಿಭಟನೆಯಲ್ಲಿ ಪಾಲ್ಗೊಂಡರು.

ಸಂತ್ರಸ್ತೆ ಮತ್ತು ಅವರ ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಎಂದು ಪ್ರತಿಭಟನಕಾರರರು ಆಗ್ರಹಿಸಿದರು.

ಘಟನೆ ಖಂಡಿಸಿ ನಗರದಲ್ಲಿ ವಿವಿಧ ಸಂಘಟನೆಗಳು, ರಾಜಕೀಯ ಪಕ್ಷಗಳು ಪ್ರತಿಭಟನೆ, ರ‍್ಯಾಲಿಗಳನ್ನು ನಡೆಸಿದವು. ಒಂದೆಡೆ 'ಮಹಾಮಿಚಿಲ್' ಪ್ರತಿಭಟನೆ ನಡೆದರೆ, ರಾಮಕೃಷ್ಣ ಮಿಷನ್ ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳ ಹಳೆ ವಿದ್ಯಾರ್ಥಿಗಳು ಮತ್ತೊಂದೆಡೆ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಕಾಲೇಜಿನ ಚೌಕದಲ್ಲಿ ನಡೆದ ಬೃಹತ್ ರ‍್ಯಾಲಿಯಲ್ಲಿ ಅಪರ್ಣಾ ಸೇನ್, ಕಲಾವಿದರಾದ ಸ್ವಸ್ತಿಕಾ ಮುಖರ್ಜಿ, ಸುದೀಪ್ತಾ ಚಕ್ರವರ್ತಿ, ಚೈತಿ ಘೋಷಲ್, ಸೋಹಿನಿ ಸರ್ಕಾರ್ ಸೇರಿದಂತೆ ಹಲವರು ಪಾಲ್ಗೊಂಡು, ಟ್ರೈನಿ ವೈದ್ಯಕೀಯ ವಿದ್ಯಾರ್ಥಿನಿಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿದರು.

'ನಾವು ನ್ಯಾಯಕ್ಕಾಗಿ ರಸ್ತೆಗೆ ಇಳಿದಿದ್ದೇವೆ. ಅಗತ್ಯವಿದ್ದರೆ ಮತ್ತೊಮ್ಮೆ ರಸ್ತೆಗೆ ಇಳಿಯುತ್ತೇವೆ' ಎಂದು ಸೇನ್ ಹೇಳಿದರು.

'ಆಗಸ್ಟ್ 9ರಂದು ನಡೆದ ಘಟನೆಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಕೇವಲ ಒಬ್ಬರನ್ನು ಬಂಧಿಸಲಾಗಿದೆ. ತನಿಖೆಯ ಪ್ರಗತಿ ಕುರಿತು ಯಾವುದೇ ಮಾಹಿತಿ ಲಭ್ಯವಿಲ್ಲ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಕಿರಿಯ ವೈದ್ಯರ ವೇದಿಕೆಯ ಸದಸ್ಯರು ಪ್ರತಿಭಟನಾ ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದರು. ರಾಮಕೃಷ್ಣ ಮಿಷನ್ ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳ ಹಳೆ ವಿದ್ಯಾರ್ಥಿಗಳು ಕಪ್ಪುಬಟ್ಟೆ ಧರಿಸಿ, ಶಂಖ ಊದಿ ಪ್ರತಿಭಟಿಸಿದರು.

ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆಗೆ ಆಗ್ರಹಿಸಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಕಾರ್ಯಕರ್ತರೂ ಪ್ರತಿಭಟನೆ ನಡೆಸಿದರು.

ಆಗಸ್ಟ್ 29ರಿಂದ ಧರಣಿ ನಡೆಸುತ್ತಿರುವ ಭಾರತೀಯ ಜನತಾ ಪಕ್ಷದ (ಬಿಜೆಪಿ) ಕಾರ್ಯಕರ್ತರು ಭಾನುವಾರವೂ ಮುಂದುವರಿಸಿದರು.



ಟ್ರೈನಿ ವೈದ್ಯಕೀಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಕೊಲೆ ಖಂಡಿಸಿ ಕೋಲ್ಕತ್ತದಲ್ಲಿ ಭಾನುವಾರ ನಡೆದ ಪ್ರತಿಭಟನಾ ರ‍್ಯಾಲಿಯಲ್ಲಿ ಅಪಾರ ಸಂಖ್ಯೆಯ ಜನರು ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

ಪ್ಯಾರಾಲಿಂಪಿಕ್ಸ್: ಮಹಿಳಾ ವಿಭಾಗದಲ್ಲೂ ಪದಕ ಜಯದ ಭರವಸೆ

ಫೈನಲ್‌ಗೆ ಸುಹಾಸ್, ನಿತೇಶ್

ಪ್ಯಾರಿಸ್ (ಪಿಟಿಐ): ಅಗ್ರ ಶ್ರೇಯಾಂಕದ ಆಟಗಾರ, ಭಾರತದ ನಿತೇಶ್ ಕುಮಾರ್ ನೇರ ಗೇಮ್‌ಗಳಿಂದ ಜಪಾನ್‌ನ ಆಟಗಾರ ದೈಸುಕೆ ಫುಜಿಹಾರ ಅವರನ್ನು ಸೋಲಿಸಿ ಪ್ಯಾರಾಲಿಂಪಿಕ್ ಕ್ರೀಡೆಗಳ ಬ್ಯಾಡ್ಮಿಂಟನ್ ಸಿಂಗಲ್ಸ್ ಎಸ್‌ಎಲ್ 3 ವಿಭಾಗದ ಫೈನಲ್ ತಲುಪಿದ್ದಾರೆ. ಮಹಿಳೆಯರ ಎಸ್‌ಯು 5 ವಿಭಾಗದಲ್ಲೂ ಭಾರತಕ್ಕೆ ಪದಕ ಖಚಿತವಾಗಿದೆ.

29 ವರ್ಷ ವಯಸ್ಸಿನ ನಿತೇಶ್ 21–16, 21–12 ರಿಂದ ದೈಸುಕೆ ಅವರನ್ನು ಮಣಿಸಿದರು. 2009ರಲ್ಲಿ ಸಂಭವಿಸಿದ ಅಪಘಾತದಲ್ಲಿ ಕಾಲಿನ ಶಾಶ್ವತ ವೈಕಲ್ಯಕ್ಕೆ ಒಳಗಾಗಿದ್ದ ನಿತೇಶ್ ಭಾನುವಾರ ನಡೆದ 48 ನಿಮಿಷಗಳ ಸೆಮಿಫೈನಲ್ ಪಂದ್ಯದುದ್ದಕ್ಕೂ ಮೇಲುಗೈ ಸಾಧಿಸಿದ್ದರು.

ಮಂಡಿ (ಹಿಮಾಚಲಪ್ರದೇಶ)ಯ ಐಐಟಿ ಪದವೀಧರ ನಿತೇಶ್ ಅವರು ಫೈನಲ್‌ನಲ್ಲಿ ಬ್ರಿಟನ್‌ನ ಡೇನಿಯಲ್ ಬೆಥೆಲ್ ಅವರನ್ನು ಎದುರಿಸಲಿದ್ದಾರೆ. ಬೆಥೆಲ್ ಇನ್ನೊಂದು ಸೆಮಿಫೈನಲ್‌ನಲ್ಲಿ ಥಾಯ್ಲೆಂಡ್‌ನ ಬುನ್ಸುನ್ ಮೊಂಗ್‌ಖೊನ್ ಅವರನ್ನು 21–7, 21–9 ರಿಂದ ಮಣಿಸಿದರು.

ಬೆಥೆಲ್, ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತದ ಪ್ರಮೋದ್ ಭಗತ್ ಎದುರು ರನ್ನರ್ ಅಪ್ ಆಗಿದ್ದರು.

ಬ್ಯಾಡ್ಮಿಂಟನ್ ಆಟಗಾರ್ತಿ ಮನಿಷಾ ರಾಮದಾಸ್ ಅವರು ಮಹಿಳೆಯರ ಸಿಂಗಲ್ಸ್ ಎಸ್‌ಯು 5 ವಿಭಾಗದಲ್ಲಿ ಸೆಮಿಫೈನಲ್ ತಲುಪಿದರು. ಅವರು ಸೋಮವಾರ ನಡೆಯುವ ನಾಲ್ಕರ ಘಟ್ಟದ ಪಂದ್ಯದಲ್ಲಿ ಸ್ವದೇಶದ ತುಳಸಿಮತಿ ಮುರುಗೇಶನ್ ಅವರನ್ನು ಎದುರಿಸಲಿದ್ದು, ಭಾರತಕ್ಕೆ ಒಂದು ಪದಕ ಜಯದ ಭರವಸೆ ಮೂಡಿದೆ.

19 ವರ್ಷ ವಯಸ್ಸಿನ ಮನಿಶಾ ಕ್ವಾರ್ಟರ್‌ಫೈನಲ್‌ನಲ್ಲಿ 21–12, 21–16 ರಿಂದ ಜಪಾನ್‌ನ ಮಮಿಕೊ ತೊಯಡಾ ಅವರನ್ನು ಹಿಮ್ಮೆಟ್ಟಿಸಲು ಅಷ್ಟೇನೂ ಕಷ್ಟಪಡಲಿಲ್ಲ. ಎರಡನೇ ಶ್ರೇಯಾಂಕದ ಮನಿಶಾ, ಶ್ರೇಯಾಂಕರಹಿತ ಆಟಗಾರ್ತಿ ಮೇಲೆ ಗೆಲ್ಲಲು ತೆಗೆದುಕೊಡಿದ್ದು ಅರ್ಧಗಂಟೆ ಮಾತ್ರ.

ತುಳಸಿಮತಿ ಅವರು ಶನಿವಾರ ನಡೆದ 'ಎ' ಗುಂಪಿನ ಕೊನೆಯ ಪಂದ್ಯದಲ್ಲಿ ಪೋರ್ಚುಗಲ್‌ನ ಬೀಟ್ರಿಝ್ ಮೊಂತೆರೊ ಅವರನ್ನು ಸೋಲಿಸಿದ್ದರು.

ರ್‍ಯಾಕೆಟ್ ಹಿಡಿಯುವ ಅಥವಾ ಇನ್ನೊಂದು ತೋಳಿನ ಮೇಲೆ ಅಥವಾ ಕೆಳಭಾಗ ಊನವಾಗಿರುವ ಕ್ರೀಡಾಪಟುಗಳು ಎಸ್‌ಯು5 ವಿಭಾಗಕ್ಕೆ ಸೇರುತ್ತಾರೆ. ಮನಿಶಾ ಅವರು ಜನ್ಮಜಾತವಾಗಿ 'ಅರ್ಬ್ಸ್ ಪಾಲ್ಸಿ' (ತೋಳಿನ ನರಕ್ಕೆ ಸಂಬಂಧಿಸಿದ)ಗೆ ಒಳಗಾದವರು.

ಆದರೆ ಮನದೀಪ್ ಕೌರ್ ಮತ್ತು ಪಲಕ್ ಕೊಹ್ಲಿ ಅವರು ಭಾನುವಾರ ಕ್ವಾರ್ಟರ್‌ಫೈನಲ್ ಹಂತದಲ್ಲಿ ಹೊರಬಿದ್ದರು.

ಎಸ್‌ಎಲ್3 ವಿಭಾಗದಲ್ಲಿ ಕಣದಲ್ಲಿರುವ ಮನ್‌ದೀಪ್ ಅವರು ನೈಜೀರಿಯಾದ ಬೊಲಾಜಿ ಮರಿಯಮ್ ಎಂಜೋಲಾ ಅವರಿಗೆ ಹೆಚ್ಚು ಪೈಪೋಟಿಯೊಡ್ಡಲಿಲ್ಲ. ಮೂರನೇ ಶ್ರೇಯಾಂಕದ ಬೊಲಾಜಿ 21–8, 21–9 ರಲ್ಲಿ ಗೆಲ್ಲು 23 ನಿಮಿಷ ಬಳಸಿಕೊಂಡರು. ಗುಂಪುಹಂತದಲ್ಲೂ ಮನದೀಪ್, ಇದೇ ಎದುರಾಳಿಗೆ ಸೋತಿದ್ದರು. ಎಸ್‌ಎಲ್ 3 ವಿಭಾಗದಲ್ಲಿ ಕಾಲಿನ ಕೆಳಭಾಗದ ಊನ ಇರುವವರು ಆಡುತ್ತಾರೆ. ಇದರಲ್ಲಿ ಅಂಕಣದ ಅಗಲ ಮಾಮೂಲಿಗಿಂತ ಅರ್ಧದಷ್ಟು ಕಡಿಮೆಯಿರುತ್ತದೆ.

ಎಸ್‌ಎಲ್ 4 ವಿಭಾಗದಲ್ಲಿ, ವಿಶ್ವ ಪ್ಯಾರಾ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತೆ ಪಲಕ್ 19–21, 15–21ರಲ್ಲಿ ಇಂಡೊನೇಷ್ಯಾದ ಖಾಲಿಮತುಸ್ ಸದಿಯಾ ಮಣಿದರು.



ಪ್ರೀತಿ ಪಾಲ್ —ಎಕ್ಸ್ ಚಿತ್ರ



ಸುಹಾಸ್ ಯತಿರಾಜ್

ಸತತ ಎರಡನೇ ಬಾರಿ ಫೈನಲ್‌ಗೆ ಕನ್ನಡಿಗ

ಟೋಕಿಯೊ ಕ್ರೀಡಾಕೂಟದ ಬೆಳ್ಳಿ ಪದಕ ವಿಜೇತ, ಕನ್ನಡಿಗ ಸುಹಾಸ್ ಯತಿರಾಜ್ ಅವರು ಬ್ಯಾಡ್ಮಿಂಟನ್ ಪುರುಷರ ಸಿಂಗಲ್ಸ್‌ನಲ್ಲಿ ಸತತ ಎರಡನೇ ಬಾರಿ ಫೈನಲ್ ತಲುಪಿದ್ದಾರೆ.

ಎಸ್‌ಎಲ್ 4 ವಿಭಾಗದ ಸೆಮಿಫೈನಲ್‌ನಲ್ಲಿ ಅವರು 21-17, 21-12ರ ನೇರ ಗೇಮ್‌ಗಳಿಂದ ಸ್ವದೇಶದ ಸುಕಾಂತ್ ಕದಮ್ ಅವರನ್ನು ಸೋಲಿಸಿದರು. ಉತ್ತರ ಪ್ರದೇಶ ಕೇಡರ್‌ನ ಐಎಎಸ್ ಅಧಿಕಾರಿಯಾಗಿರುವ 41 ವರ್ಷ ವಯಸ್ಸಿನ ಸುಹಾಸ್, ಹಾಸನದ ಅರಸೀಕೆರೆ ಮೂಲದವರು.

ಪ್ರೀತಿ ಪಾಲ್‌ಗೆ ಮತ್ತೊಂದು ಕಂಚು

ಒಂದನೇ ಪುಟದಿಂದ...

ಅಲ್ಲೂ ವೈಯಕ್ತಿಕ ಉತ್ತಮ ಸಮಯದೊಂದಿಗೆ (14.21 ಸೆಕೆಂಡು) ಸಾಧನೆ ಮೆರೆದಿದ್ದರು.

1984ರಿಂದ ಇಲ್ಲಿಯವರೆಗೆ ಭಾರತಕ್ಕೆ ಅಥ್ಲೆಟಿಕ್ಸ್‌ನ ಫೀಲ್ಡ್ ಸ್ಪರ್ಧೆಗಳಲ್ಲಿ ಪದಕಗಳು ಒಲಿದಿವೆ. ಆದರೆ, ಟ್ರ್ಯಾಕ್‌ನಲ್ಲಿ ಪ್ರೀತಿ ಮೊದಲ ಪದಕ ಜಯಿಸಿದ್ದರು. ಇದೀಗ ಅದಕ್ಕೆ ಮತ್ತೊಂದು ಪದಕವನ್ನು ಸೇರಿಸಿದ್ದಾರೆ. ಪ್ರೀತಿ ಅವರು ಉತ್ತರ ಪ್ರದೇಶದ ಮುಜಫ್ಫರ್‌ನಗರದ ರೈತ ಕುಟುಂಬದವರು.

200 ಮೀಟರ್ ಓಟದ ಸ್ಪರ್ಧೆಯಲ್ಲಿ ವಿಶ್ವ ದಾಖಲೆ ಹೊಂದಿರುವ ಟೋಕಿಯೊ ಪ್ಯಾರಾಲಿಂಪಿಕ್ಸ್ ಚಾಂಪಿಯನ್ ಚೀನಾದ ಝೌ ಕ್ಸಿಯಾ (28.15ಸೆ) ಚಿನ್ನ ಗೆದ್ದರೆ, ಗುವೊ ಕಿಯಾನ್ಕಿಯಾನ್ (29.09 ಸೆ) ಬೆಳ್ಳಿ ಪಡೆದರು.

PARIS 2024

ರವಿಗೆ 5ನೇ ಸ್ಥಾನ; ರಕ್ಷಿತಾ ನಿರ್ಗಮನ

ಪ್ಯಾರಿಸ್ (ಪಿಟಿಐ): ಭಾರತದ ರವಿ ರೊಂಗಾಲಿ, ಪ್ಯಾರಾಲಿಂಪಿಕ್ಸ್ ಪುರುಷರ ಎಫ್‌40 ಷಾಟ್‌ಪಟ್ ಸ್ಪರ್ಧೆಯ ಫೈನಲ್‌ನಲ್ಲಿ ಐದನೇ ಸ್ಥಾನ ಪಡೆದು ಗಮನಾರ್ಹ ಸಾಧನೆ ತೋರಿದರು. ಆದರೆ ಮಹಿಳೆಯರ 1,500 ಮೀ. (ಟಿ11) ಓಟದಲ್ಲಿ ಕನ್ನಡತಿ ರಕ್ಷಿತಾ ರಾಜು ಮೊದಲ ಸುತ್ತಿನ ಹೀಟ್ಸ್‌ನಲ್ಲೇ ಹೊರಬಿದ್ದರು.

ಅಥ್ಲೆಟಿಕ್ಸ್ ಸ್ಪರ್ಧೆಗಳ ಮೂರನೇ ದಿನವಾದ ಭಾನುವಾರ ರೊಂಗಾಲಿ ಅವರು 10.63 ಮೀ. ಥ್ರೊದೊಡನೆ ವೈಯಕ್ತಿಕ ಶ್ರೇಷ್ಠ ಸಾಧನೆ ದಾಖಲಿಸಿದರು. ಆದರೆ ಅದು ಪದಕಕ್ಕೆ ಸಾಲಲಿಲ್ಲ. ಅವರು ಕಳೆದ ವರ್ಷ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಬೆಳ್ಳಿ ಜಯಿಸಿದ್ದರು.

ವಿಶ್ವದಾಖಲೆ ವೀರ ಮಿಗೆಲ್ ಮೊಂತೆರೊ (ಪೋರ್ಚುಗಲ್) ಅವರು 11.21 ಮೀ. ಥ್ರೊದೊಡನೆ ಚಿನ್ನ ಗೆದ್ದರೆ, ಮಂಗೋಲಿಯಾದ ಬಟ್ಟುಲ್ಗಾ ಸೆಗ್ಮಿದ್ (11.09 ಮೀ.) ಬೆಳ್ಳಿ ಹಾಗೂ ಹಾಲಿ ಪ್ಯಾರಾ ಏಷ್ಯನ್ ಚಾಂಪಿಯನ್, ಇರಾಕ್‌ನ ಗರಾ ತಯಷ್ (11.03) ಕಂಚಿನ ಪದಕ ತಮ್ಮದಾಗಿಸಿಕೊಂಡರು. ಡೆನಿಸ್ ಗ್ನೆಝ್‌ಡಿಲೊವ್ (10.80) ನಾಲ್ಕನೇ ಸ್ಥಾನ ಗಳಿಸಿದರು.

ಕುಳ್ಳಗಿರುವ ಸ್ಪರ್ಧಿಗಳಿಗೆ ಎಫ್‌40 ಕ್ಲಾಸ್ ಮೀಸಲಾಗಿದೆ.

ರಕ್ಷಿತಾಗೆ ನಿರಾಸೆ: 23 ವರ್ಷ ವಯಸ್ಸಿನ ರಕ್ಷಿತಾ, ಮೊದಲ ಹೀಟ್ಸ್‌ನ ನಾಲ್ಕು ಓಟಗಾರ್ತಿಯರಲ್ಲಿ 5ನಿ.29.92ಸೆ.ಗಳೊಡನೆ ಕೊನೆಯ ಸ್ಥಾನ ಪಡೆದರು. ಮೂರು ಹೀಟ್ಸ್‌ನಲ್ಲಿ ಮೊದಲೆರಡು ಸ್ಥಾನ ಪಡೆದವರು ಫೈನಲ್‌ಗೆ ಅರ್ಹತೆ ಪಡೆಯುತ್ತಾರೆ. ರಕ್ಷಿತಾ ಭಾಗವಹಿಸಿದ್ದ ಹೀಟ್‌ನಲ್ಲಿ ಚೀನಾದ ಶಾನ್ಯನ್ (4ನಿ.44.66 ಸೆ.) ಮೊದಲಿಗರಾದರು. ದಕ್ಷಿಣ ಆಫ್ರಿಕಾದ ಲುಝಾನೆ ಕೊಯೆಟ್ಝಿ (4:45.25) ಎರಡನೇ ಸ್ಥಾನದೊಡನೆ ಫೈನಲ್ ಸ್ಪರ್ಧೆಗೆ ಮುನ್ನಡೆದರು.

ದೃಷ್ಟಿದೋಷವುಳ್ಳ ಅಥ್ಲೀಟುಗಳಿಗೆ ಟಿ11 ಕೆಟಗರಿ ಮೀಸಲಾಗಿದೆ. ಅವರು ಮಾರ್ಗದರ್ಶಿಗಳ ಸಹಕಾರದಲ್ಲಿ ಓಡುತ್ತಾರೆ.

ಮುಜಾಫರನಗರದ ರೈತನ ಪುತ್ರಿ, 23 ವರ್ಷ ವಯಸ್ಸಿನ ಪ್ರೀತಿ, ಶುಕ್ರವಾರ ನಡೆದ ಟಿ35 ವಿಭಾಗದ 100 ಮೀ. ಓಟದಲ್ಲಿ 14.21 ಸೆ.ಗಳೊಡನೆ ಕಂಚಿನ ಪದಕ ಜಯಿಸಿದ್ದರು. ಟಿ35 ವಿಭಾಗದ ಸ್ಪರ್ಧೆಗಳು ನಿರ್ದಿಷ್ಟ ಪ್ರಮಾಣದ ದೃಷ್ಟಿದೋಷವುಳ್ಳವರಿಗೆ ನಡೆಯುತ್ತದೆ.

ಟ್ರಯಥ್ಲಾನ್ ಮುಂದೂಡಿಕೆ

ಪ್ಯಾರಿಸ್ (ಎಎಫ್‌ಪಿ): ಸೆನ್ ನದಿಯಲ್ಲಿ ನೀರು ಮಲಿನಗೊಂಡಿರುವ ಕಾರಣ ಭಾನುವಾರ ನಡೆಯಬೇಕಾಗಿದ್ದ ಪ್ಯಾರಾಲಿಂಪಿಕ್ಸ್ ಟ್ರಯಥ್ಲಾನ್ ಸ್ಪರ್ಧೆಗಳನ್ನು ಒಂದು ದಿನ ಮುಂದೂಡಬೇಕಾಯಿತು.

ಭಾರಿ ಮಳೆಯಿಂದಾಗಿ ನದಿಯ ನೀರು ಕದಡಿದ್ದು, ಸ್ಪರ್ಧೆ ನಡೆಸಲು ಯೋಗ್ಯವಾಗಿರಲಿಲ್ಲ. ಎರಡು ದಿನಗಳಿಂದ ಪ್ಯಾರಿಸ್‌ನಲ್ಲಿ ಮಳೆಯಾಗುತ್ತಿದೆ.



ಟ್ರೋಫಿಯೊಂದಿಗೆ ಮೈಸೂರು ವಾರಿಯರ್ಸ್ ತಂಡದ ಆಟಗಾರರ ಸಂಭ್ರಮ —ಪ್ರಜಾವಾಣಿ ಚಿತ್ರ/ಎಸ್‌.ಕೆ. ದಿನೇಶ್

ಮೈಸೂರಿಗೆ ಮಹಾರಾಜ ಟ್ರೋಫಿ

ಟಿ20 ಕ್ರಿಕೆಟ್: ಮನೋಜ್ ಬ್ಯಾಟಿಂಗ್ ಅಬ್ಬರ, ಕರುಣ್–ಕಾರ್ತಿಕ್ ಜೊತೆಯಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರುಣ್ ನಾಯರ್ ನಾಯಕತ್ವದ ಮೈಸೂರು ವಾರಿಯರ್ಸ್ ತಂಡವು ಮಹಾರಾಜ ಟ್ರೋಫಿ ಗೆದ್ದುಕೊಂಡಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಫೈನಲ್‌ನಲ್ಲಿ 45 ರನ್‌ಗಳಿಂದ ಬೆಂಗಳೂರು ಬ್ಲಾಸ್ಟರ್ಸ್ ಎದುರು ಜಯಿಸಿದ ಮೈಸೂರು ತಂಡವು ಪ್ರಶಸ್ತಿಗೆ ಮುತ್ತಿಕ್ಕಿತು. ಹೋದ ವರ್ಷವೂ ಫೈನಲ್ ತಲುಪಿದ್ದ ಮೈಸೂರು ತಂಡವು ಹುಬ್ಬಳ್ಳಿ ಟೈಗರ್ಸ್ ಎದುರು ಸೋತಿತ್ತು. ಈ ಬಾರಿ ಸೆಮಿಫೈನಲ್‌ನಲ್ಲಿ ಹುಬ್ಬಳ್ಳಿ ವಿರುದ್ಧ ಗೆದ್ದು ಫೈನಲ್ ಪ್ರವೇಶಿಸಿತ್ತು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಬೆಂಗಳೂರು ತಂಡವು ಮೈಸೂರು ತಂಡವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕುವಲ್ಲಿ ವಿಫಲವಾಯಿತು. ಮೈಸೂರು ತಂಡವು ಆರಂಭಿಕ ಬ್ಯಾಟರ್ ಎಸ್‌.ಯು. ಕಾರ್ತಿಕ್ , ನಾಯಕ ಕರುಣ್ ನಾಯರ್ ಅವರ ಅರ್ಧಶತಕಗಳು ಮತ್ತು ಮನೋಜ್ ಭಾಂಡಗೆಯ ಮಿಂಚಿನ ಬ್ಯಾಟಿಂಗ್‌ನಿಂದಾಗಿ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 207 ರನ್ ಗಳಿಸಿತು. ಈ ಬೃಹತ್ ಗುರಿಯನ್ನು ಬೆನ್ನಟ್ಟಿದ ಮಯಂಕ್ ಅಗರವಾಲ್ ನಾಯಕತ್ವದ ಬೆಂಗಳೂರು ತಂಡಕ್ಕೆ ಮಧ್ಯಮವೇಗಿ ವಿದ್ಯಾಧರ್ ಪಾಟೀಲ (19ಕ್ಕೆ3) ಮತ್ತು ಅನುಭವಿ ಸ್ಪಿನ್ನರ್ ಕೆ. ಗೌತಮ್ (23ಕ್ಕೆ2) ಸಿಂಹಸ್ವಪ್ನರಾದರು. ಬೆಂಗಳೂರು ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 162 ರನ್ ಗಳಿಸಿತು.

ಕಾರ್ತಿಕ್-ಕರುಣ್ ಜೊತೆಯಾಟ: ನವೀನ್ ಎಂ.ಜಿ ಅವರು ಇನಿಂಗ್ಸ್‌ನ ನಾಲ್ಕನೇ ಓವರ್‌ನಲ್ಲಿ ಕಾರ್ತಿಕ್ ಸಿ.ಎ ವಿಕೆಟ್ ಗಳಿಸಿದರು. ಈ ಹಂತದಲ್ಲಿ ಇನ್ನೊಬ್ಬ ಆರಂಭಿಕ ಬ್ಯಾಟರ್ ಎಸ್‌.ಯು. ಕಾರ್ತಿಕ್ ಅವರೊಂದಿಗೆ ಜೊತೆಯಾದ ನಾಯಕ ಕರುಣ್ ಎರಡನೇ ವಿಕೆಟ್ ಪಾಲುದಾರಿಕೆಯಲ್ಲಿ 81 ರನ್ ಸೇರಿಸಿದರು.

ಶುಭಾಂಗ್ ಹೆಗ್ಡೆ ಹಾಕಿದ 14ನೇ ಓವರ್‌ನಲ್ಲಿ ಕಾರ್ತಿಕ್ (71; 44ಎ) ವಿಕೆಟ್ ಪತನವಾಯಿತು. ಅವರು 7 ಬೌಂಡರಿ ಮತ್ತು 3 ಸಿಕ್ಸರ್ ಹೊಡೆದರು. ಹರ್ಷಿಲ್ ಧಮಾನಿ 6 ರನ್ ಗಳಿಸಿ ನಿರ್ಗಮಿಸಿದರು. ಕ್ರೀಸ್‌ನಲ್ಲಿದ್ದ ಕರುಣ್ ಜೊತೆಗೂಡಿದ ಮನೋಜ್ ಭಾಂಡಗೆ ಮಿಂಚಿದರು. ಕರುಣ್ 45 ಎಸೆತಗಳಲ್ಲಿ 66 ರನ್ ಗಳಿಸಿದರು. 6 ಬೌಂಡರಿ ಮತ್ತು 3 ಸಿಕ್ಸರ್ ಸಿಡಿಸಿದರು. 18ನೇ ಓವರ್‌ನಲ್ಲಿ ಅವರ ವಿಕೆಟ್ ಗಳಿಸಿದ ನವೀನ್ ಅವರು ಜೊತೆಯಾಟ ಮುರಿದರು. ಆದರೆ ಮನೋಜ್ ಆಟಕ್ಕೆ ಕಡಿವಾಣ ಹಾಕಲು ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ. ಕ್ರೀಡಾಂಗಣದಲ್ಲಿ ಪಂದ್ಯ ನೋಡಲು ಸೇರಿದ್ದ ಅಭಿಮಾನಿಗಳನ್ನು ಮನೋಜ್ (ಔಟಾಗದೆ 44) ಮನರಂಜಿಸಿದರು. 5 ಭರ್ಜರಿ ಸಿಕ್ಸರ್‌ಗಳನ್ನು ಸಿಡಿಸಿದ ಅವರು ಮನಸೂರೆಗೊಂಡರು. ಕೇವಲ 13 ಎಸೆತ ಆಡಿದ ಅವರು ಬೌಲರ್‌ಗಳಿಗೆ ಬೆವರಿಳಿಸಿದರು.

ಕ್ರೀಡಾಂಗಣದಲ್ಲಿ ಸುಮಾರು 9 ಸಾವಿರ ಪ್ರೇಕ್ಷಕರು ಪಂದ್ಯವನ್ನು ವೀಕ್ಷಿಸಿದರು.

ಸಂಕ್ಷಿಪ್ತ ಸ್ಕೋರು: ಮೈಸೂರು ವಾರಿಯರ್ಸ್: 20 ಓವರ್‌ಗಳಲ್ಲಿ 4ಕ್ಕೆ207 (ಎಸ್‌.ಯು. ಕಾರ್ತಿಕ್ 71, ಕರುಣ್ ನಾಯರ್ 66, ಮನೋಜ್ ಭಾಂಡಗೆ ಔಟಾಗದೆ 44, ಎಂ.ಜಿ. ನವೀನ್ 44ಕ್ಕೆ2) **ಬೆಂಗಳೂರು ಬ್ಲಾಸ್ಟರ್ಸ್:** 20 ಓವರ್‌ಗಳಲ್ಲಿ 8ಕ್ಕೆ162 (ಎಲ್‌.ಆರ್. ಚೇತನ್ 51, ಕ್ರಾಂತಿಕುಮಾರ್ ಔಟಾಗದೆ 39, ವಿದ್ಯಾಧರ್ ಪಾಟೀಲ 19ಕ್ಕೆ3, ಕೆ. ಗೌತಮ್ 23ಕ್ಕೆ2) **ಫಲಿತಾಂಶ:** ಮೈಸೂರು ವಾರಿಯರ್ಸ್ ತಂಡಕ್ಕೆ 45 ರನ್‌ಗಳ ಜಯ. **ಪಂದ್ಯದ ಆಟಗಾರ:** ಎಸ್‌.ಯು. ಕಾರ್ತಿಕ್. **ಸರಣಿಯ ಆಟಗಾರ:** ಕರುಣ್ ನಾಯರ್

ಓಪನ್ ಅಥ್ಲೆಟಿಕ್ಸ್: ಕರ್ನಾಟಕ ಮಹಿಳೆಯರಿಗೆ ರಿಲೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಕರ್ನಾಟಕದ ಮಹಿಳೆಯರ ತಂಡವು 63ನೇ ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್‌ನಲ್ಲಿ 4X100 ಮೀಟರ್ಸ್ ರಿಲೆಯಲ್ಲಿ ಚಿನ್ನದ ಪದಕ ಜಯಿಸಿತು. ಎಸ್‌.ಎಸ್. ಸ್ನೇಹಾ, ಟಿ. ದಾನೇಶ್ವರಿ, ಕಾವೇರಿ ಪಾಟೀಲ ಮತ್ತು ಜ್ಯೋತಿಕಾ ಅವರು ತಂಡದಲ್ಲಿದ್ದರು.

ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಸ್ಪರ್ಧೆಯಲ್ಲಿ ಕರ್ನಾಟಕ ತಂಡವು 45.21 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಮೊದಲ ಸ್ಥಾನ ಪಡೆಯಿತು. ತೀವ್ರ ಪೈಪೋಟಿಯೊಡ್ಡಿದ ರೈಲ್ವೇ ಕ್ರೀಡಾ ಮಂಡಳಿ (ನಿತ್ಯಾ ಗಂಧೆ, ಹಿಮಶ್ರೀ ರಾಯ್, ಅವಂತಿಕಾ ನರಳೆ ಮತ್ತು ಜಿ. ರವಿಕುಮಾರ್) ತಂಡವು 45.29 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಬೆಳ್ಳಿ ಪಡೆಯಿತು. ಒಡಿಶಾ ತಂಡವು (45.93 ಸೆಕೆಂಡು) ಮೂರನೇ ಸ್ಥಾನ ಪಡೆಯಿತು.

ಫಲಿತಾಂಶಗಳು: ಪುರುಷರು– ಲಾಂಗ್ ಜಂಪ್: ಎಸ್. ಆರ್ಯ (ರಾಜಸ್ಥಾನ; 7.89ಮೀ)–1, ಮೊಹಮ್ಮದ್ ಯಾಹಿಯಾ (ಕೇರಳ)–2, ಜಗರೂಪ್ (ಪಂಜಾಬ್)–3. ಹೈಜಂಪ್: ಜೊಮನ್ ರಾಯ್ (ಕೇರಳ; 2.14 ಮೀ)–1, ಆದರ್ಶರಾಮ್ (ರಾಜಸ್ಥಾನ)–2, ರೋಹಿತ್ (ಹರಿಯಾಣ)–3. ಹ್ಯಾಮರ್ ಥ್ರೋ: ರವಿ (ರಾಜಸ್ಥಾನ; 66.41ಮೀ)–1, ಆಶಿಶ್ ಜಾಖಡ್ (ಎಸ್‌ಎಸ್‌ಸಿಬಿ)–2, ನಿತೇಶ್ ಪೂನಿಯಾ (ರಾಜಸ್ಥಾನ)–3. ಶಾಟ್‌ಪಟ್: ಸಮರದೀಪ್ (ಮಧ್ಯಪ್ರದೇಶ; 19.27ಮೀ)–1, ಅಭಿಲಾಶ್ ಸಕ್ಸೆನಾ (ಮಧ್ಯಪ್ರದೇಶ)–2, ಧನವೀರ್ (ಎಸ್‌ಎಸ್‌ಸಿಬಿ)–3. 4X100 ಮೀ ರಿಲೆ: ಒಡಿಶಾ (39.65ಸೆ)–1, ರೈಲ್ವೆಸ್ ಸ್ಪೋರ್ಟ್ಸ್ (39.82ಸೆ)–2, ಎಸ್‌ಎಸ್‌ಸಿಬಿ (39.99ಸೆ)–3. 35 ಕಿ.ಮೀ ರೇಸ್‌ವಾಕ್: ಅಮಿತ್ (ಹರಿಯಾಣ; 2ಗಂಟೆ, 38ನಿಮಿಷ) –1, ವಿಜಯ್ ವಿಶ್ವಕರ್ಮ (ಎಸ್‌ಎಸ್‌ಸಿಬಿ)–2, ಏಕನಾಥ್ ತುರಂಬೆಕರ್ (ರಾಜಸ್ಥಾನ)–3. **ಮಹಿಳೆಯರು:** ಪೋಲ್‌ವಾಲ್ಟ್: ಬರೊ ನಿಕಾ ಇಳಂಗೋವನ್ (ರಾಜಸ್ಥಾನ; 4.15 ಮೀ)–1, ಕೃಷ್ಣಾ ರಚನ್ (ರಾಜಸ್ಥಾನ)–2, ಪವಿತ್ರಾ ವೆಂಕಟೇಶ್ (ತಮಿಳುನಾಡು)–3. 4X100 ಮೀ ರಿಲೆ ಕರ್ನಾಟಕ (45.21ಸೆ)–1, ರೈಲ್ವೆ ಸ್ಪೋರ್ಟ್ಸ್–2, ಒಡಿಶಾ –3. 35 ಕಿ.ಮೀ ರೇಸ್‌ವಾಕ್: ಪಾಯಲ್ (ರಾಜಸ್ಥಾನ; 3ಗಂಟೆ, 02.24ಸೆ)–1, ರಮಣದೀಪ್ ಕೌರ್ (ರಾಜಸ್ಥಾನ)–2, ಬಂಧನಾ ಪಟೇಲ್ (ಉತ್ತರಪ್ರದೇಶ)–3



ರಿಲೆಯಲ್ಲಿ ಚಿನ್ನ ಗೆದ್ದ ಕರ್ನಾಟಕ ತಂಡ (ಎಡದಿಂದ) ಸ್ನೇಹಾ ಎಸ್‌ಎಸ್, ಕಾವೇರಿ ಪಾಟೀಲ, ಎ.ಟಿ. ದಾನೇಶ್ವರಿ, ಜ್ಯೋತಿಕಾ —ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.